Some members pointed out that the protection which is given to the newspapers is not given to the handbills and cinema slides. Why protection should be given to handbills and cinema slides or posters, I fail to understand. Do we want what we say here to be published in the newspapers as propaganda material? And if anybody does so, he will have to take the consequences of such publication under the ordinary law. It is not intended to protect the interest of a person who evinces more interest than what is necessary in trying to publish the proceedings of both the Houses of Legislature. I may, however, assure that this Bill has been brought, though late, with the best of motives. We want to give that protection which is very necessary for the Press to function very freely and fearlessly and I am glad that all sections of the House have accorded their support to this Bill. I request that this Bill be passed unanimously.

MR. DEPUTY SPEAKER.—The question is:

"That the Mysore State Legislature Proceedings (Protection of Publication) Bill, 1966, as passed by the Legislative Council, be taken into consideration."

The motion was adopted.

Mr. DEPUTY SPEAKER.—The question is :

" That clauses 2 to 4 both inclusive stand part of the Bill."

The motion was adopted.

Clauses 2 to 4 were added to the Bill.

Mr. DEPUTY SPEAKER.—The question is :

" That clause 1, the title and the preamble stand part of the Bill."

The motion was adopted.

Clause 1, the title and the preamble were added to the Bill.

Motion to pass.

Sri K. PUTTASWAMY.—Sir, I beg to move :

" That the Mysore State Legislature Proceedings (Protection of Publication) Bill, 1966, as passed by the Legislative Council be passed."

Mr. DEPUTY SPEAKER.—The question is :

" That the Mysore State Legislature Proceedings (Protection of Publication) Bill, 1966, as passed by the Legislative Council, be passed."

The motion was adopted

MYSORE AGRICULTURAL PESTS AND DISEASES BILL, 1967 AS REPORTED BY THE JOINT SELECT COMMITTEE.

(Motion to Consider)

Sri D. B. PAWAR (Deputy Minister for Agriculture).—Sir I beg to move :

"That the Mysore Agricultural Pests and Diseases Bill, 1967, as reported by the Joint Select Committee, be taken into consideration."

Mr. DEPUTY SPEAKER.—Motion moved :

" That the Mysore Agricultural Pests and Diseases Bill, 1967, as reported by the Joint Select Committee, be taken into consideration."

Sri D. B. PAWAR.—Sir, this Bill was introduced in this House on 5th July 1967 and after debating over this Bill, the House thought that on account of certain coercive measures adopted in this Bill, this Bill be referred to a Joint Select Committee. The motion for getting the concurrence of the Legislative Council to refer the Bill to a Joint Select Committee was passed by this House on 2nd August 1967. The Legislative Council agreed with the proposal on 4th August 1968 and accordingly the Bill was referred to a Joint Select Committee consisting of 12 members of this House and 4 members of the Upper House.

After due consideration of this Bill, the Joint Select Committee has suggested a few amendments, specially amendments to clauses 8, 12, 13, 14 and 18. These are the five amendments proposed by the Joint Select Committee and the report of the Joint Select Commettee is placed before the House. I request the members to take this report into consideration.

4-30 P.M.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).— ಮಾನ್ಯ ಸಭಾಪತಿಗಳೇ...

Mr. DEPUTY SPEAKER.—The hon'ble Member may move his amendment and then speak.

Sri H. N. NANJE GOWDA.—Sir, I move :

"That the Mysore Agricultural Pests and Diseases Bill, 1967, be recommitted to the same Joint Select Committee."

Mr. DEPUTY SPEAKER.—Amendment moved :

"That the Mysore Agricultural Pests and Diseases Bill, 1967, be recommitted to the same Joint Select Committee."

†ಶ್ರೀ ಎಚ್. ಎನ್. ನಂಜೇಗೌಡ.—ತಾತ್ವಿಕವಾಗಿ ನಮ್ಮ ರಾಜ್ಯದ ವ್ಯವಸಾಯ ಕ್ಷೇತ್ರದಲ್ಲಿ ಇಂತಹ ಒಂದು ಕಾನೂನು ಅವಶ್ಯ ಎಂದು ನಾನು ಒಪ್ಪಿಕೊಂಡರೂ ಕೂಡ ಈಗ ಇದನ್ನು ಇಟ್ಟಿರ ತಕ್ಕ ರೀತಿಯಲ್ಲಿ ಇದು ಆಷ್ಟೊಂದು ನಂತೋಷದಾಯಕವಾಗಿಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿ ಯಲ್ಲೂ ಕೂಡ ಈ ವ್ಯವಸಾಯ ಕ್ಷೇತ್ರದಲ್ಲಿ ಭಾರಿ ಅನುಭವ ಪಡೆದಂತಹ ನನ್ನ ಮಾನ್ಯ ಮಿತ್ರ ರನೇಕರು ಇದ್ದರೂ ಕೂಡ ಯಾವ ರೀತಿ ಇದು ಈ ರೀತಿ ಆಯಿತು ಅಂತ ಅನ್ನುವುದು ನನಗೆ ಆಶ್ಚರ್ಯ ವನ್ನುಂಟುಮಾಡುತ್ತಾ ಇದೆ. ಕಾರಣವೇನೆಂದರೆ ಪೆಸ್ಟ್ ಮತ್ತು ಡಿಸೀಸಸನ್ನು ರೈತ ನೃಷ್ಟಿ ಮಾಡುವುದಿಲ್ಲ. ಇದು ಪ್ರಕೃತಿ ಸೃಷ್ಟಿ ಮಾಡತಕ್ಕ ಖಾಯಿಲೆಗಳು. ಮನುಷ್ಯನಿಗೆ ಮಾನವ ನಮಾ ಜಕ್ಕೆ ಯಾವ ರೀತಿ ಕಾಲಂತಾ ಮುಂತಾದ ಪಾರ್ಟ್‌ಗಳು ಬರುತ್ತವೆಯೋ ಅದೇ ರೀತಿ ಈ ಸನ್ಯ ನಮಾಜದಲ್ಲೂ ಈ ಖಾಯಿಲೆಗಳು ಪ್ರಕೃತಿದತ್ತವಾಗಿ ಬರುತ್ತವೆ. ಸರ್ಕಾರದವರಾದರೂ ಅಥವಾ ದೇಶವಾದರೂ ಕೂಡ ಇದನ್ನು ಎಮರ್ಜೆನ್ಸಿ ಅರ್ಥದಲ್ಲಿ ತೆಗೆದುಕೊಂಡು ಖುದ್ದು ಸರ್ಕಾರದ ಜವಾ ಬ್ದಾರಿಯಿಂದ, ರಾಜ್ಯದ ಜವಾಬ್ದಾರಿಯಿಂದ ಇದನ್ನು ನಿರ್ಮೂಲ ಮಾಡುವುದಕ್ಕೆ ಕಾರ್ಯಕ್ರಮ ಗಳನ್ನು ತೆಗೆದುಕೊಳ್ಳುವುದು ಸೂಕ್ತ. ಆದನ್ನು ಬಿಟ್ಟು ಏನೂ ಅರಿಯದಂತಹ ರೈತನಿಗೆ ಅವನೇ ಇದನ್ನು ರೆಮೆಡಿ ಮಾಡಲಕ್ಕೆ ಅಥವಾ ಪ್ರಿವೆಂಟ್ ಮಾಡಲಕ್ಕೆ ಅವನನ್ನು ಬರಾತ್ಕಾರ ಮಾಡುವುದನ್ನು ಒಪ್ಪುವುದು ಕಷ್ಟ. ಸೆಕ್ಷನ್ 4 ಮತ್ತು ಸಬ್ ಸೆಕ್ಷನ್ 1, ಕ್ಲಾಸ್ 1—

"On the issue of a notification under section 3, the Deputy Director of Agriculture may, by notice, direct every occupier within the affected area to carry out such preventive or remedial measures..."

ನಮ್ಮ ನಮಾಜದಲ್ಲಿ ಇರುವುದನ್ನು ನೋಡಿದರೆ ಇದು ಬಹುಶಃ ನಮ್ಮ ರೈತರಿಗೆ ಅನ್ಯಾಯವಾಗುವುದಿಲ್ಲ, ಭಾರಿ ಶ್ರೀಮಂತ ರೈತರಿರತಕ್ಕ ಅಮೆರಿಕಾ ಆಥವಾ ಇನ್ನಾವುದಾದರೂ ದೇಶದ ರೈತರಿಗೆ ಅನ್ಯಾಯವಾಗಬಹುದೋ ಏನೋ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿರತಕ್ಕ ಸಾಮಾನ್ಯ ರೈತನ ಮಟ್ಟ ಅರ್ಥಮಾಡಿಕೊಂಡು ಹೇಳುವುದಾದರೆ ಇದನ್ನು ರೆಮಿಡಿ ಆಥವಾ ಪ್ರಿವೆಂಟ್ ಮಾಡುವುದಕ್ಕೆ, ನೂರಾರು ರೀತಿಯಲ್ಲಿ ನೈಸರ್ಗಿಕವಾಗಿರತಕ್ಕ ಖಾಯಿಲೆಗಳು ಬರುವುದನ್ನು ವ್ಯವಸ್ಥಿತವಾಗಿ ತಡೆಗಟ್ಟಲು ರೈತನೇ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಕಾನೂನು ಕಟ್ಟಲೆಯಿಂದ ನಿಗದಿ ಮಾಡುವುದಾದರೆ ಯಾವ ರೀತಿ ಮಾಡುತ್ತಾನೆ ಅಂತ ಅನ್ನುವುದು ಒಂದು ಸಮಸ್ಯೆ, ರೈತನಿಗೆ ಅವನಿರುವುದೇ ಒಂದು ಸ್ವರ್ಗ ಫಾರ್ ಎಕ್ಸಿಸ್ಟೆನ್ಸ್ ಹೊಚ್ಚೆ ಬಟ್ಟೆಗೆ ಇಲ್ಲದೇ ದಿನ ನಿತ್ಯದ ಜೀವನಕ್ಕೆ ಹೋರಾಟ ಮಾಡುತ್ತಾ ಇರತಕ್ಕ ಕಾಲದಲ್ಲಿ ಇದನ್ನು ರೆಮಿಡಿ ಆಥವಾ ಪ್ರಿವೆಂಟ್ ಮಾಡುವುದಕ್ಕೆ ಅವನೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದು ಆ ರೀತಿ ಮಾಡದೇ ಇರತಕ್ಕ ಕಾಲದಲ್ಲಿ ಅಧಿಕಾರ ಮಾಡಿ ರ್ಯಾಂಡ್ ರೆವಿನ್ಯೂ ಕಲೆಕ್ಷನ್ ರೀತ್ಯಾ ಆಥವಾ ಚಾರ್ಜ್ ಆನ್ ರ್ಯಾಂಡ್ ಅಂತ ಹೇಳಿ ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕು ಅಂತ ಅನ್ನುವುದು ಇದು ತುಂಬಾ ಅನುಚಿತ ನಮ್ಮ ರಾಷ್ಟ್ರದ ಮಟ್ಟದಲ್ಲಿ ಅಂತ ಹೇಳಿ ನಾನು ತಿಳಿದುಕೊಂಡಿದ್ದೇನೆ. ಜೊತೆಗೆ ಇದರಲ್ಲಿ ರೆಮಿಡಿ ಮಾಡುವುದರಲ್ಲಿ, ಪ್ರಿವೆಂಟ್ ಮಾಡುವುದರಲ್ಲಿ ರೈತನು ಸಹಕಾರಿಯಾಗಬೇಕೆಂಬುದನ್ನು ಒಪ್ಪಬಹುದು, ಆದರೆ ರೈತನ ಮೇಲೆ ಒತ್ತಾಯ ತಂದು ಕಾನೂನು ಬಲದಿಂದ ಅವನೇ ಮಾಡಬೇಕೆನ್ನುವುದು ತಪ್ಪು. ಅದನ್ನು ರಾಜ್ಯ ಸರ್ಕಾರ ತನ್ನ ಖುದ್ದು ಜವಾಬ್ದಾರಿಯಿಂದ ಮಾಡಬೇಕು, ಅದಕ್ಕೆ ರೈತ ಸಹಕಾರ ಕೊಡಬೇಕು ಅಷ್ಟೆ. ಅವನೇ ಮಾಡಬೇಕೆನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ, ಅದು ಸರಿಯಲ್ಲ. ಜೊತೆಗೆ ಆಡಳಿತ ನಡೆಯುತ್ತಾ ಇರತಕ್ಕ ಕಾಲದಲ್ಲಿ ಅಧಿಕಾರಿಗಳು ಯಾವ ರೀತಿ ಸ್ವೇಚ್ಛಾ ರೀತಿಯಿಂದ ವರ್ತಿಸುತ್ತಾ ಇದ್ದಾರೆ ಎಂಬುದನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಂಡು ಇದನ್ನು ಪರಿಶೀಲಿಸಿದ ಹಾಗೆ ಇಲ್ಲ. ಡೆಪ್ಯುಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಆಥವಾ ಮೇಲ್ಪಟ್ಟ ಆಫೀಸಿನಲ್ಲಿರತಕ್ಕವರು ಎಲ್ಲಿ ನೋಟಿಫೈ ಮಾಡಬೇಕು, ಯಾವ ರೀತಿ ಮಾಡಬೇಕು, ಸ್ಥಳಪರಿಶೀಲನೆ ಮಾಡಿ ಯಾವ ಮಾರ್ಗ ಅನುಸರಿಸಿ ನೋಟಿಫೈ ಮಾಡಬೇಕೆನ್ನುವುದು ಇದರಲ್ಲಿ ಇಲ್ಲ. ಜೊತೆಗೆ ಅವರು ಮೈಮರೆತು ನೋಟಿಫೈ ಮಾಡಿ ಒಬ್ಬ ರೈತನ ಮೇಲೆ ದ್ವೇಷ ಇದ್ದು ಅತನನ್ನು ಚಿತಾವಣೆ ಮಾಡುವುದಕ್ಕೋಸ್ಕರ ಹೊಚ್ಚೆಕಟ್ಟಿನಿಂದ ನೋಟಿಫೈ ಮಾಡಿದರೆ ಅದನ್ನು ಕ್ವಶ್ಚನ್ ಮಾಡುವುದಕ್ಕೆ ಇದರಲ್ಲಿ ಅವಕಾಶವಿಲ್ಲ. ನಮ್ಮ ಮೂಲಭೂತವಾದ ಹಕ್ಕನ್ನೇ ಪ್ರಶ್ನಿಸತಕ್ಕ ಬಲ್ಲು ಇದು ಎಂದು ನಾನಾದರೂ ಅಂದುಕೊಳ್ಳುತ್ತೇನೆ.

ಇನ್ನು ಅಫೆನ್ಸನ್ ಅನ್ನುವುದರಲ್ಲಿ ರೈತನನ್ನು ಫೀನಲೈಸ್ ಮಾಡುತ್ತೇವೆ ಅಂತ ಅನ್ನುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಪ್ರಕೃತಿಯಿಂದ ಬರತಕ್ಕ, ಸ್ವಾಭಾವಿಕವಾಗಿ ಬರತಕ್ಕ ಪೆಸ್ಟ್ಸ್ ಅಂಡ್ ಡಿಸೀಸಸ್‌ಗೆ ರೈತ ಕಾರಣ ಅಂತ ಹೇಳಿ ಅವನನ್ನು ಪೀನಲೈಸ್ ಮಾಡುವುದಕ್ಕೆ ಹೊರಟಿರುವುದು ಯಾವ ರೀತಿ ಸರಿಯಾಗುತ್ತದೆ ಅಂತ ಅನ್ನುವುದು ಇನ್ನೂ ಕೂಡ ಆಶ್ಚರ್ಯವನ್ನುಂಟು ಮಾಡುತ್ತಾ ಇದೆ. 3ನೇ ಸೆಕ್ಷನ್ ಸಬ್ ಕ್ಲಾಸ್ 1,2,3ರಲ್ಲಿ ಅನಗತ್ಯವಾದ ಕೆಲವು ವಿಚಾರಗಳು ಇವೆ. ಇಂತಹ ಕೆಲ ಕೆಲವು ಸೆಕ್ಷನ್‌ಗಳು ಇದರಲ್ಲಿದೆ. ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳು ಡೆಸ್ಪಾಟಿಕ್ ಆಗಿ ಏನೇ ಮಾಡಿದರೂ ಕೂಡ ಅದನ್ನು ಕ್ವಶ್ಚನ್ ಮಾಡತಕ್ಕ ಅವಕಾಶವು ಕೂಡ ರೈತನಿಗೆ ಇಲ್ಲ ಅಂತ ಅನ್ನುವುದನ್ನು ನೋಡಿದರೆ ಇದು ಪ್ರೊಗ್ರೆಸೀವ್ ಅಂತ ಹೇಳಿ ಈ ಬಿಲ್ಲಿನ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ನಮ್ಮ ವ್ಯವಸಾಯ ಕ್ಷೇತ್ರದಲ್ಲಿ ಇಂತಹ ಕಾನೂನು ಅವಶ್ಯ ಅಂತ ಅನಿಸಿದರೂ ಕೂಡ ಯಾರು ಖಾಯಿಲೆಯನ್ನು ತಪ್ಪಿಸಬೇಕು, ಆ ಜವಾಬ್ದಾರಿ ಯಾರದು ಇರಬೇಕು, ಅಂತ ಏನು ಇದರಲ್ಲಿ ಹೇಳಿದೆ ಈ ಅರ್ಥ ಬೇರೆ ರೀತಿಯಲ್ಲಿ ಉಪಯೋಗಿಸಿಕೊಂಡು ರೈತನನ್ನು ಜವಾಬ್ದಾರನನ್ನಾಗಿ ಮಾಡದೆ ರಾಜ್ಯ ಸರ್ಕಾರವೇ ಆ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.

> "It is the duty of the State Government to cure such diseases ; it is not the ryot's duty. The ryot should not be penalised for the nature's curse."

ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಮಾಡಿದರೆ ಚೆನ್ನಾಗಿತ್ತು. ಈಗಲೂ ಕೂಡ ಕಾಲ ಮಿಂಚಿ ಹೋಗಿಲ್ಲ, ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಪುನಃ ಇದನ್ನು ಪುನರ್‌ಪರಿಶೀಲನೆ ಮಾಡಿ ಇದನ್ನು ಬೇರೆ ರೀತಿಯಲ್ಲಿ ಫಾರ್ಮುಲೇಟ್ ಮಾಡಿ ಸಭೆಯ ಮುಂದೆ ತಂದರೆ ಚೆನ್ನಾಗಿರುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಮಾನ್ಯ ಸಭಾಪತಿಗಳೇ, ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಖಾಂತರ ಬಂದಿರುವಂತಹ ಮೈಸೂರು ಅಗ್ರಿಕರ್ಚುರಲ್ ಪೆಸ್ಟ್ಸ್ ಅಂಡ್ ಡಿಸೀಸಸ್ ಬಿಲ್‌ನ ವಿಚಾರವಾಗಿ ನನ್ನ ಮಿತ್ರರು ಶ್ರೀಮಾನ್ ನಂಜೇಗೌಡರು ಹೇಳಿದಹಾಗೆ ಇದನ್ನು ಪುನಃ ಪರಿಶೀಲನೆಗೆ ಆ ಕಮಿಟಿಗೆ ಈ ಕೆಳಕಂಡ ಕಾರಣಗಳಿಗಾಗಿ ವಾಪಸು ಕಳುಹಿಸಬೇಕೆಂದು ಹೇಳುತ್ತೇನೆ. ರೈತ ಮತ್ತು ಕಾನೂನು ಇವೆರಡನ್ನೂ ಗಮನದಲ್ಲಿಟ್ಟುಕೊಂಡು ವಿಚಾರ ಮಾಡಬೇಕಾಗುತ್ತದೆ. ಯಾವುದಾದರೂ ಒಂದು ಕಾನೂನನ್ನು ಮಾಡಬೇಕಾದರೆ ಯಾರ ಮೇರೆ ಕಾನೂನನ್ನು ಜಾರಿ ಮಾಡಬೇಕು, ಅದನ್ನು ಯಾವ ರೀತಿಯಲ್ಲಿ ವ್ಯವಹಾರ ಮಾಡತಕ್ಕವರು ಕಾರ್ಯರೂಪಕ್ಕೆ ತರಬಹುದು ಎಂಬುದನ್ನು ನಾವು ಯೋಚನೆ ಮಾಡಬೇಕು. ಕೇವಲ ಕಾನೂನು ಮಾಡುವುದರಿಂದರೇ ಒಂದು ಕಾನೂನನ್ನು ಜಾರಿಗೆ ತಂದ ಹಾಗೆ ಆಗುವುದಿಲ್ಲ. ಸರ್ಕಾರದವರು ರೈತನ ಹಿತದೃಷ್ಟಿಯನ್ನು ಕಾಪಾಡಬೇಕೆಂದು ನಾನಾ ಮುಖವಾಗಿ ರೈತನಿಗೆ ಸಹಾಯ ಮಾಡಬೇಕೆಂದು ಹೇಳುತ್ತಾ, ಇರುವಂತಹ ಸಂದರ್ಭದಲ್ಲಿ ಇಂತಹ ಒಂದು ಬಿಲ್ಲನ್ನು ತಂದು ರೈತನಿಗೆ ಕಿರುಕುಳ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಾ, ಇರುವುದು ಸರ್ವಥಾ ಸಾಧುವಲ್ಲ. ಏಕೆಂದರೆ ಯಾವುದಾದರೂ ಕೆಲವೊಂದು ಕಾರಣಗಳಿಗಾಗಿ ಕಷ್ಟಪರಿಸ್ಥಿತಿ ಬೆಳೆಗೆ ಬಂದಂತಹ ಸಂದರ್ಭದಲ್ಲಿ ರೈತ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿ ಆತನ ಮೇಲೆ ಉಗ್ರವಾದ ಕಾರ್ಯಕ್ರಮ ತೆಗೆದುಕೊಳ್ಳುವಂತಹ ಅಧಿಕಾರವನ್ನು ಈ ಬಿಲ್ಲು ಸಂಬಂಧಪಟ್ಟ ಅಧಿಕಾರವರ್ಗದವರಿಗೆ ಕೊಡುತ್ತದೆ. ಆ ಕಾರಣದಿಂದ ಇದು ಸಾಧುವಾದುದಲ್ಲ. ಎಲ್ಲೆ ಹುಳು ಹುಪ್ಪಟೆಗಳಿಂದ ಬೆಳೆಗೆ ಖಾಯಿಲೆ ಬಂದು ರೈತನ ಶ್ರಮಕ್ಕೆ ರೈತನ ದುಡಿಮೆಗೆ ಧಕ್ಕೆ ಬರುತ್ತದೆಯೋ ಅಂತಹ ಕಡೆ ಪ್ರಚಾರದ ಮುಖಾಂತರ ಅದನ್ನು ಹೇಗೆ ಹೋಗರಾಡಿಸಬೇಕೆಂಬುದನ್ನು ತಿಳಿಯಪಡಿಸದೆ ಈ ರೀತಿಯಲ್ಲಿ ಕಾನೂನನ್ನು ಜಾರಿ ಮಾಡಿದರೆ ಅಧಿಕಾರಿಗಳಿಗೆ ರೈತನಿಗೆ ಕಿರುಕುಳ ಕೊಡುವುದಕ್ಕೆ ಸಾಕಾದಷ್ಟು ಅಧಿಕಾರ ಇದರಿಂದ ದೊರಕುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಒಬ್ಬ 18 ವರ್ಷಕ್ಕೆ ಮೇಲ್ಪಟ್ಟವಂತಹ ಒಬ್ಬ ಮಗ ರೈತನಿಗೆ ಇದ್ದರೆ ಆತನನ್ನು ಬಲಾತ್ಕಾರವಾಗಿ ಕರೆದು ಉಪಯೋಗಿಸಿಕೊಳ್ಳುವಂತಹ ಅವಕಾಶ ಇದೆ. ಮತ್ತು ರೈತ ತನ್ನ ಬೆಳೆ ಏನಿದೆ ಅದು ನಾಶವಾಗುವುದನ್ನು ತಡೆಯುವುದಕ್ಕೆ ಸದಾ ಸಿದ್ಧನಾಗಿರುತ್ತಾನೆ. ಅವನು ಮಾಡತಕ್ಕ ಪ್ರಯತ್ನ ಮಾಡುತ್ತಾನೆ. ಕೋಟ್ಯಾಂತರ ರೂಪಾಯಿ ವೆಚ್ಚಮಾಡಿ ವ್ಯವಸಾಯದ ಕೆಲಸವನ್ನು ಇಟ್ಟುಕೊಂಡು ತಜ್ಞರನ್ನು ಇಟ್ಟುಕೊಂಡು, ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿ, ಯಂತ್ರಗಳು ಮುಂತಾದುವುಗಳನ್ನು ಇಟ್ಟುಕೊಂಡಿಲ್ಲದೇ ಇರತಕ್ಕ ರೈತನನ್ನು ಈ ರೀತಿಯ ವ್ಯವಸ್ಥೆ ಮಾಡಬೇಕೆಂದು ಕೇಳುವುದು ಸರ್ವಥಾ ಸಾಧುವಾದುದಲ್ಲ. ಗ್ರಾಮಾಂತರದಲ್ಲಿ ಇರುವಂತಹ, ಜಮೀನು ಆದಾದು ಮಾಡುತ್ತಾ ಇರತಕ್ಕ, ದೇಶದ ಜನಕ್ಕೆ ಅನ್ನವನ್ನು ಕೊಡುತ್ತಾ ಇರುವಂತಹ ರೈತನನ್ನು ಕಾನೂನಿನ ಚೌಕಟ್ಟಿನಲ್ಲಿ ಹಿಡಿದು ಆತನನ್ನು ಕಿರುಕುಳಕ್ಕೆ ಒಳಪಡಿಸುತ್ತಾ ಇದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು, ಇಂತಹ ಒಂದು ಕಾನೂನನ್ನು ನಾವು ಇವತ್ತು ಮಾಡುತ್ತಾ ಇದ್ದೇವೆ. ಶ್ರೀಮಾನ್ ನಂಜೇಗೌಡರು ಹೇಳಿದಹಾಗೆ ದೊಡ್ಡ ದೊಡ್ಡ ಜಮೀನುಗಳನ್ನು ಪಡೆದವರಿಗೆ ಇದು ಸರಿಹೋಗುತ್ತದೆಯೇ ಹೊರತು ಸಣ್ಣ ಸಣ್ಣ ಜಮೀನುಗಳನ್ನು ಪಡೆದಿರುವಂತಹ ಸಂದರ್ಭದಲ್ಲಿ ಬೆಳೆಗೆ ನಷ್ಟವಾಗುವಂತಹ ಸಂದರ್ಭ ಬಂದಾಗ ಸರ್ಕಾರದವರೇ ಮುಂದೆ ಬಂದು ಅದನ್ನು ಕೋಗರಾಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಜನರನ್ನು, ರೈತರನ್ನು ಕಾಪಾಡಬೇಕು, ಆ ರೀತಿ ಮಾಡುವುದನ್ನು ಬಿಟ್ಟು ರೈತನನ್ನು ಕಾನೂನಿನ ಚೌಕಟ್ಟಿನಲ್ಲಿ ಹಿಡಿದು ಆತನನ್ನು ದಂಡಿಸುತ್ತೇವೆ ಅಂತ ಅನ್ನುವಂತಹದು ಏನಿದೆ ಇದರಿಂದ ಮುಂದೆ ಸರ್ಕಾರಕ್ಕೆ ತೊಂದರೆಯಾದೀತು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕಾರಣ ನಮ್ಮ ರೈತನ ತಿಳಿವಳಿಕೆ ವ್ಯವಸಾಯಕ್ಕೆ ಸಂಬಂಧಪಟ್ಟ ರೋಗಗಳ ಬಗ್ಗೆ ಬಹಳ ಕಡಮೆಯಾಗಿದೆ. ಅವನು ಇಷ್ಟು ದಿವಸಗಳಲ್ಲಿ ಬೆಳೆಗೆ ಬಂದಿರುವ ರೋಗವನ್ನು ತಡೆಗಟ್ಟಬೇಕು ಎಂದು ಗೊತ್ತುಮಾಡಿ ಆ ರೀತಿ ಮಾಡಲು ಸಾಧ್ಯವಾಗದಿದ್ದರೆ, ಮಾಡಿದ್ದರೆ ಅವನ ಮೇರೆ ಕ್ರಮ ಕೈಗೊಳ್ಳಬೇಕು ಎಂದು ನಮೂದಿಸಿದ್ದಾರೆ. ಬಂದಿರುವ ರೋಗ ಹರಡುವುದನ್ನು ತಡೆಗಟ್ಟಲು ಬೇಕಾದ ಪ್ರಯತ್ನ ಮಾಡುವುದನ್ನು ಬಿಟ್ಟು ಕಾನೂನು ಮೂಲಕ ರೈತನಿಗೆ ತೊಂದರೆ ಮಾಡುವುದಕ್ಕೆ ಈ ಬಿಲ್ಲಿನಲ್ಲಿ ಅವಕಾಶ ಮಾಡಿರುವುದು ಸರಿಯಲ್ಲ. ವ್ಯವಸಾಯದ ಇರಾಖೆಯು ತಕ್ಷಣ ಕ್ರಮ ತೆಗೆದುಕೊಂಡು ಕ್ರಿಮಿಕೀಟಗಳ ಹಾವಳಿಯನ್ನು, ಬಂದಿರುವ ರೋಗವನ್ನು ತಡೆಗಟ್ಟಿ ರೈತರಿಗೆ ಅನುಕೂಲ ಮಾಡಬೇಕೇ ಹೊರತು ಕಾನೂನು ಮಾಡಿ ಬೆಳೆಯು ನಾಶವಾಗುವುದಕ್ಕೆ ಅವಕಾಶ ಮಾಡುವುದು ಸಾಧುವಲ್ಲ. ಈ ಬಿಲ್ಲು ಅದಕ್ಕೆ ಸಹಾಯಕಾರಿಯಾಗಿರುವುದರಿಂದ ಇದನ್ನು ಪುನರ್ಪರಿಶೀಲನೆ ಮಾಡಲು ಪುನಃ ಇದನ್ನು ಸಮಿತಿಯ ಪರಿಶೀಲನೆಗೆ ಕಳುಹಿಸಬೇಕು ಎಂದು ಹೇಳಬಯಸುತ್ತೇನೆ.

†ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಪತಿಗಳೇ, ಈಗ ನಮ್ಮ ಎದುರಿಗಿರುವ ಬಿಲ್ಲು ಅತ್ಯಂತ ಸದುದ್ದೇಶವುಳ್ಳದ್ದಾಗಿದ್ದರೂ ಅದರ ರೂಪರೇಷೆಗಳ ಬಗ್ಗೆ ತುಲನೆ ಮಾಡಿದರೆ ಅದರ ಪರಿಣಾಮದ ಬಗ್ಗೆ ವಿಚಾರಮಾಡಿದರೆ ಅದು ನಿಜವಾಗಿಯೂ ಕೂಡ ಮೈಸೂರು ರಾಜ್ಯದ ಒಕ್ಕಲುತನದವರಿಗೆ ತೊಂದರೆಯನ್ನುಂಟುಮಾಡುತ್ತದೆ ಎಂಬುದು ವ್ಯಕ್ತವಾಗುತ್ತದೆ. ಇಂದು ಈ ಸಭೆಯಲ್ಲಿ ನಾಯಕರಾದ ಶ್ರೀಮಾನ್ ವೀರೇಂದ್ರ ಪಾಟೀಲರು ಮಾತನಾಡುತ್ತಾ ಮಾನ್ಯ ಸದಸ್ಯರು ರಚನಾತ್ಮಕವಾದ ಸಲಹೆ ಕೊಟ್ಟರೆ ಅದು ಯಾವುದೇ ಪಕ್ಷದಿಂದ ಬಂದರೂ ಸಹ ಸ್ವಾಗತಿಸುವುದಾಗಿ ಹೇಳಿದರು, ಬಹಳ ಸಂತೋಷ. ಈ ದಿವಸ ಬೀಳಿಗೆ ರೋಗ ಬರುವುದನ್ನು ನಿವಾರಣೆ ಮಾಡುವುದಾಗಿ ಹೇಳುವ ಸರಕಾರ ಹಾಗೆ ಮಾಡಿ ರೈತರಿಗೆ ಉಪಕಾರ ಮಾಡುವುದಾಗಿ ಹೇಳುವ ಸರಕಾರ ರೈತರಿಗೆ ತೊಂದರೆಮಾಡಲು ಅವರನ್ನು ಗುರಾಮರನ್ನಾಗಿ ಮಾಡಲು ಅಧಿಕಾರ ಪಡೆದಿದ್ದಾರೆ, ಅಲ್ಲದೆ ಆ ಅಧಿಕಾರವನ್ನು ಒಬ್ಬ ಡೆಪ್ಯುಟಿ ಡೈರೆಕ್ಟರಿಗೆ ಕೊಟ್ಟಿದ್ದಾರೆ. ಇದರ ಪರಿಣಾಮವೇನಾಗುತ್ತದೆಂಬುದನ್ನು ಸಂಬಂಧಪಟ್ಟ ಉಪಸಮಿತ್ರಿಗಳು ಮತ್ತು ಮಂತ್ರಿಗಳು ಗಮನಿಸಬೇಕು ಎಂಬುದನ್ನು ನಿವೇದನೆಮಾಡುತ್ತಿದ್ದೇನೆ. ಅಧಿಕಾರ ಯಾರಿಗೂ ಕೂಡ ಬಹಳ ದಿವಸ ಇರುವುದಿಲ್ಲ, ಹಿಂದಿನ ಮುಖ್ಯ ಮಂತ್ರಿಗಳು ತಾವು ಮೈಸೂರು ರಾಜ್ಯದಲ್ಲಿರುವವರೆಗೂ ಈ ರಾಜ್ಯದ ಮುಖ್ಯ ಮಂತ್ರಿಯಾಗಿರುವುದಾಗಿ ಹೇಳುತ್ತಿದ್ದರು. ಈ ದಿವಸ ಅವರು ಮುಖ್ಯ ಮಂತ್ರಿಯಾಗಿಲ್ಲ, ಇಂದಿರುವ ವೀರೇಂದ್ರ ಪಾಟೀಲರೂ ಕೂಡ ಶಾಶ್ವತವಾಗಿ ಬಹಳ ಕಾಲದವರೆಗೆ ಮುಖ್ಯಮಂತ್ರಿಗಳಾಗಿರುವುದಿಲ್ಲ ಎಂಬುದನ್ನು ಅವರು ಅರಿಯಬೇಕು. ಇಂದು ನಾವು ಮಾಡುವಕಾಯಿದೆ ಮುಂದೆ ನಾವು ಅಧಿಕಾರ ಬಿಟ್ಟಮೇಲೆ ನಮ್ಮ ಮೇಲೆ ಸಹ ಅದರ ಪರಿಣಾಮ ಉಂಟುಮಾಡುತ್ತದೆ ಎಂಬುದನ್ನು ಅವರು ಅರಿಯಬೇಕು. ಆ ದೃಷ್ಟಿಯಿಂದ ಈ ಕಾಯಿದೆಯನ್ನು ವಿಮರ್ಶೆ ಮಾಡಬೇಕು. ಈ ಬಿಲ್ಲು ಸೆಲೆಕ್ಟ್ ಸಮಿತಿಗೆ ಹೋಗುವಾಗ ಮಾನ್ಯ ಮುಖ್ಯಮಂತ್ರಿಗಳು ಇದರ ಪುನರ್ಪರಿಶೀಲನೆಯಾಗುತ್ತದೆ, ದೋಷ ದೋಷಗಳು ನಿವಾರಣೆಯಾಗುತ್ತವೆ ಎಂದು ಆಶ್ವಾಸನೆ ಕೊಟ್ಟರು. ಇಂದು ಆ ಸಮಿತಿಯು ವರದಿ ಬಂದರೂ ಸಹ ಆ ಸಮಿತಿಯ ಸದಸ್ಯರು ಎಲ್ಲರೂ ಸಮಿತಿಯ ವರದಿಗೆ ಪೂರ್ಣ ಒಪ್ಪಿಗೆಯನ್ನು ನೀಡಿಲ್ಲ. ಕೆಲವರು ಭಿನ್ನಾಭಿಪ್ರಾಯವನ್ನು ಸೂಚಿಸಿದ್ದಾರೆ, ಎಂ. ಆರ್. ಪಾಟೀಲರು ಪ್ರಾಸಿಕ್ಯೂಷನ್ ಕ್ರಮ ತೆಗೆದುಕೊಳ್ಳುವ ಸೆಕ್ಷನ್ ಬಗ್ಗೆ ಬಹಳ ಕಟುವಾಗಿ ಟೀಕಿಸಿರುವುದು ಸಮಿತಿಯ ವರದಿಯಲ್ಲಿದೆ. ಅಲ್ಲದೆ ಪ್ರಾಸಿಕ್ಯೂಷನ್ ಬಗ್ಗೆ ಡೆಪ್ಯುಟಿ ಡೈರೆಕ್ಟರಿಗೆ ಅಧಿಕಾರ ಕೊಡುವುದು ಯಾವ ನ್ಯಾಯ? ನಾನು ಬೆಳೆದ ಪೈರನ್ನು ರಕ್ಷಣೆ ಮಾಡಬೇಕೆಂಬ ಬಗ್ಗೆ ನನಗೆ ಆಸಕ್ತಿ ಇರುವುದಿಲ್ಲವೇ! ರೈತನ ಕೈಲಿ ಬೆಳೆಯನ್ನು ಕ್ರಿಮಿಕೀಟಗಳಿಂದ, ರೋಗದಿಂದ ರಕ್ಷಣೆಮಾಡಲು ಸಾಧ್ಯವಾಗದಿರುವಾಗ ಸಾಮೂಹಿಕವಾಗಿ ಕೆಲಸಮಾಡಿ ರೋಗ ನಿವಾರಣೆ ಮಾಡಬೇಕೆಂದು ಹೇಳುವುದೇನೋ ಸರಿ. ಆದರೆ ರೈತ ಸಹಕರಿಸಲಿಲ್ಲ, ರೋಗ ನಿವಾರಿಸಲು ಸರಿಯಾದ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಆ ಒಂದು ನೆಪದಿಂದ ಕಡ್ಡಾಯವಾಗಿ ಆ ಕೆಲಸವನ್ನು ಬೇರೆಯವರಿಂದ ಮಾಡಿಸಿ ರೈತನಿಂದ ಕಡ್ಡಾಯವಾಗಿ ಅದಕ್ಕೆ ತಗಲುವ ಖರ್ಚನ್ನು ವಸೂಲುಮಾಡಬೇಕೆಂದು ಹೇಳುವುದು ಸರಿಯೇ! ರೈತ ಆ ಖರ್ಚನ್ನು ಕೊಡದಿದ್ದರೆ ಅವನ್ನು ಅವನ ಆಸ್ತಿಪಾಸ್ತಿಯಿಂದ ವಸೂಲು ಮಾಡುತ್ತೇವೆಂದು ಹೇಳುವುದು ಬುದ್ಧಿವಂತಿಕೆಯೇ! ಹೀಗೆ ಮಾಡಿ ಅಧಿಕಾರಿಗಳು ರೈತನನ್ನು ಹಿಂಸೆಮಾಡಲು ಅವಕಾಶ ಇದೆ. 7 ದಿವಸ ರೈತನನ್ನು ಕೆಲಸಕ್ಕೆ ಕರೆಯಲು ಡೆಪ್ಯುಟಿ ಡೈರೆಕ್ಟರಿಗೆ ಅಧಿಕಾರವಿದೆ. ಈ ರೀತಿ ರೈತರನ್ನು ಹಿಂಸೆಗೆ ಗುರಿಮಾಡಲು ಅವಕಾಶವಿರುವುದರಿಂದ ಈ ಬಿಲ್ಲನ್ನು ವಿರೋಧಿಸಬೇಕಾಗಿದೆ; ಹೀಗಿರುವುದರಿಂದ ಈ ಬಿಲ್ಲನ್ನು ಯಾವ ಉದ್ದೇಶದಿಂದ ತಂದರೋ ಅದು ಸಾರ್ಥಕವಾಗುವುದಿಲ್ಲ. ರಾಜ್ಯದಲ್ಲಿ ಒಕ್ಕಲುತನದ ಅಭಿವೃದ್ಧಿಯಾಗಬೇಕು, ಬೆಳೆಗೆಯಾಗಬೇಕು ಎಂದು ಹೇಳುವಾಗ ಈ ಬಿಲ್ಲಿನ ಉದ್ದೇಶ ಅದಕ್ಕೆ ಧಕ್ಕೆ ತರುವಂತಿದೆ. ರೈತರಿಗೆ ಬೀಳಿಗೆ ಬರುವ ರೋಗವನ್ನು ತಡೆಗಟ್ಟಲು ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಅದು ಅವರು ಮಾಡಬೇಕಾದ ಕೆಲಸಕ್ಕೆ ಅಡ್ಡಿ ತರುತ್ತದೆ. ಅವರಲ್ಲಿ ತಾಂತ್ರಿಕ ಅಜ್ಞಾನ ಇದೆ. ಅದನ್ನು ಗಮನಿಸಿ ಈ ಬಿಲ್ಲನ್ನು ತಂದರೆ, ಅವರೆ ತಂದ ಉದ್ದೇಶ ಸರವೇರುವಂತಿಲ್ಲ. ಇಂದು ವಿಮಾನದಿಂದ ಔಷಧಿಯನ್ನು ಶಿಂಪಡಿಸಿ ಸರಕಾರ ಅದಕ್ಕೆ ಹಣ ಖರ್ಚುಮಾಡಿ ಸಂಬಂಧಪಟ್ಟ ರೈತರ ಆಸ್ತಿಪಾಸ್ತಿಯಿಂದ ಅದನ್ನು ವಸೂಲುಮಾಡಬೇಕೆನ್ನುವುದು ಮತ್ತು ಕರೆದಾಗ 7 ದಿವಸಗಳಲ್ಲಿ ಬರಬೇಕೆಂಬುದು ರೈತರಿಗೆ ಕಿರುಕುಳವನ್ನುಂಟುಮಾಡುತ್ತದೆ. ಇಡೀ ಕಾಯಿದೆಯನ್ನು ಓದಿದರೆ ಅನೇಕ ಲೂಪುಗಳಲ್ಲಿ ದೋಷದೋಷಗಳು ಇರುವುದು ಕಂಡುಬರುತ್ತದೆ. ಅವನ್ನು ಸರಿಪಡಿಸದಿದ್ದರೆ ಮಸೂದೆಯನ್ನು ತಂದಿರುವ ಉದ್ದೇಶ ಸಫಲವಾಗುವುದಿಲ್ಲ. ಸೆಲೆಕ್ಟ್ ಕಮಿಟಿಗೆ ಸಾಕಷ್ಟು ಕಾಲಾವಕಾಶ ಸಿಕ್ಕದೆ ಅಥವಾ ಸಿಕ್ಕಿದ್ದರೂ ಅವರು ಸರಿಯಾಗಿ ಪರಿಶೀಲನೆಯ ಅವಕಾಶವಾಗದೆ ದೋಷದೋಷಗಳು ಪೂರ್ಣವಾಗಿ ನಿವಾರಣೆಯಾಗಿಲ್ಲ. ಅದಕ್ಕಾಗಿ ನಂಜೇಗೌಡರು ಹೇಳಿದಂತೆ ಇದನ್ನು ಪುನಃ ಸೆಲೆಕ್ಟ್

(ಶ್ರೀ ಕೆ. ಎಚ್. ಪಾಟೀಲ್)

ಕಮಿಟಿಗೆ ಅಥವಾ ಬೇರೊಂದು ಸಮಿತಿಗೆ ಕಳಿಸಿ ಪುನರ್ಪರಿಶೀಲನೆ ಮಾಡಿಸುವುದು ಅತ್ಯಾವಶ್ಯಕವಾಗಿದೆ. ಆದುದರಿಂದ ಈ ವಿಧೇಯಕವನ್ನು ಈ ಸಭೆಯಿಂದ ವಿತ್‌ಡ್ರಾ ಮಾಡಿ ಪುನರ್ಪರಿಶೀಲನೆ ಮಾಡಲು ತಕ್ಕ ಕ್ರಮ ಕೈಕೊಳ್ಳಬೇಕು.

ಇಂದು ಈ ಮಸೂದೆಯಲ್ಲಿ ರಾಜ್ಯಾಂಗದಲ್ಲಿ ನಮೂದಾಗಿರುವ ಹಕ್ಕಿಗೆ ಚ್ಯುತಿ ಬರುವಂತಿದೆ. ಎಲ್ಲರಿಗೂ ಸಮಾನವಾದ ಹಕ್ಕು ಇರಬೇಕು ಎಂದು ಹೇಳುವಾಗ ಹೆಣ್ಣುಮಕ್ಕಳಿಗೇ ಒಂದು ಗಂಡು ಮಕ್ಕಳಿಗೇ ಒಂದು ಕಾಯಿದೆ ಮಾಡುವುದು ಸರಿಯಲ್ಲ. ಅದಲ್ಲದೆ ವಿಷಧಿ ಸಿಂಪಡಿಸಲು ಹೆಣ್ಣು ಮಕ್ಕಳ ಉಪಯೋಗವೇ ಜಾಸ್ತಿ ಎಂಬುದನ್ನು ಮರೆತಿರುವ ಹಾಗೆ ತೋರುತ್ತದೆ. ಆದರೆ ಅವರಿಗೆ ಕ್ರಿಮಿಕೀಟಗಳ ನಿಯಂತ್ರಣ ಮಾಡಲು ಕಾಯಿದೆಯಲ್ಲ ಅವಕಾಶವಿಲ್ಲ. ಗಂಡಸರಿಗೆ ಮಾತ್ರ ಅವಕಾಶ ಮಾಡಿದ್ದಾರೆ. ಅನೇಕ ಕಲಮುಗಳಲ್ಲಿ ಹೀಗೆ ವಿಪರ್ಯಾಸವಿದೆ. ಈ ಕಾಯಿದೆಯನ್ನು ಯಾವ ಉದ್ದೇಶದಿಂದ ತಂದರೋ ಅದು ನೆರವೇರದೆ ಬಹಳ ದುಷ್ಪರಿಣಾಮವುಂಟಾಗಲಿದೆ. ಇಂದು ಪ್ರಜಾಪ್ರಭುತ್ವವು ಯಶಸ್ವಿಯಾಗಿ ನಡೆಯಬೇಕೆಂದಿದ್ದರೆ ಸರಿಯಾದ ಕಾನೂನುಗಳನ್ನು ರಚಿಸಬೇಕು, ಇಲ್ಲದಿದ್ದರೆ ಅದು ನಶಿಸಿಹೋಗುತ್ತದೆ. ಇತ್ತೀಚೆಗೆ ಈ ಸರಕಾರ ಉಳುವವರನ್ನು ತನ್ನ ನಿಯಂತ್ರಣದಲ್ಲಿಡಬೇಕು ಎಂಬ ಅಭಿಲಾಷೆ ಹೊಂದಿರುವಂತೆ ಭಾಸವಾಗುತ್ತಿದೆ. ಸರಕಾರ ಇಂದು ಜನತೆಯ ವಿಶ್ವಾಸವನ್ನು ಕಳೆದುಕೊಂಡಿದೆ ಎಂಬ ಭಾವನೆಯಿದೆ. ಜನರಿಗೆ ಸರಿಯಾದ ತಿಳಿವಳಿಕೆ ಕೊಡಲು ಸಾಮರ್ಥ್ಯವಿಲ್ಲದೆ ನೈತಿಕ ಬೆಂಬಲ ಕಳೆದುಕೊಂಡಿರುವ ಸರಕಾರ ಅಧಿಕಾರವನ್ನು ಕೈಬಿಡುವುದು ಒಳ್ಳೆಯದು. ನಮ್ಮದು ರೈತರ ರಾಜ್ಯವಾಗಬೇಕೆಂದು ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದರು. ಆದರೆ ರೈತರನ್ನು ಇವತ್ತಿನ ದಿನ ಕೂಲಿಗಾರರಂತೆ ಭಾಸವಾಗುತ್ತಿದೆ. ವಿರೋಧ ಪಕ್ಷದವರು ಹೇಳುವುದಕ್ಕೆ ಇಂದು ಸಾಕಷ್ಟು ಬೆಲೆ ಇಲ್ಲ. ಮುಂದೆ ಬೆಲೆ ಕೊಡಬೇಕಾದ ಕಾಲ ಬರುತ್ತದೆ. ವಿರೋಧ ಪಕ್ಷದವರು ರೈತರ ಮತ್ತು ಜನರ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತಾರೆಂಬುದನ್ನು ಮರೆಯಬಾರದು. ಈ ಕಾಯಿದೆ ಈಗಿರುವಂತೆ ಜಾರಿಗೆ ತರುವುದನ್ನು ಬಲವಾಗಿ ವಿರೋಧಿಸಿ ಇದನ್ನು ಪುನರ್ಪರಿಶೀಲನೆ ಮಾಡಬೇಕೆಂದು ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಶ್ರೀಮಾನ್ ನಂಜೇಗೌಡರು ತಂದಿರತಕ್ಕ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಮಸೂದೆಯನ್ನು ಈ ಸಭೆಯಲ್ಲಿ ತಂದಂಥ ಬಹು ಮುಖ್ಯವಾದ ಉದ್ದೇಶವೆಂದರೆ ರೈತರಿಗೆ ಒಳ್ಳೆಯದಾಗಬೇಕು, ರೈತರ ಬೆಳೆ ಹಾಳಾಗದೆ ಇರಬೇಕು ಎನ್ನುವುದೇ ಆಗಿದೆ. ಈ ಮಸೂದೆಯಲ್ಲಿ ಕೆಲವು ಕುಂದುಕೊರತೆಗಳಿವೆ ಎಂದು ಅದನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳಿಸಲಾಯಿತು. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಕೊಟ್ಟಿರುವ ವರದಿಯನ್ನು ನೋಡಿದರೂ ಕೂಡ ಆ ಉದ್ದೇಶ ಸಫಲವಾದಂತೆ ಕಂಡುಬರುವುದಿಲ್ಲ. ಕ್ರಿಮಿ ನಾಶಕಗಳು ಬಂದಿರುವುದು ಏಕೆ? ಕ್ರಿಮಿಕೀಟಗಳಿಂದ ರೈತನಾದವನು ತನ್ನ ಜಮೀನಿನಲ್ಲಿರುವ ಬೆಳೆಗೆ ತೊಂದರೆಯಾಗಲು ಎಂದು ಉತ್ಪತ್ತಿ ಮಾಡುತ್ತಾನೆಯೇ? ತನ್ನ ಬೆಳೆಯನ್ನು ತಾನೇ ಹಾಳುಮಾಡಿಕೊಳ್ಳುತ್ತಾನೆಯೇ ಎನ್ನುವ ವಿಚಾರವನ್ನು ಕೂಡ ಸಮಿತಿಯವರು ಯೋಚನೆ ಮಾಡಿದ ಹಾಗೆ ಕಂಡು ಬರುವುದಿಲ್ಲ. ಕೀಟಗಳು ಮತ್ತು ನಸಿ ಕಾಯಿಲೆ ಸಾಮಾನ್ಯವಾಗಿ ಗಾಳಿಯಿಂದ ಬರುತ್ತವೆ. ಏರ್ ಬೋರ್ನ್, ವಾಟರ್ ಬೋರ್ನ್, ಸೀಡ್ ಬೋರ್ನ್ ಮತ್ತು ಸಾಯಿಲ್ ಬೋರ್ನ್ ಇವುಗಳೂ ಇವೆ. ಇದಕ್ಕೆ ಯಾವ ರೀತಿಯಲ್ಲಿ ರೈತನಾದವನು ಜವಾಬ್ದಾರ ಎನ್ನುವುದನ್ನು ಕೂಡ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ಸರ್ಕಾರದವರು ನಿಜವಾಗಿಯೂ ರೈತನಿಗೆ ಸಹಾಯ ಮಾಡಬೇಕು ಎಂದಿದ್ದರೆ, ರೈತನ ಜಮೀನಿನಲ್ಲಿ ಬರುವ ಕೀಟ ಮತ್ತು ಕಾಯಿಲೆಗಳನ್ನು ಪರಿಹಾರ ಮಾಡಲು ತಮ್ಮ ಖರ್ಚಿನಿಂದಲೇ ಬೇಕಾದ ಸೌಕರ್ಯಗಳನ್ನು ರೈತನಿಗೆ ಒದಗಿಸಿ ಕೊಡಬೇಕು ಎನ್ನುವ ಸದುದ್ದೇಶದಿಂದ ಕೂಡಿರಬೇಕು. ಸೆಲೆಕ್ಟ್ ಕಮಿಟಿಯವರಾದರೂ ಈ ಪ್ರತ್ಯೇಯನ್ನು ವಿಮರ್ಶೆ ಮಾಡಬೇಕಾಗಿತ್ತು. ಯಾವುದಾದರೂ ಕಾಯಿಲೆ ಬಂದು ಬೆಳೆ ಹಾಳಾಗುತ್ತಿದ್ದರೆ ಅದನ್ನು ತಿಳಿದುಕೊಂಡು ಅದಕ್ಕೆ ತಕ್ಕ ಪರಿಹಾರವನ್ನು ಸರ್ಕಾರದವರು ಒದಗಿಸಿಕೊಡಬೇಕೇ ವಿನಾ ಗಾಯದ ಮೇಲೆ ಉಪ್ಪು ಹಾಕಬಾರದು. ಹಾಗೆ ಕ್ರಿಮಿಕೀಟಾದಿಗಳಿಂದ ನಷ್ಟವನ್ನು ಅನುಭವಿಸುತ್ತಿರುವಾಗ ರೈತರು ಅದರ ಪರಿಹಾರಕ್ಕೆ ತಗಲುವ ವೆಚ್ಚವನ್ನು ವಹಿಸಬೇಕು ಎಂದು ಹೇಳುವುದು ಅಷ್ಟು ಉಚಿತವಲ್ಲ. ಜನಗಳಿಗೆ ಖಾಯಿಲೆ ಬಂದರೆ ಸರ್ಕಾರದವರೇ ಔಷಧಿ ತರಿಸಿಕೊಟ್ಟು ಔಷಧಿ ತೆಗೆದುಕೊಳ್ಳಿರಿ ಎಂದು ಅದಕ್ಕಾಗಿ ಸರಕಾರಿ ಆಸ್ಪತ್ರೆಗಳನ್ನು ಇಟ್ಟಿದ್ದಾರೆ. ಪ್ರತಿಯೊಂದು ತರಹ ಖಾಯಿಲೆಗೂ ಪ್ರತ್ಯೇಕವಾದ ಆಸ್ಪತ್ರೆಗಳನ್ನು

ತೆರೆದಿದ್ದಾರೆ, ಫ್ಲೇಗು, ಕಾಲರಾ ಬಂದರೆ ಅದು ಬರದಂತೆ ಚುಚ್ಚುಮದ್ದನ್ನು ಹಾಕುತ್ತೀರಿ. ಇದಕ್ಕೆ ಸಾರ್ವಜನಿಕ ವ್ಯತ್ತಿಗಳಿಂದ ಹಣವನ್ನು ತೆಗೆದುಕೊಳ್ಳುತ್ತೀರಾ? ಹಣವನ್ನು ಕೊಟ್ಟರೆ ಮಾತ್ರ ಪರಿಹಾರ ಕಾರ್ಯಗಳನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಹೇಳುವುದಿಲ್ಲ. ಅದೇ ರೀತಿಯಾಗಿ ರೈತರ ಜಮೀನಿನಲ್ಲಿರುವ ಬೆಳೆಗಳಿಗೆ ಬರುವ ಕ್ರಿಮಿಕೀಟಾದಿಗಳ ಹಾವಳಿಯನ್ನು ತಪ್ಪಿಸುವುದಕ್ಕೆ ಸಾರ್ವಜನಿಕ ಹಣವನ್ನು ವೆಚ್ಚ ಮಾಡಿ ರೈತನಿಗೆ ಬಂದಿರುವ ಕಷ್ಟವನ್ನು ಪರಿಹಾರ ಮಾಡದೆ, ಹಣವನ್ನು ಕರ್ತಾಯವಾಗಿ ವಸೂಲು ಮಾಡಿ ಬೆಳೆ ಹಾಳಾಗದಂತೆ ಪರಿಹಾರ ಕ್ರಮ ಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದು ಸರಿಯಲ್ಲ, ನ್ಯಾಯವೂ ಅಲ್ಲ ಧರ್ಮವೂ ಅಲ್ಲ.

ರೈತನು ಸಹಕಾರ ಕೊಡಬೇಕಾದರೆ, ಆ ಕ್ರಮ ಅವನಿಗೆ ಒಳ್ಳೆಯದಿರಬೇಕು. ಅವನ ಜಮೀನಿನಲ್ಲಿ ಕೀಟ ಕಾಯಿಲೆ ಇದ್ದರೆ ಅವನು ಸಹಕಾರವನ್ನು ಕೊಟ್ಟೇ ಕೊಡುತ್ತಾನೆ. ವ್ಯವಸಾಯ ಇಲಾಖೆಯವರು ಔಷಧಿ ಹಾಕುವುದಕ್ಕೆ ಹೋದಾಗ ತಾಂತ್ರಿಕ ಸಿಬ್ಬಂದಿಯವರಿಗೆ ತುಂಬಾ ಸಹಕಾರವನ್ನು ಕೊಟ್ಟೇ ಕೊಡುತ್ತಾನೆ. ಅದರಿಂದ ಅವನಿಗೆ ಲಾಭವಿದೆ ಆದರೆ ಆ ರೀತಿಯ ಸಹಕಾರವನ್ನು ಒತ್ತಾಯ ಮಾಡಿ 7 ದಿವಸಗಳವರೆಗೆ ಅವನಿಂದ ಸೇವೆ ತೆಗೆದುಕೊಳ್ಳುವುದಕ್ಕೆ ಕಾನೂನಿನ ಪ್ರಕಾರ ಅವಕಾಶ ಮಾಡಿಕೊಟ್ಟಿರುವುದು ಮಾನ್ಯ ಕೆ. ಎಚ್. ಪಾಟೀಲ್ ಅವರು ಹೇಳಿದ ಹಾಗೆ ದುರುದ್ದೇಶಪೂರಿತ ಸಾಧನೆಗೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ನಾನು ಈ ಮಸೂದೆಯನ್ನು ವಿರೋಧಿಸಿ, ಮಾನ್ಯ ನಂಜೇಗೌಡರು ತಂದಿರುವ ತಿದ್ದು ಪಡಿಗೆ ನನ್ನ ಬೆಂಬಲವನ್ನು ಕೊಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಸ್ವಾಮಿ, ಇದರಲ್ಲಿ ಮೊದಲು ಒಂದು ಅಂಶವನ್ನು ತಮ್ಮ ಗಮನಕ್ಕೆ ತಂದು ನಂತರ ಎರಡು ಮಾತುಗಳನ್ನು ಹೇಳಬೇಕಾಗಿದೆ. ಸೆಲೆಕ್ಟ್ ಕಮಿಟಿಯಲ್ಲಿ ನಾನು ಒಬ್ಬ ಸದಸ್ಯನಾಗಿದ್ದೆ ಎಂದು ಇದರಲ್ಲಿ ನಮೂದಿಸಿದೆ. ನನಗೆ ಗೊತ್ತಿದ್ದ ಹಾಗೆ ಸೆಲೆಕ್ಟ್ ಕಮಿಟಿ ಮೀಟಿಂಗ್ ಇದೆ ಎಂದು ನೋಟೀಸ್ ನನಗೆ ಬಂದಿಲ್ಲ. ಸೆಲೆಕ್ಟ್ ಕಮಿಟಿಗಳಲ್ಲಿ ನಾನು ಹಾಜರಾಗಿಲ್ಲ. ಆದುದರಿಂದ ಈ ತಳಹದಿಯ ಮೇಲೆ ಒಂದೆರಡು ಮಾತುಗಳನ್ನು ಈ ಮಸೂದೆಯ ವಿಚಾರದಲ್ಲಿ ಹೇಳಬೇಕಾಗಿದೆ.

ಮಾನ್ಯ ಸ್ನೇಹಿತರಾದ ಶ್ರೀಮಾನ್ ಕೆ. ಎಚ್. ಪಾಟೀಲರು ಏನು ಕೆಲವು ವಿಷಯಗಳನ್ನು ಹೇಳಿದರು ಅದನ್ನು ಅವರು ತಮ್ಮ ಸ್ವಂತ ಅನುಭವದಿಂದ ಹೇಳಿದ್ದಾರೆ. ಅವರು ಸ್ವತಃ ವ್ಯವಸಾಯಗಾರರು, ಕೈಮುಟ್ಟಿ ವ್ಯವಸಾಯ ಮಾಡುತ್ತ ವ್ಯವಸಾಯಗಾರರ ಕಷ್ಟಗಳೇನಿವೆ, ಅವರ ತೊಂದರೆಗಳೇನಿವೆ ಎನ್ನುವುದನ್ನು ತಿಳಿದುಕೊಂಡು ಅವರು ನಮ್ಮೆಲ್ಲರಿಗೂ ಮನದಟ್ಟಾಗುವ ರೀತಿಯಲ್ಲಿ ಈ ಕಾನೂನನ್ನು ಶಾಸನವಲ್ಲಿ ತಂದರೆ ಆಗ ಇದರ ದುಷ್ಪರಿಣಾಮವೇನಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಸರ್ಕಾರದವರಲ್ಲಿ ನಾನು ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ ಇದನ್ನು ನೀವು ಶಾಸನ ಕದತಕ್ಕೆ ಸೇರಿಸುವುದಕ್ಕಿಂತ ಮುಂಚೆ ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕು. ಇದರ ದುಷ್ಪರಿಣಾಮ ಎಷ್ಟರಮಟ್ಟಿಗೆ ಆಗುತ್ತದೆ, ಇದನ್ನು ಮಾಡಿರತಕ್ಕ ರೀತಿ ನೀತಿ ಸರಿಯಾಗಿದೆಯೇ, ಆ ರೀತಿ ಏನಾದರೂ ಕಾಯಿಲೆಗಳು ಬರಬೇಕಾದರೆ ಅದಕ್ಕೆ ರೈತನೇ ನಾವಾದೂ ಮುಖ್ಯನಾದವನೇ, ಅವನು ಮಾಡತಕ್ಕ ಕಾರ್ಯದಿಂದೇನಾದರೂ ಬಂದಿದೆಯೇ ಅಥವಾ ನನ್ನ ಮಾನ್ಯ ಸ್ನೇಹಿತರಾದ ನಂಜೇಗೌಡರು ಹೇಳಿದ ಹಾಗೆ ಏನಾದರೂ ಕಾರಣಗಳಿಂದ ಕಾಯಿಲೆಗಳು ಬರುತ್ತವಲ್ಲ, ಅದಕ್ಕೆ ರೈತರು ಎಷ್ಟರಮಟ್ಟಿಗೆ ಕಾರಣನಾದಾನು, ಶಾಸನದಿಂದ ಒಂದು ಒತ್ತಡವನ್ನು ರೈತನ ಮೇಲೆ ಹೇರುವುದು ಸಾಧ್ಯವೇ, ವೆಲ್‌ಫೇರ್ ಸ್ಟೇಟ್ ಎಂದು ಹೇಳುವಾಗ ಅಂಥ ರೋಗ ರುಜಿನಗಳನ್ನು ತಡೆಗಟ್ಟತಕ್ಕುದು ಸರ್ಕಾರದ ಕರ್ತವ್ಯವಲ್ಲವೇ ಎನ್ನುವುದನ್ನು ಮೂಲಭೂತವಾಗಿ ಯೋಚನೆ ಮಾಡಬೇಕಾಗಿದೆ. ಉದಾಹರಣೆಗೆ ಹೇಳಬೇಕಾದರೆ ಒಂದು ನಗರದಲ್ಲಿ ಕಾಲರ ಅಥವಾ ಫ್ಲೇಗ್ ಬಂತು ಎಂದು, ಇಟ್ಟುಕೊಳ್ಳೋಣ. ಆವಾಗ ಈ ರೋಗಗಳನ್ನು ತಡೆಗಟ್ಟಲು ನಿಮ್ಮ ಮನೆ ಖರ್ಚಿನಿಂದಲೇ ನೀವೆಲ್ಲ ಏನೇನು ಔಷಧಿ ಬೇಕು ಅದನ್ನೆಲ್ಲ ಸ್ವತಃ ನೀವೇ ತಂದುಕೊಡಿ ಎಂದರೆ ಎಷ್ಟು ಜನ ನಿಮ್ಮ ಮಾತಿಗೆ ಬೆಲೆ ಕೊಟ್ಟಾರು? ಆ ರೀತಿ ಬಂದ ರೋಗಗಳನ್ನು ತಡೆಗಟ್ಟುವುದು ನಿಮ್ಮ ಕರ್ತವ್ಯವಲ್ಲವೇ, ಆ ರೀತಿ ನೀವು ಮಾಡುವುದಿಲ್ಲವೇ? ಅಥವಾ ಬೇರೆ ಕಾರಣದಿಂದ ಬಂದಂಥ ಕಾಯಿಲೆಯನ್ನು ತಡೆಗಟ್ಟಬೇಕಾಗಿರುವ ನಿಮ್ಮ ಕರ್ತವ್ಯವನ್ನು ರೈತನ ಮೇಲೆ ಶಾಸನಬದ್ಧವಾಗಿ ಹೇಗೆ ಹೇರುತ್ತೀರಿ? ಇದು ಸಾಧ್ಯವೇ? ಶಾಸನದಿಂದ ಅದನ್ನು ತಡೆಗಟ್ಟುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಇದು ಒಂದು ಹುಚ್ಚು ಸಲಹೆ ಎಂದು ಹೇಳಿದರೆ ತಪ್ಪಾಗಲಾರದು. ಈ ರೀತಿ ಯಾರು ಸಲಹೆ ಕೊಟ್ಟರೋ ಶಾಸನದಿಂದ ರೈತನ ಮೇಲೆ ಹಾಕಿ, ರೈತನೇ ಇದನ್ನು ತಡೆಗಟ್ಟಬೇಕು, ಅವನಿಂದ ತಡೆಗಟ್ಟುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯವನ್ನು ಯಾರು ಕೊಟ್ಟರೋ ನನಗಂತೂ ತಿಳಿಯದಾಗಿದೆ.

(ಶ್ರೀ ಎಚ್. ಸಿದ್ದವೀರಪ್ಪ)

ನಾನು ಹೋದ ಸಾರಿ ಒಂದು ವಿಷಯವನ್ನು ಹೇಳಿದೆ. ನಮ್ಮ ಕ್ಷೇತ್ರದಲ್ಲಿ ಬಹಳ ಕಷ್ಟಪಟ್ಟು ರೈತರು ಸಾವಿರಾರು ರೂಪಾಯಿ, ಲಕ್ಷಾಂತರ ರೂಪಾಯಿ ಗೊಬ್ಬರ ಹಾಕಿ ಬತ್ತದ ಫಸಲನ್ನು ಇಟ್ಟರು. ಬೆಳೆ ಚೆನ್ನಾಗಿ ಬಂದಿತ್ತು. ಹೊಡೆ ಬರುವ ಕಾಲದಲ್ಲಿ ಇಲಿಗಳು ಹಾವಳಿ ಮಾಡಿದುವು. ಅವುಗಳಿಗೆ ಬುದ್ಧಿ ಬಹಳ ಜಾಸ್ತಿ. ಹುಲಿಯನ್ನು ಹೊಡೆಯಬಹುದು, ಇಲಿಯನ್ನು ಹೊಡೆಯುವುದು ಕಷ್ಟ ಎಂದು ಹೇಳುತ್ತಾರೆ. ಅವು ಏನು ಮಾಡುತ್ತಿದ್ದುವು ಎಂದರೆ ಹೊಡೆ ಬಂದಾಗ ತಿನ್ನುವುದಕ್ಕೆ ಷುರು ಮಾಡಿದುವು. ಇದನ್ನು ಯಾವ ರೀತಿ ತಡೆಗಟ್ಟುವುದು ಎಂದು ಗೊತ್ತಾಗಲಿಲ್ಲ. ಯಾವ ಯಾವ ಔಷಧಿ ಇದೆಯೋ ಅದನ್ನೆಲ್ಲ ತೆಗೆದುಕೊಂಡು ಹಾಕಿದರೂ ಅವುಗಳಿಗೆ ಇಮ್ಯೂನಿಟಿ ಬರುತ್ತಿತ್ತು. ಏನು ಮಾಡಿದರೂ ಅವು ಸಿಕ್ಕುತ್ತಿರಲಿಲ್ಲ. ಅವು ಬಲ ಮಾಡಿಕೊಂಡು ಅಲ್ಲಲ್ಲೇ ಸೇರಿಕೊಳ್ಳುತ್ತಿದ್ದುವು. ಈ ರೀತಿಯಾಗಿ ನಾನು ನೋಡಿದ ಹಾಗೆ ಸಾವಿರಾರು ಎಕರೆ ಜಮೀನಿನಲ್ಲಿದ್ದ ಬತ್ತದ ಫಸಲು ಲುಕ್ಸಾನಾಯಿತು. ವ್ಯವಸಾಯ ಇಲಾಖೆಗೆ ಬರೆದು ಇಲಿಗಳನ್ನು ನಾಶ ಮಾಡಲು ಬೇಕಾಗುವ ಔಷಧಿಯನ್ನು ಕೊಡಿರಿ ಎಂದು ಕೇಳಿದಾಗ ಇಲಿಗಳನ್ನು ಕೊಲ್ಲುತಕ್ಕ ಔಷಧಿಯನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡತಕ್ಕ ಶಕ್ತಿ ಅವರಿಗೆ ಇರಲಿಲ್ಲ. ಇಲಾಖೆಗಳನ್ನು ನೋಡಿದರೆ ಅವು ಬೃಹದಾಕಾರವಾಗಿ ಬೆಳೆಯುತ್ತಿವೆ. ವ್ಯವಸಾಯ ಇಲಾಖೆಯು ಒಂದಕ್ಕೆ 2೦ರಷ್ಟು ಬೆಳೆದಿದೆ. ವ್ಯವಸಾಯ ಇಲಾಖೆ ಒಂದೇ ಅಲ್ಲ ಎಲ್ಲ ಇಲಾಖೆಗಳೂ ಇದೇ ರೀತಿ ಬೆಳೆದಿವೆ. ಇಲಾಖೆಗಳ ಬೆಳವಣಿಗೆಯಾಗಿದೆಯೇ ಹೊರತು ಅದರಿಂದ ರೈತನಿಗೆ ಏನಾದರೂ ಅನುಕೂಲವಾಗತಕ್ಕ ರೀತಿಯಿಂದ ನಡೆದಿದೆಯೇ ಎಂದು ನೋಡಿದರೆ ಬಹಳ ಶೋಚನೀಯವಾದ ಸ್ಥಿತಿ ಇದೆ ಎಂದು ನಾವು ಹೇಳಬೇಕಾಗುತ್ತದೆ. ರೈತರನ್ನು ಇಷ್ಟರಮಟ್ಟಿಗೆ ತೊಂದರೆಗೆ ಈಡು ಮಾಡಿರತಕ್ಕ ರಾಷ್ಟ್ರಗಳು ಎಂದರೆ ಬಹುಶಃ ಜೊಟಲಿಜೇರಿಯರ್ ಸ್ವೀಟ್ಸ್ ಇರಬಹುದೇ ಹೊರತು ಪ್ರಜಾಪ್ರಭುತ್ವಪರಿತಕ್ಕ ರಾಷ್ಟ್ರಗಳಲ್ಲಿ ಎಲ್ಲಿಯೂ ಈ ರೀತಿ ಇಲ್ಲ. ಅಮೆರಿಕಾದಲ್ಲಾಗಲೀ, ಇಂಗ್ಲೆಂಡಿನಲ್ಲಾಗಲೀ, ಇನ್ನು ಯಾವುದೇ ರಾಷ್ಟ್ರಗಳಲ್ಲಾಗಲೀ ಈ ರೀತಿ ಏನಾದರೂ ಕಾಯಿಲೆ ಬಂದರೆ ಅದನ್ನು ನಿವಾರಣೆ ಮಾಡಿ ಮುಂದೆ ಅದು ಬರದಂತೆ ತಡೆಗಟ್ಟುವುದು ಸರ್ಕಾರದ ಕರ್ತವ್ಯ. ಆ ಕರ್ತವ್ಯವನ್ನು ಬಿಟ್ಟು ರೈತರ ಮೇಲೆ ಹಾಕಿ, ರೈತರೇ ಅದನ್ನು ಮಾಡಬೇಕು ಎಂದು ಆ ರೀತಿ ಕಾನೂನು ಬೇರೆ ಮಾಡುತ್ತಿದ್ದಾರೆ. ರೈತನ ಸ್ಥಿತಿ ಏನು ಎನ್ನುವುದನ್ನು ನೋಡಬೇಕು. ರೈತನಿಗೆ ಹೊಟ್ಟೆಗೇ ಹಿಟ್ಟಿಲ್ಲದೇ ಇರುವಾಗ ಅವನು ಇದಕ್ಕೆಲ್ಲ ಎಲ್ಲಿಂದ ದುಡ್ಡು ತರುತ್ತಾನೆ? ನೂರಕ್ಕೆ 80 ಜನ ರೈತರಿರುವ ನಮ್ಮ ರಾಜ್ಯದಲ್ಲಿ ಇಂಥ ಕಾನೂನು ತರುವುದು ಶುದ್ಧ ಮೂರ್ಖತನ, ಅವಿವೇಕದ ಪರಮಾವಧಿ ಎಂದು ಹೇಳಿದರೂ ತಪ್ಪಾಗಲಾರದು. ಆದುದರಿಂದ ಈಗಲಾದರೂ ನಾನು ಕೇಳುತ್ತೇನೆ, ನೀವು ಈ ಕಾನೂನನ್ನು ಶಾಸನ ಕಡತದಲ್ಲಿಟ್ಟರೂ ಇದನ್ನು ಜಾರಿಗೆ ಕೊಡತಕ್ಕ ಶಕ್ತಿ ಇಲ್ಲ, ಜಾರಿಗೆ ಕೊಡುವುದಕ್ಕೆ ನಿಮ್ಮ ಕೈಯಿಂದ ಆಗುವುದಿಲ್ಲ.

5-00 P.M.

ನೀವು 10 ವರ್ಷದಲ್ಲಿ ಏನೇನು ಶಾಸನಗಳನ್ನು ಮಾಡಿದ್ದೀರಿ ಅಷ್ಟು ಶಾಸನಗಳನ್ನೂ ಜಾರಿಗೆ ಕೊಡುವ ಹಾಗೆ ಹಳೆ ಕಡತದಲ್ಲಿಟ್ಟು ಇಲಿಗಳು ತಿಂದು ಹಾಗೆಯೇ ಹಾಳಾಗಿವೆ. ಈ ರೀತಿಯಿಂದ ಯಾವುದೋ ಒಂದು ಕಾನೂನನ್ನು ಕೈಯಲ್ಲಿ ಇಟ್ಟುಕೊಂಡು ಒಂದು ವರ್ಗದವರು ಹೇಳಿದಹಾಗೆ ಕೇಳಬೇಕು ಎನ್ನುವ ಆಸೆಯಿಂದ ಮಾಡತಕ್ಕ ಶಾಸನಗಳನ್ನು ಏನಾದರೂ ಮಾಡಿ ಉಪಯೋಗಿಸಬೇಕು ಎಂದು ಮನಸ್ಸಿನಲ್ಲಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈಗ ಜನಗಳು ಬಹಳ ಹುಷಾರಾಗಿದ್ದಾರೆ. ರೈತನು ಕಷ್ಟಪಟ್ಟು ಬೆಳೆದ ಧಾನ್ಯವನ್ನು ಕಳೆದುಕೊಳ್ಳುವುದಕ್ಕೆ ಇಷ್ಟಪಡುತ್ತಾನೆಯೇ? ಯಾವ ಮನುಷ್ಯನು ತಾನೇ ಬಂಡಿರತಕ್ಕ ಹುಳಗಳನ್ನು ತೆಗೆಯುವುದಿಲ್ಲ ಎಂದು ಹೇಳುತ್ತಾನೆ. ಗಿಟ್ಟಿ ಹುಳಗಳು ಬರುತ್ತದೆ. ಹುಳಗಳನ್ನು ಮಕ್ಕಳು, ಹೆಂಗಸರೂ ಎಲ್ಲರೂ ಸೇರಿ ಮನೆಯಲ್ಲಿ ಬುಟ್ಟಿಯಲ್ಲಿ ಹಿಡಿದು ನುಡುಯುತ್ತಾರೆ. ಇದನ್ನು ನಿಮ್ಮ ಕಾಯಿದೆ ಇಲ್ಲದೇ ಮಾಡುತ್ತಾರೆ, ಅದು ಬಿಟ್ಟು ಈ ರೀತಿ ಕಾನೂನು ಮಾಡಿದರೆ ಯಾವ ಪುಣ್ಯವೂ ಇಲ್ಲ, ಪುರುಷಾರ್ಥವೂ ಇಲ್ಲ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಈ ಕಾನೂನನ್ನು ಶಾಸನಕ್ಕೆ ಏರಿಸುವುದಕ್ಕೂ ಮುಂಚೆ ಬಹಳ ದಿವಸ ಯೋಚನೆ ಮಾಡಬೇಕು. ಇದು ಸರ್ಕಾರದ ಆದ್ಯ ಕರ್ತವ್ಯ. ಇವತ್ತಿನ ದಿವಸ ನಾವು ನೋಡುತ್ತಾ ಇದೇವೆ. ನಮ್ಮ ಮೈಸೂರಿನಲ್ಲರುವ ಫಾರೆಸ್ಟ್‌ನಲ್ಲಿ ಗಂಧದ ಮರಕ್ಕೆ ಬರುವ ರೋಗವನ್ನು ನಿಮ್ಮ ಕಾಜ್ಯೂರ್‌ನಲ್ಲಿ ಇಡುವುದಕ್ಕೆ ಸಾಧ್ಯವಿಲ್ಲ. ಇದರಿಂದಾಗಿ ಗಂಧದ ಮರಕ್ಕೆ ರೋಗ ಬಂದು ಇಡೀ ಗಂಧದ ಐಶ್ವರ್ಯ ನಾಶವಾಗುತ್ತಾ ಇದೆ ಎಂದು ಪತ್ರಿಕೆಯಲ್ಲಿ ಓದಿದಾಗ ನನಗೆ ಕಣ್ಣೀರು ಇಡುವ ಪರಿಸ್ಥಿತಿ ಬಂತು.

ಇವನ್ನೇ ಕಂಟ್ರೋಲ್ ಮಾಡದೇ ಇರುವಾಗ ಗದ್ದೆಯಲ್ಲಿ ಇರುವ ಮುರಕ್ಕೆ ಹುಳ ಬಿದ್ದಿದೆ ಎಂದರೆ ಹೇಗೆ ತಡೆಯುತ್ತೀರಿ ? ಅದೇ ರೀತಿ ಮರಗಳಿಗೆ ಸಾಪಿರಾರು ಕಾಯಿಲೆಗಳು ಬರುತ್ತವೆ. ಇದರಿಂದ ಜನರನ್ನು ರೇಗಿಸುವುದು ಒಳ್ಳೆಯದಲ್ಲ. ಫ್ಯಾಕ್ಟರಿಯಲ್ಲಿ ಏನಾದರೂ ಫೇರಾವೋ ಮಾಡಿದರೆ ನಿಮ್ಮ ಕೈಯಲ್ಲಿ ತಡೆಯುವುದಕ್ಕೆ ಸಾಧ್ಯವಿಲ್ಲ. ಇನ್ನು 100ಕ್ಕೆ 80 ಜನರು ಇರುವ ರೈತರು ಒಂದು ತಿಂಗಳು ಫೇರಾವೋ ಮಾಡಿದರೆ ಹೊಟ್ಟೆಗಿಲ್ಲದೇ ಸತ್ತು ಹೋಗಬೇಕಾಗುತ್ತದೆ. ಹೀಗಿರುವಾಗ ಏತಕ್ಕೋಸ್ಕರ ಕಾನೂನು ಮಾಡುತ್ತೀರಿ ? That government is the best which is least governed. ಅದರಿಂದ ಏನೂ ಸಾಧನೆಯಾಗುವುದಿಲ್ಲ. ಇದನ್ನು ಬಹಳ ದೀರ್ಘವಾಗಿ ಯೋಚನೆ ಮಾಡಿ; ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪುನಃ ಹಾಕಬೇಕು. ಈಗ ಇರತಕ್ಕ ರೀತಿಯಲ್ಲಿ ಖಂಡಿತ ತರಕೂಡದು. ಯಾವ ರೋಗ ರುಜಿನಗಳನ್ನು ಶಾಸನದಿಂದ ತಡೆಯಬೇಕೆಂದು ಇಟ್ಟು ಕೊಂಡಿದ್ದೀರೋ ಅದು ಶಾಸನದಿಂದ ನಡೆಯುವುದಿಲ್ಲ. ಜನಗಳಿಗೆ ತಿಳುವಳಿಕೆಯಾಗುವಂತೆ ನಿಮ್ಮ ಇಲಾಖೆಯವರು ಮನೆ ಮನೆ ಬಾಗಿಲಿಗೂ ಹೋಗಿ ದಾರಿ ತೋರಿಸಿದರೆ ನಮ್ಮ ರೈತರು ಮಾಡುವುದಕ್ಕೆ ಸಿದ್ಧರಿದ್ದಾರೆ. ರೈತರು ಅಷ್ಟು ದಡ್ಡರೇನೂ ಅಲ್ಲ. ಯಾವ ಹಳ್ಳಿಗೆ ಹೋಗಿ ಇನ್‌ಸೆಕ್ಟಿಸೈಡ್ ಮತ್ತು ಮದ್ದು ಹೊಡೆಯಲಿಕ್ಕೆ ಎಲ್ಲಾ ಸಾಮಗ್ರಿಗಳನ್ನೂ ಇಟ್ಟುಕೊಂಡಿದ್ದಾರೆ. ಆದುದರಿಂದ ಈ ಕಾನೂನನ್ನು ತರುವುದು ಸೂಕ್ತವಲ್ಲ. ದಯವಿಟ್ಟು ಇದನ್ನು ಜಾಯಿಂಟ್ ಕಮಿಟಿಗೆ ಕಳುಹಿಸ ಬೇಕಾದುದು ಉತ್ತಮ. ಹಾಗೆ ಯೋಚನೆ ಮಾಡದೆ ಇದನ್ನು ಬಿಟ್ಟು ಬಿಟ್ಟರೆ ದೇಶಕ್ಕೆ ದೊಡ್ಡ ಉಪಕಾರ ಮಾಡಿ ದಂತಾಗುತ್ತದೆ. ಆದುದರಿಂದ ಇದನ್ನು ಬಲವಾಗಿ ವಿರೋಧಿಸುತ್ತೇನೆ.

ಶ್ರೀ ಬಿ. ಎಂ. ಸಾಣಿಕೊಪ್ಪ (ಕತ್ತೂರು).—ಸ್ವಾಮಿ, ಮಾನ್ಯ ಸಭಾಪತಿಗಳೇ, ಈಗ ನಮ್ಮ ಉಪಸಚಿವರು ತಂದಿರತಕ್ಕ ಬಿಲ್ಲು ಏನು ಇದೆ. ಮೈನೂರು ಅಗ್ರಿಕಲ್‌ಚರ್ ಪೆಸ್ಟ್ಸ್ ಅಂಡ್ ಡಿಸೀಸ್ ಬಿಲ್ಲನ್ನು ನಾನು ಬೆಂಬಲಿಸುತ್ತೇನೆ. ಈ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋಗಿ ಅನೇಕ ಸೂಚನೆಗಳನ್ನು ಮಾರ್ಪಡಿಸಿದೆ. ಅದುದರಿಂದ ಈ ಬಿಲ್ಲಿನಲ್ಲಿ ತೊಂದರೆಗಳು ಕಡಿಮೆಯಾಗಿ ಅವಶ್ಯವಾಗಿ ಜನರಿಗೆ ಏನು ಒಂದು ತಿಳುವಳಿಕೆ ಆಗುವ ರೀತಿಯಲ್ಲಿ ಇರಬೇಕೋ, ಆ ರೀತಿಯಲ್ಲಿ ಬಿಲ್ಲು ಬಂದಿದೆ. ಅದನ್ನು ವಿರೋಧಿಸುವುದು ಅಷ್ಟು ಸೂಕ್ತವಲ್ಲ ಎಂದು ನನಗೆ ಅನಿಸುತ್ತದೆ. ನಾವು ವ್ಯವಸಾಯಗಾರರು, ವ್ಯವಸಾಯ ಮಾಡುತ್ತೇವೆ. ಹೈಬ್ರೀಡನ್ನು ಹೆಚ್ಚು ಬೆಳೆ ಬೆಳೆಯುವವರಿಗೆ ಅದರ ಉಪಯುಕ್ತತೆಯನ್ನು ಕೊಟ್ಟು ರೋಗ ಕಡಿಮೆಯಾಗುತ್ತದೆ. ಚ್ಯೂಮಿಗೆ ಸರಿಯಾಗಿ ಔಷಧಿ ಹೊಡೆಯಿರಿ ಎಂದು ಹೇಳಿದರೆ ಅವರು ನುಮ್ಮನೆ ಕೂತಿರುತ್ತಾರೆ, ಆದ್ದರಿಂದ ಅವರಿಗೆ ಎಚ್ಚರಿಕೆಯನ್ನು ಕೊಡುವ ರೀತಿಯಲ್ಲಿ ಈ ಬಿಲ್ಲು ಇದೆ. ಅದಕ್ಕಾಗಿ ಈ ಬಿಲ್ಲಿಗೆ ನಾವೆಲ್ಲರೂ ಬೆಂಬಲ ಕೊಡುವುದು ಸೂಕ್ತ. 4-8 ಜನರು ಈ ಹೈಬ್ರೀಡ್ ರೋಗ ರುಜಿನದ ಪ್ರಶ್ನೆಯಲ್ಲಿ ಒಂದು ದೃಷ್ಟಿಯನ್ನಿಟ್ಟುಕೊಂಡು ಈ ಔಷಧಿ ಹೊಡೆಯ ಬೇಕು ಎಂದು ಎಚ್ಚರಿಕೆ ಮಾಡುವಾಗ ಯಾರಾದರೂ ಒಬ್ಬರು ವಿರೋಧಮಾಡಿ ಅಲ್ಲ ಹೊಡೆಯುವುದಿಲ್ಲ ಎಂದರೆ ಸರ್ಕಾರಕ್ಕೆ ಏನೂ ಮಾಡಲಕ್ಕೆ ಬರುವುದಿಲ್ಲ. ಆಗ ಅವನಿಗೆ ಎಚ್ಚರ ಮಾಡುವ ಪ್ರಸಂಗ ಬರುತ್ತದೆ. ಅಂತಹ ಸಂದರ್ಭದಲ್ಲಿ ಮೊದುತನದಿಂದ ಕೆಲಸ ಮಾಡುವವರಿಗೆ ಎಚ್ಚರಿಕೆ ಕೊಡುವ ಈ ಬಿಲ್ಲಿನ ಅವಶ್ಯಕತೆ ಇದೆ. ರೈತರಲ್ಲಿ ಇಂತಹ ವಿಚಾರದಲ್ಲಿ ಸಾಕಷ್ಟು ತಿಳುವಳಿಕೆ ಇಲ್ಲ. ಸರ್ಕಾರದವರು ಈ ಹೈಬ್ರೀಡಿನ ರೋಗ ರುಜಿನಗಳಿಗಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಾ ಇದ್ದರೂ ಅದರ ಉಪಯುಕ್ತತೆಯನ್ನು ಇನ್ನೂ ಕಂಡು ಕೊಂಡಿಲ್ಲ. ಕೆಲವು ಮಟ್ಟಿಗೆ ಪ್ಲಾನ್ ಬರಬೇಕು ಎಂದು ಈ ಬಿಲ್ಲನ್ನು ಮಾಡಿದೆ, ನನ್ನ ಪ್ರಕಾರ ಹಾಳಾಗುತ್ತದೆ ಎಂದು ಏನೂ ಮಾಡದೆ ನುಮ್ಮನೆ ಕೂತರೆ ಏನೂ ಪ್ರಯೋಜನವಿಲ್ಲ. ಆದುದರಿಂದ ಈ ಕೆಲಸವನ್ನು ಖಡ್ಡಾಯವಾಗಿ ಮಾಡಬೇಕು ಎನ್ನುವ ಭಾವನೆ ಮತ್ತು ಉತ್ಪನ್ನ ಹೆಚ್ಚಾಗಬೇಕು ಎನ್ನುವ ಭಾವನೆ ಅವನಲ್ಲಿ ಬರಬೇಕೆಂಬುದೇ ಈ ಬಿಲ್ಲಿನ ಉದ್ದೇಶವಾಗಿದೆ. ಇದನ್ನು ಒತ್ತಾಯದಿಂದ ಕೆಲಸಮಾಡಬೇಕಾಗಿದೆ, ಆದ್ದರಿಂದ ಈ ಬಿಲ್ ತಂದಂಥಾದ್ದು ಯೋಗ್ಯ ಇದೆ ಎಂದು ಹೇಳಿ ನಾನು ಇದಕ್ಕೆ ಬೆಂಬಲ ಕೋಡುತ್ತೇನೆ.

†ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈ ಒಂದು ಮೈನೂರು ಅಗ್ರಿಕರ್‌ಚರ್ ಪೆಸ್ಟ್ಸ್ ಅಂಡ್ ಡಿಸೀಸ್ ಬಿಲ್ ತಂದಿರತಕ್ಕಂಥ ಕಾಯಿದೆ ಏನು ಇದೆಯೋ ಅದು ಬಹಳ ಒಳ್ಳೆಯದು ಎಂದು ಕಂಡರೂ ಕೂಡ ಅವರು ಈ ಒಂದು ಕಾಯಿದೆ ಮೂಲಕ ಯಾವ ಒಂದು ದೋಷವನ್ನು ನಿವಾರಣೆ ಮಾಡುವುದಕ್ಕೆ ಹೊರಟಿದ್ದಾರೋ ಅದರ ಒಂದು ಸಫಲತೆ ಈ ಕಾಯಿದೆಯಲ್ಲಿ ಕಾಣಿಸುವುದಿಲ್ಲ ಎಂದು ನನ್ನ ಮನಸ್ಸಿಗೆ ಖಚಿತವಾಗಿದೆ. ಪ್ರಿಯಾಂಬರ್ ಹೀಗೆ ಹೇಳುತ್ತದೆ :

"Whereas it is expedient to take measures to prevent the introduction, spread or reappearance of pests, plant diseases

(ಶ್ರೀ ಎಲ್. ಶ್ರೀಕಂಠಯ್ಯ)

and various weeds, injurious to crops, plants trees or water supply or obstruction to wateer-ways within the State of Mysore and to make provision for other matters connected therewith ;

ಬಹಳ ಸಂತೋಷ ಆದರೆ ಮಾನ್ಯ ಸಿದ್ಧವೀರಪ್ಪನವರು ಹೇಳಿದ ಹಾಗೆ ನಾವು ವಸ್ತುತಃ ಪರಿಸ್ಥಿತಿ ಹೇಗೆ ಎನ್ನುತಕ್ಕದ್ದನ್ನು ಗಮನಿಸಬೇಕು. ಉದಾಹರಣೆಗೆ ನನ್ನ ಗಮನಕ್ಕೂ ಇತ್ತೀಚೆಗೆ ಸರ್ಕಾರದ ಗಮನಕ್ಕೂ ವಿಷಯ ಬಂದಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಮುಂಗಾರು ಮಳೆ ಆರಂಭವಾದಾಗ ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಕಾಲದಲ್ಲಿ ಜೋಳದ ಬೆಳೆಯನ್ನು ಬಿತ್ತಿದರು. ಮಳೆ ಸ್ವಲ್ಪ ಒದಗಿಸಿಕೊಡುವ ಹಾಗೆ ಕಂಡು ಬಂತು. ಜೋಳದ ಸಂಪೂ ಕೂಡ ಬಂತು. ಯಾವ ವರ್ಷವೂ ಆಗದೇ ಇರುವ ಜೋಳ ಈ ವರ್ಷ ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಆಗುತ್ತದೆ ಎಂದು ರೈತರು ನಂಬಿಕೊಂಡಿದ್ದರು. ಆದರೆ ಅದು ಹೊಡೆ ಕಡೆಯುವುದಕ್ಕೆ ಪುರು ಆದಮೇಲೆ ಮಳೆ ಕಡಿಮೆ ಆಯಿತು. ಆದುದರಿಂದ ಸಕಾಲದಲ್ಲಿ ಮಳೆ ಬಾರದೆ ಪ್ರತಿಶೊಂದು ಹೂವು ಕೂಡ ಕಪ್ಪು ಕಾಣಲಿಕ್ಕೆ ಶುರುವಾಯಿತು. ಕೂಡಲೇ ಅಗ್ರಿಕರ್‌ಚರ್ ಡಿಪಾರ್ಟ್‌ಮೆಂಟಿನವರಿಗೆ ಜೋಳದ ಬೆಳೆಗೆ ರೋಗ ಬೀಳುತ್ತದೆ. ಅದಕ್ಕೆ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಮನವರಿಕೆ ಸಲ್ಲಿಸಿದರು. ತಾಲ್ಲೂಕು ಬೋರ್ಡಿನವರು ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಉತ್ತರ ಏನು ಬಂತು ಎಂದರೆ ಇದು ವಿಶಾಲವಾದ ಪ್ರದೇಶ ಚಿಟ್ಟೆ ರೋಗ ಬಂದಿದೆ ಎನ್ನುವುದು ನಮಗೆ ಗೊತ್ತು ಅದರಿಂದ ನಿಮಗೆ ತುಂಬಾ ಅನ್ಯಾಯವಾಗುತ್ತದೆ ಎಂದು ನಾವು ತಿಳಿದುಕೊಂಡಿದ್ದೇವೆ, ಮತ್ತು ರೈತರಿಗೂ ಬಹಳ ನಷ್ಟವಾಗುತ್ತದೆ. ಆದರೆ ಇನ್ನೂ ಒಂದು ಹೇಳಿದರು. ಇದನ್ನು ಹೋಗಲಾಡಿಸುವುದಕ್ಕೆ ಬೇಕಾದಂಥ ಗೊಬ್ಬರ ರಸಾಯನಿಕ ಪದಾರ್ಥಗಳನ್ನು ಸ್ಟಾಕ್ ಮಾಡಿಟ್ಟಿದ್ದೇವೆ, ಬೇಕಾದರೆ ಕೊಂಡು ಕೊಂಡು ಪರಿಹರಿಸಿಕೊಳ್ಳಿ ಎಂದು. ಆದರೆ ಉಂಟಾದ ಪರಿಸ್ಥಿತಿ ಏನೆಂದರೆ, ಇವತ್ತು ರೈತರ ಆರ್ಥಿಕ ಪರಿಸ್ಥಿತಿಯು ಈ ರಸಾಯನಿಕ ಸಾಧನಗಳನ್ನು ಕೊಂಡು ಕೊಂಡು ಈ ರೋಗವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಡೀ ಮೈಸೂರು ಜಿಲ್ಲೆಯಲ್ಲಿ ಇವತ್ತು ಅರ್ಧದಷ್ಟು ಜೋಳದ ಬೆಳೆಯು ಯಾರಿಗೂ ದೊರಕುತ್ತಾ ಇಲ್ಲ. ಇಲ್ಲಿ ಮುಖ್ಯವಾಗಿ ಒಂದು ವಿಷಯ ಕಂಡುಬರುತ್ತದೆ. ಈಗ ಮನುಷ್ಯನಿಗೆ ತಗಲತಕ್ಕ ಸಾಂಕ್ರಾಮಿಕ ರೋಗ ಬಂದ ಕೂಡಲೇ, ಸರ್ಕಾರದವರು ಇನಾಕ್ಯುಲೇಶನ್, ಮತ್ತು ವೇಕ್ಸಿನೇಶನ್ ಹಾಕಲು ತೀವ್ರ ಕಾರ್ಯಕ್ರಮವನ್ನು ಕೈಕೊಳ್ಳುತ್ತಾರೆ. ಆದರೆ ಇದು ತಿನ್ನುವ ಆಹಾರಕ್ಕೆ ಬರುವಂತಹ ರೋಗ. ಬಹುಶ: ಇವು ಸಾಕಷ್ಟು ಪುಷ್ಟಿಯಾಗಿರುವಂತಹ ಆಹಾರಗಳಿಗೆ ಬರುತ್ತವೆ. ರೈತರು ಸರ್ಕಾರಕ್ಕೆ ಇಂಥ ರೋಗ ಜೋಳದ ಬೆಳೆಗೆ ಬಂದಿದೆ ಎಂದು ಮನವಿ ಮಾಡಿಕೊಂಡರೂ, ರಾಸಾಯನಿಕ ಪದಾರ್ಥಗಳು ಗೋಡಾನಿನಲ್ಲಿ ಬಿದ್ದಿದ್ದರೂ, ಅವನಿಗೆ ದುಡ್ಡು ಕೊಟ್ಟು ತೆಗೆದುಕೊಂಡು ಹೋಗಿ ಎಂದು ಹೇಳಿದರೆ, ಇವತ್ತು ಅವನ ಆರ್ಥಿಕ ಪರಿಸ್ಥಿತಿಯಲ್ಲಿ ಏನು ಮಾಡಲು ಸಾಧ್ಯ? ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದ ಹಾಗೆ ಸರ್ಕಾರಕ್ಕೆ ಬೆಳೆ ಕಾಪಾಡಬೇಕೆಂಬ ಉದ್ದೇಶ ಇದ್ದರೆ, ಸರ್ಕಾರದವರು ಇನ್ನಿತರ ಸಾಧನದ ಮುಖಾಂತರ ಈ ಜೋಳದ ಬೆಳೆಯ ರಕ್ಷಣೆಯನ್ನು ಮಾಡಬಹುದಿತ್ತು. ನನ್ನ ಜ್ಞಾಪಕದ ಪ್ರಕಾರ, ನಂಜನಗೂಡಿನ ರಸಬಾಳೆ ಗಿಡಗಳಿಗೆ ರೋಗ ತಗಲವಾಗ, ಅದಕ್ಕೆ ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳದೆ, ಅವುಗಳು ನಶ್ತು ಹೋಗಲು ಶುರುವಾಯಿತು. ಇದುವರೆಗೂ ಅದಕ್ಕೆ ಯಾವ ವಿಧವಾದಂತಹ ಒಂದು ಪರಿಹಾರವನ್ನು ಕಂಡು ಹಿಡಿದಿಲ್ಲ. ಇದರಿಂದ ನಂಜನಗೂಡು ರಸಬಾಳೆ ಹಣ್ಣೇ ನಾಶವಾಗುತ್ತಾ ಇದೆ! ಆ ಶ್ರೇಷ್ಠವಾದ ರಸಬಾಳೆಹಣ್ಣು ಹೋಗುತ್ತಾ ಇದೆ. ಇಲ್ಲಿ ನಮೂದು ಮಾಡಿದಂತಹ ಸೆಕ್ಷನ್ 4, ಸೆಕ್ಷನ್ 5, ಸೆಕ್ಷನ್ 7 ಅದನ್ನು ಇಲ್ಲಿ ಸ್ವಲ್ಪ ವಿಮರ್ಶೆಮಾಡಬೇಕಾಗುತ್ತದೆ. ಸೆಕ್ಷನ್ 4ರಲ್ಲಿ ಪವರ್‌ಟು ಇಶ್ಯೂ ಡೈರಕ್ಷನ್ಸ್ ಎಂದು ಇದೆ. ಇದು ಹೇಗಿದೆ ಎಂದರೆ ಅನ್ನ ಕೇಳಬೇಡಿ, ಬಟ್ಟೆ ಕೇಳಬೇಡಿ, ಗಿಣಿಯನ್ನು ಸಾಕಿದ ಹಾಗೆ ಸಾಕುತ್ತೇನೆ ಎನ್ನುವ ಹಾಗಿದೆ. ಫ್ರೀಯಾಗಿ ರಸಾಯನಿಕ ಗೊಬ್ಬರ ಕೊಡಿ ಎಂದರೆ; ಅದು ಇಲ್ಲ. ರೋಗ ಬಂತು ಎಂದರೆ, ಅದು ಸರ್ಕಾರದ ಗಮನಕ್ಕೆ ಬರುವುದಿಲ್ಲ. ಅದರಲ್ಲಿ ಏನು ಹೇಳುತ್ತಾರೆಂದರೆ ;

"(1) On the issue of a notification under Section 3, the Depuy Director of Agriculture may, by notice direct every occupier within the affected area to carry out such preventive or remedial measures"

ಇದು ಬಹಳ ಸುಖವಾದ ಕೆಲಸ, ಬೆಂಗಳೂರಿನಲ್ಲಿ ಬಹಳ ಸುಖವಾದ ಏರ್ ಕಂಡಿಶನ್ ರೂಮ್ ಇದೆ. ಅಲ್ಲಿ ರೋಗ ಬಂದಿದೆ ಎಂದು ಹೇಳಿದರೆ ಕೂಡಲೇ ಅದನ್ನು ದಮನ ಮಾಡಬೇಕೆಂದು ಆರ್ಡರ್ ಮಾಡುತ್ತಾರೆ. ಅದರ ಬದಲು, ಸರ್ಕಾರದವರೇ, ಕೆಮಿಕಲ್ಸ್ ಫ್ಯಾಕ್ಟರಿಯವರಿಗೆ ಒಂದು ರಿಕ್ಯಿಜಿಶನ್ ಮಾಡಿ, ತಮ್ಮ ಸಿಬ್ಬಂದಿಯೊಡನೆ ಇಂಥ ಪ್ರದೇಶಗಳು ಯಾವುವು ಇವೆ, ಅಲ್ಲಿ ಅದನ್ನು ತಡೆಗಟ್ಟುವ ಒಂದು ಏರ್ಪಾಡನ್ನು, ಒಂದು ವಾರ್ ಬೆಸಿಸ್ ಮೇಲೆ ಮಾಡಿ, ಬೆಳೆಯನ್ನು ರಕ್ಷಣೆ ಮಾಡುತ್ತಾರೋ ಎಂದು ತಿಳಿದುಕೊಂಡಿದ್ದರೆ, ಅದು ಆ ರೀತಿ ಇಲ್ಲ. ಆ ಮೇಲೆ ಸೆಕ್ಷನ್ 5 ರಲ್ಲಿ ಈ ರೀತಿ ಇದೆ :

> "Duties of occupier on the issue of notice under section.4—On the issue of a notice under section 4 (i) it shall be the duty of every occupier within the affected area to carry out the preventive or remedial measures specified in such notice..."

ಮತ್ತು ಸೆಕ್ಷನ್ 7 ಮತ್ತು 9 ರಲ್ಲಿ ನೋಟಿಫಿಕೇಶನ್ ಆದಮೇಲೆ ಒಂದು ಡೈರೆಕ್ಷನ್ ಕೊಟ್ಟಿದ್ದಾರೆ. ರೈತ ಪ್ರಿವೆಂಟಿವ್ ಮೆಜರ್ ತೆಗೆದುಕೊಳ್ಳದೆ ಹೋದರೆ ಅವನಿಗೆ ಶಿಕ್ಷೆ ಬೇರೆ. ಮೊದಲೇ ಗೊಬ್ಬರ ಮುಂತಾದುವುಗಳನ್ನು ಕೊಂಡುಕೊಳ್ಳುವುದಕ್ಕೆ ಚೈತನ್ಯವಿಲ್ಲ. ಅದರ ಮೇಲೆ ಇದೊಂದು ಶಿಕ್ಷೆ, ಶೇಕಡಾ 50 ಕೆಮಿಕಲ್ಸ್ ಉಪಯೋಗಿಸಿದರೆ, 50 ಭಾಗ ಗ್ರೀನ್ಸ್ ಉಪಯೋಗಿಸಬೇಕೆಂದು ಅಗ್ರಿಕಲ್ಚರಲ್ ಸಂಶೋಧನೆಯಿಂದ ಕಂಡುಬರುತ್ತದೆ. ಏಕೆಂದರೆ, ಕೆಮಿಕಲ್ಸ್ ಭೂಮಿಗೆ ತುಂಬಾ ಖಾರವನ್ನು ಉಂಟು ಮಾಡುತ್ತದೆ. ಉತ್ತರೋತ್ತರ ಭೂಮಿಯ ಫರ್ಟಿಲಿಟಿ ಕಡಿಮೆಯಾಗುತ್ತದೆ. ಅದಕ್ಕಾಗಿ ಶೇಕಡಾ 50 ಸೊಪ್ಪನ್ನು ಇದರ ಜೊತೆಗೆ ಭೂಮಿಗೆ ಹಾಕಬೇಕಾಗುತ್ತದೆ. ಇವತ್ತಿನ ದಿವಸ ಈ ಸೊಪ್ಪಿಗೆ ಯಾವುದೂ ಇಲ್ಲ. ಸಾಲು ಮರಗಳು ಇಲ್ಲ, ಕಾಡುಗಳು ಮೊದಲೇ ಇಲ್ಲ. ದಿನೇ ದಿನೇ ಕಡಿಮೆಯಾಗುತ್ತಾ ಇದೆ. ಹೊಂಗೆ ಮರದ ಸೊಪ್ಪು ಕೂಡ ಇಲ್ಲ. ಎರ್ಲಾದರೂ ಹೊಂಗೆ ಸೊಪ್ಪನ್ನು ನೋಡಬೇಕಾದರೆ, ಬೊಟೇನಿಕಲ್ ಗಾರ್ಡನಿಗೆ ಹೋಗಿ ನೋಡಬೇಕಾಗುತ್ತದೆ. ಇವೆಲ್ಲಾ ಕಾರಣಗಳಿಂದ ಗ್ರೀನ್ ಮೇನ್ಯೂರು ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆಯಾಗುತ್ತಾ ಇದೆ. ಅದಲ್ಲದೆ, ಈ ಪ್ಲಾಂಟೇಶನ್, ದರ್ಕಾಸ್ತು ಎಂದು ಎಲ್ಲಾ ಸೊಪ್ಪನ್ನು ಸಂಪೂರ್ಣವಾಗಿ ನಾಶಮಾಡುತ್ತಿದ್ದಾರೆ. ಇದರ ಪರಿಣಾಮವೇನಾಗುತ್ತದೆ ಎಂದು ಯಾರೂ ಸಂಶೋಧನೆ ಕೈಕೊಂಡಿಲ್ಲ. ಯಾವಾಗ ಭೂಮಿಯಲ್ಲಿ ಖಾರ ಜಾಸ್ತಿಯಾಗಿ ಉಂಟಾಗುತ್ತದೋ, ಆಗ ಅಲ್ಲಿ ಕಾಯಿಲೆಗಳು ಉಂಟಾಗುತ್ತದೆ. ಇಂದು ನಮ್ಮ ದುರದೃಷ್ಟವೋ, ಸರ್ಕಾರದ ದುರದೃಷ್ಟವೋ ಮಳೆಯು ಮಾಯವಾಗುತ್ತಾ ಇದೆ. ಇಂಥ ಸಂದರ್ಭಗಳಲ್ಲಿ ಕೇವಲ ನೋಟಿಫಿಕೇಶನ್ಸ್ ಹೊರಡಿಸಿ ಬಿಟ್ಟರೆ, ಅದನ್ನು ಪರಿಹಾರ ಮಾಡಿದ ಹಾಗೆ ಆಗುವುದಿಲ್ಲ. ಇದರಿಂದ ಬೆಳೆ ಹಾನಿಯಾಗುತ್ತದೆ ಅಷ್ಟೆ. ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು ತಾಲ್ಲೂಕುಗಳಲ್ಲಿ ಜೋಳದ ಬೆಳೆಗೆ ರೋಗ ತಗಲಿದ್ದನ್ನು ಮಾನ್ಯ ವಿಟ್ನಲಬಾಸ ಶೆಟ್ಟರು ಕೂಡ ನೋಡಿ ಬಹಳ ನೊಂದುಕೊಂಡರು. ಅಲ್ಲಿ ಲಕ್ಷಾಂತರ ಎಕರೆಗಳಲ್ಲಿ ಜೋಳದ ಬೆಳೆಯು ಇತ್ತು. ಇಂಥ ಸಂದರ್ಭದಲ್ಲಿ ನನ್ನ ಸಲಹೆ ಏನೆಂದರೆ, ಈ ಮನೂದೆಯನ್ನು ಪುನ: ಸೆಲೆಕ್ಟ್ ಕಮಿಟಿಗೆ ಕಳಿಸಿ ಅದರಲ್ಲಿ ಈ ಒಂದು ಅಬ್ಲಿಗೇಶನ್ನು ಕೇವಲ ರೈತನ ಮೇಲೆ ಹೊರಿಸುವುದರ ಬದಲು, ಸರ್ಕಾರದವರೇ, ರೋಗ ಕಂಡ ಕೂಡಲೇ, ಕಡ್ಡಾಯವಾಗಿ ಸರ್ಕಾರದವತಿಯಿಂದ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು. ಇಲ್ಲದಿದ್ದರೆ, ಮನುಷ್ಯನಿಗೆ ಅವಶ್ಯವಾಗಿರುವಂತಹ ಆಹಾರಕ್ಕೆ ತುಂಬಾ ಧಕ್ಕೆ ಬರುತ್ತದೆ. ಆದ್ದರಿಂದ ನನ್ನ ಮನವಿ ಏನೆಂದರೆ, ಇದನ್ನು ಸೆಲೆಕ್ಟ್ ಕಮಿಟಿಯಲ್ಲಿ ಯಾರೂ ನೋಡದೆ ಇರುವುದರಿಂದ, ಪುನ: ಸೆಲೆಕ್ಟ್ ಕಮಿಟಿಗೆ ಕಳಿಸಬೇಕು. ಇದರಲ್ಲಿ ಗುರುತರವಾದ ಜವಾಬ್ದಾರಿ ಇದೆ. ಆದ್ದರಿಂದ ಕಮಿಟಿಯವರು ಇದನ್ನು ಪುನಃ ಪರಿಶೀಲನೆ ಮಾಡಲಿ. ಕೇವಲ ರೈತನಿಗೆ ಶಿಕ್ಷೆ ಆಗುತ್ತದೆ ಎಂದು ಒಂದು ಅಪೀಲು ಕೊಡೋಣ, ಒಂದು ನೋಟೀಸ್ ಕೊಡೋಣ ಎಂದು ಸಣ್ಣಪುಟ್ಟ ದೃಷ್ಟಿಯಿಂದ ಒಂದು ಮಾರ್ಪಾಟು ಮಾಡಿದ್ದಾರೆಯೇ ಹೊರತು ಇದರಲ್ಲಿ ಸ್ಥೂಲವಾಗಿ ಯಾವ ಉದ್ದೇಶದಿಂದಲೂ ಬೆಳೆಯನ್ನು ಕಾಪಾಡಬೇಕು ಎನ್ನುವ ಒಂದು ದೃಷ್ಟಿಯಿಂದ ಮಾಡಲಿಲ್ಲ ಮತ್ತು ಆ ಉದ್ದೇಶವನ್ನು ಇದು ಈಡೇರಿಸುವುದಿಲ್ಲ. ಆದ್ದರಿಂದ ಪುನಃ ಈ ಮನೂದೆ ಸೆಲೆಕ್ಟ್ ಕಮಿಟಿಗೆ ಹೋಗಲಿ. ಇದನ್ನು ಅಲ್ಲಿ ಅಮೂರಾಗ್ರವಾಗಿ ಪರಿಶೀಲನೆಬೇಕು. ಯಾವುದಾದರೂ ಒಂದು ಬೆಳೆಗೆ ರೋಗ ಬಂದರೆ ರೈತನಾದವನು ಅದನ್ನು ಸಂರಕ್ಷಣೆ ಮಾಡಲಿ, ಮಾಡದೇ ಹೋಗಲಿ, ಮುಖ್ಯವಾಗಿ ಸರ್ಕಾರದವರು ಅದು ಅವರ ಜವಾಬ್ದಾರಿಯೆಂದು ತಿಳಿದು ಸರ್ಕಾರದ ಖರ್ಚಿನಿಂದಲೇ ಬೆಳೆಗಳಿಗೆ ಬಂದಂಥ ರೋಗವನ್ನು ಹೋಗಲಾಡಿಸುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದನ್ನು ಅಮೂರಾಗ್ರವಾಗಿ ಪುನಃ ಪರಿಶೀಲಿಸಿ ಸರ್ಕಾರದವರು ರೈತರ ಹಿತರಕ್ಷಣೆ ಮಾಡುತ್ತಾರೆಂದು ನಂಬಿ ಈ ವರದಿಯನ್ನು ವಿರೋಧಿಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ (ನಾಗರ).—ಸನ್ಮಾನ್ಯ ಅಧ್ಯಕ್ಷರೇ, ಈ ನಭೆಯು ಮುಂದೆ ಇರತಕ್ಕಂಥ ಮನೂದೆಯಲ್ಲಿನ ಪರಿಣಾಮಗಳನ್ನು ಸಾಕಷ್ಟು ಯೋಚನೆ ಮಾಡಬೇಕೆಂಬ ಉದ್ದೇಶದಿಂದ ಹಿಂದೆ ಸೆಲೆಕ್ಟ್ ಕಮಿಟಿಗೆ ರೆಫರ್ ಆಗಿತ್ತು. ಆದರೆ ಆ ಕಮಿಟಿಯು ಸದಸ್ಯರು ಸೆಲೆಕ್ಟ್ ಕಮಿಟಿಯಲ್ಲಿ ಸಾಕಷ್ಟು ಇದರ ಬಗ್ಗೆ ಆಲೋಚನೆ ಮಾಡಲಿಲ್ಲವೆಂದು ಹೇಳುವುದು ನನ್ನ ಉದ್ದೇಶವಲ್ಲ. ಆದರೂ ಸಹ ನನ್ನ ಹಿಂದೆ ಮಾತನಾಡಿದಂಥ ವಿರೋಧ ಪಕ್ಷದ ಹಿರಿಯರು ಹಾಗೂ ಮಿತ್ರರು ಕೆಲವು ಶಂಕೆಗಳನ್ನು ವ್ಯಕ್ತಪಡಿಸಿದರು. ಅದರಲ್ಲಿ ಸಾಕಷ್ಟು ಫೋರ್ಸ್ ಇದೆಯೆಂದು ನಾನು ಏನಂತಿಸಿಕೊಳ್ಳಲಕ್ಕೆ ಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ಸೆಕ್ಷನ್ 4 (2)ರಲ್ಲಿ ಈ ರೀತಿಯಾಗಿ ಹೇಳಿದೆ:

"Call upon any male person, not being below the age of eighteen years and residing within the said area, to render such assistance as may be specified"

ಕಾನ್‌ಸ್ಟಿಟ್ಯೂಷನ್ ಪ್ರಕಾರವೂ ಕೂಡ ಕಂಪಲ್ಸರಿಯಾಗಿ ಅಂತಹವರ ಸರ್ವಿಸ್ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೆಂದು ಇದ್ದರೂ ಅದನ್ನು ಮಾಡಬೇಕು ಎಂಬುದಾಗಿ ಹೇಳುವ ಧಾಟಿ ಅಷ್ಟು ಸರಿಯಾದುದಲ್ಲ. ಈ ಮನೂದೆಯನ್ನು ತರುವುದಕ್ಕೆ ಹಿಂದೆ ಇದ್ದಂಥ ಉದ್ದೇಶವನ್ನು ನಾನು ಪ್ರಶ್ನೆಮಾಡುತ್ತಾ ಇಲ್ಲ. ಸರ್ಕಾರಕ್ಕೆ ಏನಾದರೂ ಒಂದು ಪವರ್ ಅಥವಾ ಅಧಿಕಾರ ಕೆಲವು ಜಟಿಲವಾದ ಸಂದರ್ಭಗಳಲ್ಲಿ ಬೇಕಾಗುತ್ತದೆ. ಆದ್ದರಿಂದ ಇದನ್ನು ಅಲ್ಲಗಳೆಯುವ ಉದ್ದೇಶ ನನಗಿಲ್ಲ. ಈ ಒಂದು ಅಧಿಕಾರವನ್ನು ಕಾನೂನಿನಲ್ಲಿ ಸರಿಯಾಗಿ ಸೂಚಿಸಬೇಕೆಂದು ಹೇಳುತ್ತೇನೆ. ಸರ್ಕಾರದ ಪ್ರತಿನಿಧಿಗಳು ಯಾರು ಅದನ್ನು ಚಲಾಯಿಸುತ್ತಾರೆ, ಎಲ್ಲಿ ಚಲಾಯಿಸುತ್ತಾರೆಂಬ ಬಗ್ಗೆ ಸ್ಪಷ್ಟವಾದ ಕಲ್ಪನೆ ಅವಶ್ಯಕ. ಮತ್ತು ಇದನ್ನು ಯಾರ ಮೇಲೆ ಚಲಾಯಿಸುತ್ತಾರೆಂಬುದನ್ನು ಈ ಸಂದರ್ಭದಲ್ಲಿ ನೋಡುವುದೂ ಕೂಡ ಅಷ್ಟೇ ಪ್ರಾಮುಖ್ಯವಾದ ವಿಚಾರ. ಯಾವುದೇ ರೀತಿಯ ಅನ್ಯಾಯವನ್ನು ಸರಿಯಾಗಿ ಪ್ರತಿಭಟಿಸುವ ಶಕ್ತಿ ಇಲ್ಲದ ಅಸಂಖ್ಯಾತ ಜನಗಳ ಮೇಲೆ ಆ ಅಧಿಕಾರ ಚಲಾವಣೆಯಾಗುತ್ತದೆಂದು ನಾವು ಕಲ್ಪಿಸಿಕೊಳ್ಳಬೇಕಾಗುತ್ತದೆ. ಕೇವಲ ಕಾನೂನಿನ ಉದ್ದಿಶ್ಯ ಮಾತ್ರ ಮುಖ್ಯವಲ್ಲ. ಯಾವ ಒಂದು ಉದ್ದೇಶದಿಂದ ಕಾನೂನು ಮಾಡುತ್ತೇವೋ ಆ ಉದ್ದೇಶ ಎಷ್ಟರಮಟ್ಟಿಗೆ ನಿಜವಾಗಿ ಈಡೇರುತ್ತದೆಯೆಂಬುದನ್ನು ನಾವು ಯೋಚನೆಮಾಡಬೇಕು. ಅಂತಹ ಭರವಸೆಯಿಂದ ನೋಡಿದರೆ ಈ ಮನೂದೆಯನ್ನು ಇನ್ನೂ ಹೆಚ್ಚಿಗೆ ಪರಿಶೀಲನೆಮಾಡುವ ಅವಶ್ಯಕತೆ ಇದೆಯೆಂದು ನನಗನ್ನಿಸುತ್ತದೆ. ಈ ಮನೂದೆಗೆ ಸಂಬಂಧಪಟ್ಟ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ ತಪ್ಪಿಗಾಗಿ ರೈತನನ್ನು ಶಿಕ್ಷಿಸುವ ಅಧಿಕಾರ ಇದರಲ್ಲಿ ಕೊಂಚ ಮಟ್ಟಿಗೆ ಇದ್ದರೂ, ಇದರ ಅವಶ್ಯಕತೆ ಎಷ್ಟು ಪ್ರಮಾಣದಲ್ಲಿದೆ, ಎಷ್ಟು ಪ್ರಮಾಣದಲ್ಲಿ ಈ ರೀತಿಯಾದಂಥ ಕಾನೂನು ಮಾಡಬಹುದು ಎಂಬುದನ್ನು ವಿಚಾರವಾಡಬೇಕು. ಇದರ ಹಿಂದೆ ಇರತಕ್ಕ ಕೆಲವು ಧಾಟಿ ಬಹಳ ಅಸಮರ್ಪಕವಾಗಿದೆ. ರೈತನ ದೃಷ್ಟಿಯಿಂದ ಇದು ಇನ್‌ಸಲ್ಟಿಂಗ್ ಆಗಿದೆಯೆಂದು ಹೇಳಿದರೆ ತಪ್ಪಾಗುವುದಿಲ್ಲ.

ಇನ್ನೊಂದು ವಿಷಯ. ಸೆಕ್ಷನ್ 7 ಮತ್ತು 9. ಈ ಎರಡರಲ್ಲಿಯೂ ರೈತನನ್ನು ಪೆನಲೈಜ್ ಮಾಡಬೇಕೆಂದು ಸೆಲೆಕ್ಟ್ ಕಮಿಟಿಯಲ್ಲಿ ಮಾಡಿದ್ದಾರೆ. ಇದನ್ನು ಅನುಸರಿಸಿ ರೈತ ಕೆಲಸ ಮಾಡದೆ ಇದ್ದರೆ ಆಗ ರೈತನು ಶಿಕ್ಷೆಗೆ ಗುರಿಯಾಗುತ್ತಾನೆ ಈ ಕ್ಲಾಜಿನಲ್ಲಿ ಈ ರೀತಿ ಹೇಳಿದೆ:

"Where the preventive or remedial measures directed to be carried out by a notification under section 3 include the removal or destruction of any plant in order to eradicate or prevent the introduction or reappearnce of any * * * pest or plant diseases, any occupier who fails to remove or destroy such plant on or before the date specified in such notification shall be deemed to have committed an offence under this Act."

ಇನ್ನು ರೈತನ ಬಗ್ಗೆ ಹೇಳಬೇಕಾದರೆ, he shall do it in accordance with the direction. It is all right. I agree.

ಆದರೆ ರೈತನು ಆ ರೀತಿ ಮಾಡದೇ ಹೋದ ಪಕ್ಷದಲ್ಲಿ ಅವನ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ ಇನ್‌ಸ್ಪೆಕ್ಟಿಂಗ್ ಆಫೀಸರ್ಸ್ ಮತ್ತು ಇತರ ಅಧಿಕಾರಿಗಳಿಗೆ ಆ ರೀತಿ

ಮಾಡಬೇಕೆಂದು ಆಬ್ಲಿಗೇಷನ್ ಇಲ್ಲ. ಒಂದು ಕಾಯಿದೆ ಬಂದಿದೆ ಅಂದರೆ ಅದಕ್ಕೆ ತಕ್ಕ ಕ್ರಮವನ್ನು ಅನುಸರಿಸುವುದಕ್ಕೆ ರೈತ ತಯಾರು ಇಲ್ಲ. ಅವನಿಗೆ ನೋಟೀಸ್ ಕೊಟ್ಟರೂ ಅದರ ಪ್ರಕಾರ ನಡೆಯುತ್ತಾ ಇಲ್ಲ ಎನ್ನುವ ಸಂದರ್ಭದಲ್ಲಿ ಅವನ ಮೇರೆ 'ಷಲ್' ಎಂಬ ಪದ ಪ್ರಯೋಗವಾಗಿದೆ. ಅದನ್ನು ಮಾಡದಿದ್ದರೆ ಬೇರೆ ಕ್ರಮಗಳನ್ನು ಅಂದರೆ, ಫೈನ್ ಎಲ್ಲವನ್ನೂ ಕಾನೂನು ಪ್ರಕಾರ ಅವನಮೇಲೆ ವಿಧಿಸಬಹುದಾಗಿದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳವಿಚಾರದಲ್ಲಿ ಮಾತ್ರ "ಮೆ" ಎಂಬುವಾಗಿ ಪದಗಳನ್ನು ಪ್ರಯೋಗ ಮಾಡುತ್ತಾರೆ. ರೈತನ ಬಗ್ಗೆ ಅವನ ಸ್ಥಿತಿಗತಿಗಳನ್ನು ವಿಚಾರಮಾಡಿ ಅವನೂ ಮತ್ತು ಅವನ ಸುತ್ತಮುತ್ತ ಜನಗಳು ಅಸಿಸ್ಟ್ ಮಾಡಬೇಕೆಂಬ ಕ್ಲಾಜು ಇಲ್ಲವೆ ಅವನ ಮೇಲೆ ವಿವಿಧ ಶಿಕ್ಷೆಗಳನ್ನು ವಿಧಿಸುವಂಥ ಕಾನೂನು ಇದೆ. ಆದ್ದರಿಂದ ಯಾವುದೇ ಕಾನೂನು ಮಾಡಿದರೂ ಆ ಕಾನೂನನ್ನು ಜಾರಿಮಾಡುವುದು ಆಡಳಿತ ಯಂತ್ರಕ್ಕೆ ಸಂಬಂಧಪಟ್ಟ ವಿಚಾರ. ಆದ್ದರಿಂದ ಸಾಕಷ್ಟು ಅಧಿಕಾರ ಆಡಳಿತ ಯಂತ್ರಕ್ಕೆ ಇರಬೇಕಾಗುತ್ತದೆ. ಯಾವಾಗ ಕಾನೂನು ಮಾಡಿದರೂ ಅದರಲ್ಲಿ ಎಷ್ಟು ಬಂದೋಬಸ್ತು ಬೇಕೋ ಅಷ್ಟನ್ನು ಇಡಬೇಕು. ಅದು ನಮ್ಮ ಕರ್ತವ್ಯ. ಹಿಂದೆ 2-3 ವಿಧಿಗಳಲ್ಲಿ ಇರಬಹುದಾದಂಥಾದ್ದರಲ್ಲಿ ಅಲ್ಟೇನೂ ಆಕ್ಷೇಪಣೆಗೆ ಅರ್ಹವಲ್ಲ. ಇನ್ನು ಅರಿಯರ್ಸ್ ಆಫ್ ರ್ಯಾಂಡ್ ರೆವಿನ್ಯೂ ಆಗಿ ರೈತರಿಂದ ರಿಕವರ್ ಮಾಡುತ್ತಾರೆಂಬ ಬಗ್ಗೆ ಬೇರೆ ಒಂದು ಪೀನಲ್ ಕ್ಲಾಜ್ ಇದೆ:

> "Whenever a particular person fails to carry out the directions of an Officer, the officer shall carry out the measures and recover the cost as arrears of land revenue.

ಇದು ಒಂದೇ ವಿಧಿ ಸಾಕು. ಕಾನೂನಿನ ಉದ್ದೇಶವನ್ನು ಸಾರ್ಥಕಪಡಿಸಲಿಕ್ಕೆ. ಬೇರೆ ವಿಧಿಗಳು ಏನೂ ಬೇಡ. ಆದ್ದರಿಂದ ಈ ಮಸೂದೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಶೀಲಿಸಬೇಕು. ಈ ಒಂದು ಚರ್ಚೆಯ ಹಿನ್ನೆಲೆಯಲ್ಲಿ ಅವಶ್ಯಕವಾದಂಥ ಮಾಡಿಫಿಕೇಷನ್ಸ್ ಮಾಡಬೇಕೆಂಬುದಾಗಿ ನಾನು ಸಚಿವರಲ್ಲಿ ಬೆನ್ನೈಸಿ ನನ್ನ ಮಾತನ್ನು ಮುಗಿಸುತ್ತೇನೆ.

†**Sri S. S. SHETTAR.**—Mr. Deputy Speaker Sir, there are strong reasons to recommend that this Bill may once again be referred to the Select Committee. There is certainly a contradiction in the policy of the Government. Now-a-days it is the policy of the Government to nationalise such of the industries wherein huge profit could be apprehended. But here, in this context, when agriculture is considered to be a great industry of the country and the country is facing the food problem and agricultural industry is facing pest and disease, it is the responsibility of the Government to see that this pest and disease is properly controlled. In the circumstances, if the Government does not come forward to take up the responsibility and share the responsibility to control the pests and diseases to the agricultural crop, I must say that the Government has failed in its duty.

5-30 P.M.

Then, I must say that the Government is failing in its duty. Sir, there are certain things which an individual cannot be expected to do, and he cannot be expected to discharge duties towards such obligations which are considered to be more or less the responsibility of the society as a whole. Here, supposing, Government apprehends that certain area is affected, it is more or less a preventive remedy. Actually, the disease is not there but only a preventive measure has to be undertaken. In such matters, it is the look out of the experts to know how much will have to be spent to control the disease. It will not be within the capacity of any individual or association. It is only the Government

(SRI S. S. SHETTAR)

who should come forward to check this pest and disease. So, Sir, in view of the recent trend, I must say that Government should come out and openly help the agriculturists.

Sir, the way in which the Bill has been worded and the Policy of this Bill shows that Government have no belief in the agricultural class as a whole. Many Hon'ble members have said that section 10—recovery of the cost will work great hardship to agriculturists who are not in a position to purchase manure and undertake this kind of work in the way it is expected of him. How far he could share the responsibility of the cost is not made clear in this section. There should be a limit for an individual so that he can discharge his duty within that limit properly. Suppose, a poor man having a small bit of land is asked to work and spend huge amount over this issue; would it be advisable to recover this huge amount from him? No doubt there is a provision for appeal. But, the limitation of an individual should be properly defined.

The intention of Government in legislating this Bill is also not clear. May I know whether the Government is not in a position to secure the co-operation of the agriculturists? It is my personal experience and I have seen in so many places agriculturists complaining against the officers that amenities are not given in time, that certain things are not properly advised and so on. They complain that at the proper time proper advise is not given and therefore they have lost crops on several occasions. Suppose, they apprehend pest and disease; a notification is necessary notifying this. When that notification is not forthcoming in proper time and the people are eager and when they approach the concerned officers, certain responsibility fall on the Government. What would be the remedy? Our intention is to control the pest and disease. It is not one way traffic. Merely to call upon the agriculturists to control the disease is not enough. It is also the responsibility of the Government to share in this. But the policy of the Government is, they are shifting the burden on the agriculturists who are not capable of taking part in this. I therefore appeal that this Bill may again be referred to the Select Committee.

ಶ್ರೀ ಜಿ. ಎಂ. ಮುಂಜುನಾಥಯ್ಯ (ಸೋಮವಾರಪೇಟೆ).—ಸ್ವಾಮಿ, ಅಧ್ಯಕ್ಷರೇ, ಈ ಮೈಸೂರು ರಾಜ್ಯದ ವ್ಯವಸಾಯ ಕೀಟ ಹಾಗೂ ರೋಗಗಳಿಗೆ ಸಂಬಂಧಿಸಿದ ವಿಧೇಯಕವನ್ನು ಬಹಳ ಅತುರ ಅತುರವಾಗಿ ತಯಾರು ಮಾಡಿದ್ದಾರೆ. ಈ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿದ್ದರೂ ಕೂಡ ಅಲ್ಲಿ ಇದಕ್ಕೆ ಎಷ್ಟು ವಿಚಾರ ವಿನಿಮಯ ವಿನಿಯೋಗವಾಗಬೇಕೊ, ಅಷ್ಟು ಆಗಿಲ್ಲ ಎಂದು ನನ್ನ ಮನಸ್ಸಿಗೆ ಭಾಸವಾಗುತ್ತದೆ. ನಾನು ಕೆಲವು ಉದಾಹರಣೆಗಳನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಪೆಸ್ಟ್ ಕಂಟ್ರೋಲ್ ವಿಚಾರ ಯಾವ ಯಾವ ಪೆಸ್ಟ್‌ಗಳು ವ್ಯವಸಾಯವನ್ನು ನಾಶಿಸುತ್ತವೆ, ಇದರಲ್ಲಿ ಯಾವ ಯಾವ ಪೆಸ್ಟಿಗೆ (ರೋಗಕ್ಕೆ ಯಾವುದು ಮನುಷ್ಯನಿಗೆ ಅಪಾಯವಿಲ್ಲದ ರೀತಿಯ (ನಿವಾರಣೆ) ಎಂಬುದು ತಿರ್ಮಾನ ಮಾಡದೇ ಈ ಕಾನೂನು ತರಬಾರದು. ಈಗ ಉದಾಹರಣೆಗೆ ಹೇಳುವುದಾದರೆ ಈ ಕಾನೂನು ಅನುಸರಿಸಿ ಒಬ್ಬ ಅಧಿಕಾರಿ ಅಗ್ರಿಕಲ್‌ಚರಲ್ ಪೆಸ್ಟಿಗೆ ಸಂಬಂಧಪಟ್ಟಹಾಗೆ ಯಾವುದೋ ಒಂದು ಥಿ. ಡಿ. ಟಿ ಪೌಡರಿಗೆ ಸೇರಿದ ಪ್ರಯೋಗವನ್ನು ಮಾಡಬೇಕು ಎಂದು ರೈತನಿಗೆ ಹೇಳುತ್ತಾನೆ.

ಆದರೆ ಆ ಪ್ರಯೋಗ ತಪ್ಪು. ಇರಬಹುದು. ಆ ತಪ್ಪು ಪ್ರಯೋಗದಿಂದ ರೈತನಿಗೆ ಕಷ್ಟ ನಷ್ಟ ಆದರೆ ಅದಕ್ಕೆ ಯಾರೂ ಜವಬ್ದಾರರಲ್ಲ ಆದಿಕಾರಿ ಮಾತ್ರ ಇಂಥಾ ಪ್ರಯೋಗ ಮಾಡಬೇಕೆಂದು ತಪ್ಪು ಸಲಹೆ ಮಾಡಿದರೂ ಕೂಡ ಅದನ್ನು ಈಗ ಪಾಸಾಗುವ ಹೆಸ್ಟ್ ಕಂಟ್ರೋಲ್ ಕಾನೂನು ಪ್ರಕಾರ ರೈತ ಮಾಡಿಯೇ ತೀರಬೇಕಾಗುತ್ತದೆ.ಈ ಕಾನೂನನ್ನೂ ಇಲ್ಲ ಪಾನು ಮಾಡಿ ಇದನ್ನು ಜಾರಿಗೆ ತರಬೇಕಾದರೆ ಪ್ರತಿಯೊಬ್ಬ ಶಾಸಕರೂ ಕೂಡ "ಸ್ಯೆರೆಂಟ್ ಸ್ಪ್ರಿಂಗ್" ಎನ್ನತಕ್ಕ ಪುಸ್ತಕವನ್ನು ಓದಿ ಅನಂತರ ಈ ಕಾನೂನನ್ನು ಜಾರಿಗೆ ತರಬೇಕೆಂದು ನಾನು ಸೂಚನೆ ಮಾಡುತ್ತೇನೆ. ಗ್ಯಾಮಕ್ಸೆನ್, ಡಿ. ಡಿ. ಟಿ. ಗಳಂಥ ಮದ್ದುಗಳನ್ನು ಹೊಲಗಳಲ್ಲಿ ಪ್ರಯೋಗ ಮಾಡುವುದರಿಂದ ಆಲ್ಲಿ ಬೆಳೆಯುವ ಪದಾರ್ಥಗಳಿಗೆ ಎಫೆಕ್ಟ್ ಆಗುವುದಲ್ಲದೆ ಆ ಡಿ.ಡಿ.ಟಿ. ಯು ಮಣ್ಣಿಗೆ ಸೇರಿ ಜಲಮೂಲಕ ಸ್ಪ್ರಿಂಗ್ಸ್ ಹೊಳೆಗೆ ಸೇರಿ ಹೊಳೆಯಿಂದ ಸಮುದ್ರಕ್ಕೆ ಸೇರಿ ಸಮುದ್ರದಲ್ಲಿರುವ ಮೀನುಗಳಿಗೆ ಆದರ ವಿಷ ಪ್ರಯೋಗವಾಗಿರುವ ವಿಷಯು ಮತ್ತು ಡಿ.ಡಿ.ಟಿ. ಯ ಪ್ರಯೋಗವಾಗಿರುವ ಹುಲ್ಲನ್ನು ದನಗಳು ತಿಂದು ದನಗಳ ದೇಹವಿಂದ ಡಿ.ಡಿ.ಟಿ. ಯ ಅಂಶಗಳು ಹಾಲಿನ ಮೂಲಕ ಹೇಗೆ ಮನುಷ್ಯನ ದೇಹಕ್ಕೆ ಸೇರುತ್ತವೆ ಅನ್ನುವ ವಿಚಾರಗಳು ಸಹಾ ಸ್ಯೆರೆಂಟ್ ಸ್ಪ್ರಿಂಗ್ ಎನ್ನುವ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದಾರೆ. ಆ ಪುಸ್ತಕಗಳನ್ನು ಈ ಅಸೆಂಬ್ಲಿ ಲೈಬ್ರರಿಯಲ್ಲಿ ಇಡಬೇಕೆಂತಲೂ ನಾನು ಸೂಚನೆ ಕೊಡಲು ಬಯಸುತ್ತೇನೆ. ಕೆಲವು ಸಂದರ್ಭಗಳಲ್ಲಿ ಹೊಲಗಳಲ್ಲಿ ಬೆಳೆಗಳಿಗೆ ಹಕ್ಕತಕ್ಕ ಹುಳುಗಳನ್ನು ನಾಯಿಸಿನುವುದಕ್ಕೋಸ್ಕರ ಇಂತಹ ಔಷಧಿಯನ್ನು ಸ್ಪ್ರೇ ಮಾಡಿದಾಗ ಅದರ ವಿಷ ಆಹಾರ ಧಾನ್ಯಗಳಲ್ಲಿ ಸೇರಿ ಅದರ ಪರಿಣಾಮ ಪಟ್ಟಣಗಳಲ್ಲಿ ಆ ಆಹಾರವನ್ನು ಉಪಯೋಗಿಸುವ ಮನುಷ್ಯರಿಗೆ ಉಂಟಾಗುತ್ತದೆ. ಈಗ ಯಾವುದಾದರೂ ಒಂದು ಬೆಳೆಗೆ ಹುಳು ಬಿದ್ದರೆ ಅಥವಾ ರೋಗ ತಗಲಿದರೆ ಅದಕ್ಕೆ ಫಾಲಿಡಾಲ್ ಪ್ರಯೋಗಿಸಿದರೆ ಆ ರೋಗ ಹೋಗುತ್ತದೆ ಎಂದು ಒಬ್ಬ ರೈತ ಫಾಲಿಡಾಲ್ ತಂದು ಬೆಳೆಗೆ ಹೊಡೆಯುತ್ತಾನೆ. ಅದನ್ನು ಪ್ರಯೋಗ ಮಾಡಿದ ಮೇಲೆ ಎಷ್ಟು ದಿವಸ ಬೆಳೆಯನ್ನು ಕಟಾವು ಮಾಡದೇ ಬಿಡಬೇಕು ಎಂಬುದು ರೈತನಿಗೆ ಗೊತ್ತಾಗುವುದಿಲ್ಲ. ಒಂದು ಲೀಟರ್ ಫಾಲಿಡಾಲ್ ಹೊಡೆದು 2—3 ದಿವಸಗಳಲ್ಲಿ ಬೆಳೆಯನ್ನು ಕಿತ್ತು ಮಾರ್ಕೆಟ್ಟಿಗೆ ಮಾರಾಟಕ್ಕೆ ತಂದರೆ ಅಂಥಾದ್ದನ್ನು ಜನಗಳು ಕೊಂಡುಕೊಂಡು ಉಪಯೋಗಿಸಿದರೆ ಇದರಿಂದ ಫುಡ್ ಪಾಯಿಜನ್ ಆಗಿ ಅನೇಕ ಜನಗಳು ಸಾಯುವ ಸಂದರ್ಭವೂ ಬರಬಹುದು. ಆದಕಾರಣ ಅವುಗಳ ವಿಷಯದಲ್ಲಿ ಯಾವರೀತಿ ಎಚ್ಚರಿಕೆ ರೈತನು ಅನುಸರಿಸಬೇಕು ಎನ್ನತಕ್ಕ ವಿಷಯದಲ್ಲಿ ರೈತರಿಗೆ ಸಾಕಷ್ಟು ತಿಳುವಳಿಕೆಯನ್ನು ಕೊಡಬೇಕಾಗುತ್ತದೆ. ಅಪಾಯಕಾರಿಯಾದ ಡಿ.ಡಿ.ಟಿ. ಗ್ಯಾಮಕ್ಸೀನ್‌ನಂಥ ಮದ್ದನ್ನು ಬೆಳೆಗೆ ಹೊಡೆಯುರಿ ಎಂದು ರೈತರಿಗೆ ಹೇಳಿದರೂ ಅದರಿಂದ ಅಪಾಯ ಇದೆ ಎಂದು ತಿಳಿದ ಒಬ್ಬ ರೈತನು ಆ ಮದ್ದನ್ನು ಉಪಯೋಗಿಸದಿದ್ದರೆ ಈ ಕಾನೂನಿನ ಪ್ರಕಾರ ಅವನನ್ನು ಶಿಕ್ಷಿಸಬಹುದಾದರೆ ಅದು ಯಾವ ನ್ಯಾಯ? ಈ ವಿಚಾರಗಳನ್ನು ಇನ್ನೂ ಕೂಲಂಕೂಷವಾಗಿ ಪರಿಶೀಲನೆ ಮಾಡಲು ಸಾಕಷ್ಟು ಕಾಲಾವಕಾಶವನ್ನು ಕೊಡಬೇಕು. ಇದರ ಬಗ್ಗೆ ಸಾಕಷ್ಟು ತಜ್ಞರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಅದ್ದರಿಂದ ಪುನಃ ಈ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಮತ್ತೆ ಕೂಲಂಕಷವಾಗಿ ಪರ್ಯಾಲೋಚನೆ ಮಾಡಬೇಕು. ಈ ಕಾನೂನಿನಿಂದ ದೇಶಕ್ಕೆ ರೈತರಿಗೆ ಅಪಾಯ ಇದೆಯೆಂದು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ. ಅಮೆರಿಕಾ ಮುಂತಾದ ಕಡೆಗಳಲ್ಲಿ ಹೊಲಗಳಿಗೆ ಔಷಧಿಯನ್ನು ಸ್ಪ್ರೇ ಮಾಡಿದರೆ ಆ ಸ್ಥಳದ ಒಳಗಡೆ ಇಷ್ಟು ದಿವಸಗಳು ಪ್ರವೇಶ ಮಾಡಕೂಡದೆಂದು ಅಲ್ಲಿ ಒಂದು ಬೋರ್ಡ್ ಹಾಕುತ್ತಾರೆ. ಕೆಲವು ಪ್ರಯೋಗಗಳನ್ನು ಮಾಡಬೇಕಾದರೆ ಅದಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಕಾನೂನುಗಳನ್ನು ಅಪಾಯ ತಪ್ಪಿಸುವುದಕ್ಕೋಸ್ಕರ ಮಾಡಿದ್ದಾರೆ. ನಮ್ಮ ದೇಶದಲ್ಲಿ ಆ ರೀತಿ ಕಾನೂನು ಮಾಡದೆ ಇಂಥಾ ಕಾನೂನನ್ನು ಜಾರಿ ಮಾಡಿ ರೈತರಿಗೆ ಶಿಕ್ಷೆ ವಿಧಿಸುವುದು ಯಾವರೀತಿಯಲ್ಲಿಯೂ ಸರಿಯಲ್ಲ. ಇದು ಅಪಾಯ ಗರ್ಭಿತವಾದ ಕಾನೂನು. ಕೆಲವು ಮದ್ದುಗಳ ಪ್ರಯೋಗದ ಪರಿಣಾಮವೇನು ಎಂಬುದು ಗೊತ್ತಿಲ್ಲದೆ ರೈತರು ಈ ಪ್ರಯೋಗಗಳನ್ನು ಮಾಡಿ ಸಾವಿರಾರು ಜನಗಳು ಅಕಸ್ಮಾತಾಗಿ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಸರಿಯಾದ ಕ್ರಮಗಳನ್ನು ಅರಿಯದೆ ಈ ಅಪಾಯಕಾರಿ ಮದ್ದುಗಳನ್ನು ಸ್ಪ್ರೇ ಮಾಡುವುದರಿಂದ ಆ ವಿಷ ಆಹಾರದಲ್ಲಿ ಸೇರುತ್ತದೆ ಅಂತಹ ಆಹಾರಗಳನ್ನು ಜನಗಳು ಸೇವಿಸಿ ಸಾವಿಗೆ ತುತ್ತಾಗುತ್ತಾರೆ. ಆದ್ದರಿಂದ ದಯವಿಟ್ಟು ಈ ವಿಧೇಯಕವನ್ನು ಪುನಃ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಇದನ್ನು ಪುನಃ ಪರಿಶೀಲನೆ ಮಾಡಬೇಕೆಂದು ಪುನಃ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈ ಬಿಲ್ಲು ಹಿಂದೆ ಅಸೆಂಬ್ಲಿ ಮುಂದೆ ಬಂದಾಗ ಸಾಕಷ್ಟು ಚರ್ಚೆಗೆ ಅವಕಾಶ ಸಿಕ್ಕದೆ ಸೆಲೆಕ್ಟ್ ಕಮಿಟಿಗೆ ಹೋಯಿತು. ಸೆಲೆಕ್ಟ್ ಕಮಿಟಿಯಲ್ಲಿ ಈ ಬಿಲ್ಲಿನ ಮೇಲೆ ಸಾಕಷ್ಟು ಚರ್ಚೆಯಾಗಿ ಇಲ್ಲಿಗೆ ಬಂದಿದೆ ಎಂದು ನಾನು ತಿಳಿದು

(ಶ್ರೀ ಕೆ. ಎನ್. ವೀರಭದ್ರಗೌಡ)

ಕೊಂಡಿದ್ದೇನೆ. ಆದರೆ ಇದರಲ್ಲಿರುವ ಎರಡು ಶಬ್ದಗಳು ಎಂದರೆ 'ಪನಿಶ್‌ಮೆಂಟ್' ಹಾಗೂ 'ಫೈನ್' ಎನ್ನುವ ಪದ ಸರಿಯಾಗಿಲ್ಲ ಎಂದು ನನ್ನ ಭಾವನೆ. ವ್ಯವಸಾಯಗಾರ ಸೋಮಾರಿ ಎಂಬ ಭಾವನೆ ಇವರಿಂದ ಆಗುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ. ಈ ರೀತಿಯಾಗಿ ಈ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋದ ಮೇಲೆ ಹೀಗೆ ಬರುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ಸೆಲೆಕ್ಟ್ ಕಮಿಟಿಯವರು ಇದರ ಮೇಲೆ ದೀರ್ಘವಾಗಿ ಚರ್ಚೆ ಮಾಡಿ ಇಂತಹ ಅನುಮಾನಗಳಿಗೆ ಅವಕಾಶವಿಲ್ಲದಂತೆ ಮಾಡುತ್ತಾರೆಂದು ನಾನು ತಿಳಿದಿದ್ದೆ. ಆದರೆ ವ್ಯವಸಾಯಗಾರರ ಹಿತದೃಷ್ಟಿಯಿಂದ ಹಾಗೂ ಈಗ ಹೆಚ್ಚು ಆಹಾರ ಉತ್ಪತ್ತಿ ಮಾಡಬೇಕು ಇದಕ್ಕಾಗಿ ರೈತರಿಗೆ ಎಲ್ಲ ವಿಧವಾದ ಸಹಾಯ ಸಹಕಾರಗಳನ್ನು ಕೊಡಬೇಕೆಂದು ಎಲ್ಲ ಕಡೆಗಳಲ್ಲಿಯೂ ಸರಕಾರ ಸಹಾಯ ಮಾಡುತ್ತಿದೆ. ಆದರೆ ಇಲ್ಲಿ ವ್ಯವಸಾಯಗಾರನ ಹಿತದ ಬಗ್ಗೆ ಅವನಿಗೆ ಒಳ್ಳೆಯ ಬೀಜಗಳನ್ನು ಕೊಡುವುದು. ಬೆಳೆಗಳಿಗೆ ಏನಾದರೂ ರೋಗ ರುಜಿನಗಳು ತಲೆದೋರಿದರೆ ಅದರ ನಿವಾರಣೆಗೆ ಸಹಾಯ ಮಾಡುವುದು, ಸುಲಭ ಬೆಲೆಯಲ್ಲಿ ಗೊಬ್ಬರ ಇತ್ಯಾದಿಗಳನ್ನು ಒದಗಿಸುವುದು ಮತ್ತು ಹೊಸ ಹೊಸದಾದ ಪ್ರಯೋಗಗಳನ್ನು ಅನುಸರಿಸಲು ಸಾಕಷ್ಟು ಮಾಹಿತಿ ಕೊಟ್ಟು ಅವರಿಗೆ ಹೆಚ್ಚು ಬೆಳೆ ಬೆಳೆಯಲು ಸಹಾಯ ಮಾಡುವುದು ಇತ್ಯಾದಿ ಸಹಾಯಗಳನ್ನು ಸರಕಾರ ಈಗ ರೈತರಿಗೆ ಒದಗಿಸುತ್ತಿದೆ. ಆದರೆ ಇದರಲ್ಲಿರುವ ರೂಪರೇಷೆಗಳನ್ನು ನೋಡಿದರೆ ರೈತರು ಬೆಳೆಯುವ ಬೆಳೆಗಳಿಗೆ ಒಳ್ಳೆಯ ಬೆಲೆ ಇದ್ದರೂ ರೈತರು ಉತ್ಸಾಹದಿಂದ ವ್ಯವಸಾಯ ಮಾಡುತ್ತಿಲ್ಲವೆಂಬ ಅರ್ಥ ಉಂಟಾಗುತ್ತದೆ. ವ್ಯವಸಾಯ ಮಾಡುವ ರೈತಾಪಿ ಜನಕ್ಕೆ ಇದರಿಂದ ತೊಂದರೆಯಾಗುತ್ತದೆ. ಅವರಿಗೆ ಸಹಾಯ ಮಾಡುವುದಕ್ಕೆ ಹೋಗಿ ಇದರಿಂದ ತೊಂದರೆಯಾಗುತ್ತದೆ. ಇದನ್ನು ಸರಕಾರ ಪುನರ್ವಿಮರ್ಶೆ ಮಾಡುವುದು ಅಗತ್ಯ. ಯಾವುದೇ ಕಾನೂನಾದರೂ ಅದರಲ್ಲಿ ಏನಾದರೂ ದೋಷಗಳು ಕಂಡು ಬಂದರೆ ಅದನ್ನು ಪುನರ್ವಿಮರ್ಶೆ ಮಾಡುವುದು ಕಷ್ಟಸಾಧ್ಯವಾದರೂ ಸ್ವಲ್ಪ ಮಟ್ಟಿಗಾದರೂ ಜನಕ್ಕೆ ಅನುಕೂಲವಾಗುವಂತೆ ಮಾಡಬೇಕು. ಆದುದರಿಂದ ನಾನು ಸರಕಾರಕ್ಕೆ ಸೂಚನೆ ಮಾಡುವುದು ಇದರಲ್ಲಿರುವ ಎರಡು ಪದಗಳನ್ನು ಎಂದರೆ 'ಪನಿಶ್‌ಮೆಂಟ್' ಹಾಗೂ 'ಫೈನ್' ಎನ್ನುವುದನ್ನು ಬದಲಾವಣೆ ಮಾಡುವುದು ಒಳ್ಳೆಯದು. ರೈತರಿಗಾಗಿ ಕೋಟಿಗಟ್ಟಲೆ ಖರ್ಚು ಮಾಡುತ್ತಿರುವಾಗ ಇಂತಹ ಅನುಕೂಲಗಳನ್ನು ರೈತರ ಹಿತಕ್ಕಾಗಿ ಮಾಡುವುದು ಅಗತ್ಯವಾಗಿದೆ. ಇಂತಹ ಒಂದು ಸಂದರ್ಭದಲ್ಲಿ ರೈತರಿಗೆ ಸರಿಯಾದ ಸಹಾಯ ಸೌಕರ್ಯಗಳನ್ನು ಮಾಡಲೇ ಹೋದರೆ ಮುಂದೆ ಇದನ್ನು ಸರಿಮಾಡಲು ಆಗುವುದಿಲ್ಲ. ಇದರಲ್ಲಿ ಅನುಕೂಲವಾಗುತ್ತದೆ ಎಂದು ಇದ್ದರೂ ಇದು ಇಂಡೈರೆಕ್ಟ್ ಆಗಿ ರೈತರಿಗೆ ತೊಂದರೆ ಮಾಡುತ್ತದೆ. ರೈತನು ರೋಗಕ್ಕೆ ತಕ್ಕ ಕ್ರಮ ಕೈಗೊಳ್ಳದಿದ್ದರೆ ಸರಕಾರದವರೇ ಮಾಡಿಸಿ ಆ ಖರ್ಚನ್ನು ರೈತರಿಂದ ವಸೂಲು ಮಾಡುವಾಗ ರಿಕವರಿ ಸರ್ಟಿಫಿಕೇಟ್ ರೆವಿನ್ಯೂ ಆಫೀಸರ್‌ಸ್ಸಿನಂತೆ ವಸೂಲು ಮಾಡುವ ಹಾಗೆ ಮಾಡಿದರೆ ಅದೇ ಇನ್‌ಡೈರೆಕ್ಟ್ ಆಗಿ ಫೈನ್ ಆದಂತೆ ಆಗುತ್ತದೆ. ಅದೇನು ರೈತರ ಗ್ರಹಚಾರವೋ ಏನೋ ಬಿಲ್ಲು ಇಲ್ಲಿ ಬರುವಾಗ ರೈತರ ಹಿತಕ್ಕೆ ಬರುತ್ತದೆ. ಆದರೆ ಜಾರಿಗೆ ಕೊಡುವಾಗ ಅಧಿಕಾರಿಗಳಿಂದ ತೊಂದರೆ ಅನುಭವಿಸಬೇಕಾಗುತ್ತದೆ, ಈಗ ಮಾಡಲಿಯಾಗಿ ಹೇಳುತ್ತೇನೆ? ಲೆವಿ ಕಾನೂನಿನಲ್ಲಿ ರೈತರಿಗೆ ಏನು ತೊಂದರೆ ಇದೆ ಎನ್ನುತ್ತೇವೆ. ಆದರೆ ರೈತರು ಪಡುವ ಕಷ್ಟ ಎಲ್ಲರಿಗೂ ಗೊತ್ತಿದೆ. ಇದನ್ನು ಪುನರ್ ಕನ್‌ಸಿಡರ್ ಮಾಡಲು ಸೆಲೆಕ್ಟ್ ಕಮಿಟಿಗೆ ಪುನಃ ಕಳುಹಿಸಿ ಸರಿಯಾಗಿ ಮಾಡುವುದು ಉತ್ತಮ ಎಂದು ಇಲ್ಲಿ ಒತ್ತಾಯ ಮಾಡುತ್ತೇನೆ. ಒಂದು ವೇಳೆ ಹಾಗಾಗದೇ ಹೋದರೆ ಸರಕಾರದವರೇ ಪುನರ್ವಿಮರ್ಶೆ ಮಾಡಿ ಸರಿಮಾಡುವುದು ಸೂಕ್ತವಾಗಿದೆ. ರೈತರು ಕೆಲವರು ಬುದ್ಧಿವಂತರಾಗಿರಬಹುದು ಎಂದು ಸರಕಾರ ತಿಳಿದಿರಬಹುದು. ನೂರಲ್ಲಿ ತೊಂಬತ್ತು ಜನ ಕಾನೂನು ತಿಳಿದು ಕೊಳ್ಳುವಶಕ್ತಿ ಇಲ್ಲದವರಾಗಿದ್ದಾರೆ ಆದರೆ ಎಷ್ಟೋ ಕಡೆಗಳಲ್ಲಿರುವ ರೈತರಿಗೆ ಸರಕಾರ ಅವರ ಹಿತಕ್ಕಾಗಿ ಏನೇನು ಕಾನೂನುಗಳನ್ನು ಮಾಡಿದ್ದಾರೆ ಎನ್ನುವ ತಿಳುವಳಿಕೆಯೇ ಇಲ್ಲ. ಆದುದರಿಂದ ಇಂತಹ ಕಾನೂನುಗಳನ್ನು ಕಡಿಮೆ ಮಾಡುವುದು ಒಳ್ಳೆಯದು. ಇಂತಹ ಕಾನೂನುಗಳನ್ನು ಮಾಡಿದರೆ ಇದಕ್ಕಾಗಿ ಪ್ರತ್ಯೇಕವಾಗಿ ಅಧಿಕಾರಿಗಳನ್ನು ನೇಮಕ ಮಾಡಬೇಕು ಇದಕ್ಕಾಗಿ ಒಂದು ಅರ್ಗನೈಸೇಷನ್ ಮಾಡಬೇಕು. ಇದರಿಂದ ಸರ್ಕಾರಕ್ಕೆ ಹೆಚ್ಚು ಖರ್ಚು ಆಗುತ್ತದೆ. ಅದನ್ನೇ ರೈತರಿಗೆ ಪರಿಹಾರ ರೂಪದಲ್ಲಿ ಕೊಡಬಹುದು. ಇದರಲ್ಲಿರುವ ಎರಡು ಪದಗಳನ್ನು ಎಂದರೆ "ಫೈನ್" ಹಾಗೂ ಪನಿಷ್‌ಮೆಂಟ್" ಎಂದಿರುವುದು ರೈತರಿಗೆ ಅಗೌರವ. ಆದ್ದರಿಂದ ಇದನ್ನು ತೆಗೆಯುವುದು ಸೂಕ್ತ ಎಂದು ಇಲ್ಲಿ ಸಲಹೆ ಮಾಡಲು ಇಷ್ಟಪಡುತ್ತೇನೆ.

† Sri DIGAMBARA RAO B. KALMANKAR.—I rise to support this Bill but with some observations The Bill is no doubt a progressive one but the poor agriculturist is very much fettered and many

Sri K. H. RANGANATH.—Under the rules there is provision to make personal explanation. I know it. Supposing Sri Nanje Gowda has made some remarks in his capacity as a member of this House, then the question of offering an explanation would arise. But that is a different aspect. The point before the House is, a point of order is raised by Sri S. Gopala Gowda. That is, under what provision of the Rules of Procedure Sri K. Lakkappa, Minister for Public Works, has been allowed to make a personal explanation. So, unless that point is disposed of, he should not be allowed to speak.

Mr. DEPUTY SPEAKER.—I have alrady disposed it of. He made some allegations other than the allegations made in the breach of privilege.

Sri K. H. RANGANATH.—May I submit that what Sri Nanje Gowda has written is not before this Houses?

Mr. DEPUTY SPEAKER.—The Minister had come to me personally and I have given him permission to speak.

Sri K. H. RANGANATH.—Let us try to set up good precedents in this House. ಆ ಮಾನ್ಯ ಸದಸ್ಯರು ಏನು ಬರೆದುಕೊಟ್ಟಿದ್ದಾರೆಂಬುದು ಅಧ್ಯಕ್ಷರಿಗೆ ಗೊತ್ತಿರ ಬಹುದೇ ಏನಾ ನನಗೆ ಗೊತ್ತಿಲ್ಲ; ಈ ಮಾನ್ಯ ಸಭೆಗೂ ಗೊತ್ತಿಲ್ಲ. ಅವರು ಏನು ಬರೆದು ಕೊಟ್ಟಿದ್ದಾರೆಂಬುದೇ ತಿಳಿಯದಿದ್ದಾಗ ಅದರಲ್ಲಿ ಅಪಾದನೆಗಳಿವೆ ಎಂದು ನಾವೇಕೆ ಈಗ ಊಹೆ ಮಾಡಬೇಕು!

† ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ದಿವಸ ಅನಾವೃಷ್ಟಿಯ ನಿಮಿತ್ತ ದೇಶದಲೆಲ್ಲಾ ಹಾಹಾಕಾರವೆದ್ದಿದೆ; ಜನರೆಲ್ಲಾ ಕಷ್ಟದಲ್ಲಿ ಸಿಕ್ಕಬಿದ್ದಿದ್ದಾರೆ. ಅವರನ್ನು ಹೇಗೆ ಪಾರು ಮಾಡಬೇಕೆಂಬುದು ಒಂದು ಜಠಿಲವಾದ ಸಮಸ್ಯೆ. ಇಂಥ ಒಂದು ಗಹನವಾದ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಹೊನಲಾಗಿಟ್ಟಿರತಕ್ಕ ಕಾಲವನ್ನು ನಾವೀಗ ಅದಕ್ಕೆ ವಿನಿಯೋಗ ಮಾಡದೆ, ಯಾರೋ ಒಬ್ಬ ಮಂತ್ರಿಗಳು ಒಬ್ಬ ಸದಸ್ಯರನ್ನು ಎರೊಲ್ಲೇ ಬೈದರು, ಅಲ್ಲದ ನಲ್ಲದ ಮಾತುಗಳನ್ನಾಡಿದರು ಎಂದು ಹೇಳಿ ಅದನ್ನು ಈಗ ಇತ್ಯರ್ಥ ಮಾಡಬೇಕು ಎಂದು ನುಮಾರು ಕಳೆದ 2 ಗಂಟೆಯಿಂದ ಈ ವಿಷಯ ಚರ್ಚೆಯಾಗುತ್ತಿದೆ. ಜನತೆ ದೇಶದಲ್ಲಿ ಆಹಾರವಿಲ್ಲದೆ ಕಂಗೆಟ್ಟಿರತಕ್ಕ ಕಾಲದಲ್ಲಿ ಅವರ ಅವಶ್ಯಕತೆಗಳೇನು, ಅವುಗಳನ್ನು ಹೇಗೆ ಈಡೇರಿಸಬೇಕು ಎನ್ನುವ ಬಗ್ಗೆ ಮತ್ತು ಇಡೀ ದೇಶವೇ ಪ್ರಕೃತಿಯ ವಿರೋಧಕ್ಕೆ ತುತ್ತಾಗಿರುವಾಗ ಅವರಿಗೆ ತಕ್ಷಣವೇ ಪರಿಹಾರಗಳನ್ನು ಒದಗಿಸತಕ್ಕ ಬಗ್ಗೆ ಚರ್ಚೆಯನ್ನು ಕೂಡಲೆ ಕೈಗೊಳ್ಳುವುದಕ್ಕೆ ಅಧ್ಯಕ್ಷರು ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

4-00 P.M.

Sri S. SIVAPPA.—I would suggest one thing. In the earlier part of the day you had suggested that you were going to reserve your ruling and that if necessary you would hear this House again. Now I request you to reserve your ruling. If necessary, you can hear the House again on this question. At this stage if you allow personal explanations it will create further complications. So at this stage you may close this subject and reserve your ruling. If necessary, you can hear the House again.

Mr. DEPUTY SPEAKER.—I have reserved my ruling.

† ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಆಹಾರ ಪರಿಸ್ಥಿತಿಯ ಬಗ್ಗೆ ತಾವು ಮಾಡಿರತಕ್ಕ ಹೇಳಿಕೆಯನ್ನು ಇವತ್ತು ಸಭೆ ವಿಚಾರ ಮಾಡಬೇಕಾಗಿತ್ತು, ಅದು ಗಹನವಾದ ವಿಷಯ, ಜನತೆಗೆ ಸಂಬಂಧಪಟ್ಟ ವಿಷಯು, ಅದನ್ನು ಮಾಡದೇ, ಈ ಸಭೆ ಬೇರೆ ಯಾವುದೋ ಒಂದು ವಿಷಯವನ್ನು ಚರ್ಚೆ ಮಾಡುತ್ತಾ ಇದೆ ಅನ್ನುವ ಅಭಿಪ್ರಾಯವನ್ನು ಹೇಳಿದರು—ಕಾಲಹರಣ ಮಾಮುತ್ತಾ ಇದೆ ಎಂದು ಹೇಳಲಿಲ್ಲ—ಅವರ ಹೇಳಿಕೆಯ ಅಭಿಪ್ರಾಯ ಅದಾಗಿತ್ತು. ಆದರೆ ಅವರಿಗೂ, ಈ ಸದನದ ಹಕ್ಕುಬಾಧ್ಯತೆಗಳು—ಮಂತ್ರಿಗಳು ಈ ಸಭೆಯಲ್ಲ ಹೇಗಿರಬೇಕು, ಸದಸ್ಯರ ಘನತೆ, ಗೌರವ, ಹಕ್ಕು ಬಾಧ್ಯತೆಗಳು ಏನು ಎಂಬುದು ಗೊತ್ತಿದೆ. ತಾವು ಈ ಹಕ್ಕುಬಾಧ್ಯತೆಯ ಪ್ರಶ್ನೆಯನ್ನು ಈ ಸಭೆಯ ಮುಂದೆ ಎತ್ತುವುದಕ್ಕೆ ಶ್ರೀಮಾನ್ ನಂಜೇಗೌಡರಿಗೆ ರೂಲ್ 177ರ ಪ್ರಕಾರ ಅವಕಾಶ ಕೊಟ್ಟಿದ್ದೀರಿ ಎಂದು ನಾನು ಭಾವಿಸುತ್ತೇನೆ. ಅವರು ನೋಟೀಸ್ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ನೋಟೀಸ್ ಕೊಡಬೇಕು. ರೂಲ್ 179 ರಲ್ಲಿ ಹೀಗಿದೆ:

"The right to raise a question of privilege shall be governed by the following conditions, namely:

(i) not more than one question shall be raised at the same sitting;

(ii) the question shall be restricted to a specific matter of recent occurrence;

(iii) the matter requires the intervention of the Assembly."

ತಾವು ಈ ಸೂಚನೆಯನ್ನು ಸಭೆಯಲ್ಲಿ ನಮ್ಮ ಮುಂದೆ ಇಟ್ಟಿಲ್ಲ, ಮಾನ್ಯ ಸದಸ್ಯರು ಇದನ್ನು ಮರೆತರು ಎಂದು ನಾನು ಭಾವಿಸುತ್ತೇನೆ. ಅದಾದಮೇಲೆ ಚರ್ಚೆ ನಡೆಯಿತು. ವಿಶೇಷತಃ ಮಾನ್ಯ ಕಂಠಿಯವರು ಬಹುಶಃ ಇದೇ ವಿಷಯ ಹೇಳಿದರು ಎಂದು ಕಾಣುತ್ತದೆ—ಏನು ಪ್ರೊಸೀಜರ್ ಫಾಲೋ ಮಾಡಬೇಕು ಈ ವಿಷಯದಲ್ಲಿ ಅಂತ ಶ್ರೀಮಾನ್ ನಂಜೇ ಗೌಡರು ತಮ್ಮ ಮುಂದೆ ಇಟ್ಟಿರತಕ್ಕ ಸೂಚನೆಯಲ್ಲಿ ಏನು ಬರೆದಿದ್ದಾರೆ ಅದರಿಂದ ಮಾನ್ಯ ಸದಸ್ಯರ ಹಕ್ಕುಬಾಧ್ಯತೆಗೆ ರೋಷವಾಗಿವೆಯೇ, ಇಲ್ಲವೇ—ಈ ವಿಷಯವನ್ನು ಸಭೆ ಪರಿಶೀಲನೆ ಮಾಡಬೇಕೇ, ಬೇಡವೇ—ಈ ವಿಷಯವನ್ನು ನಾವು ಯೋಚನೆ ಮಾಡಬೇಕು. ಇದರ ಬಗ್ಗೆ ಈಗ ಸಾಕಾದಷ್ಟು ಚರ್ಚೆಯಾಗಿದೆ; ನಾನು ಹೆಚ್ಚು ವಿವರವಾಗಿ ಪ್ರಸ್ತಾಪಮಾಡುವುದಕ್ಕೆ ಹೋಗುವುದಿಲ್ಲ. ಆದರೆ ತಾವು ಒಂದು ಮಾತನ್ನು ಹೇಳುತ್ತಾ ಇದ್ದೀರಿ ನಾನು ಈ ಸೂಚನೆ ಕ್ರಮವಾಗಿ ಇದೆಯೇ ಇಲ್ಲವೇ ಎಂಬುದನ್ನು ನೋಡುತ್ತೇನೆ ಎಂದು ಹೇಳುತ್ತಾ ಇದ್ದೀರಿ ನನಗೆ ಈ ಮಾತಿನ ಅರ್ಥವಾಗುತ್ತಾ ಇಲ್ಲ. ಹಾಗಾದರೆ ಇದನ್ನು ಇನ್ನೂ ನೋಡಿಲ್ಲವೇ? ಈ ಸೂಚನೆಯನ್ನು ನೋಡದೇ ಅವರಿಗೆ ಅವಕಾಶ ಕೊಟ್ಟಿದ್ದೀರಾ! ಅಥವಾ ಪುನಃ ಈ ಪ್ರಶ್ನೆ ಕ್ರಮವಾದ ರೀತಿಯಲ್ಲಿ ಬರುತ್ತದೆಯೇ! ಇದು ಬಹಳ ಮುಖ್ಯವಾದ ಪ್ರಶ್ನೆ, ಮಾನ್ಯ ಮುಖ್ಯ ಮಂತ್ರಿಗಳಿಗೂ ಗೊತ್ತಿದೆ, ಪ್ರಿವಿಲೇಜ್ ಪ್ರಶ್ನೆಗೆ ಇತರ ಎಲ್ಲಾ ಕಾರ್ಯ ಕರಾಪಗಳಿಗಿಂತ ಹೆಚ್ಚಿನ ಮಹತ್ವ ಕೊಟ್ಟು ಅದನ್ನು ಇತ್ಯರ್ಥಮಾಡಬೇಕು ಅಂತ. ಆದ್ದರಿಂದ ಪ್ರಿವಿಲೇಜ್ ಇದರಲ್ಲಿ ಉದ್ಭವಿಸುವುದಿಲ್ಲ ಎಂದು ಯಾರಾದರೂ ತಮ್ಮ ಪೈಕಿಯಲ್ಲಿ ಮಾನ್ಯ ಸದಸ್ಯರು ಹೇಳುವುದಾದರೆ ಅವರು ವಾದ ಮಾಡಲಿ, ಈ ಪ್ರಕರಣ ಸದಸ್ಯನ ಹಕ್ಕುಬಾಧ್ಯತೆಗಳನ್ನು ಪೊಟಕು ಮಾಡುತ್ತದೆ ಎಂದು ಅಭಿಪ್ರಾಯವಿರುವವರೂ ವಾದ ಮಾಡಲಿ. ತಮ್ಮ ಅನುಮತಿಯನ್ನು ಕೊಟ್ಟು ಈ ಪ್ರಶ್ನೆಯನ್ನು ಇತ್ಯರ್ಥಮಾಡುವುದಾದರೆ, ಅದನ್ನು ಮಾಡೋಣ.

ಈಗ ಒಬ್ಬ ಮಂತ್ರಿಗಳು ಒಬ್ಬ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಹೋಗಿ—ಹೋದ ಕಾರ್ಯಕ್ರಮವನ್ನು ಅವರಿಗೆ ತಿಳಿಸದೆ—ಈ ಸಭೆಯ ಸದಸ್ಯರಿಗೆ ಅಪಹೇಳನವಾದ ರೀತಿಯಲ್ಲಿ ಏನಾದರೂ ಮಾತನಾಡಿದ್ದರೆ ಅದು ಹಕ್ಕುಬಾಧ್ಯತೆಯಾಗುತ್ತದೆಯೇ ಇಲ್ಲವೇ? ಈ ಸಭೆಯ ಒಳಗೆ ನಡೆದಂತಹ ಘಟನೆಗಳು ಮಾತ್ರ ಹಕ್ಕು ರೋಷದ ಪ್ರಶ್ನೆಯಾಗುತ್ತದೆಯೇ! ಹೊರಗಡೆ ನಡೆದಂತಹ ಘಟನೆಗೆ ರಕ್ಷಣೆ ಇದೆಯೇ ಎನ್ನುತಕ್ಕ ಅಂಶವನ್ನು ಶ್ರೀಮಾನ್ ನಾಗಪ್ಪನವರು ಚೆನ್ನಾಗಿ ಹೇಳಿದ್ದಾರೆ, ಅವರು ಕೆಲವು ಘಟನೆಗಳನ್ನು ಆಧಾರ ಸಹಿತ ತಮ್ಮ ಮುಂದೆ ಇಡುವುದಕ್ಕೆ ಸಿದ್ಧರಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಪರಿಹಾರ ಕಾರ್ಯದ ಬಗ್ಗೆ ಬಹಳ ವಿಚಾರ ಮಾಡುವುದು ಒಳ್ಳೆಯದು, ಅವಶ್ಯಕ ಎಂದು ಏನು ಹೇಳುತ್ತಾರೆಯೋ—ನಾನಾದರೂ ಭಾವಿಸುತ್ತೇನೆ ಅದು ರಾಜ್ಯದ ಹಿತದೃಷ್ಟಿಯಿಂದ ಅವಶ್ಯಕ. ಆದರೆ ಈ ಮನೆಯ ಸದಸ್ಯರ ಗೌರವ, ಘನತೆ ದೃಷ್ಟಿಯಿಂದ ಈ ಪ್ರಶ್ನೆಯನ್ನು ಈ ಸಭೆಯಲ್ಲಿ ಎತ್ತಿರುವುದರಿಂದ ಇದನ್ನು ಗೌಣವಾಗಿ ಭಾವಿಸುವುದಕ್ಕಾಗುವುದಿಲ್ಲ. ಇದು ನನ್ನ ಅಭಿಪ್ರಾಯ, ತಾವು ವಿಚಾರ ಮಾಡಿ ರೂಲ್ 170 (2) ರ ಪ್ರಕಾರ ಇದನ್ನು ಅಡ್ಮಿಟ್ ಮಾಡಿದ್ದೀರಿ ಎಂದು ಭಾವಿಸಿಕೊಂಡು ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷರು.—ಈ ಪ್ರಶ್ನೆಯನ್ನು ರೈಸ್ ಮಾಡುವುದಕ್ಕೆ ಆರೋ ಮಾಡಿದೆ ಅಷ್ಟೇ ಹೊರತು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಆದ್ದರಿಂದ ಇದರಲ್ಲಿ ಪ್ರೈಮಾ ಫೇಸಿ ಕೇಸು ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿ ರೂಲಿಂಗ್ ಕೊಡುತ್ತೇನೆ ಎಂದು ಹೇಳಿದೆ. ರೂಲಿಂಗ್ ರಿಸರ್ವ್ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಕ್ಷಮಿಸಬೇಕು, ಕೆಲವು ವೇಳೆ ಇಂತಹ ಪ್ರಸಂಗಗಳು ಆಗುತ್ತವೆ, ಇದರಲ್ಲಿ ಬಹಳ ಸ್ಪಷ್ಟವಾಗಿದೆ:

"A member may, with the consent of the Speaker, raise a question involving a breach of privilege either of a member, or of the Assembly or of a Committee thereof."

ತಾವು ಒಪ್ಪಿಗೆ ಕೊಟ್ಟು ಅವರು ರೈಸ್ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡೆ. ಪುನಃ ಇದು ಫೈನ್ ಆರ್ಡರ್ ಇದೆಯೇ ಇಲ್ಲವೇ ಅಂತ ಅನ್ನುವುದನ್ನು ಯಾವಾಗ ನೋಡುವುದು?

ಉಪಾಧ್ಯಕ್ಷರು.—ಸ್ವಲ್ಪ ಕಾರಾವಕಾಶ ಬೇಕು, I must also study and apply my mind.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ನಾನು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ಅವರು ಏನು ಹೇಳಿದರು ಇವರು ಏನು ಹೇಳಿದರು ಅಂತ ಹೇಳಿ ಮೆರಿಟ್‌ಗೆ ಹೋಗುವುದಿಲ್ಲ. ಈ ರೀತಿ ಶ್ರೀಮಾನ್ ನಂಜೇಗೌಡರು ಹೇಳಿರತಕ್ಕ ಪ್ರಕರಣ ನಡೆದಿದ್ದರೆ ಅದು ಖಂಡಿತವಾಗಿಯೂ ಈ ಸಭೆಯ ಮಾನ್ಯ ಸದಸ್ಯರ ಹಕ್ಕಿಗೆ ರೋಪ ಬರತಕ್ಕ ಪ್ರಕರಣ, ಇದು ವಿಚಾರಾರ್ಹವಾಗಿದೆ. ಸಭೆಯವರೇ ಇದನ್ನು ತೀರ್ಮಾನ ಮಾಡಬಹುದು ಅಥವಾ ಸಮಿತಿಗೆ ಬೇಕಾದರೂ ಒಪ್ಪಿಸಬಹುದು ಅಥವಾ ತಾವು ರೂಲ್ 82ರ ಪ್ರಕಾರ

> "Notwithstanding anything contained in these rules, the Speaker may refer any question of privilege to the Committee of Privileges for examination, investigation or report."

ಅಂತ ಅನ್ನುವುದಾದರೆ ಆ ರೀತಿಯಾದರೂ ಮಾಡಬಹುದು. ತಾವು ಪುನಃ ವಿಚಾರ ಮಾಡುತ್ತೇನೆ ಎನ್ನುವುದಾದರೆ ಮಾನ್ಯ ಸ್ನೇಹಿತರ ಭಯ ಏನೆಂದರೆ It is not in order so it is rejected ಅಂತ ಆಯಿತು ಅಂದರೆ ತೊಂದರೆಯಾಗುತ್ತದೆ ಎಂದು ಹೇಳಿ ಮೇಲಿಂದ ಮೇಲೆ ಅನೇಕ ಸದಸ್ಯರು ತಮಗೆ ಮನವಿ ಮಾಡಿಕೊಂಡಿದ್ದರೆ ಇದು ಗಹನವಾದ ವಿಷಯ ಎಂದು. ಇಷ್ಟನ್ನು ನಾನು ಹೇಳುತ್ತೇನೆ. ತಾವು ಒಪ್ಪುವುದಾದರೆ ಈ ಪ್ರಶ್ನೆಯನ್ನು ಸಭೆ ಮತ್ತೊಂದು ಸಾರಿ ಚರ್ಚೆ ಮಾಡಬಹುದು. ಕೊನೆಯದಾಗಿ ಶ್ರೀಮಾನ್ ಲಕ್ಕಪ್ಪಗೌಡರು ಈಗ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಏನು ಎಕ್ಸ್‌ಪ್ಲನೇಷನ್ ಕೊಡುವುದಕ್ಕೂ ಅವಕಾಶವಿಲ್ಲ. ಪ್ರತ್ಯೇಕವಾಗಿ ಕರೆದು ಭಾಷಣ ಮಾಡಿ ಎಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ, ಅಧ್ಯಕ್ಷರಿಗೆ ಹಕ್ಕು ಇದೆ.

ಶ್ರೀ ಕೆ. ಲಕ್ಕಪ್ಪ.—ಅವರು ಹೇಳಿರುವುದು ನಿಜವೇ ಅಲ್ಲವೇ ಎಂಬುದನ್ನು ತಿಳಿಯಬೇಕು.

ಶ್ರೀ ಎಸ್. ಗೋಪಾಲಗೌಡ.—ನಾನು ಆ ವಿಚಾರಕ್ಕೆ ಹೋಗುತ್ತಿಲ್ಲ. ಯಾರಾದರೂ ಅಲಗೇಷನ್ ಮಾಡಿದರೆ ಅದು ಸರಿಯಲ್ಲ, ಅದಕ್ಕೂ ನನಗೂ ಸಂಬಂಧವಿಲ್ಲ. ಎಂದು ಹೇಳುವುದಕ್ಕೆ ಪ್ರತಿಯೊಬ್ಬರಿಗೂ ಹಕ್ಕಿದೆ. ಅಷ್ಟಾದರೂ ಹೇಳಿ.

ಶ್ರೀ ಕೆ. ಲಕ್ಕಪ್ಪ.—ನಿಜಾಂಶವನ್ನು ತಿಳಿಯದೆ ಯಾರೋ ಹೇಳಿದ ಮಾತನ್ನು ಕೇಳಿಕೊಂಡು ಇಷ್ಟು ಹೇಳುತ್ತಿದ್ದಾರೆ ಎಂಬುದನ್ನು ನಾನು ಸಭೆಯ ಗಮನಕ್ಕೆ ತರುತ್ತೇನೆ.

MOTION *Re*: SCARCITY CONDITIONS PREVAILING IN CERTAIN AREAS IN THE STATE

(Debate Contd.)

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಮಾನ್ಯ ಮುಖ್ಯ ಸಚಿವರು ಈ ಸಭೆಯ ಮುಂದೆ ದೇಶದಲ್ಲಿರುವ ಬರಗಾಲ ಪರಿಸ್ಥಿಯನ್ನು ವಿವರಣೆ ಮಾಡಿ ಒಂದು ದೀರ್ಘವಾದ ಹೇಳಿಕೆಯನ್ನು ನಿನ್ನೆ ದಿವಸ ಕೊಟ್ಟಿದ್ದಾರೆ. ಈ ದಿವಸ ನಮ್ಮ ದೇಶದಲ್ಲಿ ಮುಕ್ಕಾಲು ಭಾಗದಲ್ಲಿ ಬರಗಾಲ ಮತ್ತು ಕ್ಷಾಮ ವ್ಯಾಪ್ತವಾಗಿದೆ. 1965 ರಿಂದ ಮೂರು ವರ್ಷಗಳಿಂದ ಮಳೆ ಬೆಳೆ ಹೋಗಿ ಜನ ಬೇಸತ್ತಿದ್ದಾರೆ. ನಾಲ್ಕನೆಯ ವರ್ಷದಲ್ಲಿ ಮಳೆ ಬರಬಹುದು ಎಂದು ನಿರೀಕ್ಷೆಮಾಡಿ ನಿರಾಶೆಯಾಗಿ ಆಗಸ್ಟ್ ತಿಂಗಳು ಕಳೆದು ಇಂದು ಸೆಪ್ಟಂಬರಿನಲ್ಲಿದ್ದೇವೆ. ಮಳೆ ಬಾರದೆ ಇಡೀ ದೇಶದಲ್ಲಿ ಮಳೆ ಹೋಗಿ ಕೆರೆಗಳು ಒಣಗಿ ಕುಡಿಯಲು ನೀರಿಲ್ಲದೆ ಬೆಂಕಿಯ ಜ್ವಾಲೆಯು ಎದ್ದು ಕ್ಷಾಮ ಪರಿಸ್ಥಿತಿ ತಲೆದೋರಿದೆ. 3 ವರ್ಷದಿಂದ ಕ್ಷಾಮ ಪರಿಸ್ಥಿತಿ ಇದ್ದು ನಾಲ್ಕನೆಯ ವರ್ಷದಲ್ಲೂ ಅದು ಮುಂದುವರೆಯುತ್ತಿರುವುದರಿಂದ ಈಗಲಾದರೂ ಕ್ಷಾಮವಿದೆಯೆಂದು ಮುಖ್ಯಮಂತ್ರಿಗಳು ಸಾರಬೇಕು ಎಂದು ಸರಕಾರಕ್ಕೆ ನಾನು ಸೂಚಿಸುತ್ತಿದ್ದೇನೆ. ಹಾಗೆ ಮಾಡಿದಮೇಲೆ ಕ್ಷಾಮಕ್ಕೆ ಸಂಬಂಧಪಟ್ಟ ಕಾನೂನಿನ ಪ್ರಕಾರ ಅತಿ ಜರೂರಾಗಿ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ದೇಶದಲ್ಲಿ ಕೈಗೊಳ್ಳಬೇಕು, ಈಗಲೇ ಒಂದು ಫ್ಯಾಮಿನ್ ಕಮಿಷನ್ ರಚಿಸಬೇಕು, ಒಬ್ಬ ಕಮೀಷನರನ್ನು ನೇಮಕಮಾಡಬೇಕು, ಹಾಗೆ ಮಾಡಿ ಅತಿ ಜರೂರಾಗಿ, ಅತಿ ಶೀಘ್ರವಾಗಿ ಬೇಕಾದ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಲು ಏರ್ಪಾಡುಮಾಡಬೇಕು ಎಂದು ಸರಕಾರಕ್ಕೆ ಈ ಸಂದರ್ಭದಲ್ಲಿ ಸೂಚಿಸುತ್ತಿದ್ದೇನೆ.

ಈಗ ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆಯ ಪ್ರಕಾರ ಈ ಮೈಸೂರು ದೇಶದಲ್ಲಿ ಸುಮಾರು 174 ತಾಲ್ಲೂಕುಗಳಲ್ಲಿ 100 ತಾಲ್ಲೂಕುಗಳಲ್ಲಿ ಮಳೆಯಿಲ್ಲ, ಬೆಳೆಯಿಲ್ಲ; ಕಳೆದ 3 ವರ್ಷ ವರ್ಷಗಳಿಂದ ರೈತರು, ಜನರು ತಮ್ಮ ಮನೆಯಲ್ಲಿದ್ದ ದವಸಧಾನ್ಯ ಮುಂತಾದ್ದನ್ನೆಲ್ಲಾ ಮಾರಿದ್ದಾರೆ ದನಕರುಗಳನ್ನು ಮಾರಿದ್ದಾರೆ, ಹೆಂಡತಿಯ ಒಡವೆಗಳನ್ನು ಮಾರಾಟಮಾಡಿದ್ದಾರೆ. ಹೋದ ವರ್ಷ ಕ್ಷಾಮವಿದ್ದಾಗ ಅನೇಕ ಹಳ್ಳಿಗಳಲ್ಲಿ ಒಂದು ಹೊತ್ತು ಊಟಮಾಡುವುದಕ್ಕೂ ಶಕ್ತಿ ಇಲ್ಲದೆ ಎಲ್ಲೂ ಸಾಲವೂ ಸಿಕ್ಕದೆ ಹೆಂಡತಿಯ ಮಾಂಗಲ್ಯವನ್ನು ಸಹ ಮಾರಿದ್ದಾರೆ. ಇದನ್ನು ಮರೆತಿಲ್ಲ. ಇಂಥ ದಾರುಣ ಪರಿಸ್ಥಿತಿ ಅನೇಕ ಕಡೆ ಇದೆ. ಇನ್ನುಮುಂದೆ ಏನಾಗುತ್ತದೋ ಈಗಲೇ ಹೇಳುವಂತಿಲ್ಲ. ಇನ್ನುಳಿದಿರುವುದು ಮಕ್ಕಳನ್ನು ಮಾರಬೇಕಾದದ್ದು. ಆದರೆ ಅವರನ್ನು ಕೊಳ್ಳುವ ಜನರಿಲ್ಲ. ದನಗಳನ್ನು ಮಾರಲು ಹೋದರೆ ಅವುಗಳಿಗೆ ಮೇವು ಮತ್ತು ನೀರು ದೊರೆಯುವುದು ಕಷ್ಟವಾಗಿರುವುದರಿಂದ ಅವುಗಳನ್ನೂ ಸಹ ಕೊಳ್ಳುವವರಿಲ್ಲ. ಇಂಥ ಭಯಂಕರ ಪರಿಸ್ಥಿತಿಯಿದೆ. ಆದುದರಿಂದ ಇದನ್ನು ಸರಕಾರ ವಿಚಾರಮಾಡಿ ಈ ಘೋರ ಪರಿಸ್ಥಿತಿಯನ್ನೆದುರಿಸಲು ತಕ್ಕ ಕಾರ್ಯಕ್ರಮವನ್ನು ಅತಿ ಶೀಘ್ರವಾಗಿ ತೆಗೆದುಕೊಳ್ಳಬೇಕು. ಯುದ್ಧದ ಸಮಯದಲ್ಲಿ ಮಾಡುವ ಏರ್ಪಾಡನ್ನು ಕೂಡಲೆ ಮಾಡಬೇಕು. ಮೈಸೂರು ಡಿವಿಜನ್ನಿಗೆ 6 ಜಿಲ್ಲೆಗಳು ಸೇರುತ್ತವೆ, ಆ ಡಿವಿಜನ್ನಿನಲ್ಲಿ ನಹಸ್ರ ಹಳ್ಳಿಗಳಿವೆ. ಅಲ್ಲಿ ಘೋರ ಪರಿಸ್ಥಿತಿ ಇರುವಾಗ ಆ ಡಿವಿಜನ್ನಿನಲ್ಲಿ ಮುಖ್ಯಮಂತ್ರಿಗಳ ಹೇಳಿಕೆಯಂತೆ 760 ಕೆಲಸಗಳನ್ನು ಮಾತ್ರ ಪ್ರಾರಂಭಿಸಿದ್ದಾರೆ. ಇಂಥ ಪರಿಸ್ಥಿತಿ ಬಂದಾಗ ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವುದು ಕೆಲಸ. ಇಂದು ಅವನ ಕೈಯಲ್ಲಿ ಹಣವಿಲ್ಲ; ಹಣ ಕೊಟ್ಟು ಆಹಾರವನ್ನು ತೆಗೆದುಕೊಳ್ಳುವ ಶಕ್ತಿಯಿಲ್ಲ. ಇಂದು ಮುಖ್ಯವಾಗಿ ಅವನಲ್ಲಿ ಆಹಾರವನ್ನು ಕೊಳ್ಳುವ ಶಕ್ತಿಯನ್ನು ಉತ್ಪತ್ತಿ ಮಾಡುವುದು ಸರಕಾರದ ಮುಖ್ಯ ಕೆಲಸವಾಗಿದೆ. ಸರಕಾರದ ಲೆಕ್ಕದ ಪ್ರಕಾರ ಜೂನ್ ತಿಂಗಳಿನಲ್ಲಿ ಮೈಸೂರು ದೇಶದಲ್ಲಿ ಕೆಲಸ ಬೇಕೆಂದು ಕೇಳುತ್ತಿದ್ದವರು ಸುಮಾರು ಇಪ್ಪತ್ತೊಂದುವರೆ ಲಕ್ಷ ಮಂದಿ. ಆದರಲ್ಲಿ ಕೇವಲ ಒಂದು ಲಕ್ಷ ಮಂದಿಗೆ ಸರಕಾರ ಕೆಲಸ ಒದಗಿಸಿದೆ. ಆದ್ದರಿಂದ ಸುಮಾರು 20 ಲಕ್ಷ ಜನರಿಗೆ ಕೆಲಸವಿಲ್ಲ. ಬಹುಶಃ ನನ್ನ ಲೆಕ್ಕದ ಪ್ರಕಾರ ಇಂದು 100 ತಾಲ್ಲೂಕುಗಳಲ್ಲಿ ಸುಮಾರು ಒಂದೂವರೆ ಕೋಟಿ ಜನರು ಕ್ಷಾಮದಿಂದ ನರಳುತ್ತಿದ್ದಾರೆ. ಅವರಲ್ಲಿ ಒಂದು ಕೋಟಿಯನ್ನು ಬಿಟ್ಟರೂ ಉಳಿದವರಿಗೆ ಆಹಾರವನ್ನು ಒದಗಿಸುವ ಶಕ್ತಿ ಇರಬೇಕು. ಆದರೂ ಕೂಡ 50 ಲಕ್ಷ ಜನರು ಇಂದು ದಾರಿದ್ರ್ಯದಲ್ಲಿ ಮುಳುಗಿ ಅನ್ನವಿಲ್ಲದೆ ಕೆಲಸವಿಲ್ಲದೆ ನಿರ್ಗತಿಕರಾಗಿದ್ದಾರೆ. ಹಾಗಿರುವಾಗ ಸರಕಾರದವರು ನಿಜವಾಗಿಯೂ ಕೂಡ ಕ್ಷಾಮ ಪರಿಸ್ಥಿತಿಯನ್ನೆದುರಿಸಿ ಕೊನೆಯ ಪಕ್ಷ 50 ಲಕ್ಷ ಜನರಿಗಾದರೂ ಸರಕಾರದಿಂದ ಕೆಲಸ ಕೊಟ್ಟು ಆಹಾರವನ್ನೊದಗಿಸಬೇಕಾದ್ದು ಅವರ ಪ್ರಥಮ ಕರ್ತವ್ಯವಾಗಿದೆ. ಒಬ್ಬನಿಗೆ ಒಂದು ರೂಪಾಯಿನಂತೆ ದಿನಕ್ಕೆ 50 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಸ್ವಲ್ಪ ಮಟ್ಟಿಗಾದರೂ ಕ್ಷಾಮ ಪರಿಸ್ಥಿತಿಯನ್ನೆದುರಿಸಲು ಕಾರ್ಯವನ್ನು ಮಾಡುತ್ತಿದ್ದಾರೆಂದು ನೆಮ್ಮದಿಯಿಂದಿರಬಹುದು. ಹಾಗಿಲ್ಲದೆ ಕೇವಲ ಒಂದು ಡಿವಿಜನ್ನಿಗೆ 10-15 ಲಕ್ಷ ಕೊಚ್ಚರೆ ಅದು ಸಮುದ್ರದಲ್ಲಿ ಒಂದು ತೊಟ್ಟು ನೀರು ಹಾಕಿದಂತಾಗಿ ನಿಜವಾಗಿಯೂ ಕ್ಷಾಮ ಪರಿಹಾರವಾಗುವುದಿಲ್ಲ. ಎಂದು ತೋರುತ್ತದೆ. ಸರಕಾರ ಕೆಲಸ ನೀಡಿ ಕೂಲಿಗಾಗಿ ಹಣ ಕೊಡುವುದು ಬೇಡ, ಆಹಾರ ಕೊಡಬೇಕು. ಎರಡು ಹೊತ್ತು ಊಟವನ್ನು ಕೊಡುವುದಕ್ಕಾಗದಿದ್ದರೂ ಒಂದು ಹೊತ್ತಾದರೂ ಕೊಟ್ಟು ಕಾಪಾಡಿದರೆ ಜನರು ಬದುಕುತ್ತಾರೆ. ಇಲ್ಲದಿದ್ದರೆ ಜನರು ಸಾಯುವ ಸ್ಥಿತಿ ಬರುತ್ತದೆ. ದಿನಕ್ಕೆ 50 ಲಕ್ಷ ರೂಪಾಯಿ ಎಲ್ಲಿಂದ ತರಬೇಕು ಎಂದು ಸರಕಾರ ಕೇಳಬಹುದು. ಆದರೆ ಜನರು ಬದುಕಿರಬೇಕಾದರೆ ಹೇಗಾದರೂ ಮಾಡಿ ಅಷ್ಟನ್ನು ಒದಗಿಸಲೇಬೇಕು. ಇತರ ಕಾರ್ಯಗಳನ್ನಾದರೂ ಬದಿಗಿಟ್ಟು ಈ ಪರಿಸ್ಥಿತಿಯನ್ನೆದುರಿಸುವುದಕ್ಕೆ ಸಿದ್ಧವಾಗಬೇಕು ಎಂದು ಸರಕಾರಕ್ಕೆ ಸೂಚನೆಯನ್ನು ನಾನು ಅತಿ ಆಗ್ರಹದಿಂದ ಮಾಡುತ್ತೇನೆ.

ಕ್ಷಾಮ ನಿವಾರಣೆಗಾಗಿ ಇಷ್ಟೊಂದು ಹಣವನ್ನು ಖರ್ಚು ಮಾಡುವಾಗ ಯಾವ ರೀತಿಯಲ್ಲಿ ಮಾಡಬೇಕು ಎನ್ನುವುದು ಕೂಡ ಬಹಳ ಪ್ರಾಮುಖ್ಯವಾದ ಪ್ರಶ್ನೆ. ಅನೇಕ ಜನ ಮಿತ್ರರು ಹೇಳಿದ್ದಾರೆ, ಕ್ಷಾಮ ಪರಿಸ್ಥಿತಿಯನ್ನು ಎದುರಿಸಲು, ನಿಮ್ಮಲ್ಲಿರುವ ಖಜೆನ್ಸಿಯಿಂದ ಹಣ ಖರ್ಚು ಮಾಡತಕ್ಕ ಮತ್ತು ಯಾವ ರೀತಿ ಖರ್ಚು ಮಾಡಬೇಕೆಂಬ ಶಕ್ತಿ ಇವೊತ್ತು ನಮ್ಮ ದೇಶದಲ್ಲಿದೆಯೇ, ನಮ್ಮ ದೇಶದಲ್ಲಿ ಆ ಸಾಧನೆ ಇದೆಯೋ ಎಂದು ಕೇಳಬೇಕಾಗಿದೆ. ಮುಖ್ಯ ಸಚಿವರು ಒಂದು ಅಂಶವನ್ನು ಒಪ್ಪಿಕೊಂಡಿದ್ದಾರೆ.

> "I have also heard that some middlemen are coming to appear in order to make illegitimate profit out of these works."

(ಶ್ರೀ ಎಸ್. ಶಿವಪ್ಪ)

ಇದರಲ್ಲಿ ಅವರು ಬಹಳ ಆರ್ಥಗರ್ಭಿತವಾಗಿ ಒಪ್ಪಿಕೊಂಡಿದ್ದಾರೆ. ಈ ದೇಶದಲ್ಲಿ ಕ್ಷಾಮ ಬರಲಿ, ಯಾವುದೇ ಬರಲಿ, ಈ ಮಧ್ಯವರ್ತಿ ಜನ ತಮ್ಮ ಸ್ವಾರ್ಥಕ್ಕಾಗಿ ಹಣವನ್ನು ದುರುಪಯೋಗ ಮಾಡತಕ್ಕ ಒಂದು ವರ್ಗ ಈ ದೇಶದಲ್ಲಿ ಬೆಳೆದುಕೊಂಡು ಬಂದಿದೆ. ಕ್ಷಾಮದ ಹೆಸರಿನಲ್ಲಿ ಕೂಡ ಮನುಷ್ಯನ ಹಸಿವನ್ನು ವ್ಯಾಪಾರ ಮಾಡಿ ಜೀವನ ಮಾಡತಕ್ಕ ಸ್ವಾರ್ಥಿಗಳ ಗುಂಪು ಈ ದೇಶದಲ್ಲಿದೆ. ಹಣವನ್ನು ಖರ್ಚು ಮಾಡುವುದರಲ್ಲಿ ರೆಡ್‌ಟೇಪಿನಂ ಇದೆ ಎನ್ನುವುದನ್ನು ಅವರು ಒಪ್ಪಿಕೊಂಡಿದ್ದಾರೆ. ನಾನು ಇನ್ನೂ ಮುಂದೆ ಹೋಗುತ್ತೇನೆ ಅಧಿಕಾರಿಗಳ ದಿನಚರಿ ಕೆಲಸಗಳಲ್ಲಿ ಅಡ್ಡಿಯಾಗಿರತಕ್ಕ ಒಂದು ಗುಂಪು ಈ ದೇಶದಲ್ಲಿದೆ, ಅದು ನಿಮ್ಮ ಕಾಂಗ್ರೆಸ್ಸಿನ ಜನ. ಯಾವ ಅಧಿಕಾರಿಯೇ ಆಗಲೀ ಕೆಲಸವನ್ನು ನರಾಗವಾಗಿ, ನೇರವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಮಧ್ಯವರ್ತಿಗಳಾಗಿ ಕೆಲವು ಜನ ನಿಂತಿದ್ದಾರೆ. ಆದ್ದರಿಂದ ನಾವು ಅಧಿಕಾರಿಗಳನ್ನು ಶಪಿಸಿ ಪ್ರಯೋಜನವಿಲ್ಲ. ಈ ದೇಶದಲ್ಲಿ ಕೆಲಸ ನಿಷ್ಪಕ್ಷಪಾತವಾಗಿ, ಕ್ಷಿಪ್ರವಾಗಿ ಆಗಬೇಕು ಎಂದರೆ ನೀವು ನಿಮ್ಮ ವರ್ಗದ ಜನಗಳಿಗೆ ಹೇಳಬೇಕು, ದಿನಚರಿಯ ಕೆಲಸಕಾರ್ಯಗಳಲ್ಲಿ ಕೈ ಹಾಕಬೇಡಿ ಎಂದು. ಇಂಥ ಸೂಚನೆಯನ್ನು ಮೊದಲು ಕೊಡಬೇಕೆಂದು ನಾನು ಮುಖ್ಯ ಸಚಿವರಿಗೆ ಸೂಚನೆ ಕೊಡುತ್ತಿದ್ದೇನೆ.

ನನಗೆ ಒಂದು ಕಾಗದ ಬಂದಿದೆ. ಇಂಥ ಎಷ್ಟೋ ಕಾಗದಗಳು ಬರುತ್ತಿವೆ, ಕ್ಷಾಮ ಪರಿಹಾರ ಕಾರ್ಯಗಳ ಸಂಬಂಧದಲ್ಲಿ ಕೆಲವು ಮಂತ್ರಿಗಳು ಅವರವರ ಕ್ಷೇತ್ರಗಳಿಗೆ ಹೋಗಿ ಅಲ್ಲಿಯ ತಾಲ್ಲೂಕು ಬೋರ್ಡ್ ಅಧ್ಯಕ್ಷರ ಜೊತೆಗೆ ಮಾತನಾಡಿ, ತಾಲ್ಲೂಕು ಬೋರ್ಡ್ ಚುನಾವಣೆಗಳು ಬರುತ್ತವೆ, ಕಾಂಗ್ರೆಸ್ ಪಕ್ಷದವರಿಗೋಸ್ಕರ ನಾವು ಕೊಡುವ ಕ್ಷಾಮ ಪರಿಹಾರ ಕಾರ್ಯಗಳ ಹಣವನ್ನು ಉಪಯೋಗಿಸಿಕೊಳ್ಳಿ ಎಂದು ಪ್ರಚಾರ ಮಾಡುತ್ತಿದ್ದಾರೆಂದು, ದಯವಿಟ್ಟು ತಾಲ್ಲೂಕು ಬೋರ್ಡನ್ನು ರದ್ದುಮಾಡಿ ಈ ಕೆಲಸವನ್ನು, ಯಾವುದಾದರೂ ಒಬ್ಬ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಅವರ ಮುಖೇನ ಮಾಡಿಸಿ ಎಂದು ನೊಂದು ಬರೆದಿದ್ದಾರೆ. ಇದು ಒಬ್ಬರಿಂದ ಬಂದಿರುವ ಕಾಗದವಲ್ಲ. ಇದು ಅಕ್ಷರಶಃ ನಿಜ. ಯಾವ ತಾಲ್ಲೂಕಿಗೇ ಹೋಗಿ, ಯಾವ ಹಳ್ಳಿಗೇ ಹೋಗಿ, ಇವೊತ್ತು ನಡೆಯುತ್ತಿರುವ ಕೆಲಸ ನಿಮ್ಮ ಮನಸ್ಸಿನಲ್ಲಿರುವ ಕೆಲಸ. ದೇಶವೆಂದರೆ ಕೇವಲ ಕಾಂಗ್ರೆಸ್ಸಿನ ಕೆಲಸ ಎಂದು ನಿಮ್ಮ ಮಂತ್ರಿಗಳ ತಲೆಯಲ್ಲಿ ಅಡಗಿದೆ. ಅವರ ತಲೆಯಲ್ಲಿ ಅಡಗಿರುವ ಈ ಮನೋಭಾವ ಏನಿದೆ, ಅದರಿಂದ ದೇಶಕ್ಕೆ ಉಪಯೋವಾಗುವುದಿಲ್ಲ. ಒಂದು ದಿನಕ್ಕೆ 50 ಲಕ್ಷವಲ್ಲ ಒಂದು ಕೋಟಿ ರೂಪಾಯಿ ಖರ್ಚು ಮಾಡಿದರೂ ದೇಶಲ್ಲರುವ ಕ್ಷಾಮ ನಿವಾರಣೆಯಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ಕ್ಷಾಮದ ಹೆಸರಿನಲ್ಲಿ ಖರ್ಚು ಮಾಡಲು ಏನು ಬೇಡಿಕೆಯನ್ನಿಟ್ಟು ಈ ಸಭೆಯ ಮಂಜೂರಾತಿ ಪಡೆಯುತ್ತೀರಿ ಆ ಹಣ ಈ ದೇಶದಲ್ಲಿ ಹೆಚ್ಚು ಅನುಕೂಲವಿಲ್ಲದೆ ಇರತಕ್ಕ ಬಡ ರೈತನಿಗೆ, ಬಡ ಕಾರ್ಮಿಕನಿಗೆ ಹೋದರೆ ಸಂತೋಷವೇ ಹೊರತು, ಅದಿಲ್ಲದೆ ಮಧ್ಯವರ್ತಿ ಜನಗಳಿಗೆ ಹೋದರೆ ನಾವು ಹಣವನ್ನು ಮಂಜೂರು ಮಾಡಿಯೂ ಏನೂ ಉಪಯೋಗವಿಲ್ಲ. ಈಗತಾನೇ ಮಾನ್ಯ ಸದಸ್ಯರೊಬ್ಬರು, ಹೇಳಿದರು, ಕಾಂಗ್ರೆಸ್ಸಿನ ಮಂತ್ರಿಗಳು ಯಾವ ರೀತಿಯಾಗಿ ಮಾಡುತ್ತಿದ್ದಾರೆ ಎಂದು. ಮಾನ್ಯ ಮಂತ್ರಿಗಳಾದ ಪೊಲದಾಸ ಶೆಟ್ಟಿಯವರು ನಗುತ್ತಿದ್ದಾರೆ. ಇದು ನಗುವ ಮಾತಲ್ಲ. ಯಾರೇ ಆಗಲೀ, ಈ ದೇಶದಲ್ಲಿ ಮಂತ್ರಿಗಳಾದ ಮೇಲೆ ದೇಶಕ್ಕೆ ಮಂತ್ರಿಗಳೇ ಹೊರತು ಕಾಂಗ್ರೆಸ್ಸಿನ ಮಂತ್ರಿಗಳಲ್ಲ. ನೀವು ಕಾಂಗ್ರೆಸ್ಸಿನವರಾಗಿ ವರ್ತನೆ ಮಾಡಿದರೆ ಅದಕ್ಕಿಂತ ದೊಡ್ಡ ಪಾಪದ ಕೆಲಸ ಮತ್ತೊಂದಿಲ್ಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ. ಬಾಸ್ಕರ ಶೆಟ್ಟಿ (ಕಾಪು).—ಅವರ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿ ವೃಷ್ಟಿಯಾಗಿದೆ.

ಶ್ರೀ ಎಸ್. ಶಿವಪ್ಪ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿಯಾಗಿದೆ ಎಂದು ನನ್ನ ಮಾನ್ಯ ಸ್ನೇಹಿತರು ಹೇಳುತ್ತಿದ್ದಾರೆ. ಅಲ್ಲಿ ಮಳೆಯಾದರೆ, ಅಲ್ಲಿ ಬೆಳೆಯುವ ಅಕ್ಕಿಯನ್ನು ನಮಗೆ ಕಳಿಸಿದರೆ ಬಹಳ ಸಂತೋಷವಾಗುತ್ತದೆ.

ಈಗ ಇರುವ ಫ್ಯಾಮಿನ್ ಕೋಡ್ ಏನಿದೆ ಅದು ಬಹಳ ಹಿಂದೆ ಆಗಿರತಕ್ಕದ್ದು. ಅದರ ಪ್ರಕಾರವಾಗಿ ಕ್ಷಾಮ ನಿರ್ಧಾರ ಮಾಡುವುದು ಎಂದರೆ ಎಲ್ಲೂ ಕೂಡ ಈ ಪ್ರಪಂಚದಲ್ಲಿ ಕ್ಷಾಮ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅದರಲ್ಲಿ ಕ್ಷಾಮ ಬಂದ ಮೇಲೆ ಏನು ಮಾಡಬೇಕು ಎನ್ನುವುದನ್ನು ಬಹಳ ಚೆನ್ನಾಗಿ ಬರೆದಿದ್ದಾರೆ. ಬ್ರಿಟಿಷರ ಕಾಲದಲ್ಲಿ ಅದನ್ನು ಬರೆದದ್ದು. ಈ ದೇಶದಲ್ಲರುವ ಜನರನ್ನು ಸಾಕತಕ್ಕ ಜವಾಬ್ದಾರಿ, ಅವರ ಆರೋಗ್ಯವನ್ನು ಕಾಪಾಡತಕ್ಕ ಜವಾಬ್ದಾರಿ ಸರ್ಕಾರದ್ದಾಗಿರಬೇಕು. ಅದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕು ಎಂದು ಅಂದಿನ ಜವಾಬ್ದಾರಿ ಸರ್ಕಾರದ್ದಾಗಿರಬೇಕು. ಅದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕು ಎಂದು ಅಂದಿನ ಜವಾಬ್ದಾರಿ ಸರ್ಕಾರ, ಯಾರು ನಮ್ಮ ದೇಶದ ರಕ್ತವನ್ನು ಹರಿಸಿ ಅಳುತ್ತಿದ್ದರು ಅಂಥ

ಇಂಗ್ಲಿಷರು ಬರೆದು ಹೋಗಿದ್ದಾರೆ. ಮೂರು ವರ್ಷ ದುರ್ಭಿಕ್ಷವಾಗಿ ನಾಲ್ಕನೆಯ ವರ್ಷ ದುರ್ಭಿಕ್ಷ ಬಂದಿದೆ. ಈಗಲಾದರೂ ಕೂಡ ರಾಜ್ಯದಲ್ಲಿ ಕ್ಷಾಮವಿದೆ ಎಂದು ಸಾರುವುದಕ್ಕೆ ಹಿಂದುಮುಂದು ನೋಡುತ್ತಿದ್ದೀರಿ. ಒಂದು ವರ್ಷ ಮಳೆ ಬಾರದೆ ಎರಡನೇ ವರ್ಷ ಅಭಾವ ಪರಿಸ್ಥಿತಿ ಬಂದರೆ ಕ್ಷಾಮ ಎಂದು ಸಾರಬೇಕೆಂದು ಹೇಳುವಾಗ ಮೂರು ವರ್ಷಗಳಿಂದ ಬಿದ್ದಿರುವ ಮಳೆಯು ನರಾನರಿಯನ್ನು ನೋಡುವಾಗ, ಎಷ್ಟು ಬೆಳೆಯಾಯಿತು ಎಂದು ನೋಡುವಾಗ, ನಭೆಯ ಮುಂದೆ 1965-66, 1966-67 1967-68, ಈ ಮೂರು ವರ್ಷಗಳ ಅಂಕಿಅಂಶಗಳನ್ನು ಇಟ್ಟಿರುವುದನ್ನು ನೋಡಿದರೆ ನರಾನರಿ ಕಾಲು ಭಾಗ ಕೂಡ ಮಳೆಯಾಗಿಲ್ಲ. ಮೂರು ವರ್ಷದಿಂದ ದುರ್ಭಿಕ್ಷ ಇದ್ದು ನಾಲ್ಕನೆಯ ವರ್ಷವೂ ಮಳೆಯಿಲ್ಲದೆ ಘೋರ ಕ್ಷಾಮ ದೇಶಕ್ಕೆ ಬಂದಿರುವುದರಿಂದ ನಾನು ಸರ್ಕಾರಕ್ಕೆ ಹೇಳುತ್ತೇನೆ, ಹಿಂದು ಮುಂದು ನೋಡದೆ ಈ ದೇಶದಲ್ಲಿ ಕ್ಷಾಮ ಬಂದಿದೆ ಎನ್ನುವುದನ್ನು ಸರ್ಕಾರ ಅಧಿಕೃತವಾಗಿ ಸಾರಿ, ಅದಕ್ಕೆ ಬೇಕಾದ ಹಣವನ್ನು ಈ ಸರ್ಕಾರ ಒದಗಿಸುವುದಲ್ಲದೆ ಇನ್ನೂ ಹೆಚ್ಚು ಹಣವನ್ನು ಕೇಂದ್ರ ಸರ್ಕಾರದಿಂದ ಕೂಡ ತರತಕ್ಕ ಸಾಮರ್ಥ್ಯ ಸರ್ಕಾರಕ್ಕೆ ಇರಬೇಕು. ಪ್ಲಾನಿಂಗ್ ಕಮಿಷನ್‌ನವರು ಇಲ್ಲಿಗೆ ಬಂದಿದ್ದಾರೆ. ಅವರು ನಮ್ಮ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ಅವರು ಬಂದಿರುವ ಕಾಲದಲ್ಲಿ ನಮ್ಮ ಯೋಜನೆಯ ಕಾರ್ಯಕ್ರಮಗಳೇನು, ನಮ್ಮ ಮುಂದಿನ ಗುರಿ ಏನು ಎನ್ನುವುದನ್ನು ಸಿದ್ಧಮಾಡಿಕೊಳ್ಳಬೇಕಾಗಿತ್ತು. ಸರ್ಕಾರದವರ ಅಂಕಿಗಳ ಆಧಾರದ ಮೇಲೆ ಕೇವಲ 10 ಕೋಟಿ ರೂಪಾಯಿ ಪ್ಲಾನ್ ತಯಾರು ಮಾಡಿದ್ದಾರೆ. ನಾವೇ 10 ಕೋಟಿ ರೂಪಾಯಿ ಕೇಳಿದರೆ ಅವರು ಇನ್ನು ಎಷ್ಟು ಕೊಡಬಹುದು ? ಇವೊತ್ತಿನ ದಿವಸ 60 ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮವನ್ನು ಹಾಕಬೇಕಾಗಿತ್ತು. ಹಸಿವಿನಿಂದ ಜನ ಸಾಯುವ ಸ್ಥಿತಿಯಲ್ಲಿರುವಾಗ 60 ಕೋಟಿ ರೂಪಾಯಿ ಕೂಡ ಸಾಕಾಗುವುದಿಲ್ಲ. ಒಂದು ದಿನಕ್ಕೆ 50 ಲಕ್ಷ ರೂಪಾಯಿ ಜನರಿಗೆ ಸಿಕ್ಕಬೇಕಾದರೆ ಆರು ತಿಂಗಳಿಗೆ ಎಷ್ಟಾಗುತ್ತದೆ ಎನ್ನುವುದನ್ನು ಲೆಕ್ಕ ಹಾಕಿ ಪ್ಲಾನಿಂಗ್ ಕಮೀಷನ್ ಮುಂದೆ ಕ್ಷಾಮ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಚರ್ಚೆಗೆ ಸಿದ್ಧಮಾಡಿಕೊಳ್ಳಬೇಕಾಗಿತ್ತು. 10 ಕೋಟಿ ರೂಪಾಯಿಗಳಲ್ಲಿ ಏನು ಸಾಧನೆ ಮಾಡಬಹುದು ಎನ್ನುವುದನ್ನು ಯೋಚನೆ ಮಾಡಿ. ನಿಮ್ಮಲ್ಲಿ ಪೂರ್ವ ಸಿದ್ಧತೆಗಳಿಲ್ಲ ಎನ್ನುವುದನ್ನು ಇದರಿಂದ ಕೂಡ ಅರಿಯಬಹುದಾಗಿದೆ. ನಿಮ್ಮಲ್ಲಿ ಅಂಕಿ ಅಂಶಗಳಿಲ್ಲ. ಎಷ್ಟು ಜನಗಳಿಗೆ ಮನೆಯಿಲ್ಲ, ಎಷ್ಟು ಜನಗಳಿಗೆ ತಿನ್ನುವುದಕ್ಕೆ ಗತಿ ಇಲ್ಲದೆ ನಿರ್ಗತಿಕರಾಗಿದ್ದಾರೆ, ಎನ್ನುವ ಅಂಕಿಅಂಶಗಳನ್ನು ಸಂಗ್ರಹ ಮಾಡಿದ್ದೀರಾ ? ಎಷ್ಟು ಜನ ಹಸಿವಿನಿಂದ ಇದ್ದಾರೆ ಎನ್ನುವುದು ಗೊತ್ತೇ ? ಏನೋ ಒಂದು ಸರಾನರಿ ಮರಾಮಿ ಮೇಲೆ ಎಷ್ಟು ಜನ ಇರಬಹುದು ಎಂದು ಹೇಳುತ್ತೀರೇ ಹೊರತು ಖಡಾಖಂಡಿತವಾಗಿ ಇಷ್ಟು ಜನ ಇದ್ದಾರೆ ಎಂದು ಹೇಳುವ ಲೆಕ್ಕ ನಿಮ್ಮಲ್ಲಿದೆಯೇ ? ರೆವೆನ್ಯೂ ಇರಾಖೆಯ ತಹಸೀಲ್ದಾರರು ರೆವೆನ್ಯೂ ಇನ್‌ಸ್ಪೆಕ್ಟರುಗಳು ಇವರೆಲ್ಲ ಏನು ಮಾಡುತ್ತಾರೆ ? ನಾನು ಹೇಳಿದ ಪ್ರಕಾರ ಅಂಕಿಅಂಶಗಳನ್ನು ಸರ್ಕಾರ ಸಂಗ್ರಹ ಮಾಡಿದ್ದರೆ ಪ್ಲಾನಿಂಗ್ ಕಮಿಷನ್ ಮುಂದೆ ಹೇಳುವುದಕ್ಕೆ ನುಲಭವಾಗುತ್ತಿತ್ತು. ಅಂಥ ಅಂಕಿಅಂಶಗಳ ಅಭಾವ ಸರ್ಕಾರದಲ್ಲಿದೆ.

ನಭಾಪತಿಯವರೇ, ಇವೊತ್ತು ನಮ್ಮ ದೇಶದಲ್ಲಿ ಅಭಾವ ಆಥವಾ ಕ್ಷಾಮ ಪರಿಸ್ಥಿತಿಯಿಂದ ಹೊಚ್ಚೆಗೆ ಅನ್ನವಿಲ್ಲದೆ ಜನ ನರಳುತ್ತಿರುವ ಕಾಲದಲ್ಲಿ ಸರ್ಕಾರದ ಮನೋಭಾವವೇನಿರಬೇಕು ? ನಿನ್ನೆಯ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಅಭಾವ ಪರಿಸ್ಥಿತಿಗೆ ಸಂಬಂಧಪಟ್ಟ ಒಂದು ಹೇಳಿಕೆಯನ್ನು ನಭೆಯ ಮುಂದೆ ಇಟ್ಟರು. ಅದೇ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿ ಮಂತ್ರಿಗಳ ಸಂಬಳ ಸಾರಿಗೆಗೋಸ್ಕರ ಒಂದು ಮಸೂದೆಯನ್ನು ಮಂಡಿಸಿದ್ದಾರೆ. ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿ 5 ಜನ ಸ್ವೇಟ್ ಮಂತ್ರಿಗಳನ್ನು ತೆಗೆದುಕೊಂಡು ಅವರಿಗೋಸ್ಕರ ಸಂಬಳವನ್ನು ಮಂಜೂರು ಮಾಡತಕ್ಕ ಕಾನೂನನ್ನು ಕೂಡ ನಭೆಯ ಮುಂದೆ ಇಟ್ಟಿದ್ದಾರೆ. ಹೀಗಾದರೆ ಜನತೆ ನಿಮ್ಮನ್ನು ಹೇಗೆ ನಂಬುತ್ತದೆ ? ಸರ್ಕಾರದಲ್ಲಿ ಮಿತವ್ಯಯವನ್ನು ಮಾಡುವುದರ ಬದಲು, ಹಣವನ್ನು ಉಳಿತಾಯ ಮಾಡುವುದರ ಬದಲು ಹಣವನ್ನು ನಿಮಗಾಗಿ, ನಿಮ್ಮ ಮಂತ್ರಿಗಳಿಗಾಗಿ ಹೆಚ್ಚುವರಿ ಬೇಡಿಕೆ ಮೂಲಕ ಈ ನಭೆಯ ಮುಂದೆ ಕೇಳತಕ್ಕ ಕಾರ್ಯವನ್ನು ನೋಡಿದರೆ ಅದಕ್ಕಿಂತ ಅಪಹಾಸ್ಯವಾದ ಕ್ರಮ ಮತ್ತೊಂದಿಲ್ಲ ಎಂದು ಹೇಳಬೇಕಾಗಿದೆ.

ವಿರೋಧ ಪಕ್ಷದ ನಾಯಕರಿಗೆ ಮನೆ ಕೊಟ್ಟು, ಸಂಬಳ ಕೊಟ್ಟು ಇನ್ನೂ ಏನೇನೋ ಕೊಟ್ಟು ಅದಕ್ಕಾಗಿ ಒಂದು ಮಸೂದೆಯನ್ನು ತರಬೇಕೆಂದಿದ್ದಾರೆ. ಆ ಮಸೂದೆಯನ್ನು ಅಂಗೀಕಾರ ಮಾಡತಕ್ಕದು ಅಥವಾ ಬಿಡತಕ್ಕದು ನಭೆಗೆ ಸೇರಿದ್ದು. ನಾನು ವಿರೋಧ ಪಕ್ಷದ ನಾಯಕನಾಗಿರುವಾಗ, ಈ ದೇಶದಲ್ಲಿ ದುರ್ಭಿಕ್ಷ ಪರಿಸ್ಥಿತಿ ಇರುವಾಗ, ಈ ಮಸೂದೆಯನ್ನು ನಭೆ ಅಂಗೀಕಾರ

(ಶ್ರೀ ಎಸ್. ಶಿವಪ್ಪ)

ಮಾಡಿದರೂ ಕೂಡ ನಾನು ಅದರ ಸೌಲಭ್ಯವನ್ನು ತೆಗೆದುಕೊಳ್ಳುವುದಿಲ್ಲ ಎಂದು ಈ ದಿವಸ ಹೇಳುತ್ತೇನೆ. ಅದಕ್ಕಾಗಿ ಖರ್ಚು ಮಾಡತಕ್ಕ ಹಣವನ್ನು ವಿನಿಯೋಗ ಮಾಡಿ ಒಂದೊಂದು ತಾಲ್ಲೂಕಿನಲ್ಲಿಯೂ ಒಂದು ಗಂಜಿ ಕ್ಷೇತ್ರವನ್ನು ತೆಗೆದರೆ ಅದಕ್ಕಿಂತಲೂ ಹೆಚ್ಚಿನ ಸಂತೋಷ ನನಗೆ ಬೇರೊಂದಿಲ್ಲ ಎಂದು ಸಭಾಪತಿಗಳ ಮೂಲಕ ನಾನು ಸಭೆಗೆ ತಿಳಿಸುತ್ತಿದ್ದೇನೆ.

4–30 P.M.

ಸಭಾಪತಿಯವರೇ, ಇವತ್ತು ದೇಶದ ಪರಿಸ್ಥಿತಿ ಇಂತಹ ಒಂದು ದುರ್ಭರವಾದ ಹಾಗೂ ಕ್ಷಾಮದ ದವಡೆಯಲ್ಲಿ ಸಿಲುಕಿರುವ ಕಾಲದಲ್ಲಿ ಸರ್ಕಾರದವರು ಈಗ ಮತ್ತೊಮ್ಮೆ ದೇಶದ ಜನತೆಯನ್ನು ಅನ್ನವಿಲ್ಲದೆ ಕ್ಷಾಮದ ಪರಿಸ್ಥಿತಿಗೆ ತಂದಿಟ್ಟಿದ್ದಾರೆ. ಆದರೆ ಮಳೆ ಹೋಗಿರುವುದರಿಂದ ಈ ಕಾಂಗ್ರೆಸ್ ಸರ್ಕಾರವನ್ನು ದೂಷಣೆ ಮಾಡುತ್ತಾ ಇಲ್ಲ. ಅದು ದೈವ ನಿಯಾಮಿಕವಾದುದು. ಸುಮಾರು 22 ಸಾವಿರ ಕೋಟಿ ರೂಪಾಯಿಗಳನ್ನು ಇಡೀ ಭಾರತದೇಶದಲ್ಲಿಯೂ ಮತ್ತು ಪೌಸ್ಸೂರು ದೇಶದಲ್ಲಿ ಕೇವಲ ಕೆಲವು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಈಗಿನ ಕ್ಷಾಮದ ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕೆ ಆಗಲಲ್ಲ. ಸುಮ್ಮನೆ ಆಕಾಶವನ್ನೇ ನೋಡುತ್ತಾ ಸರ್ಕಾರದವರು ಎಷ್ಟೋ ನೀರಾವರಿ ಯೋಜನೆಗಳನ್ನು ಮಾಡಲಲ್ಲ. ನಮ್ಮ ದೇಶದಲ್ಲಿರತಕ್ಕ ನೀರನ್ನು ತಡೆದು ಜನಗಳಿಗೆ ಕೂಡದೆ ವ್ಯರ್ಥ ಹಣವನ್ನು ವ್ಯಯಮಾಡುತ್ತಿದ್ದಾರೆ. ಹಿಂದೆ ಈ ದೇಶದಲ್ಲಿ ಬೇಜವಾಬ್ದಾರಿಯಿಂದ ಕೂಡಿದ್ದಂಥ ಸರ್ಕಾರ ಇರುವಾಗ್ಗೆ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿದರಿಂದಲೇ ಈಗ ನಮ್ಮ ಜನ ನೀರು ಕುಡಿಯುತ್ತಿದ್ದಾರೆ. ಮಂಡ್ಯಾದಲ್ಲಿ ಅವರಿಂದ ಸ್ವಲ್ಪಮಟ್ಟಿಗೆ ನೀರಾವರಿ ಯೋಜನೆಗಳು ಆಗುತ್ತಿವೆ. ಇಡೀ ದೇಶದ ಜನ ಆ ನೀರನ್ನು ಈಗಲೂ ನೋಡುತ್ತಿದ್ದಾರೆ. ಆದರೆ ಈಗ ನೀವು ಕಟ್ಟುವಂಥ ಅಣೆಕಟ್ಟುಗಳಿಂದಲೂ ಸ್ವಲ್ಪ ನೀರನ್ನು ಕೊಡಬಹುದಾಗಿತ್ತು. ಆ ಕೆಲಸವೇನೂ ಆಗಲಲ್ಲ. ಬೇರೆ ಕಡೆಗಳಲ್ಲಿ ಜನರು ನೀರಿಲ್ಲದೆಯೇ ಸಾಯುತ್ತಿದ್ದಾರೆ. ಯಾರೇ ಮಂತ್ರಿಗಳಾಗಿರಲಿ ಅವರು ಇವತ್ತು ನಾನು ಮುಖ್ಯ ಮಂತ್ರಿಗಳಾದ ಮೇಲೆ ನನ್ನಿಂದ ಒಂದು ಅಣೆಕಟ್ಟಿನ ಶಂಖು ಸ್ಥಾಪನೆಯಾಗಬೇಕು ಎಂದು ಇರಬಹುದು. ಹಿಂದಿನ ಮಾಜಿ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ನಿಜಲಿಂಗಪ್ಪನವರು ಮೂರು ವರ್ಷಗಳ ಕೆಳಗೆ ಹೇಮಾವತಿಗೆ ಆಸ್ತಿಭಾರ ಶಿಲೆಯನ್ನು ಹಾಕಿದರು. ಈಗ ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರು ಬಂದರು. ಇವರೂ ಕೂಡ ಹೋಗಿ ಆ ರೀತಿ ಹಾಕಬೇಕಾಗಿದೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಆಸ್ತಿಭಾರಶಿಲೆಯನ್ನು ಹಾಕಲಿಲ್ಲ. ಬಹುಶಃ ತಮಗೂ ಆಹ್ವಾನ ಪತ್ರಿಕೆ ಬಂದಿರಬಹುದು. ಒಂದು ಕೆಲಸದ ಪ್ರಾರಂಭೋತ್ಸವ ಮಾಡುವುದಕ್ಕೆ ನಾನು ಹೋಗಿದ್ದೆ. ಹೇಮಾವತಿ ಆಸ್ತಿಭಾರ ಶಿಲೆಯನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರು ಬಹಳ ದಿವಸಗಳ ಹಿಂದೆಯೇ ಹಾಕಿದ್ದಾರೆ.

ಶ್ರೀ ಎಸ್. ಶಿವಪ್ಪ.—ನಾನು ಚೀಫ್ ಇಂಜಿನಿಯರನ್ನು ಕೇಳಿದೆ. ಹೇಮಾವತಿಗೆ ಮಾನ್ಯ ಶ್ರೀ ನಿಜಲಿಂಗಪ್ಪನವರು ಆಸ್ತಿಭಾರ ಶಿಲೆಯನ್ನು ಹಾಕಿದ್ದಾರೆಂದು, ಅಲ್ಲಗೆ ಇದಕ್ಕಾಗಿ 4–5 ಸಾರಿ ಹೋಗಿದ್ದಾರೆಂದೂ ಕೇಳಿದೆ. ಒಂದು ಸಾರಿ ಗುದ್ದಲಿ ಪೂಜೆಗೆ, ಬಾಗಿಲು ಇಡುವುದಕ್ಕೆ ಒಂದು ಸಾರಿ, ಕಟಿಕೆ ಇಡುವುದಕ್ಕೆ ಒಂದು ಸಾರಿ—ಹೀಗೆ ಇನ್ನೂ ಎರಡು ಮೂರು ಸಾರಿ ಅವರು ಅಲ್ಲಗೆ ಹೋಗಿದ್ದಾರೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿದ ಹಾಗೆ ಇವರೂ ಒಂದು ಕಲ್ಲು ಹಾಕಿ ಬಂದಿದ್ದಾರೆ. ಇರಲಿ. ಸಂತೋಷ. ಒಟ್ಟಿನಲ್ಲಿ ಇವತ್ತು ಇವರೆಲ್ಲರೂ ನವಾರಂಭಗಳಲ್ಲಿ ಮಗ್ನರಾಗಿದ್ದಾರೆಯೇ ಹೊರತು ಪ್ರಾಜೆಕ್ಟ್‌ಗಳಲ್ಲಿ ಅನೇಕ ಕೆಲಸಗಳು ಪ್ರಾರಂಭವಾಗಿದ್ದರೂ ನಿರುದ್ಯೋಗಿಗಳಿಗೆ ಎಷ್ಟೋ ಕೆಲಸಗಳನ್ನು ಕೊಡಬಹುದಾಗಿತ್ತು. ಆ ರೀತಿ ಮಾಡಲಲ್ಲ. ಇವತ್ತು ಲಕ್ಷಾಂತರ ಜನಗಳು ಕೆಲಸಕ್ಕಾಗಿ ಅಲೆಯುತ್ತಿದ್ದಾರೆ. ಹೇಮಾವತಿ ಪ್ರಾಜೆಕ್ಟ್ ಆಗಲೀ, ಕೃಷ್ಣಾ ಪ್ರಾಜೆಕ್ಟ್ ಆಗಲೀ ಅಲ್ಲಿ ಪ್ರಾರಂಭಮಾಡಬೇಕಾಗಿರುವ ಚಾನಲ್ಸ್ ಏನಿವೆಯೋ ಅವನ್ನು ಸರ್ವೇ ಮಾಡಿಸಿ ಆ ಕಾರ್ಯಗಳನ್ನು ಪ್ರಾರಂಭ ಮಾಡಿದರೆ ಲಕ್ಷಾಂತರ ಜನಗಳಿಗೆ ಕೆಲಸಗಳನ್ನು ಕೊಡಬಹುದು. ಈಗ ಆ ಕೆಲಸ ಮಾಡದೆ ಬರೀ ಆಸ್ತಿಭಾರ ಹಾಕಿದರೆ ಏನೂ ಪ್ರಯೋಜನವಾಗುವುದಿಲ್ಲ. ಇವೆರಡು ಪ್ರಾಜೆಕ್ಟುಗಳಿಗೂ ಕಾಲುವೆ ಕೆಲಸಗಳನ್ನು ಕೂಡಲೇ ತೆಗೆದುಕೊಳ್ಳಬೇಕು. ಏಕೆಂದರೆ ಈಗ ಚನ್ನರಾಯಪಟ್ಟಣ ಮತ್ತು ಕೃಷ್ಣರಾಜಪೇಟೆಗಳಲ್ಲಿ ಅನೇಕರಿಗೆ ಕೆಲಸವಿಲ್ಲ. ಕೂಲಿ ಎಷ್ಟು ಕೊಟ್ಟರೂ ಅಷ್ಟಕ್ಕೇ ಬರುತ್ತಾರೆ. ನಿಮ್ಮ ಕೆಲಸ ಸುಲಭವಾಗುತ್ತದೆ. ಅದೇ ರೀತಿಯಲ್ಲಿ ಕೃಷ್ಣಾ ಪ್ರಾಜೆಕ್ಟಿನ ಕಾಲುವೆಯನ್ನೂ ತೆಗೆಯಬಹುದು. ಹಿಂದೆ ಕ್ಷಾಮ ಬಂದಾಗ್ಗೆ ಅನೇಕ ದೊಡ್ಡ

ದೊಡ್ಡ ಕೆಲಸಗಳನ್ನು ರಿಯಾಯತಿ ದರದಲ್ಲಿ ಮಾಡಿದ್ದಾರೆ. ಚಿತ್ರದುರ್ಗ ಜಿಲ್ಲೆಯಿಂದ ರಾಯದುರ್ಗದವರೆಗೆ ರೈಲು ಮಾರ್ಗ ಮತ್ತು ಇನ್ನೂ ಅನೇಕ ಕೆಲಸಗಳು ಆಗಬೇಕಾಗಿವೆ. ಆದುದರಿಂದ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ಕೆಲಸಗಳನ್ನು ಕೂಡಲೇ ಪ್ರಾರಂಭ ಮಾಡಿದರೆ ಅನೇಕ ಜನಗಳಿಗೆ ಉದ್ಯೋಗ ಸಿಗುತ್ತದೆ. ಈ ಕೆಲಸವನ್ನು ಮಾಡತಕ್ಕ ಸಾಧನ ಒಂದು ಏಜೆನ್ಸಿ ಏನಿದೆ, ಅದು ಬಹಳ ಮುಖ್ಯವಾದುದು. ಈ ಕೆಲಸವನ್ನು ಭಾರತ ಸೇವಾ ಸಮಾಜ ಹಾಗೂ ತಾಲ್ಲೂಕು ಬೋರ್ಡುಗಳ ಮುಖಾಂತರ ಮಾಡಿಸುತ್ತೇವೆಂದು ಹೇಳಿದರು. ಆದು ಸರಿಯಲ್ಲ. ಏಕೆಂದರೆ ಭಾರತ ಸೇವಾ ಸಮಾಜದಲ್ಲಿ ಕಾಂಗ್ರೆಸ್ಸಿನವರೇ ಇದ್ದಾರೆ, ನಮ್ಮ ಮಾನ್ಯ ಶ್ರೀ ಕಂರಿಯವರೇ ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಅದರಲ್ಲಿ ಸೇಕಡ 90 ರಷ್ಟು ಕಾಂಗ್ರೆಸ್ಸಿನವರು ಇದ್ದಾರೆ. ಆದಕ್ಕಿಂತಲೂ ಹೆಚ್ಚಿಗೆ ತಾಲ್ಲೂಕು ಬೋರ್ಡುಗಳು ಏನಿವೆ ಅವಕ್ಕೆ ಖಂಡಿತವಾಗಿ ದಯವಿಟ್ಟು ಈ ಕೆಲಸಗಳನ್ನು ವಹಿಸಬಾರದು. ಏಕೆಂದರೆ ಈಗ ತಾಲ್ಲೂಕು ಬೋರ್ಡುಗಳ ಚುನಾವಣೆ ಆಗಬೇಕಾಗಿದೆ. ಅಲ್ಲಿ ಅನೇಕರಲ್ಲಿ ವೈಮನಸ್ಸು ಹೆಚ್ಚು ಹೆಚ್ಚಾಗಿ ಈಗಾಗಲೇ ಬೆಳೆಯುತ್ತಿದೆ. ಈಗ ಅಲ್ಲಿ ಆಗತಕ್ಕ ತಾಲ್ಲೂಕು ಬೋರ್ಡುಗಳ ಚುನಾವಣೆಗೋಸ್ಕರ ಇಂತಹ ಸಿದ್ಧತೆಯನ್ನು ಇವರು ಮಾಡಿಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಈ ತಾಲ್ಲೂಕು ಬೋರ್ಡುಗಳನ್ನು ರದ್ದು ಮಾಡಿ ಅಲ್ಲಿಗೆ ಒಬ್ಬ ಸ್ಪೆಷಲ್ ಅಡ್ಮಿನಿಸ್ಟ್ರೇಷನ್ ಆಫೀಸರನ್ನು ನೇಮಕ ಮಾಡಿ ಅವರ ಮುಖಾಂತರ ಈ ಕೆಲಸಗಳನ್ನು ಮಾಡಿಸಿದರೆ ಸ್ವಲ್ಪಮಟ್ಟಿಗೆ ಜನರಿಗೆ ಸೌಲಭ್ಯ ಸಿಗುತ್ತದೆ. ಒಂದೊಂದು ಹಳ್ಳಿಯಲ್ಲಿ ಒಂದೊಂದು ಕೆಲಸವಾದರೂ ಆಗುತ್ತದೆ. ಕೆರೆಯ ಹೂಳು ತೆಗೆಯುವ ಕೆಲಸ ಬಾವಿ ಕೆಲಸ ಮತ್ತು ರಸ್ತೆ ಕೆಲಸಗಳೂ ಸಹ ಆಗುತ್ತವೆ. ಒಂದು ಹಳ್ಳಿಗೆ ಒಂದು ಕೆಲಸ ಇರಬೇಕು. ಇಷ್ಟೊಂದು ಕೆಲಸಗಳನ್ನು ಈ ದೇಶದಲ್ಲಿ ನಿರ್ಮಾಣಮಾಡುವುದಾದರೆ ಪ್ರತಿಯೊಂದು ಹಳ್ಳಿಯಲ್ಲಿರತಕ್ಕ ಜನಗಳಿಗೆ ನೇರವಾಗಿ ಕೆಲಸ ಸಿಗುವುದಕ್ಕೆ ಸಾಧನೆಯಾಗುತ್ತದೆ. ಈಗಾಗಲೇ ಜನಗಳು ಅನ್ನವಿಲ್ಲದೆ ಸಾಯುತ್ತಿದ್ದಾರೆ. ಕೆಲವು ಪ್ರದೇಶಗಳಲ್ಲಿ ಗಂಜಿ ಕೇಂದ್ರಗಳನ್ನು ಶೀಘ್ರವಾಗಿ ತೆರೆಯುವ ಪ್ರಯತ್ನ ಮಾಡಬೇಕು. ಒಂದು ತಾಲ್ಲೂಕಿನಿಂದ ಒಂದು ಹೋಬಳಿಗೆ ಸುಮಾರು ಹತ್ತು ಹಳ್ಳಿಗಳಿಗೆ ಒಂದೊಂದು ಗಂಜಿ ಕೇಂದ್ರವನ್ನು ತೆರೆದರೆ ನಿರ್ಗತಿಕರಿಗೆ ಅನುಕೂಲವಾಗುತ್ತದೆ. ಇತ್ತೀಚೆಗೆ ಕುಡಿಯುವ ನೀರೇ ಸಿಗುತ್ತಿಲ್ಲ ಸೇದುವ ಬಾವಿಗಳಲ್ಲಿಯೂ ನೀರಿಲ್ಲ. ಒಣಗಿಹೋಗಿವೆ. ಈಗ ಭೂಮಿಯನ್ನು ಆಳ ಮಾಡುವ ಹೊಸ ಯಂತ್ರಗಳು ಬಂದಿವೆ. ಅವುಗಳನ್ನು ಉಪಯೋಗಿಸಿ ಒಂದು ದಿವಸಕ್ಕೆ ಒಂದು ಬಾವಿಯಂತೆ ತೆಗೆಯಬಹುದು. ಪ್ರತಿಯೊಂದು ತಾಲ್ಲೂಕಿಗೂ 2-3 ಯಂತ್ರಗಳನ್ನು ಕೊಟ್ಟರೆ ಬಹುಶಃ ಬಾವಿಗಳಿಂದ ನೀರನ್ನು ತೆಗೆಯುವ ಕೆಲಸಗಳನ್ನು ಮಾಡಬಹುದು. ಆಗ ಜನರು ಬದುಕುತ್ತಾರೆ. ಇಲ್ಲದಿದ್ದರೆ ನೀರು ಸಿಗುವುದೇ ಬಹಳ ಕಷ್ಟವಾಗುತ್ತದೆ. ದನಗಳಿಗೆ ಮೇವನ್ನು ಒದಗಿಸುವುದಕ್ಕೆ ಸರ್ಕಾರದವರೇ ನೇರವಾಗಿ ದನಗಳ ಮೇವನ್ನು ಸಾಗಾಣಿಕೆಮಾಡುವ ವ್ಯವಸ್ಥೆಯನ್ನು ತ್ವರಿತವಾಗಿ ಮಾಡಿ ಈ ಕ್ಷಾಮದ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಇದಕ್ಕೋಸ್ಕರ ನಾನು ಮೊದಲೇ ಸಲಹೆ ಮಾಡಿದ ರೀತಿಯಲ್ಲಿ ಈಗಿನ ಪರಿಸ್ಥಿತಿಯನ್ನು ನಿಜವಾಗಿ ತುರ್ತು ಪರಿಸ್ಥಿತಿಯೆಂದು ಪರಿಗಣಿಸಿ ಕೂಡಲೇ ಇಡೀ ದೇಶದ ಅರ್ಧಭಾಗವನ್ನು ಕ್ಷಾಮ ಪ್ರದೇಶವೆಂದು ಸಾರಿ ಎಲ್ಲಾ ತುರ್ತು ಕಾರ್ಯಗಳನ್ನು ಎಲ್ಲಾ ಕಡೆಗಳಲ್ಲಿಯೂ ಮಾಡಬೇಕು. ಬಹು ಮುಖ್ಯವಾಗಿ ಒಂದು ಫ್ಯಾಮಿನ್ ಕಮಿಷನ್ನನ್ನು ನೇಮಕಮಾಡಬೇಕು. ಇದರಲ್ಲಿ ರಾಜಕೀಯ ಪ್ರವೇಶ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ನಿಷ್ಪಕ್ಷಪಾತವಾಗಿ ಅವರು ತಮ್ಮ ಅಧಿಕಾರದ ಹುದ್ದೆಯಿಂದ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರದವರು ಕೂಡಲೇ ಫ್ಯಾಮಿನ್ ಕಮಿಷನ್ನನ್ನು ನಿರ್ಮಾಣಮಾಡಿ ಈ ಕೆಲಸವನ್ನು ಮಾಡುವುದು ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗಾವಿ (ಗೋಕಾಕ).—ಮಾನ್ಯ ಅಧ್ಯಕ್ಷರೇ, ಈ ಪ್ರಾಂತ್ಯದ ಉತ್ತರದ ಬೆಳಗಾಂ, ಬಿಜಾಪುರ ದಂಡೆಯಿಂದ ಹಿಡಿದು, ಬೆಂಗಳೂರು, ಕೋರಾರದವರೆಗೆ ಸುಮಾರು 16 ಜಿಲ್ಲೆಗಳಷ್ಟು ಭಾಗ ಅತ್ಯಂತ ದಾರುಣವಾದ ಬರಗಾಲಕ್ಕೆ ತುತ್ತಾಗಿದೆ. ಮೊದಲು ಮೇ ತಿಂಗಳಲ್ಲಿ ಅಲ್ಪಸ್ವಲ್ಪ ಮಳೆಯಾಗಿ ಬಿತ್ತನೆಯಾಗಿದೆ. ಆಮೇಲೆ ಮಳೆ ಏನೂ ಬರುತ್ತಲೇ ಇಲ್ಲ. ಈ ತಂಪು ಹವೆಯನ್ನು ನೋಡಿದರೆ ಮಳೆ ಬರುವ ಲಕ್ಷಣ ಕೂಡ ಕಾಣುತ್ತಾ ಇಲ್ಲ. ನಾವು ಅತ್ಯಂತ ಭೀಕರವಾದ ಬರಗಾಲವನ್ನು ಎದುರಿಸಬೇಕಾಗಿದೆ. ಎಲ್ಲ ನೋಡಿದರೂ ಹಾಹಾಕಾರ, ಜನರಿಗೆ ಕೆಲಸವಿಲ್ಲ, ತಿನ್ನಲು ಆಹಾರವಿಲ್ಲ, ಇಂಥ ಪರಿಸ್ಥಿತಿ ಉಂಟಾಗಿದೆ. ಬಡಬಗ್ಗರಿಗೆ ಅಂತೂ ಬಹಳ ಬಿಕ್ಕಟ್ಟಿನ ಪರಿಸ್ಥಿತಿಯಾಗಿದೆ. ಹಿಂದಿನ ಬರಗಾಲ ಬೇರೆ ರೀತಿಯಾಗಿತ್ತು. ಆದರೆ ಇಂದಿನ ದಿವಸ ಆ ಪರಿಸ್ಥಿತಿ ಇಲ್ಲ. ಊರುಗಳನ್ನು ಬಿಟ್ಟು ಹೋಗಲೂ ಕೂಡ ಅವಕಾಶವಿಲ್ಲದಾಗಿದೆ. ಇಂಥ ಪರಿಸ್ಥಿತಿಯಲ್ಲಿ ಜನರು ದಿವಸವನ್ನು ಕಳೆಯುವುದು ಹೇಗೆ ಎನ್ನುವ ಮಾತನ್ನು ನಾವು ಪೂರ್ತಿಯಾಗಿ ವಿಚಾರ ಮಾಡಬೇಕಾಗುತ್ತದೆ. ಬರಗಾಲವು ನಮ್ಮ ದೇಶಕ್ಕೆ ಹಿಂದಿನಿಂದಲೂ ಬಂದು, ಇದರ ಅನುಭವವನ್ನು

(ಶ್ರೀ ಎ. ಆರ್. ಪಂಚೆಗಾವಿ)

ನಾವು ಗುಣುಗುತ್ತಾ ಬಂದಿದ್ದೇವೆ. ಅದರಲ್ಲೂ ಅನೇಕ ಲಕ್ಷಾಂತರ ಜನರು ಜೀವವನ್ನು ಕಳೆದುಕೊಂಡ ಇತಿಹಾಸವನ್ನು ನೋಡಿದ್ದೇವೆ. ಮೊನ್ನೆ ಮೊನ್ನೆಯ 1943 ದುರಂತವನ್ನು ನೋಡಿದರೆ ನಮಗೆ ಇದರ ನೈಜ ಚಿತ್ರವು ಅರಿವಾಗುತ್ತದೆ. ಇಂಥ ಭೀಕರ ಪರಿಸ್ಥಿತಿ ನಮ್ಮ ಮುಂದೆ ಇರುವಾಗ ನಾವು ಇದರಿಂದ ಕಳೆದ 20 ವರ್ಷಗಳಿಂದ ಕಲಿತ ಪಾಠವೇನು, ಸ್ವಾತಂತ್ರ್ಯ ಸಿಕ್ಕಿದನಂತರ ನಾವು ಮಾಡಿದ್ದೇನು ಎನ್ನುವುದನ್ನು ಕೇಳುವಷ್ಟುಮಟ್ಟಿಗೆ ನಾವು ಬರುತ್ತಿದ್ದೇವೆ. ಈಗ ನೋಡಿದರೂ ಕೂಡ ಮತ್ತೂ ಅದೇ ಪರಿಸ್ಥಿತಿ ಬರುತ್ತದೆ. ದೇಶದ ಜನಸಂಖ್ಯೆಯು ದಿನೇ ದಿನೇ ಬೆಳೆಯುತ್ತಾ ಇದೆ. ಅದೇ ಪ್ರಮಾಣದಲ್ಲಿ ಆಹಾರಧಾನ್ಯ ಬೆಳೆಯುತ್ತಾ ಇಲ್ಲ. ಇಂದು ಕೆಲವು ಪತ್ರಿಕೆಗಳಲ್ಲಿ ಮತ್ತು ಕೆಲವು ವರದಿಗಳಲ್ಲಿ ಪರಿಸ್ಥಿತಿಯನ್ನು ನೋಡಿದರೆ ತಿಳಿಯುತ್ತದೆ. ನಮ್ಮ ದೇಶದಲ್ಲಿ ನ್ಯಾಶನಲ್ ಕಾನ್ಸಿರ್ವ್ಸ್ ಆಫ್ ಅಪ್ಲೈಡ್ ಇಕಾನಾಮಿಕ್ ರಿಸರ್ಚ್, ಅವರು ಮಾಡಿದ ಕೆಲವು ಸರ್ವೆಗಳಿಂದ ಈರೀತಿ ತಿಳಿಯುತ್ತದೆ. Ten million of the rural population earn on daily average 27 paise or an annual income of Rs. 90 only. ಸಾಧಾರಣ ದಿವಸಗಳಲ್ಲಿ ಕೇವಲ 25 ಪೈಸೆ ಸಿಕ್ಕುವಂತಹ ಜನ ನಮ್ಮ ದೇಶದಲ್ಲಿ ಒಂದು ಕೋಟಿ ಇದ್ದಾರೆ. ಇದಲ್ಲದೆ ಕಳೆದ ಮೂರನೆಯ ಪಂಚವಾರ್ಷಿಕ ಯೋಜನೆಗಳಿಂದ ದೇಶದ ಉತ್ಪನ್ನ ಏರುಪೇರಾಗುತ್ತಾ ಇದೆ. ಶ್ರೀಮಂತರು ಶ್ರೀಮಂತರಾಗುತ್ತಾ ಇದ್ದಾರೆ, ಬಡವರು ಅಧೋಗತಿಗೆ ಇಳಿಯುತ್ತಾ ಇದ್ದಾರೆ. The share of income in income of the top 5 per cent of the house-hold went up from 14 per cent in 1952-53 to 20.4 per cent in 1962 and that of the bottom 20 per cent declines from 7.5 per cent to 6.4 per cent. ಹೀಗಿದ್ದರೆ ಮೇಲಿನವರು ಮೇಲೆ ಹೋಗುತ್ತಾ ಇದ್ದಾರೆ, ಕೆಳಗಿನವರು, ಕೆಳಗಡೆ ಬರುತ್ತಾ ಇದ್ದಾರೆ. ಇಂಥ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಿದೆ. ಇದರಲ್ಲಿ ಆಹಾರಧಾನ್ಯದ ವಿಚಾರ ಕೂಡ ಇದೆ. 1961 ಪರ್ ಕ್ಯಾಪಿಟಾ 16.4 ಔನ್ಸು ಆಹಾರಧಾನ್ಯ ಸಿಗುತ್ತಿತ್ತು, ಈಗ 15.7 ಆಗಿದೆ. ಇದು ಇನ್ನೂ ಕೆಳಗಡೆ ಬರುತ್ತಾ ಇದೆ. ಲೆಕ್ಕ ನೋಡಿದರೆ, 250 ಮಿಲಿಯ ಜನರು ಹಿಂದೂಸ್ಥಾನದಲ್ಲಿ ಅಂಡರ್ ನ್ಯೂಶ್ಡ್ ಆಥವಾ ಮಾಲ್‌ನರಿಶ್ಡ್ ಆಗಿದ್ದಾರೆ. 25 ಕೋಟಿ ಜನರಿಗೆ ಸರಿಯಾದ ಊಟ ಸಿಗುತ್ತಾ ಇಲ್ಲ. ಇದರಿಂದ ನಮ್ಮ ಪರಿಸ್ಥಿತಿಯನ್ನು ಲೆಕ್ಕ ಹಾಕಬಹುದು. ಸಾಧಾರಣ ಒಬ್ಬ ಮನುಷ್ಯನಿಗೆ 23 ಕೆಲೊರಿ ಆಹಾರಧಾನ್ಯ ಕೊಟ್ಟರೆ, ಇನ್ನು 5 ಕೋಟಿ ಜನರಿಗೆ ಏನೂ ಸಿಗುತ್ತಾ ಇಲ್ಲ. ಇದನ್ನು ನಾವು ಪೂರ್ತಿಯಾಗಿ ವಿಚಾರ ಮಾಡಬೇಕು. ನಮ್ಮ ಗುರಿ ಏನೆಂಬುದನ್ನು ತಿಳಿದುಕೊಂಡರೆ ದೇಶವು ಬರಗಾಲವನ್ನು ತಡೆಯಬಹುದು. ನಮ್ಮ ಮೈಸೂರು ರಾಜ್ಯದ ಪರಿಸ್ಥಿತಿಯನ್ನು ನೋಡಿದರೆ, ಅದು ಇನ್ನಷ್ಟು ಬಿಕ್ಕಟ್ಟಾಗಿದೆ. ನಾವು ಕೆಲವು ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ. ಆದರೂ ಕೂಡ ಅದರ ಪ್ರತಿಫಲ ಸಾಕಷ್ಟು ಬರುತ್ತಾ ಇಲ್ಲ. ದುರ್ದೈವದಿಂದ ನಾವು ಹೊರಗಿನಿಂದ ಗೊಬ್ಬರ ಮುಂತಾದುವುಗಳನ್ನು ತರಿಸಿ ಹಂಚುವಾಗಲೂ ಅಲ್ಲಿಯು ಅನೇಕ ತರದ ದುರ್ವ್ಯವಹಾರಗಳು ನಡೆಯುತ್ತಿದೆ. ಸರಿಯಾದ ರೀತಿಯಲ್ಲಿ ರೈತನಿಗೆ ಗೊಬ್ಬರವು ಸಿಗುತ್ತಾ ಇಲ್ಲ. ಅದೇ ರೀತಿ ಸಾಲ ಹಂಚಿಕೆಯಲ್ಲೂ ಬೇಕಾದಷ್ಟು ಅವ್ಯವಹಾರಗಳು ನಡೆಯುತ್ತಿವೆ. ಈ ತರದ ಪರಿಸ್ಥಿತಿ ದೇಶದಲ್ಲಿ ಉಂಟಾಗಬೇಕಾದರೆ, ಇಂಥ ಅಪರಾಧಿಗಳನ್ನು ದಂಡಿಸುವವರೇ ಇಲ್ಲವೇ ಎನ್ನುವ ಮಾತನ್ನು ಕೇಳಬೇಕಾಗಿದೆ. ಇಂದು ಕೋ-ಆಪರೇಟಿವ್ ಸೊಸೈಟಿ, ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಬೇಕಾದಷ್ಟು ಅವ್ಯವಹಾರಗಳು ನಡೆಯುತ್ತಾ ಇವೆ. ರೈತನು ಕಷ್ಟದಂತಹ ಇಂಥ ಸಂಸ್ಥೆಗಳಲ್ಲಿ ಕೆಲವು ಹೆಗ್ಗಣಗಳು ಸೇರಿಕೊಂಡು ಇಂಥ ದಾರುಣವಾದ ಪರಿಸ್ಥಿತಿಯನ್ನು ಉಂಟುಮಾಡಿವೆ. ಪ್ರತ್ಯಕ್ಷವಾಗಿ ಉದಾಹರಣೆಗೆ ಹೇಳಬೇಕಾದರೆ, ಗೋಕಾಕ್ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಅಲ್ಲಿ ಅನೇಕ ರೀತಿಯ ಆರೋಪಗಳು ಬಂದಿವೆ. ಆದರೂ ಅದನ್ನು ಯಾವುದೇ ರೀತಿಯಲ್ಲಿ ನಿರಿಪಡಿಸಲಿಲ್ಲ. ಅಲ್ಲಿಯು ಪರಿಸ್ಥಿತಿ ಎಲ್ಲಾ ಕೆಟ್ಟು ಹೋಗಿದೆ. ಅದೇ ರೀತಿಯಲ್ಲಿ ಇನ್ನೂ ಅನೇಕ ಕಡೆ ಇದೇ ರೀತಿಯ ಅವ್ಯವಹಾರಗಳು ನಡೆದು ನಮ್ಮ ಆಹಾರ ಧಾನ್ಯವನ್ನು ಬೆಳೆಯುವುದಕ್ಕೇ ಬಹಳ ತೊಂದರೆಯಾಗಿದೆಂಬುದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು. ಇನ್ನು ಬೇರೆ ಯಾವ ರೀತಿಯ ಕಷ್ಟ ನಷ್ಟಗಳನ್ನು ನಾವು ಎದುರಿಸಬೇಕಾದ ಪರಿಸ್ಥಿತಿ ಬಂದರೂ ಕೂಡ ಈಗ ಮಾನ್ಯ ಶಿವಪ್ಪನವರು ಹೇಳಿದಂತೆ, ಯಾರು ಕೆಲಸಗಳನ್ನು ಮಾಡಬೇಕೆಂಬುದನ್ನು ಸ್ಪಷ್ಟಪಡಿಸಬೇಕು. ಕೆಲವು ಕೆಲಸಗಳನ್ನು ಪಿ.ಡಬ್ಲ್ಯು.ಡಿ.ಯವರು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಪಿ.ಡಬ್ಲ್ಯು.ಡಿ.ಯನ್ನು ಅವಲಂಬಿಸಿ ಕೂತರೆ, ಅನೇಕ ಕಡೆ ಇವರು ಕೂಡ ಸರಿಯಾದ ಕೆಲಸ ಮಾಡುತ್ತಾ ಇಲ್ಲ. ಅವರಲ್ಲಿ ಸ್ಟಾಫ್ ಕೂಡ ಇಡೀ ಕೆಲಸವನ್ನು ತೆಗೆದುಕೊಳ್ಳವಷ್ಟು ಇಲ್ಲ. ಇನ್ನು ತಾಲ್ಲೂಕುಗಳಲ್ಲಿ 5-6 ಕೆಲಸಗಳನ್ನು ತೆಗೆದುಕೊಳ್ಳಬಹುದು. ಎರಡನೆಯದು, ಈ ಟಿ.ಡಿ.ಬಿ. ವಿಚಾರ. ಇಂದು ಅನೇಕ ಬೋರ್ಡ್‌ಗಳು ಸರಿಯಾದ

ವ್ಯವಸ್ಥೆಯಲ್ಲಿಲ್ಲ. ಅವು ಕೆಲಸ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಅಲ್ಲಿ ಎಕ್ಸಿಕ್ಯೂಟಿವ್ ಆಫೀಸರ್ ಬಿ.ಡಿ.ಓ. ಇರುವವರು ಅಸಮರ್ಥರು, ಅನುಭವವಿಲ್ಲದವರು, ಮತ್ತು ಅವ್ಯವಹಾರ ಜನರಾಗಿರುತ್ತಾರೆ ಅವರು ಸ್ಪಷ್ಟವಾಗಿ ಹೇಳುತ್ತಾರೆ 'ನಾವು ಈ ಕೆಲಸ ತೆಗೆದುಕೊಳ್ಳುವುದಿಲ್ಲ, ನೀವು ಬೇಕಾದರೆ ಮಾಡಿಕೊಳ್ಳಿ ಎಂದು. ಅನೇಕ ತಾಲ್ಲೂಕುಗಳಲ್ಲಿ ಈ ಪರಿಸ್ಥಿತಿ ಇದೆ. ಇನ್ನು ಇದನ್ನು ಮಾಡುವವರು ಯಾರು ? ಜನರ ಹೊಟ್ಟೆಗೆ ಹಾಕುವವರು ಯಾರು ? ಅಂಥ ಇನ್‌ಎಫಿಷಿಯಂಟ್ ಜನರು ಅಲ್ಲಿದ್ದರೆ, ಅಂಥವರನ್ನು ಕಿತ್ತೊಗೆದು, ಬೇರೆ ಕೆಲಸಕ್ಕೆ ಹಾಕಬೇಕು. ಮತ್ತು ಅಲ್ಲಿ ಅತ್ಯಂತ ಸಮರ್ಥರಾದಂತಹ, ಒಳ್ಳೆಯ ಅಧಿಕಾರಿಗಳನ್ನು ಬರಗಾಲಪೀಡಿತ ಭಾಗದಲ್ಲಿ ನೇಮಿಸುವುದು ಅತ್ಯಾವಶ್ಯಕವೆಂದು ಹೇಳಬೇಕಾಗಿದೆ. ಈ ತರದ ಪರಿಸ್ಥಿತಿಯನ್ನು ಅನೇಕ ಸಲ ಮಾನ್ಯ ಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಗೋಕಾಕದ ಪರಿಸ್ಥಿತಿ ಬಹಳ ದಾರುಣವಾದ ಪರಿಸ್ಥಿತಿಯಾಗಿದೆ. ಅಲ್ಲಿ ಅನೇಕ ಕೆಲಸಗಳನ್ನು ಈಗಾಗಲೇ ತೆಗೆದುಕೊಂಡರೂ, ಇನ್ನೂ ಹೆಚ್ಚಾಗಿ ತೆಗೆದುಕೊಳ್ಳಬೇಕಾಗಿದೆ.

ಟಿ.ಡಿ.ಬಿ. ಅಷ್ಟು ಸಮರ್ಥವಾದ ಬಾಡಿ ಆದರೂ ಕೂಡ ಅದರ ಕಾರ್ಯಕರಾಪಗಳನ್ನು ನಿರ್ವಹಿಸುವ ಸಮರ್ಥರು ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಈವೊತ್ತಿನ ದಿವಸ ಟಿ.ಡಿ.ಬಿ. ಮತ್ತು ಪಿ.ಡಬ್ಲ್ಯು.ಡಿ. ಬಿಟ್ಟರೆ ಕೆಲಸವನ್ನು ನೀಗುವಂಥ ಸಂಸ್ಥೆ ಇನ್ನೊಂದಿಲ್ಲ. ಈ ರೀತಿಯಾಗಿರುವುದರಿಂದ ನಾವು ಬಹಳ ಕಷ್ಟದ ಪರಿಸ್ಥಿತಿಯನ್ನು ದೇಶದಲ್ಲಿ ಎದುರಿಸಬೇಕಾಗಿದೆ. ಮುಖ್ಯವಾಗಿ ಕಾಮಗಾರಿ ವಿಷಯವಾಗಿ ಎಲ್ಲರೂ ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದಾರೆ. ಘಟಪ್ರಭಾ ಬಲದಂಡೆ ಧಾನರ್ ಕೆಲಸವನ್ನು ತೆಗೆದುಕೊಂಡರೆ ಲಕ್ಷಾಂತರ ಜನಕ್ಕೆ ಕೆಲಸವನ್ನು ಒದಗಿಸಬಹುದು. ಈ ಮಾತನ್ನು ಅನೇಕ ವರ್ಷಗಳಿಂದ ಹೇಳುತ್ತಿದ್ದೇನೆ. ಹಿಡಕಲ್ ಡ್ಯಾಮ್ ಒಂದು ಮಟ್ಟಕ್ಕೆ ಬರುತ್ತಿದೆ. ಡ್ಯಾಂ ನೆಲವನ್ನು ಬಿಟ್ಟು ಮೇಲಕ್ಕೆ ಏರುತ್ತಿದೆ. ಆ ಡ್ಯಾಂ 1971ನೇ ಇಸವಿಯೊಳಗೆ ಪೂರ್ತಿ ಆಗಬಹುದು. ಅಷ್ಟರೊಳಗೆ ಬಲದಂಡೆ ಗುಡ್ಡದಲ್ಲಿ ಟನರ್ ಹೊಡೆಯಬಹುದು. ಅದು ಒಂದೆರಡು ವರ್ಷದಲ್ಲಿ ಮುಗಿಯುವಂಥ ಕೆಲಸವಲ್ಲ.

Sri K. H. PATIL.—The Hon'ble Chief Minister was so much enthusiastic to say that it is a very important matter. Though so many Ministers are there, unfortunately, none of the Cabinet Ministers is taking interest to take notes of what we say. Please get them physically present here.

ಶ್ರೀ ಎ. ಆರ್. ಪಂಚಗಾವಿ.—ಆ ಕೆಲಸವನ್ನು ಈಗಿನಿಂದಲೇ ಪ್ರಾರಂಭ ಮಾಡಿದರೆ ಕೆಲವು ಭಾಗಕ್ಕಾದರೂ ನೀರು ಕೊಡಲು ಸಹಾಯಕವಾಗುತ್ತದೆ. ಇದರಿಂದ ಸ್ವಲ್ಪಮಟ್ಟಿಗೆ ಬರಗಾಲದ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕಳೆದ ವರ್ಷ ಬರಗಾಲದ ಪರಿಸ್ಥಿತಿಯನ್ನು ಎದುರಿಸಬೇಕಾದಾಗ, ಈಗಿನ ಕಾಂಗ್ರೆಸ್ ಅಧ್ಯಕ್ಷರು ಮತ್ತು ಹಿಂದಿನ ಮುಖ್ಯಮಂತ್ರಿಗಳು ಆದ ಶ್ರೀಮಾನ್ ನಿಜಲಿಂಗಪ್ಪನವರ ಕಡೆಗೆ ಮತ್ತು ಆಗಿನ ಪಿ.ಡಬ್ಲ್ಯು.ಡಿ. ಮತ್ತು ಈಗಿನ ಮುಖ್ಯ ಮಂತ್ರಿಗಳಾಗಿರುವ ಶ್ರೀಮಾನ್ ವೀರೇಂದ್ರ ಪಾಟೀಲರಲ್ಲಿ ಗೋಕಾಕ್ ಮಿಲ್ಸ್‌ಗೆ ಕೊಡುವ ನೀರನ್ನು ನಿಲ್ಲಿಸಿ, ಅವರಿಗೆ ಶರಾವತಿ ಪವರ್ ಕೊಟ್ಟು, ನಮ್ಮ ಭಾಗದ ಜನಗಳಿಗೆ ಆ ನೀರನ್ನು ನೀರಾವರಿಗೆ ಕೊಟ್ಟರೆ ಉಪಕಾರವಾಗುತ್ತದೆ ಎಂದು ಕೇಳಿಕೊಂಡಿದ್ದಕ್ಕೆ ಆ ಪ್ರಕಾರ ಕೊಟ್ಟರು. ಅದರಂತೆ ನಮ್ಮ ಕಡೆ 17 ಸಾವಿರ ಎಕರೆಯಲ್ಲಿ 8 ಸಾವಿರ ಎಕರೆ ನೀರಾವರಿ ಮಾಡರಾಗಿದೆ. ಅದರಲ್ಲಿ ಗೋಧಿ, ಕಡಲೆ ಮತ್ತು ಇತರ ಆಹಾರಧಾನ್ಯಗಳನ್ನು ಬೆಳೆದವು. ಈ ವರ್ಷವೂ ಆ ತರಹ ಪರಿಸ್ಥಿತಿ ಬರಬಹುದು. ಅದರಿಂದಾಗಿ ಮುಂದೆಯೂ ಗೋಕಾಕ್‌ನಲ್ಲರುವ ಮಿಲ್ಲಿಗೆ ಕುಡಿಯಲಿಕ್ಕೆ ಮಾತ್ರ ನೀರು ಮತ್ತು ಶರಾವತಿಯಿಂದ ಪವರ್ ಕೊಟ್ಟರೆ, ಅದರಿಂದ ಅನುಕೂಲವಾಗುತ್ತದೆ. ಕುಡಿಯಲಿಕ್ಕೆ ನೀರು ಎಷ್ಟು ಅವಶ್ಯಕವೋ ಅಷ್ಟನ್ನು ಕೊಟ್ಟು ಉಳಿದ ಪ್ರತಿಯೊಂದು ಹನಿಯನ್ನೂ ಇರ್ರಿಗೇಷನ್‌ಗೆ ಕೊಡುವುದು ಅತ್ಯಂತ ಅವಶ್ಯ ಎಂದು ಹೇಳುತ್ತೇನೆ.

ಇನ್ನು ಸ್ಕೇರ್ಸಿಟಿ ಏರಿಯಾದಲ್ಲಿ ದಿನಗಳು ಕೆಲವುಮಟ್ಟಿಗೆ ತುಂಬಿ ಹರಿಯುತ್ತಾ ಇದೆ. ಅಂತಹ ಕಡೆ ಎಲೆಕ್ಟ್ರಿಕ್ ಪಂಪ್‌ಸೆಟ್ ಕೊಡಬೇಕು, ಯಾವ ಏರಿಯಾದಲ್ಲಿ ನೀರು ಇದೆ, ಅಂತಹ ಭಾಗಕ್ಕೆ ಪ್ರಿಯಾರಿಟಿ ಕೊಡಬೇಕು. ಯಾವ ಹಳ್ಳಿಗಳಲ್ಲಿ ನೀರು ಇರಲಿ, ಹೊಳೆಗಳಲ್ಲಿ ನೀರು ಇರಲಿ ಅಂತಹ ಕಡೆ ಮೊದಲು ಪ್ರಿಯಾರಿಟಿ ಕೊಡಬೇಕು. ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಈ ತರಹ ಮಾಡುವಂತೆ ಅವರಿಗೆ ಒತ್ತಾಯಪಡಿಸಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ.

(ಶ್ರೀ ಎ. ಆರ್. ಪಂಚೆಗಾವಿ)

ಅದಲ್ಲದೆ ಸರ್ಕಾರದವರು ಬಾವಿಗಳನ್ನು ತೆಗೆಯುವುದಕ್ಕೆ ಸಾಲವನ್ನು ಕೊಡಲಿಕ್ಕೆ ರ್ಯಾಂಡ್ ಮಾರ್ಟ್‌ಗೇಜಿನವರಿಗೆ ಒಪ್ಪಿಸಿದ್ದಾರೆ. ಅಂತಹ ಕೆಲಸ ಸಾಕಷ್ಟು ಉತ್ತಮ ರೀತಿಯಿಂದ ನಡೆಯುತ್ತಿದೆ. ಅದನ್ನು ಇನ್ನೂ ಹೆಚ್ಚಾಗಿ ಬೆಳೆಸಲಿಕ್ಕೆ ಹೋಗಬೇಕು. ಮಾನ್ಯರಾಚಯ್ಯನವರು ಕಂದಾಯ ಮಂತ್ರಿಗಳಾಗಿದ್ದಾಗ್ಗೆ ಸಾಮೂಹಿಕ ಬಾವಿಗಳನ್ನು ಸರ್ಕಾರದ ಖರ್ಚಿನಿಂದಲೇ ತೆಗೆಸಿ ಜನಗಳಿಗೆ ನೀರನ್ನು ಒದಗಿಸುವ ಯೋಜನೆ ಮಾಡಬೇಕು ಎಂದು ಈ ಸಭೆಯಲ್ಲಿ ಜಾಹೀರುಪಡಿಸಿದ್ದರು. ಆ ಬಗ್ಗೆ ಇನ್ನೂ ಏನೂ ಕಾರ್ಯಕ್ರಮ ನಡೆದಿಲ್ಲ. ಅಂತಹ ಸಿನ್ಸ್ಚಂನ್ನು ಜಾರಿಗೆ ತಂದು ಸಾಮೂಹಿಕ ಬಾವಿಗಳನ್ನು ತೆಗೆಸಿ ಬಡಬಗ್ಗರಿಗೆ, ಸಣ್ಣ ಸಣ್ಣ ಜಮೀನುದಾರರಿಗೆ ಈ ತರಹ ನೀರಾವರಿ ಸೌಲಭ್ಯವನ್ನು ಒದಗಿಸಬೇಕು.

ಇನ್ನು ಬಂಡಿಂಗ್ ಅಥವಾ ಒಡ್ಡು ಹಾಕುವ ಯೋಜನೆ. ಇವನ್ನು ದೊಡ್ಡ ಪ್ರಮಾಣದಲ್ಲಿ ಮಾಡಿದರೆ ಸಾಕಷ್ಟು ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡಬಹುದು. ಬಂಡಿಂಗ್ ಹಾಕುವುದರಿಂದ ಭೂಮಿಯಲ್ಲಿ ಬಿದ್ದಂಥ ಮಳೆ ನೀರು ಹರಿದುಹೋಗುವುದಿಲ್ಲ. ಇದರಿಂದ ಉತ್ತಮವಾದ ಮಣ್ಣು ಜಮೀನಿನಲ್ಲಿ ಹರಿದು ಹೋಗದಂತಾಗುತ್ತದೆ. ಈ ಒಂದು ಬಂಡಿಂಗ್ ಕೆಲಸವನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು.

ಇನ್ನು ಕೆರೆಗಳ ಬಗ್ಗೆ ಹೇಳುವುದಾದರೆ 2 ಪರ್ಸೆಂಟೂ ಕೂಡ ಸರಿಯಾದ ರಿಪೇರಿ ಇಲ್ಲ ಒಂದು ಲಕ್ಷಕ್ಕಿಂತ ಹೆಚ್ಚು ಬೇಕಾದರೆ ಚೀಫ್ ಇಂಜನಿಯರ್ ಹತ್ತಿರ ಹೋಗಬೇಕು, ಒಂದು ಕೆರೆ ಮಂಜೂರು ಮಾಡಿದರೆ ಕೆಲಸ ಪೂರೈಸಲು 3-4 ವರ್ಷ ತೆಗೆದುಕೊಳ್ಳುತ್ತಾರೆ. ಪರ್ಕೋರೇಷನ್ ಟ್ಯಾಂಕ್ಸ್ ತೆಗೆದುಕೊಳ್ಳಬೇಕಾದರೆ ಸರ್ಕಾರದ ಥೋರಣೆ ಹಾಗಿಲ್ಲ ಎಂದು ಉತ್ತರ ಕೊಡುತ್ತಾರೆ. ಅನೇಕ ಕೊಕ್ಕೆಗಳನ್ನು ಹಾಕಿ ಯಾವ ಕೆರೆಯೂ ಆಗದಂತೆ ಮಾಡುವುದು ಇಂಜಿನೀಯರರ ಸ್ವಾಭಾವಿಕವಾಗಿದೆ. ಪರ್ಕೊರೇಷನ್ ಟ್ಯಾಂಕ್ ಆಗಬೇಕು, ಏಕೆಂದರೆ ಅದರ ಕೆಳಗಿರುವ ಬಾವಿಗಳಿಗೆ ಸಾಕಷ್ಟು ನೀರು ಒದಗಿ, ಅದರಿಂದ ಅತ್ಯಂತ ಉಪಯುಕ್ತವಾದ ಕೆಲಸವಾಗುತ್ತದೆ ಮತ್ತು ಬಹಳ ಜನಕ್ಕೆ ಕೆಲಸ ಒದಗಿಸಿದಂತಾಗುತ್ತದೆ. ಪರ್ಕೋರೇಷನ್-ಕಂ-ಇರಿಗೇಷನ್ ಟ್ಯಾಂಕ್ಸ್‌ನಂತಹ ಉಪಯುಕ್ತವಾದ ಕ್ರಮವನ್ನು ಕೈಗೊಳ್ಳಬೇಕು. ಸರ್ಕಾರದವರು ಹಳ್ಳಿಗಳಿಗಾಗಲೆ, ಹೊಳೆಗಳಿಗಾಗಲು ಬ್ರಿಡ್ಜನ್ನು ಕಟ್ಟಿಸುತ್ತಾರೆ. ಬ್ರಿಡ್ಜ್ ಕಂ ಪಿಕಪ್‌ನಿಂದ ಬೇಸಿಗೆಯಲ್ಲಿ ನೀರು ಹಿಡಿದು, ಅದನ್ನು ಡೈವರ್ಟ್ ಮಾಡಿ ನೀರಾವರಿಗೆ ಉಪಯೋಗವಾಗುವಂತೆ ಒಂದು ಯೋಜನೆ ಮಾಡಬೇಕು. ದುಡ್ಡು ಖರ್ಚು ಮಾಡಿ ಬ್ರಿಡ್ಜ್ ಕಟ್ಟಿಸುತ್ತಾರೆ ಇದರ ಜೊತೆಗೆ ನೀರಾವರಿ ಅಭಿವೃದ್ಧಿಯನ್ನೂ ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಬೋರಿಂಗ್ ಮೆಷಿನ್ ವಿಷಯ. ಇದರ ಬಗ್ಗೆ ಅನೇಕ ಸಲ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಬೋರಿಂಗ್ ಮಿಷನ್ ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ಇಲ್ಲ. ಸರ್ಕಾರದವರು ಸಾಕಷ್ಟು ಬೋರಿಂಗ್ ಮಿಷನ್ ತರಿಸಿ ಎಲ್ಲಾ ಕಡೆಯೂ ಒದಗಿಸಿ ಬಾವಿಗಳನ್ನು ಆಳವಾಗಿ ಮಾಡಬೇಕು. ಬ್ಲಾಸ್ಟಿಂಗ್ ಮಿಷನ್‌ಗಳನ್ನು ತರಿಸಿದ್ದಾರೆ. ಇದು ರಾಕ್ ಇದ್ದಲ್ಲಿ ಬಾವಿಗಳನ್ನು ಬಹಳ ಆಳವಾಗಿ ಮಾಡಲು ಉಪಯೋಗಕ್ಕೆ ಬರುತ್ತದೆ. ಇದರಿಂದ ಹೆಚ್ಚು ಪ್ರಯೋಜನವಾಗುತ್ತದೆ. ಇವುಗಳನ್ನು ಸರ್ಕಾರದವರು ರೈತನಿಗೆ ಒದಗಿಸಿ ಹೆಚ್ಚು ಉಪಯೋಗವಾಗುವ ಹಾಗೆ ಕೆಲಸ ಮಾಡಬೇಕು.

ಅನೇಕ ಕಡೆ ರೈತನಿಗೆ ಸಾಲ ಸರಿಯಾಗಿ ಕೊಡುತ್ತಾ ಇಲ್ಲ. ಅನೇಕ ತೊಂದರೆಗಳು ಬರುತ್ತವೆ. ವತನುವಾರ ಜಮೀನುಗಳ ಮೇಲೆ ಸಾಲ ಕೊಡುವುದಕ್ಕೆ ತೊಂದರೆಯಾಗಿದೆ. ಬರಗಾಲ ಪ್ರದೇಶದಲ್ಲಿ ಯಾವ ರೀತಿ ರೈತಾಪಿ ಜಮೀನಿಗೆ ಭೂಸುಧಾರಣೆ ಅಭಿವೃದ್ಧಿಗಾಗಿ ಮತ್ತು ಬಾವಿಗಳನ್ನು ತೆಗೆಯುವುದಕ್ಕೆ ಸರ್ಕಾರದವರು ಸಾಲ ಕೊಡುತ್ತಾರೋ, ಅದರಂತೆ, ಈ ಜಮೀನಿಗೂ ಸಾಲ ಕೊಡುವಂತೆ ಮಾಡಿಕೊಡಬೇಕು. ಇದಕ್ಕೆ ಯಾವ ತರಹ ತೊಂದರೆಯೂ ಇರಬಾರದು.

ಇನ್ನು ಅಭಾವದ ಪ್ರದೇಶದಲ್ಲಿ ಗಂಜಿ ಕೇಂದ್ರಗಳನ್ನು ತೆಗೆಯಬೇಕು ಎಂದು ಹೇಳಿದ್ದಾರೆ. ಹಿಂದೆ ಡೋರ್ಸ್ ಕೊಡುವ ಪದ್ಧತಿ ಇತ್ತು. ಎಲ್ಲಿ ಅನಾಥರು, ನಿರ್ಗತಿಕರು ಇದ್ದಾರೆ ಅಲ್ಲಿ ಗಂಜಿ ಕೇಂದ್ರಗಳನ್ನು ತೆಗೆಯಬೇಕು. ಈ ತುಟ್ಟಿಕಾಲದಲ್ಲಿ ಯಾರೂ ಊಟ ಹಾಕುವುದಿಲ್ಲ. ದಾನಧರ್ಮ ಕೊಡುವುದಿಲ್ಲ. ಇದ್ದಲ್ಲೇ ಬಿದ್ದು ಸಾಯುವುದು ನಿಶ್ಚಯ. ಒಬ್ಬರು ಉಪವಾಸದಿಂದ ಸತ್ತರೆ ಇಡೀ ದೇಶದಲ್ಲಿ ಕೋರಾಕಾಲ ಏಳುತ್ತದೆ. ಅದಕ್ಕಾಗಿ ಸರ್ಕಾರ ಈಗಿನಿಂದಲೇ ಅಂತಹ ಜನರ ಯೋಗಕ್ಷೇಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಮುಂಬಯಿ ಕರ್ನಾಟಕದಲ್ಲಿ ಬರಗಾಲದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವಾಗ, ಸರ್ಕಾರದವರು ಕೂಲಿಗಾರರಿಗೆ ಕೊಡತಕ್ಕ ಸಂಬಳದಲ್ಲಿ ½ ಅಂಶವನ್ನು ಕಟ್ ಮಾಡಿಕೊಡುವ ದುರ್ವ್ಯಾಪಾರದ ಪದ್ಧತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇದನ್ನು ಅನೇಕ ಸಲ ಕಂದಾಯ ಮಂತ್ರಿಗಳ ಲಕ್ಷ್ಯಕ್ಕೆ ತಂದಿದ್ದೇನೆ. ಈ ಬಗ್ಗೆ ಪತ್ರವನ್ನೂ ಬರೆದಿದ್ದೇನೆ. ಇನ್ನು ಯಾವ ತರಹ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಕೆಲಸ ಮಾಡಿದಾಗ ಒಂದು ಕ್ಯೂಬಿಕ್ ಮಾಟರಿಗೆ ರೂ. 1-31 ಪೈಸೆಯಷ್ಟು ಕೊಡಬೇಕು ಎಂದು ಹುಕುಂ ಹೊರಡಿಸಿದ್ದಾರೆ. ಇಂಜನೀಯರ್ಸ್, ಆಫೀಸರ್ಸ್ ರೆಕ್ಕ ಮಾಡುವಾಗ ಮಾಮೂಲು ಇದ್ದಲ್ಲಿ, ಹಾರ್ಡ್‌ರಾಕ್ ಇದ್ದಲ್ಲಿ ಕಟ್ ಮಾಡುತ್ತಾರೆ. ಸರ್ಕಾರ ಹಾಗೆ ಹುಕುಂ ಮಾಡಿಲ್ಲ. ಇದನ್ನು ನರಿಯಾಗಿ ಕುರಾಸೆ ಮಾಡಬೇಕು ಎಂದರೆ, ಸರ್ಕಾರದವರು ಸೆಕ್ರೆಟರಿಯನ್ನು ಕೇಳುತ್ತಾರೆ, ಸೆಕ್ರೆಟರಿ ಡೆಪ್ಯೂಟಿ ಕಮೀಷನರ ರಿಪೋರ್ಟನ್ನು ಕೇಳುತ್ತಾನೆ. ಆ ರಿಪೋರ್ಟ್ ಬರುವುದರೊಳಗೆ ಬಡವನ ಜೀವ ಹೋಗುವ ಪರಿಸ್ಥಿತಿ ಬರುತ್ತದೆ. ಈಗಿನ ಕಾಲದಲ್ಲಿ ಸಂಬಳದಲ್ಲಿ ಕಟ್ ಮಾಡುವುದನ್ನು ಬಿಟ್ಟು ಇನ್ನೂ ಹೆಚ್ಚು ಕೊಡಬೇಕು. ಮೊದಲೇ ತುಟ್ಟಿ. ಇದ್ದುದನ್ನೂ ಕಳೆದುಕೊಂಡರೆ ಮಕ್ಕಳಿಗೆ ಒಂದು ತುತ್ತು ಕೂಳೂ ನಿಕ್ಕುವುದಿಲ್ಲ. ಈ ಪರಿಸ್ಥಿತಿಯುಲ್ಲಿರುವಾಗ ಎರಡನೆಯ ಉತ್ಪನ್ನದ ಭಾಗಗಳು ಕಟ್ ಆಗಿರುವಾಗ ಈ ತರಹ ಪೂರ್ತ ಪಗಾರು ಕೊಡುವುದಲ್ಲದೆ, ಹೆಚ್ಚಿಗೆ ಸಂಬಳ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಹಳ್ಳದಲ್ಲಿ ಬಿತ್ತಮೇರೆ ಕಲ್ಲು ಹೇರುವ ಪರಿಸ್ಥಿತಿ ಆಗಬಾರದು ಎಂದು ನಾನು ಹೇಳಬಯಸುತ್ತೇನೆ. ಈಗ ಇವರ ಬಗ್ಗೆ ತಾವು ಏರ್ಪಾ ರೀತಿಯ ಕ್ರಮವನ್ನೂ ಕೈಗೊಳ್ಳಬೇಕು. ಬಡವರು ಆದಷ್ಟು ಬರಗಾಲದಿಂದ ಪಾರಾಗಲಿಕ್ಕೆ ಶಕ್ತಿ ಬರುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ರಾಜ್ಯದಲ್ಲಿ ಉದ್ಭವಿಸಿರುವಂತಹ ಕಠಿಣ ಪರಿಸ್ಥಿತಿಯನ್ನು ಬರಗಾಲ ಪರಿಸ್ಥಿತಿಯನ್ನು ನಾವು ಇವೊತ್ತು ಇಲ್ಲಿ ಚರ್ಚಿಸುತ್ತಿದ್ದೇವೆ. ಇದಕ್ಕೆ ಕಾರಣವೇನೆಂದರೆ ಈಗ ಸುಮಾರು 20 ವರ್ಷಗಳಿಂದಲೂ ಸತತವಾಗಿ ಈ ದೇಶದಲ್ಲಿ ಕಾಂಗ್ರೆಸ್ಸಿನವರ ರಾಜ್ಯಭಾರ ನಡೆಯುತ್ತಿರುವುದೇ ಮುಖ್ಯ ಕಾರಣ. ಕಾಂಗ್ರೆಸ್ಸಿನವರ ಆಡಳಿತದಿಂದ ಮಳೆಯೂ ಕೂಡ ಮುನಿಸುಕೊಂಡಿದೆ. ಕಾಂಗ್ರೆಸ್ ಸರ್ಕಾರದವರು ತುಂಗಭದ್ರಾ ಪ್ರಾಜೆಕ್ಟನ್ನು ಕಟ್ಟುತ್ತೇವೆಂದು ಕಟ್ಟಿದರು. ಆ ಪ್ರದೇಶದಲ್ಲಿ ಆ ಪ್ರಾಜೆಕ್ಟಿನಿಂದ ನೀರು ಯಾವ ಭಾಗಕ್ಕೆ ಬೇಕಾಗಿತ್ತೋ ಆ ಭಾಗಕ್ಕೆ ನೀರನ್ನು ಕೊಡದೆ, ಯಾವ ಭಾಗಕ್ಕೆ ನೀರು ಬೇಕಾಗಿಲ್ಲವೋ ಅಲ್ಲಿಗೆ ತುಂಗಭದ್ರಾ ಪ್ರಾಜೆಕ್ಟಿನಿಂದ ನೀರನ್ನು ಕೊಟ್ಟರು. ಇವೊತ್ತು ಅಲ್ಲಿಯ ಕೆಂಪು ಭೂಮಿ, ಹಾಗೂ ಉಸುಗು ಭೂಮಿಗೆ ನೀರನ್ನು ತಂದಿಲ್ಲ, ನೀರನ್ನು ಕೊಟ್ಟಿಲ್ಲ. ಆದರೆ ಕಪ್ಪು ಭೂಮಿಗೆ, ಒಂದು ಮಳೆಯಿಂದ ಬೆಳೆಯನ್ನು ಬೆಳೆದುಕೊಳ್ಳತಕ್ಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ತಂದುಕೊಟ್ಟಿದ್ದಾರೆ. ನೀರು ಬೇಕಾದ ಜನಗಳಿಗೆ ನೀರನ್ನು ಕೊಡದೆ ಬೇಡವಾಗಿರತಕ್ಕ ಜನಗಳಿಗೆ ಎಲ್ಲಾ ತರಹ ಸವಲತ್ತುಗಳನ್ನ ಈ ಸರ್ಕಾರದವರು ಕೊಟ್ಟರು. ನಾನು ಹೇಳತಕ್ಕಂಥ ವಿಭಾಗದಲ್ಲಿ 25 ಭಾಗ ಶ್ರೀಮಂತರಾಗಿದ್ದರೆ 75 ಭಾಗ ಜನರು, ಬಡವರಾಗಿ ಕಷ್ಟಪಡುತ್ತಿದ್ದಾರೆ. ನಿರುದ್ಯೋಗಿಗಳಾಗಿ ಅವರು ಬೀದಿಯಲ್ಲಿ ತಿರುಗಾಡುತ್ತಿದ್ದಾರೆ. ಇಪ್ಪೊತ್ತು ಅಲ್ಲಿ ಅಂಥಾ ಒಂದು ಪರಿಸ್ಥಿತಿ ಉದ್ಭವಿಸಿದೆ. ಆದಕಾರಣ ಇಪ್ಪೊತ್ತು ದೇಶದಲ್ಲಿ ಇಂಥಾ ಬರಗಾಲ ಪರಿಸ್ಥಿತಿ ಉದ್ಭವಿಸಿದೆ ದೇವರೂ ಕೂಡ ಮುನಿದುಕೊಂಡಿದ್ದಾನೆ ಎಂದು ಹೇಳಬಹುದು.

ಇನ್ನು ಎರಡನೆಯ ವಿಷಯ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ರೆಡ್ ಟೇಪಿಜಮ್ ವಿಚಾರ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಸೆಕ್ರೆಟರಿಯೆಟ್ ಕಂಡೀಷನ್ನಿಗೆ ಸಂಬಂಧಪಟ್ಟ ವರದಿಯಲ್ಲಿಯೇ ರೆಡ್ ಟೇಪಿಸಮ್ ಶುರುವಾಗಿದೆ. ಏತಕ್ಕೆಂದರೆ ನಾನು ಇಡೀ ಈ ವರದಿಯನ್ನೆಲ್ಲಾ ಓದಿದ್ದೇನೆ. ಆದರೆ ಇವರಲ್ಲಿ ರಾಯಚೂರು ಜಿಲ್ಲೆಯಲ್ಲಿ ಬರಗಾಲ ಇವೆ ಎನ್ನುವ ಶಬ್ದ ಇದರಲ್ಲಿ ಎಲ್ಲೂ ಇಲ್ಲ. ಇವು ರಾಯಚೂರು ಜಿಲ್ಲೆಯ ಜನಗಳ ದೌರ್ಭಾಗ್ಯ. ಆ ಪ್ರದೇಶದಿಂದ ಪ್ರತಿನಿಧಿಗಳಾಗಿ ಆರಿಸಿ ಬಂದಿರತಕ್ಕ 10 ಜನ ಸದಸ್ಯರ ಪೈಕಿ 7 ಜನ ಸದಸ್ಯರು ಕಾಂಗ್ರೆಸ್ ಸದಸ್ಯರು. ಹಾಗೂ ಶ್ರೀಮತಿ ಬಸವರಾಜೇಶ್ವರಿ ಉಪಮಂತ್ರಿಯಾಗಿ ಇವ್ವರೂ ಸಹ ರಾಯಚೂರು ಜಿಲ್ಲೆಗೆ ಈ ಒಂದು ಪರಿಸ್ಥಿತಿ ಉಂಟಾಗಿರುವುದು ನಮ್ಮ ದೌರ್ಭಾಗ್ಯ ಎಂದು ಹೇಳಬಹುದು. ತುಂಗಭದ್ರಾ ಕೆನಾಲ್ ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದ್ದರೆ, ತುಂಗಭದ್ರಾ ಆಯಕಟ್ಟನಲ್ಲಿರತಕ್ಕ 5,80,000 ಎಕರೆ

(ಶ್ರೀ ಎಂ. ನಾಗಪ್ಪ)

ಜಮೀನಿನ ಪೈಕಿ 1 ಅಥವಾ 1½ ಲಕ್ಷ ಎಕರೆ ಜಮೀನು ನೀರಾವರಿಯಾಗಿದೆ, ಡೆವಲಪ್ ಆಗಿದೆ. ಉಳಿದ ನೀರಿನಿಂದ ಯಾವ ಉಪಯೋಗವನ್ನೂ ಹೊಂದಿಲ್ಲ. ಉಳಿದ ಜಮೀನ್ನೂ ಡೆವಲಪ್ ಆಗಿಲ್ಲ. ತುಂಗಭದ್ರಾ ವ್ಯಾಜೆಕ್ಟಿನಿಂದ ಯಾವ ಭಾಗಕ್ಕೆ ನೀರನ್ನು ಕೊಡಬೇಕಾಗಿತ್ತೋ ಆ ಭಾಗಕ್ಕೆ ಕೊಟ್ಟಿಲ್ಲ. ಲಿಂಗ್‌ಸುಗೂರ್, ಕುಷ್ಟಗಿ, ಯಲಬುರ್ಗಿ, ದೇವದುರ್ಗ, ರಾಯಚೂರು ಈ ಪ್ರದೇಶಗಳಲ್ಲಿ ಪರಿಸ್ಥಿತಿ ತೀರ ಹದಗೆಟ್ಟಿದೆ. ಅಲ್ಲಿಯ ಕೆಲವು ಭಾಗಗಳಲ್ಲಿ ಹೈವೇ ರಾಬರೀಸ್ ಕೂಡ ನಡೆದಿದೆ. ನಮ್ಮ ರಾಯಚೂರು ಜಿಲ್ಲೆಯ ಪರಿಸ್ಥಿತಿ ಈ ವರದಿಯಲ್ಲಿ ಕಾಣಿಸದೇ ಇರುವುದು ಬಹಳ ಶೋಚನೀಯ. ಈಗಾಗಲೇ ಇಲ್ಲಿಂದಲೇ ರೆಡ್ ಚೀಪಿಜಂ ಶುರು ಆಯಿತು.

ಇನ್ನೊಂದು ವಿಷಯ. ಕೆಲವು ಮಾಹಿತಿಗಳನ್ನು ಈಗ ಇಲ್ಲಿ ನಾನು ಹೇಳುತ್ತೇನೆ. ಅಭಾವ ಪರಿಸ್ಥಿತಿಯ ಬಗ್ಗೆ ರಿಲೀಫ್ ವರ್ಕ್ಸ್ ಮಾಡಿಸುವುದಕ್ಕೋಸ್ಕರ ಒಟ್ಟು ನಮ್ಮ ರಾಜ್ಯದಲ್ಲಿ ಒಂದು ಕೋಟಿ 80 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಒದಗಿಸಿದ್ದಾರೆ. ಆ ದರಲ್ಲಿ ಬೆಂಗಳೂರು ಡಿವಿಜನ್ನಿಗೆ 43½ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೈಸೂರು ಡಿವಿಜನ್ನಿಗೆ 32½ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಗುಲ್ಬರ್ಗಾ ಡಿವಿಜನ್ನಿಗೆ ಮಾತ್ರ 13·14 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಬೆಳಗಾವಿ ಡಿವಿಜನ್ನಿಗೆ 17·13 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಡೀ ಮೈಸೂರು ರಾಜ್ಯದಲ್ಲಿ ನಮ್ಮ ರಾಯಚೂರು ಜಿಲ್ಲೆ ವಿಸ್ತೀರ್ಣದಲ್ಲಿ 3ನೇ ಜಿಲ್ಲೆ. ಈ ವಿಭಾಗಕ್ಕೆ 14 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಲ್ಲಕ್ಕಿಂತ ದೊಡ್ಡ ಜಿಲ್ಲೆಯಾದ ವಿಜಾಪುರ ವಿಭಾಗಕ್ಕೆ 17 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಬಹಳ ವಿಸ್ತಾರವಾದಂತಹ ರಾಯಚೂರು ಜಿಲ್ಲೆಗೆ ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳಿಗೆ ಒಟ್ಟುಗೂಡಿಸಿ 13½–1· ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಂಥಾ ಪರಿಸ್ಥಿತಿಯಲ್ಲಿ ಯಾವ ದೃಷ್ಟಿಯಿಂದ ನೀವು ನಮ್ಮ ಜಿಲ್ಲೆಗಳಿಗೆ ಸಹಕಾರ ಮಾಡುತ್ತೀರಿ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ತುಂಗಭದ್ರಾ ವ್ಯಾಜೆಕ್ಟಿನ ಬಗ್ಗೆ ಯಾವ ರೀತಿ ಮಾಡಿದರು ಎಂಬುದನ್ನು ತಾವು ದಯವಿಟ್ಟು ನೋಡಬೇಕು. ರಾಯಚೂರಿನಲ್ಲಿ ಟ್ಯಾಂಕುಗಳಿಂದ 5,767 ಎಕರೆ ಜಮೀನು ಇರಿಗೇಟ್ ಆಗುತ್ತಿದೆ. 2,460 ಹೆಕ್ಟಾರ್ ಜಮೀನು ಬಾವಿಗಳಿಂದ ಇರಿಗೇಟ್ ಆಗುತ್ತದೆ. ಕೋರಾರ ಜಿಲ್ಲೆಯಲ್ಲಿ 12 ಸಾವಿರ ಪಂಪುಸೆಟ್ಟುಗಳನ್ನು ಹಾಕಿಸಿದ್ದಾರೆ. ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ 2 ಸಾವಿರ ಪಂಪುಸೆಟ್ಟುಗಳು ಇವೆ. ಬೇರೆ ಜಿಲ್ಲೆಗಳಿಗೆ ಹೆಚ್ಚು ಕೊಡಬಾರದು ಎಂದು ನನ್ನ ಉದ್ದೇಶವಲ್ಲ. ಕೋರಾರ ಜಿಲ್ಲೆಗೂ ಕೊಡಿ, ಬೆಂಗಳೂರು ಜಿಲ್ಲೆಗೂ ಕೊಡಿ, ಮೈಸೂರು ಜಿಲ್ಲೆಗೂ ಕೊಡಿ. ಆದರೆ ನಾನು ಹೇಳುವುದು ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳನ್ನು ಕುರಿತು ಯಲ್ಲ ನೋಡಿದ್ದಾರೆ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಬಹಳ ಕಠಿಣ ಪರಿಸ್ಥಿತಿ ಇದೆ. ಅದನ್ನು ಸರ್ಕಾರದವರು ಗಮನಿಸಿಲ್ಲ. ರಾಯಚೂರು ಜಿಲ್ಲೆಯನ್ನು ಗುಲ್ಬರ್ಗಾ ಜಿಲ್ಲೆಗೆ ಹೋಲಿಸಿ ನೋಡಿದರೂ ನಮಗಿಂತ ಅವು ಉತ್ತಮವಾಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ 12 ಸಾವಿರ ಹೆಕ್ಟಾರ್ ಟ್ಯಾಂಕ್ ಕೆಳಗಡೆ ಇರಿಗೇಟ್ ಆಗುತ್ತಿದೆ. 18 ಸಾವಿರ ಹೆಕ್ಟಾರ್ ಜಮೀನು ಬಾವಿಯಿಂದ ಇರಿಗೇಟಾಗುತ್ತಿದೆ. ಕುಷ್ಟಗಿ, ಯಲಬುರ್ಗಿ, ದೇವದುರ್ಗ, ಲಿಂಗ್‌ಸುಗೂರ್ ಮತ್ತು ರಾಯಚೂರು ಈ 5 ತಾಲ್ಲೂಕುಗಳು ಬಹಳ ಕಠಿಣ ಪರಿಸ್ಥಿತಿಯಲ್ಲಿವೆ. ಅಲ್ಲ ಕೆಂಪು ಭೂಮಿ, ಉಸುಗು ಭೂಮಿ ಇದೆ. ಅಲ್ಲಿಗೆ ಈ ಕಾಂಗ್ರೆಸ್ ಸರ್ಕಾರದ ಅಡಳಿತದಲ್ಲಿ ನೀರನ್ನು ಒದಗಿಸಿಲ್ಲ, ಯಾವ ತರದ ನೀರಾವರಿ ಮಾಡಿಕೊಟ್ಟಿಲ್ಲ. ಅಲ್ಲಿ ಸಾಕಷ್ಟು ಕಾಮಗಾರಿ ಕೆಲಸಗಳನ್ನೂ ಸರ್ಕಾರದವರು ಕೈಗೊಂಡಿಲ್ಲ. ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯಲ್ಲ ನಾನು ಕಾರಿನಲ್ಲ ಹೋಗುತ್ತಾ ನೋಡಿದೆ. 64–65 ಮೈಲು ಬಂಡಿಂಗ್ ವರ್ಕ್ಸ್ ಆಗಿದೆ. ನಮ್ಮ ರಾಯಚೂರು ಜಿಲ್ಲೆಯಲ್ಲ ಸಾಕಷ್ಟು ಬಂಡಿಂಗ್ ವರ್ಕ್ಸ್ ನಡೆದಿಲ್ಲ. ನಮ್ಮ ಜಿಲ್ಲೆಯಲ್ಲಿ ಕೆಂಪು ಸಾಯಿರ್ ಇದೆ. ದೇವದುರ್ಗ, ಯಲಬುರ್ಗಿ, ಕುಷ್ಟಗಿ, ಲಿಂಗ್‌ಸುಗೂರ್, ರಾಯಚೂರು ಈ ತಾಲ್ಲೂಕುಗಳಲ್ಲ ಕೆಂಪು ಸಾಯಿರ್ ಇದೆ. ಈ ಪ್ರದೇಶಗಳಲ್ಲಿ ಎಷ್ಟು ಬಂಡಿಂಗ್ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅಷ್ಟು ಬಂಡಿಂಗ್ ಕೆಲಸಗಳನ್ನು ತೆಗೆದುಕೊಂಡಿಲ್ಲ. ಈ ಕಾಂಗ್ರೆಸ್ ಸರ್ಕಾರ ಪಕ್ಷಪಾತ ದೃಷ್ಟಿಯಿಂದ ನೋಡುತ್ತಿದೆ. ರಾಯಚೂರು ಜಿಲ್ಲೆ ಬರಗಾಲ ಪೀಡಿತವಾಗಿದೆ. ಈ ಜಿಲ್ಲೆಗೆ ಕಾಂಗ್ರೆಸ್ ಸರ್ಕಾರದವರು ಎಷ್ಟು ಕೆರೆಗಳನ್ನು ಕೊಟ್ಟಿದ್ದಾರೆ, ಎಷ್ಟು ಬಾವಿಗಳನ್ನು ಕೊಟ್ಟಿದ್ದಾರೆ? .

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಸದಸ್ಯರು ಹೈದರಾಬಾದ್ ಕರ್ನಾಟಕದಿಂದ ಬಂದಿದ್ದಾರೆ. ಅವರು ಬರೀ ರಾಯಚೂರುಜಿಲ್ಲೆಯಲ್ಲ ಮಾತ್ರ ಬರಗಾಲ ಇದೆ ಎಂದು ಹೇಳುತ್ತಿದ್ದಾರೆ. ಈ ಬರಗಾಲ ನಮ್ಮ ತಾತ ಮುತ್ತಾತನ ಕಾಲದಿಂದಲೂ ಮೈಸೂರು ಜಿಲ್ಲೆಯಲ್ಲ ಬರುತ್ತಿದೆ. ಈ ಬರಗಾಲವನ್ನು ಹೋಗರಾಡಿಸುವುದಕ್ಕೆ ಏನು ಪ್ರಯತ್ನ ಮಾಡಬೇಕು ಅದನ್ನು

ಮಾಡುವುದಿಲ್ಲ. ಕೋಲಾರ ಜಿಲ್ಲೆಗೆ 12 ಸಾವಿರ ಪಂಪುಸೆಟ್ಟುಗಳನ್ನು ಕೊಟ್ಟಿದ್ದಾರೆ ಎಂದರೆ ಎಷ್ಟೋ ವರ್ಷಗಳಿಂದ ಅವರು ಆ ಪಂಪು ಸೆಟ್ಟುಗಳನ್ನು ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗ ಈ ಮಾನ್ಯ ಸದಸ್ಯರ ಅನಾಲಜಿ ಹೇಗಿದೆ ಎಂದರೆ ಈಗ ನಾನು ದಪ್ಪನಾಗಿದ್ದೇನೆ, ಅವರು ತೆಳುವಾಗಿದ್ದಾರೆ, ಕುಳ್ಳಾಗಿದ್ದಾರೆ. ಅವರು ನನ್ನಹಾಗೆ ದಪ್ಪನಾಗಿ ಆಗುವವರೆಗೂ ನಾನು ಉಪವಾಸ ಇರಬೇಕು ಎಂದು ಹೇಳಿದಹಾಗೆ ಆಗುತ್ತದೆ. ಅವರು ನನ್ನಹಾಗೆ ದಪ್ಪನಾಗಿ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ನಾನು ಹುಟ್ಟಿರುವುದೇ ಹೀಗೆ, ಅವರು ಹುಟ್ಟಿರುವುದೇ ಹಾಗೆ. ಇದಕ್ಕೆ ಒಂದು ಗಾದೆಇದೆ. 'ರಾಮು ರಾಮು ಹೊಟ್ಟೆ ದುಬ್ಬಣ್ಣ ಕೈ ಕಾಲು ಸಣ್ಣ' ಎಂದು ಹೇಳುವಂತೆ ಆಗಿದೆ. ಎಲ್ಲ ಅಭಿವೃದ್ಧಿ ಕೆಲಸಗಳು ಹಾಗೂ ಬರಗಾಲದ ಕೆಲಸಗಳು ಬೇಕೋ ಅಲ್ಲ ಆಗದೇ ಎಲ್ಲ ಹೆಚ್ಚಾಗಿ ಅಭಿವೃದ್ಧಿಯಾಗಿರುವ ಸ್ಥಳಗಳಲ್ಲೇ ಹೆಚ್ಚು ಪರಿಹಾರ ಕಾಮಗಾರಿ ಕೆಲಸಗಳನ್ನು ಮಾಡುತ್ತಾ ಹೋದರೆ ನಮ್ಮ ಮೈಸೂರು ಜಿಲ್ಲೆಯಲ್ಲ ಬರಗಾಲಕ್ಕೆ ತುತ್ತಾಗಿರುವ ಭಾಗಗಳ ಜನರು ಉಪವಾಸ ಇರಬೇಕೆಂದು ತಮ್ಮ ಅಭಿಪ್ರಾಯದ ಅರ್ಥವೇ ಹೇಗೆ ಎನ್ನುವುದು ಸರಿಯಾಗಿ ಗೊತ್ತಾಗುತ್ತಿಲ್ಲ.

ಶ್ರೀ ಎಂ. ನಾಗಪ್ಪ.—ಮಾನ್ಯ ಸದಸ್ಯರು ನಾನು ಹೇಳಿದುದನ್ನು ಅವಾರ್ಥ ಮಾಡಿಕೊಂಡಂತೆ ತೋರುತ್ತೆ. ಇಲ್ಲ ಬರಗಾದ ಪರಿಸ್ಥಿತಿ ವಿಚಾರವಾಗಿ ಹೇಳುವಾಗ ಎಲ್ಲ ಬರಗಾಲ ಹೆಚ್ಚಾಗಿದೆಯೋ ಅಂತಹ ಕಡೆಗಳಲ್ಲಿ ಹೆಚ್ಚು ಸಹಾಯವಾಗುತ್ತಿಲ್ಲ. ಎಲ್ಲ ಇಲ್ಲವೋ ಅಂತಹ ಕಡೆಗಳಲ್ಲಿ ಹೆಚ್ಚು ಕೆಲಸಗಳು ಆಗುತ್ತಿವೆ. ನುಮಾರು ಎರಡು ವ್ಯಾನುಗಳನ್ನು ಮಾಡಿದರೂ ಬರಗಾಲದ ಸ್ಥಿತಿ ಒಂದೇ ರೀತಿಯಾಗಿಯೇ ಇದೆ. ನಾನು ಹೇಳುತ್ತಿರುವುದು ದೇಶದ ಎಲ್ಲಾ ಭಾಗದಲ್ಲೂ ಬರಗಾಲದ ಸ್ಥಿತಿ ಎಲ್ಲೆಲ್ಲಿ ಇದೆಯೋ ಅಲ್ಲಿಗೆಲ್ಲಾ ಪೂರ್ಣವಾಗಿ ಸರಕಾರ ಸಹಾಯ ಸಹಕಾರಗಳನ್ನು ಕೊಡಬೇಕು. ಉದಾಹರಣೆಯಾಗಿ ಚಿತ್ರದುರ್ಗದಲ್ಲಿ ಕ್ಷಾಮ ಬಂದಿದೆ ಇಲ್ಲ ಹೆಚ್ಚು ಹಣಕೊಟ್ಟು ಪಂಪುಸೆಟ್ಟುಗಳು ಹೆಚ್ಚಾಗಿ ಕೊಡಬೇಕು. ಈಗ ಕೊಡುವುದಕ್ಕಿಂತ ಇನ್ನೂ ಹೆಚ್ಚು ಹೆಚ್ಚಾಗಿ ಕೊಡಬೇಕು. ಇದನ್ನು ಬೇಡ ಎಂದು ಹೇಳುತ್ತಿಲ್ಲ. ಆದರೆ ಇಂದು ಕಾಂಗ್ರೆಸ್ ಸರಕಾರ ಬಂದ ಮೇಲೆ ಯಾವ ರೀತಿ ಬರಗಾಲದ ಕೆಲಸಗಳು ಎಲ್ಲೆಲ್ಲಿ ಉದ್ಭವವಾಗಿದೆ ಎಂದು ನೋಡುವಾಗ ಸರಕಾರ ಕೊಡುವ ಹಣ ಸರಿಯಾಗಿ ಉಪಯೋಗವಾಗುತ್ತಿಲ್ಲ. ಮೂಲತಃ ಯೋಜನೆಯೊಳಗೇನೆ ನಾವು ಇಷ್ಟು ಕಡೆಗಳಲ್ಲಿ ನದಿಗಳಿಗೆ ಅಣೆಕಟ್ಟೆಗಳನ್ನು ಕಟ್ಟುತ್ತೇವೆ, ಇಷ್ಟು ಸರೋವರಿಯೋಜನೆಗಳನ್ನು ಮಾಡುತ್ತೇವೆ, ಇಷ್ಟು ಬಾವಿಗಳನ್ನು ಮಾಡುತ್ತೇವೆ ಎಂದು ಹೇಳಿದರೂ ಇದುವರೆಗೂ ಯಾವುದೂ ಕಾರ್ಯರೂಪಕ್ಕೆ ಬರಲಿಲ್ಲ. ನಮ್ಮ ಬರಗಾಲ ಹೆಚ್ಚಾಗುತ್ತಲೇ ಇದೆ. ಇದಕ್ಕೇನು ಮಾಡುವುದು ಎಂದು ಇಲ್ಲ ಹೇಳಬೇಕಾಗಿದೆ. ನೀವು ಮಾಡುವ ಕೆಲಸದಿಂದ ಏನೂ ಪ್ರಯೋಜನವಾಗುತ್ತಿಲ್ಲ. ನಮ್ಮ ರಾಯಚೂರು ಜಿಲ್ಲೆ ಬಗ್ಗೆ ಹೇಳುವಾಗ ಸರಕಾರ ನಮಗೆ ಯಾವಾಗಲೂ ತುಂಗಭದ್ರಾ ವ್ಯಾಜಕ್ಟ್‌ನ್ನು ನಮ್ಮ ಮುಂದೆ ಹೇಳುತ್ತಾರೆ ಅದರಿಂದ ಎಲ್ಲಿಗೆ ನೀರು ಕೊಡಬೇಕು ಎನ್ನುವುದರ ಬಗ್ಗೆ ಸರಿಯಾಗಿ ನೋಡಿಕೊಡುತ್ತಿಲ್ಲ. ಉದಾಹರಣೆಯಾಗಿ ಹೇಳಬೇಕಾದರೆ ತುಂಗಭದ್ರಾ ಕಾಲುವೆಯ ಎಡ ಭಾಗಕ್ಕಿರುವ ಚಂದ್ರಬಂಡಾ ಹಾಗೂ ಎಡಗೆರಾ ಇದರ ಪಕ್ಕದಲ್ಲಿ ಮಳೆಯೇ ಇಲ್ಲದ ಕಾರಣ ಇಲ್ಲಿರುವ ಹಳ್ಳಿಗಳ ಜನರಿಗೆ ಕುಡಿಯಲೂ ನೀರೇ ಸಿಗುತ್ತಿಲ್ಲ, ಇದನ್ನು ನೋಡಬೇಕಾದರೆ ಯಾರಾದರೂ ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ಇಲ್ಲಿಗೆ ಬಂದು ನೋಡಿದರೆ ಅದು ಅವರಿಗೇನೇ ಚೆನ್ನಾಗಿ ಅರ್ಥವಾಗುತ್ತದೆ. ಆದರಲ್ಲೂ ಷೋರಾಪುರದಲ್ಲಿರುವ ಎಲ್ಲುಗಳಲ್ಲಿ ಈ ಭಾಗದ ಜನರು ಹೋಗಿ ಕೆಲಸ ಮಾಡುತ್ತಿರುತ್ತಾರೆ. ಇಲ್ಲಿನ ಹಳ್ಳಿಯ ಜನರು ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ಬರಗಾಲಕ್ಕೆ ತುತ್ತಾಗಿ ಅವರ ಮನೆಗಳಿಗೆ ಪೂರ್ತಿ ಬೀಗ ಹಾಕಿ ಬೇರೆ ಕಡೆಗೆ ಕೆಲಸಕ್ಕೆ ಹೋಗುತ್ತಾರೆ. ಬೊಂಬಾಯಿಯಲ್ಲ ಬೇಕಾದರೆ ಹೋಗಿ ಅಲ್ಲಯ ಅಂಕೆ ಸಂಖ್ಯೆಗಳನ್ನು ನೋಡುವುದಾದರೆ, ರಾಯಚೂರು ಜಿಲ್ಲೆಯವರೇ ಹೆಚ್ಚಾಗಿ ಕೆಲಸಕ್ಕೆ ಹೋಗಿರುವುದು ಕಂಡು ಬರುತ್ತದೆ. ರಾಜೋಲಬಂಡದ ಕಾಲುವೆ ಪಕ್ಕದಲ್ಲ ಸುಮಾರು ಐದಾರು ಹಳ್ಳಿಗಳು ಇವೆ. ಆ ಗ್ರಾಮದ ಜಮೀನುಗಳಿಗೆ ಹಳೆಯ ಬಿಚ್ಚಾಲೆ ಕಾಲುವೆಯಿಂದ ನೀರನ್ನು ಒದಗಿಸಲಾಗುತ್ತಿದೆ. ಆದರೆ ಸರಕಾರಕ್ಕೆ ಅದನ್ನು ರಾಜಲ ಬಂಡ ಮೇನ್‌ಕೆನಾಲಿಂದ ನೀರು ಕೊಡಲು ಕೇಳಿದರೂ, ಅದನ್ನು ಸರಿಯಾಗಿ ಪರಿಶೀಲನೆಮಾಡುತ್ತಿಲ್ಲ ಇಲ್ಲಯ ಜನರಿಗೆ ಬಹು ಕಷ್ಟವಾಗಿದೆ ಇವರ ಬಗ್ಗೆ ಸರಕಾರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಮುಕ್ತು ಯಾವ ಪರಿಹಾರದ ಕಾರ್ಯಕ್ರಮಗಳನ್ನೂ ಇಲ್ಲ ತೆಗೆದುಕೊಂಡಿಲ್ಲ. ಯಾವಾಗ ಕೇಳಿದರೂ ನಮಗೆ ತುಂಗಭದ್ರಾ ವ್ಯಾಜಕ್ಟು ಮಾಡಿದ್ದೇವೆ ಎಂದು ನಮ್ಮ ಮುಂದೆ ಹೇಳುತ್ತಾರೆ ಇದರಿಂದ ಇಲ್ಲನ ಜನಕ್ಕೆ ಯಾವ ರೀತಿಯ ಪ್ರಯೋಜನವಾಗಿದೆ ಎನ್ನುವುದರ ಬಗ್ಗೆ ನಾನು ಇಲ್ಲನ ಯರಗೇರಾ ಹೋಬಳಿ 40 ಹಳ್ಳಿಗಳ ಬಗ್ಗೆ ಸರಕಾರದ ಗಮನಕ್ಕೆ ಹೇಳಬೇಕಾಗಿ ಬಂದಿದೆ. ಇದಕ್ಕಾಗಿ ತುಂಗಭದ್ರಾ ಕಾಲುವೆಯಿಂದ ಸರಿಯಾಗಿ ನೀರು ಸಹಾ ಬರುವುದಿಲ್ಲ ಮತ್ತು ಅಪ್ಪರ್ ಕೃಷ್ಣಾ ಯೋಜನೆ ಮಾಡುತ್ತೇವೆ ಎಂದು

(ಶ್ರೀ ಎಂ. ನಾಗಪ್ಪ)

ಹೇಳುತ್ತಾರೆ. ಇದರಿಂದಲೂ ಮುಂದೆ ನೀರು ಈ ಭಾಗಕ್ಕೆ ಸಿಗುತ್ತೊ ಇಲ್ಲವೋ ಎನ್ನುವ ವಿಚಾರವೂ ಇದೆ ನಾನು ಹೇಳುವುದು ಹಿಂದೆ ಹೇಳಿದಂತೆ 40 ಹಳ್ಳಿಗಳ ಜನಕ್ಕೆ ಎರಗೆರ ಹಾಗೂ ಚಂದ್ರಬಂಡ ಪಕ್ಕದಲ್ಲಿರುವ ಭಾಗಕ್ಕೆ ನಾಕಪ್ಪು ನೀರು ಸಿಗುವ ವ್ಯವಸ್ಥೆ ಮಾಡಬೇಕಾದರೆ ಅಪ್ಪರ್ ಕೃಷ್ಣ ಯೋಜನೆಯನ್ನು ತೀವ್ರವಾಗಿ ಮಾಡದೇ ಇದ್ದರೆ ಅದರಿಂದೇನೂ ರಾಭವಾಗುವುದಿಲ್ಲ. ಇದನ್ನು ಬೇಗ ಮಾಡಿದರೆ ಇಲ್ಲಿನ ಕ್ಷಾಮದ ಪರಿಸ್ಥಿತಿಯನ್ನು ನಿವಾರಣೆ ಮಾಡಲು ಅನುಕೂಲವಾಗುತ್ತದೆ. ಪ್ರತಿವರ್ಷವೂ ಇಲ್ಲಿ ಬರಗಾಲ ಬರುತ್ತಲೇ ಇದೆ. ಸುಮಾರು 20 ವರ್ಷಗಳಿಂದಲೂ ಇದನ್ನು ಸರಕಾರಕ್ಕೆ ಹೇಳುತ್ತಲೇ ಬರುತ್ತಿದ್ದೇವೆ. ಇದಕ್ಕಾಗಿ ಈ ಹಳ್ಳಿಗಳಿಗೆ ಅದಷ್ಟು ಹೆಚ್ಚು ಬಾವಿಗಳನ್ನ ಇಲ್ಲಿ ತೆಗೆಸಿಕೊಡುವ ವ್ಯವಸ್ಥೆ ಮಾಡಬೇಕು. ಆದರೆ ಈಗಾಗಲೇ ಸರಕಾರ ನಮ್ಮ ಈ ಭಾಗಕ್ಕೆ ಪಂಪುಸೆಟ್ಟುಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಅದು ಈಗ ಲ್ಯಾಂಡ್ ಡೆವಲಪ್ ಮೆಂಟು ಬ್ಯಾಂಕು ಮೂಲಕ ತೆಗೆಯಬೇಕು ಎಂದು ಹೇಳುತ್ತಿದ್ದಾರೆ. ಅಲ್ಲದೆ ನಮ್ಮಲ್ಲಿ ಬರಗಾಲದ ಪ್ರದೇಶಗಳ ಜನರಿಗೆ ಜೋಳ ಕೂಡ ಸರಿಯಾಗಿ ಕೊಡುತ್ತಿಲ್ಲ. ಸರಕಾರ ಜೋಳವನ್ನು 52 ರೂ. ನಂತೆ ರೇಟು ನಿಗದಿ ಮಾಡಿದ್ದಾರೆ. ಇದೇ ದರದಲ್ಲಿ ಬರಗಾಲದಲ್ಲಿ ಕೆಲಸ ಮಾಡುವ ಜನಕ್ಕೆ ಕೊಡುತ್ತಿಲ್ಲ. ಅವರು ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳಬೇಕಾಗಿದೆ. ಇದು ಹೇಗೆ ಸಾಧ್ಯ ಇದನ್ನು ಯೋಚನೆ ಮಾಡಬೇಕು. ಸರಕಾರದವರು ಬೇಕಾದಷ್ಟು ಮಾತುಗಳನ್ನು ಇಲ್ಲಿ ಹೇಳುತ್ತಾರೆ. ಆದರೆ ಯಾವುದೂ ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಇದರಿಂದಾಗಿ ಭೀಕರ ಬರಗಾಲದ ಸ್ಥಿತಿ ಬರುವುದಾಗಿದೆ.

ಇನ್ನೊಂದು ಮುಖ್ಯವಾದ ವಿಚಾರದ ಬಗ್ಗೆ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಒಂದು ಮನವಿಯನ್ನೂ ಕಳುಹಿಸಿದ್ದೇನೆ. ಅದು ಬಡ್ಜೆಟೆಡ್ ವರ್ಕುಗಳ ಬಗ್ಗೆ ಸರಿಯಾಗಿ ಹಣ ಒದಗಿಸುತ್ತಿಲ್ಲ ಎಂದು. ಕನಿಷ್ಟ ಪಕ್ಷ ಅವರಿಗೆ ಬೇಕಾಗುವಷ್ಟು ಹಣ ಕೊಟ್ಟಿರುವುದನ್ನು ಬೇಗ ಕಳುಹಿಸುವ ವ್ಯವಸ್ಥೆ ಮಾಡಬೇಕು. ಈಗಾಗಲೇ ಲಿಂಗಸೂಗೂರು ಹಾಗು ದೇವದುರ್ಗ ಈ ಭಾಗಗಳಿಗೆ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಸರಕಾರ ಬಡ್ಜೆಟ್ಟಿನಲ್ಲಿ ಕೆಲವು ಕೆಲಸಗಳಿಗಾಗಿ ಒದಗಿಸಿ ಕೊಡರಾಗಿದೆ. ಕನಿಷ್ಟಪಕ್ಷ ಈ ಹಣವನ್ನಾದರೂ ತೀವ್ರವಾಗಿ ಈ ಭಾಗಗಳಿಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು. ಇದರಿಂದ ತುಂಗಭದ್ರಾ ಬಲದಂಡರೆಯಲ್ಲಿರುವ ಲಿಂಗಸೂಗೂರು ಇತ್ಯಾದಿ ಭಾಗಗಳ ಜನಕ್ಕೆ ಸ್ವಲ್ಪವಾದರೂ ಅನುಕೂಲಗಳು ದೊರೆತು ಇಲ್ಲ ಕೆಲಸಗಳನ್ನು ತೀವ್ರವಾಗಿ ಮಾಡಲು ಸಹಾಯವಾಗುತ್ತದೆ. ಇದರ ಕಡೆಗೆ ಮಾನ್ಯ ಮುಖ್ಯ ಮಂತ್ರಿಗಳು ಲಕ್ಷ್ಯ ಕೊಡಬೇಕು ಎಂದು ನಮ್ಮ ಮನವಿಯಲ್ಲೂ ತಿಳಿಸರಾಗಿದೆ.

ಇನ್ನೊಂದು ವಿಷಯ ಎಂದರೆ ಅದು ನಮ್ಮಲ್ಲಿ ಒಂದು ಹಳೇ ಕೆನಾಲ್ ಇತ್ತು ಮತ್ತು ನಮ್ಮ ರಾಯಚೂರಿನ ತಾಲ್ಲೂಕಿನಲ್ಲಿ ಎರಡು ಕಾಲುವೆಗಳಿವೆ. ಅಲ್ಲದೆ ರಾಜೋಲಬಂಡ ಕಾಲುವೆ ಎಂದು ನಮ್ಮ ಕಡೆಯಲ್ಲಿ ಒಂದು ಅಣೆ ಕಟ್ಟಿರುವುದರಿಂದ ಇದರ ಕೆಳಗಿರುವ ಏರಿಯಾಕ್ಕೆ ನೀರು ಕೊಟ್ಟರೂ ಅದು ಸಾಕಾಗುತ್ತಿಲ್ಲ. ಇದು ಸಿಲ್ಟ್ ಅಪ್ ಆಗಿ ಸಂಪೂರ್ಣವಾಗಿ ನೀರು ಬಾರದಂತಾಗಿದೆ. ಇಪ್ಪೆತ್ತಿನ ದಿವಸ ಇದನ್ನು ಇನ್ನೂ ಸ್ವಲ್ಪ ಚೆನ್ನಾಗಿ ಪರೀಕ್ಷೆ ಮಾಡುವ ಪರಿಸ್ಥಿತಿ ಬಂದಿದೆ. ಇದನ್ನು ಸರಕಾರ ಇಲ್ಲಿರುವ ಇಂಜನೀಯರುಗಳ ಮೂಲಕ ಪರಿಶೀಲನೆ ಮಾಡಿ ಇದನ್ನು ಸರಿಪಡಿಸಬೇಕು. ಹಿಂದೆ ಇಲ್ಲ ಒಂದು ಹಳೆಯ ಕೆನಾಲ್ ಇತ್ತು ಈಗ ಇದನ್ನು ತೆಗೆದು ಇನ್ನೂ ಎರಡು ಕಾಲುವೆಗಳನ್ನು ಮಾಡಬೇಕೆಂದು ಇದ್ದಾರೆ. ಇದರ ಬಗ್ಗೆ ಸರಕಾರದಲ್ಲಿ ಸ್ಟಾಟಿಸ್ಟಿಕ್ಸ್‌ಗಳು ಕೂಡ ಇವೆ. ಯಾವ ಭಾಗದಲ್ಲಿ ಈ ಹಿಂದೆ ಸುಮಾರು ನೂರಾರು ವರ್ಷಗಳಿಂದ ಇಲ್ಲಿ ತರಿ ಬೆಳೆ ಬೆಳೆಯುತ್ತಿದ್ದರೋ ಈ ಭಾಗಕ್ಕೆ ರಾಜಲಬಂಡೆ ಈ ಕಾಲುವೆ ಮಾಡಿದ್ದರೂ ಇದರಿಂದ ನೀರು ಬಾರದಂತಹ ಪರಿಸ್ಥಿತಿ ಬಂದಿದೆ. ಸರಕಾರ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಬೇಕು. ರಾಜೋಲಬಂಡ ಅಣೆಕಟ್ಟು ಮಾಡಿದ್ದರೂ ಕೂಡ ಇದರಿಂದ ಆಂಧ್ರದವರು ಹೆಚ್ಚು ಉಪಯೋಗ ಪಡೆಯುತ್ತಿದ್ದಾರೆಯೇ ಹೊರತು ನಮ್ಮ ಭಾಗದಲ್ಲಿರುವ ಜನಕ್ಕೆ ಹೆಚ್ಚು ನೀರು ಸಿಗುತ್ತಿಲ್ಲ. ಇದಕ್ಕೇನಾದರೂ ಒಂದು (Escape) Channel ಕಟ್ಟಿ ನೀರು ಸರಿಯಾಗಿ ದೊರಕುವಂತೆ ಮಾಡಬೇಕು ಎಂದು ಇಲ್ಲಿ ಸರಕಾರವನ್ನು ಕೇಳುತ್ತೇನೆ.

ಕೊನೆಯದಾಗಿ ಒಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ಯಾವ ಯಾವ ಭಾಗದಿಂದ ಇಲ್ಲಿ ಮಂತ್ರಿಗಳಾಗಿ ಬಂದಿರುತ್ತಾರೋ ಅಂತಹವರ ಕ್ಷೇತ್ರಗಳಲ್ಲಿ ಅಲ್ಲಿಗೆ ಬೇಕಾಗುವ ರೋಡುಗಳು ಹಾಗೂ ಪಂಪುಸೆಟ್ಟುಗಳು, ಎರೆಕ್ಟ್ರಿಸಿಟಿ ಇತ್ಯಾದಿ ಎಲ್ಲ ಸೌಕರ್ಯಗಳನ್ನು ಅಲ್ಲಿನ ಜನಕ್ಕಾಗಿ ಮಾಡುತ್ತಿದ್ದಾರೆ. ಆದರೆ ಎಲ್ಲ ಸಾವಿರಾರು ಪಂಪುಸೆಟ್ಟುಗಳು ಬೇಕೆಂದು ಬೇಡಿಕೆಗಳು ಸರಕಾರಕ್ಕೆ ಬಂದಿದ್ದರೂ ಅವು ಅಲ್ಲಗೆ ಬೇಗನೆ ಸಿಗುತ್ತಿಲ್ಲ ನಮ್ಮಲ್ಲಿ ಸುಮಾರು 125 ಪಂಪುಸೆಟ್ಟುಗಳನ್ನು ಕೊಡ

ಬೇಕು ಎಂದು ಸರಕಾರದಿಂದ ಮಂಜೂರಾತಿ ಬಂದಿತ್ತು. ಆದರೆ ಇದರ ಮಧ್ಯದಲ್ಲಿ ಸರಕಾರದ ನೀತಿ ಬದಲಾಗಿ ಎಲ್ಲ ಪಂಪುಸೆಟ್ಟುಗಳನ್ನೂ ಆಯಾ ಊರಿನಲ್ಲಿರುವ ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಮೂಲಕ ಕೊಡಬೇಕೆಂದು ಮಾಡಿದರು. ಇದರಿಂದ ಈಗ ಪುನಃ ಅಗ್ರಿಕಲ್ಚರು ಡಿಪಾರ್ಟ್‌ಮೆಂಟಿಗೆ ಅರ್ಜಿಗಳನ್ನು ಹಾಕಿದ್ದರು. ಇದರಲ್ಲಿ ಸುಮಾರು 150 ಅರ್ಜಿಗಳನ್ನು ಸರಕಾರದವರು ಮಂಜೂರು ಮಾಡಿದ್ದರೂ ಅವರಿಗೆ ಇನ್ನೂ ಪಂಪುಸೆಟ್ಟುಗಳನ್ನು ಕೊಡುವುದಕ್ಕಾಗಲಿಲ್ಲ. ಏಕೆಂದರೆ ಇವೆಲ್ಲಾ ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಪುನಃ ಹೋಗಬೇಕು ಎಂದು ಹೇಳುತ್ತಿದ್ದಾರೆ. ಇದು ಮತ್ತಷ್ಟು ನಿಧಾನವಾಗಲು ಅವಕಾಶವಾಗಿದೆ. ನಾನು ಹಿಂದೆ ಹೇಳಿದ 30-40 ಹಳ್ಳಿಗಳಿಗೆ ಸರಕಾರದವರು ಮಂಜೂರು ಮಾಡಿರುವ ಪಂಪುಸೆಟ್ಟುಗಳಿಂದ ಅನುಕೂಲವಾಗುವುದರಿಂದ ಪುನಃ ಈ ಅರ್ಜಿಗಳನ್ನು ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಹೋಗುವಂತೆ ಮಾಡುವುದು ಸರಿಯಲ್ಲ. ಸರಕಾರ ಯಾವಾಗ ಮೊದಲು ಮಂಜೂರಾತಿ ಕೊಟ್ಟು ಪಂಪುಸೆಟ್ಟುಗಳನ್ನು ಕೊಡಬೇಕೆಂದು ಇದ್ದರೋ ಅಂತಹ ಏರಿಯಾಕ್ಕೆ ಅನುಕೂಲವಾಗುವಂತೆ ಬೇಗನೆ ಪಂಪುಸೆಟ್ಟುಗಳನ್ನು ಹಾಕುವ ವ್ಯವಸ್ಥೆ ಮಾಡಬೇಕು ಮತ್ತು ಈಚೆಗೆ ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕು ಮುಖೇನ ಕೊಡಬೇಕೆಂದು ಏನು ಒಂದು ಸ್ಕೀಂ ಮಾಡಿದ್ದಾರೆ ಅದನ್ನು ಪ್ರತ್ಯೇಕವಾಗಿ ಹೊಸದಾಗಿ ಬರುವ ಅರ್ಜಿಗಳನ್ನು ಪರಿಶೀಲನೆ ಮಾಡುವ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಹೇಳುತ್ತೇನೆ.

ಆದುದರಿಂದ ನಾನು ಈಗಾಗಲೇ ಮೇಲೆ ಹೇಳಿರುವಂತೆ ನಮ್ಮ ತಂಗಭದ್ರ ಎಡದಂಡೆ ಎಂದರೆ ಚಂದ್ರಬಂಡೆಯ ಪಕ್ಕದಲ್ಲಿರುವ ನಲವತ್ತು ಹಳ್ಳಿಗಳಿಗೆ ಅನುಕೂಲವಾಗಿ ನೀರು ಕೊಡುವ ವ್ಯವಸ್ಥೆ ಕಡೆಗೆ ತೀವ್ರಗಮನ ಕೊಡಬೇಕೆಂದು ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ ಮತ್ತು ಎಲ್ಲೆಲ್ಲಿ ಬಾವಿ ಕೆಲಸಗಳು ಹಾಗೂ ಪಂಪುಸೆಟ್ಟುಗಳು ಆರಂಭವಾಗಿ ಅರ್ಧದಲ್ಲಿ ನಿಂತಿವೆಯೋ ಅಲ್ಲೆಲ್ಲಾ ಅವನ್ನು ಪೂರ್ತಿಯಾಗಿ ಮುಗಿಸುವ ವ್ಯವಸ್ಥೆ, ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಂ. ಸಾಣಿಕೊಪ್ಪ (ಕತ್ತೂರು).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಸಭೆಯಲ್ಲಿ ನಮ್ಮ ಸಂಸ್ಥಾನಾಮಳೆ ಬಂದಿರತಕ್ಕ ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿದೆ. ನಾನು ಸುಮಾರು ಬೆಳಗಾಂನಿಂದ ಬೆಂಗಳೂರಿಗೆ 450 ಮೈಲುಗಳಿಂದ ಪ್ರಯಾಣ ಮಾಡಿಕೊಂಡು ಬಂದಿದ್ದೇನೆ. ರಸ್ತೆಯ ಉದ್ದಕ್ಕೆ ಎಲ್ಲಿ ನೋಡಿದರೂ ಮಳೆ ಬಿದ್ದಿಲ್ಲ ಬೆಳೆ ಆಗಿಲ್ಲ ದನಕರುಗಳಿಗೆ ತಿನ್ನುವುದಕ್ಕೆ ಮೇವಿಲ್ಲ ಮತ್ತು ಕುಡಿಯುವುದಕ್ಕೆ ನೀರಿಲ್ಲ, ಹೀಗಾಗಿದೆ. ಇದನ್ನು ನೋಡಿದರೆ ನಮ್ಮ ಮೇಲೆ ದೈವೀಕೋಪ ಬಹಳವಾಗಿದ್ದಂತೆ ಕಂಡುಬರುತ್ತಿದೆ. ಪಶ್ಚಿಮ ಕರಾವಳಿಯಲ್ಲಿ ಒಂದೆರಡು ತಾಲ್ಲೂಕುಗಳನ್ನು ಬಿಟ್ಟರೆ ಇನ್ನೆಲ್ಲೂ ಮಳೆ ಬಂದಿಲ್ಲ ಪೀಕಾಗಿಲ್ಲ. ಆದುದರಿಂದ ನಾವು ಈ ದಿವಸ ಇಡೀ ನಮ್ಮ ರಾಜ್ಯವನ್ನೇ ಕ್ಷಾಮಪೀಡಿತ ಪ್ರದೇಶ ಎಂದು ಸಾರಬೇಕಾದ ಪರಿಸ್ಥಿತಿಯಾಂತಾಗಿದೆ. ಇನ್ನು ಮಲೆನಾಡಿನ ಕೆಲವು ಭಾಗಗಳಲ್ಲಿ ಹಿಂದೆ ಸ್ವಲ್ಪ ಮಳೆ ಬಿದ್ದಿದ್ದ ಕಾರಣ ಅಲ್ಲೆಲ್ಲ ಬತ್ತದ ಬೆಳೆಯನ್ನು ಇಡಲಾಗಿತ್ತು. ಆದರೆ ಇತ್ತೀಚೆಗೆ ಮಳೆ ಬಾರದಿದ್ದ ಕಾರಣ ಹೊಡೆಗೆ ಬಂದಿದ್ದ ಬತ್ತದ ಬೆಳೆಯೆಲ್ಲಾ ಒಣಗಿ ಹೋಯಿತು. ಹೀಗೆ ಲಕ್ಷಾಂತರಗಟ್ಟಲೆ ಎಕರೆಗಳಲ್ಲಿ ಬತ್ತದ ಬೆಳೆ ಹಾಳಾಗಿದೆ. ಎಲ್ಲ ನೋಡಿದರೂ ಘೋರ ಕ್ಷಾಮ ಇಡೀ ರಾಜ್ಯವೇ ಬರಗಾಲದ ದವಡೆಗೆ ಸಿಕ್ಕಿದಂತಾಗಿದೆ. ನಮ್ಮ ಬೆಳಗಾಂ ಜಿಲ್ಲೆಯಲ್ಲೂ ಸಹಾ ಅಥಣಿ, ಚಿಕ್ಕೋಡಿ, ಗೋಕಾಕ್, ಬೈಲಹೊಂಗಲ, ಸೌಂದತ್ತಿ ಇತ್ಯಾದಿ ಎಲ್ಲಾ ತಾಲ್ಲೂಕುಗಳಲ್ಲೂ ಮಳೆ ಬಾರದೆ ಪೀಕು ಇಡುವುದಕ್ಕಾಗಿಲ್ಲ. ಜನತೆ ಕೆಲಸವಿಲ್ಲದೆ ಕಂಗೆಟ್ಟು ತಿರುಗುತ್ತಿದ್ದಾರೆ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ತಾ 25-8-1968ರಲ್ಲಿ ಜಿಲ್ಲಾ ಸಮಿತಿಯವರು ಸಭೆ ಸೇರಿ ಇಡೀ ಜಿಲ್ಲೆಯನ್ನು ಕ್ಷಾಮಪೀಡಿತ ಪ್ರದೇಶವೆಂದು ಪರಿಗಣಿಸಿ ಎಲ್ಲ ಕಡೆಯಲ್ಲೂ ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ, ಈ ವಿಚಾರದಲ್ಲಿ ಸರ್ಕಾರಕ್ಕೆ ಪೂರಾ ಒತ್ತಾಯ ಹಾಕಬೇಕೆಂದು ತೀರ್ಮಾನ ಮಾಡಿದ್ದಾರೆ. ಅಲ್ಲಿನ ಜನರ ಬವಣೆಯನ್ನು ಹೇಳಲಕ್ಕೆ ಆಗುವುದಿಲ್ಲ. ಜನ ದನಗಳಿಗೆ ಕುಡಿಯುವುದಕ್ಕೆ ನೀರು ಸಹಾ ಸಿಕ್ಕುತ್ತಿಲ್ಲ. ಇನ್ನು ಮಳೆ ಬರುತ್ತದೆಂಬ ಉತ್ಸಾಹ ಜನರಲ್ಲಿ. ಹಾಗೆ ಒಂದು ವೇಳೆ ಮಳೆ ಬಿದ್ದರೂ ಅವರಿಂದ ಪ್ರಯೋಜನ ಇಲ್ಲ. ನಮಗೆ ಮುಂಗಾರಿ ಮಳೆ ಜೂನ್—ಜುಲೈನಲ್ಲಿ ಬೀಳಬೇಕಾಗಿತ್ತು. ಆದರೆ ಅದು ಬಾರದೆ ಈಗ ಆಗಸ್ಟ್ ಕಳೆದು ಸೆಪ್ಟಂಬರಿನಲ್ಲಿದ್ದೇವೆ. ಪರಿಸ್ಥಿತಿ ಬಹಳ ಭಯಂಕರವಾಗಿದೆ. ಯಾವ ಕೆರೆಯಲ್ಲಿ ನೋಡಿದರೂ ಒಂದು ಹನಿ ನೀರಿಲ್ಲ. ಹಿಂದೆ ಎಂದೂ ಹೀಗೆ ಆಗಿರಲಿಲ್ಲ. ಮಲೆನಾಡಿನಲ್ಲೇ ಇರತಕ್ಕ ಸುಮಾರು ಸಾವಿರಾರು ಕೆರೆಗಳಲ್ಲಿ ಕೇವಲ ಒಂದೆರಡು ಕೆರೆಗಳಲ್ಲಿ ಮಾತ್ರ ನೀರಿದೆ. ಆದರೂ ಆ ನೀರು ಬೆಳೆಗೆ ಸಾಲದು. ಅನೇಕ ಕಡೆ ಬತ್ತನೆ ಮಾಡಿದ್ದೆಲ್ಲಾ ಒಣಗಿದೆ.

(ಶ್ರೀ ಬಿ. ಎಂ. ಸಾಣಿಕೊಪ್ಪ)

ದನಗಳಿಗೆ ಮೇವಿಲ್ಲ. ನಮ್ಮ ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮ್ಮಲ್ಲಿ ಇದಕ್ಕಾಗಿ ಎಷ್ಟು ಹಣ ವನ್ನು ಸರ್ಕಾರ ಕೊಟ್ಟಿದೆಯೋ ಅಷ್ಟನ್ನು ಮಾತ್ರ ಖರ್ಚುಮಾಡುತ್ತೇವೆ, ನೀವು ಕೇಳುವ ಮಟ್ಟದಲ್ಲಿ ಖರ್ಚುಮಾಡುವುದಕ್ಕೆ ಸಾಧ್ಯವಿಲ್ಲ—ಹಣವಿಲ್ಲ ಎಂದು ಹೇಳುತ್ತಿದ್ದಾರೆ. ಡಿ.ಸಿ. ಅವರು ಹೇಳುವು ದನ್ನು ನೋಡಿದರೆ ನಮ್ಮಲ್ಲಿ ಹಾಲು ನಡೆಯಬೇಕಾಗಿರತಕ್ಕ ಸಾಮಿರಾರು ಕೆರೆಗಳ ಕೆಲಸ ನಡೆಯುವು ದಕ್ಕೆ ಅವಕಾಶವಿಲ್ಲ ಎಂಬುದಾಗಿ ಕಂಡು ಬರುತ್ತಿದೆ. ಅಲ್ಲದೆ ನಮ್ಮ ಚೀಫ್ ಇಂಜಿನಿಯರವರನ್ನು ಕೇಳಿದರೆ ಅವರಿಗೆ ಯಾವ ಪ್ರಕಾರ ರಿಪೋರ್ಟು ಬರುತ್ತದೋ ಆ ಪ್ರಕಾರ ಕೆಲಸ ಮಾಡುತ್ತೇವೆಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ಅವರಿಗೆ ಎಷ್ಟು ಅಧಿಕಾರವಿದೆಯೋ ಅಷ್ಟಕ್ಕೆ ಸರಿಯಾಗಿ ಹಣ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ—ಆ ಚೀಫ್ ಇಂಜಿನಿಯರಿಗೆ ಏನು ಅಧಿಕಾರ ಇದೆಯೋ ಅದನ್ನು ಜಿಲ್ಲಾಮಟ್ಟ ದಲ್ಲಿರತಕ್ಕ ಗುನ್ನತಾಧಿಕಾರಿಗೆ ಕೊಡಬೇಕು. ಇಲ್ಲದಿದ್ದರೆ ಅಲ್ಲಿಂದ ಕಾಗದ ಪತ್ರಗಳು ಬೆಂಗಳೂರಿಗೆ ಕೇವಲ ಒಂದು ಸಹಿಗಾಗಿ ಓಡಾಡಬೇಕು ಎಂದರೆ, 15—20 ದಿವಸ ಕಾಲ ಬೇಕಾಗುತ್ತದೆ. ಇದರಿಂದ ಕೆಲಸಗಳು ನಿಧಾನವಾಗುತ್ತವೆ. ಇದನ್ನು ತಪ್ಪಿಸಲು ಪಿ.ಡಬ್ಲ್ಯು.ಡಿ. ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟು ಕೆಲಸ ಮಾಡಿಸಬೇಕು. ಇಲ್ಲವಾದರೆ ಗ್ರಾಮಾಂತರ ಪ್ರದೇಶದಲ್ಲಿ ಯಾವ ಒಂದು ಕೆಲಸವೂ ಆಗುವುದಿಲ್ಲ. ಆದುದರಿಂದ ಸ್ಥಳೀಯ ಮುಖ್ಯಾಧಿಕಾರಿಗಳಾದ ಡೆಪ್ಯುಟಿ ಕಮಿಷನರಿಗೂ ಮತ್ತು ಎಗ್ಸಿಕ್ಯುಟೀಫ್ ಇಂಜಿನಿಯರುಗಳಿಗೂ ಹೆಚ್ಚಿನ ಅಧಿಕಾರವನ್ನು ಕೊಟ್ಟು ಸಣ್ಣಪುಟ್ಟ ಕೆರೆಗಳ ಕೆಲಸ ಹಾಗೂ ಅಲ್ಲಲ್ಲೇ ನಡೆಯಬೇಕಾಗಿರತಕ್ಕ ಬಂಡಿಂಗ್ ಕಾಮಗಾರಿ ಮತ್ತು ರಸ್ತೆ ಕಾಮಗಾರಿ ಈ ಕೆಲಸಗಳು ಸಾಕಷ್ಟು ಇರುತ್ತವೆ, ಅವುಗಳನ್ನು ಕೂಡಲೆ ಕೈಗೊಳ್ಳುವಂತೆ ಆಜ್ಞೆ ಮಾಡಬೇಕೆಂದು ಸೂಚಿಸುತ್ತೇನೆ. ಇನ್ನು ನದೀ ದಡಗಳಲ್ಲಿ ಐ.ಪಿ. ಸೆಟ್ಸ್‌ಗಳನ್ನೂ ಮತ್ತು ಬಾವಿಗಳು ಅಧಿಕವಾಗಿರತಕ್ಕಲ್ಲಿ ಪಂಪ್‌ಸೆಟ್ಟುಗಳನ್ನೂ ಒದಗಿಸಿ ಅಲ್ಲಿ ತೀವ್ರಗತಿಯಿಂದ ಕೆಲಸ ನಡೆಯುವಂತೆ ಮಾಡಬೇಕು. ಮಹಾರಾಷ್ಟ್ರದಲ್ಲಿ ಈಗ ಹೀಗೆ ಮಾಡುತ್ತಿದ್ದಾರೆ. ಅಲ್ಲಿರತಕ್ಕ ಅಸಿಸ್ಟೆಂಟ್ ಇಂಜಿನಿಯರುಗಳು ಮತ್ತು ಎಗ್ಸಿಕ್ಯುಟೀವ್ ಇಂಜಿನಿಯರುಗಳು ಯಾರಾದರೂ ಐ.ಪಿ. ಸೆಟ್ಟುಗಳಿಗೆ ಮತ್ತು ಪಂಪ್‌ಸೆಟ್ಟುಗಳಿಗೆ ಅರ್ಜಿಹಾಕಿದರೆ ಅವುಗಳನ್ನು 8 ದಿನಗಳಲ್ಲೇ ಮಂಜೂರು ಮಾಡಿ ನೀರನ್ನು ತೆಗೆದು ಬೆಳೆ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ. ನಮ್ಮ ಸರ್ಕಾರದವರೂ ಕೂಡ ಇಲ್ಲ ಹಾಗೇಕೆ ಮಾಡಬಾರದು? ನಮ್ಮಲ್ಲಾದರೋ ಹೇರಳವಾಗಿ ಇಂಜಿನಿ ಯರುಗಳಿವ್ವಾರೆ, ಡಿಪ್ಲೊಮಾ ಹೋಲ್ಡರುಗಳಿದ್ದಾರೆ. ಅಷ್ಟು ಜನರು ಕೆಲಸವಿಲ್ಲದೆ ಇರುವಾಗ ಅವರಿಗೆ ಏಕೆ ಕೆಲಸವನ್ನು ಒದಗಿಸಿ ಕ್ಷಾಮಪರಿಸ್ಥಿತಿಯನ್ನು ಏಕೆ ಹತೋಟಿಗೆ ತರಬಾರದು? ಈ ದಿವಸ ನಮ್ಮಲ್ಲಿ ಸಾಕಷ್ಟು ಶಿಬ್ಬಂದಿಯಿಲ್ಲ ಎಂಬ ಒಂದು ಕಾರಣದ ಮೇಲೆ ಪಿ.ಡಿ. ಬೋರ್ಡಿನಲ್ಲೂ ಮತ್ತು ಪಿ.ಡಬ್ಲ್ಯು.ಡಿ. ನಲ್ಲೂ ಕೆಲಸಗಳು ನಿಧಾನ ಆಗುತ್ತಿವೆ. ಇಲ್ಲಿಗೆ 10 ವರ್ಷಗಳು ಕಳೆದಿ ದ್ದಾಗ್ಯೂ ಮಲಪ್ರಭಾ—ಘಟಪ್ರಭಾ ಕೆಲಸಗಳು ಇನ್ನೂ ಮುಗಿದಿಲ್ಲ. ಹಿಡಕಲ್ ಯೋಜನೆ ಸಹಾ ಹಾಗೆ ಇದೆ. ಇವುಗಳೆರ್ಲಾ ಮುಗಿಯದ ವಿನಾ ನಮ್ಮ ಧಾರ್ವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ನೀರಾವರಿ ಬೇಸಾಯ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಈ ನೀರಾವರಿ ಕಾಮಗಾರಿಗಳು ಮುಗಿದಲ್ಲಿ ಮಾತ್ರ ಅಲ್ಲಿ ಸುಮಾರು 6—7 ಲಕ್ಷ ಎಕರೆಗಳಲ್ಲಿ ಬತ್ತದ ಬೇಸಾಯ ವಾಗಬಹುದು. ಆದ್ದರಿಂದ ಈ ಎರ್ಲಾ ಯೋಜನೆಗಳಿಗೂ ಬಜೆಟ್ಟಿನಲ್ಲಿ ಹೆಚ್ಚಿನ ಹಣವನ್ನು ಒದಗಿಸಿ ಆ ಕೆಲಸಗಳನ್ನು ತೀವ್ರಗತಿಯಿಂದ ಮುಗಿಸಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಕಡೆಯಲ್ಲಿ ಲಫ್ಟ್ ಇರಿಗೇಷನ್ ಬಗ್ಗೆ ಒಂದೆರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಸಾವಿರಾರು ಎಕರೆ ನೀರಾವರಿಯಾಗುತ್ತದೆ. ನದೀ ದಂಡೆಗಳಲ್ಲೂ ಕೂಡ ಈ ಕಾರ್ಯವನ್ನು ತ್ವರಿತವಾಗಿ ನಡೆಸಬೇಕು.

ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಎಲ್ಲೆಲ್ಲಿ ಅಭಾವ ಇದೆಯೋ ಅಲ್ಲೆರ್ಲಾ ಬೋರ್‌ವೆಲ್‌ಗಳನ್ನು ಕೂಡಲೆ ತೆಗೆಸಿ ಜನ ದನಕರುಗಳಿಗೆ ನೀರನ್ನು ಕೂಡಲೆ ಒದಗಿಸಬೇಕು. ಅದೇ ರೀತಿ ಅಲ್ಲಲ್ಲಿ ಟ್ಯೂಬ್‌ವೆಲ್‌ಗಳನ್ನು ತೆಗೆಸಿ ಬೆಳೆಗೂ ಕೂಡ ಅನುಕೂಲ ಮಾಡಬಹುದು. ಹಿಂದೆ ಹೈದ್ರಾಬಾದ್ ಮತ್ತು ಗುಜರಾತಿನಲ್ಲಿ ಬರ ಬಿದ್ದಿದ್ದ ಕಾಲಕ್ಕೆ ಅಲ್ಲಿ ಟ್ಯೂಬ್‌ವೆಲ್ಲುಗಳನ್ನು ಹಾಕಿದ್ದರಿಂದ ಬಹಳ ಅನು ಕೂಲವಾಯಿತಂತೆ. ಇಲ್ಲಿ ಜನರಿಗೆ ಉದ್ಯೋಗಗಳನ್ನು ಒದಗಿಸತಕ್ಕ ದೃಷ್ಟಿಯಿಂದ ರಸ್ತೆ ಕಾಮಗಾರಿ, ಕೆರೆಗಳಿಂದ ಮಣ್ಣು ತೆಗೆಯುವ ಕಾಮಗಾರಿ ಬಂಡಿಂಗ್ ಕೆಲಸ ಇವನ್ನು ನಡೆಸಲು ಬೇಕಾದಷ್ಟು ಅವಕಾಶವಿದೆ. ಈ ವಿಚಾರದಲ್ಲಿ ಕಂದಾಯ ಮತ್ತು P.W.D. ಇರಾಖೆಗಳವರೂ ಒಂದುಗೂಡಿ ಕೆಲಸಮಾಡಿದರೆ ಬಹಳ ಅನುಕೂಲವಾಗುತ್ತದೆ. ಕಳೆದ ಮುಂಗಾರಿನಲ್ಲಿ ಕೆನಾರ್ ಜಿಲ್ಲೆಯಾದಲ್ಲಿ ಜೋಳ—ಸೇಂಗಾ ಇವುಗಳನ್ನು ಬಿತ್ತನೆ ಮಾಡರಾಗಿತ್ತು. ಆದರೆ ರೋಗ ಬಂದು

ಅದೂ ಕೂಡ ಹಾಳಾಯಿತು. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಹಿಂದಿನ ಮಳೆಯಲ್ಲಿ ಬಿತ್ತಿದ ಬತ್ತದ ಪೈರು 2 ಅಡಿಗಳವರೆಗೂ ಬೆಳೆಯಿತು, ಆದರೆ ಇತ್ತೀಚೆಗೆ ಮಳೆ ಹೋದದ್ದರಿಂದ ಅದೆಲ್ಲವೂ ಒಣಗಿತು. ಅಲ್ಲಿ ಈ ವರ್ಷ ಕಬ್ಬಿನ ಬೆಳೆ ಕೂಡ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ತೀವ್ರ ಗತಿಯಿಂದ ಕೆಲಸಗಳಾಗುವಂತೆ ಮಾಡದಿದ್ದರೆ ಬಹಳ ತೊಂದರೆ ಆಗುತ್ತದೆ.

5-30 P.M.

ನವಿಲು ತೀರ್ಥ ಯೋಜನೆ ಶುರುವಾಗಿದೆ, ಕೃಷ್ಣ ಮೇಲ್ದಂಡೆ ಯೋಜನೆಯನ್ನು ಪ್ರಾರಂಭ ಮಾಡಬೇಕು, ಇದರಿಂದ ಲಕ್ಷಗಟ್ಟಲೆ ಜನಕ್ಕೆ ಕೂಲಿ ಸಿಕ್ಕುತ್ತದೆ. ಕೆಲಸಮಾಡತಕ್ಕವರಿಗೆ ಹಣ ಕೊಡುವುದಕ್ಕೆ ಬದಲಾಗಿ ಕಾಳುಗಳನ್ನು ಒದಗಿಸುವಂತಹ ಯೋಜನೆಯನ್ನು ಪ್ರಾರಂಭಿಸಬೇಕು, ಅಂದರೆ ಜನಕ್ಕೆ ಉಪಕಾರವಾದಂತಾಗುತ್ತದೆ. ಅಲ್ಲಲ್ಲಿ ಗಂಜಿ ಕೇಂದ್ರಗಳನ್ನು ಪ್ರಾರಂಭ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ವಿರೋಧಪಕ್ಷದ ಸದಸ್ಯರಾದ ಶ್ರೀಮಾನ್ ನಾಗಪ್ಪನವರು ಕಾಂಗ್ರೆಸ್ ಪಕ್ಷದ ಸದಸ್ಯರು ಎಲ್ಲೆಲ್ಲ ಆರಿಸಿ ಬಂದಿದ್ದಾರೆ ಅಲ್ಲಿ ಕೆಲಸ ಮಾಡುತ್ತಾರೆ ಎರಡನೇದ ಕಡೆ ಮಾಡುವುದಿಲ್ಲ ಎಂದು ಹೇಳಿ ವಾದ ಮಾಡಿದ್ದಾರೆ. ಅದು ನಿಜವಾದ ಸಂಗತಿ ಅಲ್ಲ, ಏಕೆಂದರೆ ಸರ್ಕಾರ ಎಲ್ಲಾ ಕಡೆಯೂ ಕೆಲಸ ಮಾಡುತ್ತಾ ಇರುತ್ತದೆ. ಈ ವರ್ಷ ಕಾಂಗ್ರೆಸ್ ಸದಸ್ಯರು ಅಲ್ಲ ಆರಿಸಿ ಬಂದಿರಬಹುದು, ಮತ್ತೊಂದು ಸಂದರ್ಭದಲ್ಲಿ ಬೇರೆ ಪಕ್ಷದ ಸದಸ್ಯರು ಆರಿಸಿ ಬರಬಹುದು. ಆದ್ದರಿಂದ ಜನತೆಯ ಹಿತದೃಷ್ಟಿಯಿಂದ ಉದ್ಯೋಗ ಅಭಿವೃದ್ಧಿಯಾಗುವಂತಹ ಕೆಲಸಗಳು ಎಲ್ಲ ಕಡೆಯಲ್ಲೂ ನಡಿಯಾಗಿ ಆಗುತ್ತಾ ಇರುತ್ತದೆ, ಆ ಪ್ರಕಾರ ಖಾಯಂ ನೀರಾವರಿ ಯೋಜನೆಗಳನ್ನು, ಕೆಲಸ ಕಾರ್ಯಗಳನ್ನು ಮಾಡಬೇಕೆಂದು ತಿಳಿದು ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ನನ್‌ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯ ಮಂತ್ರಿಗಳು ಈ ದಿವಸ ಅಭಾವ ಪರಿಸ್ಥಿತಿಯ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರೆ. ಇದು ನಿಜವಾಗಿಯೂ ಅಭಾವ ಪರಿಸ್ಥಿತಿ ಅಲ್ಲ, ಕ್ಷಾಮದ ಪರಿಸ್ಥಿತಿ. ಅಭಾವ ಪರಿಸ್ಥಿತಿ ಎಂದರೆ ಸ್ವಲ್ಪ ಹೆಚ್ಚು ಕಮ್ಮಿ ಇದ್ದಂಥ, ಸ್ವಲ್ಪ ಸಾಲದೇ ಇದ್ದಿರುವ ಸಾಮಾನುಗಳನ್ನು ಹೊಂದಿಸಿಕೊಂಡು ಹೋಗತಕ್ಕ ಪರಿಸ್ಥಿತಿಯು ಅಭಾವ ಪರಿಸ್ಥಿತಿಯಾಗಬಹುದು. ಆದರೆ ಈಗ ಸಾಮಾನುಗಳೇ ಇಲ್ಲ, ಯಾವ ರೀತಿಯಿಂದಲೂ ಕೂಡ ಹೊಂದಾಣಿಕೆ ಮಾಡಿಕೊಂಡು ಹೋಗತಕ್ಕ ಪರಿಸ್ಥಿತಿ ನಮ್ಮ. ಮುಂದೆ ಇಲ್ಲ. ಕಳೆದ 20 ವರ್ಷಗಳಿಂದ ನಾವೆಲ್ಲೂ ಕೇಳಿದಂತಹ ಕ್ಷಾಮ ಈಗ ನಮ್ಮ ಬಾಗಿಲಿಗೆ ಬಂದು ನಿಂತಿದೆ. ಮಾನ್ಯ ಮಂತ್ರಿವರ್ಯರು ಈ ಕ್ಷಾಮದ ಪ್ರಭಾವಕ್ಕೆ ಹೆಚ್ಚಾಗಿ ಬಿದ್ದಿಲ್ಲ ಎಂದು ಕಾಣುತ್ತದೆ, ಏಕೆಂದರೆ ಭವ್ಯವಾದ ಬಂಗಲೆಯಲ್ಲಿ ಅವರು ಕುಳಿತಿರತಕ್ಕವರು. ನಿಜವಾಗಿಯೂ ಕ್ಷಾಮದ ಪರಿಸ್ಥಿತಿ ಅವರಿಗೆ ಅರ್ಥವಾಗಿದೆ ಎಂದರೆ ನಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಕ್ಷಾಮ ಪರಿಸ್ಥಿತಿಗೆ ಕಳೆದ 20 ವರ್ಷಗಳ ದುರಾಡಳಿತ ಕಾರಣ ಎಂದು ನಾನು ಒತ್ತಿ ಒತ್ತಿ ಹೇಳಬೇಕಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ಕೆಟ್ಟ ಆಡಳಿತದಿಂದ ಅನೇಕ ಕಡೆ ಎಂದರೆ ಕ್ಯಾಟ್‌ಮೆಂಟ್ ಏರಿಯಾದಲ್ಲಿ ಕಾಡನ್ನು ಕಡಿಸಿ ಹಾಕುವುದಕ್ಕೆ ಅನುಮತಿಯನ್ನು ಕೊಟ್ಟಿದ್ದು ಮಳೆ ಬರದೇ ಇರುವುದಕ್ಕೆ ಒಂದು ಕಾರಣ ಎಂದು ಹೇಳುತ್ತೇನೆ. ಕೆಲವು ವೇಳೆ ಮಳೆ ಬರದೇ ಇರುವುದು ದೈವ ಪ್ರಕೃತಿ ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ, ಕಾಂಗ್ರೆಸ್ ಮಂತ್ರಿಗಳು ಮಳೆ ಹುಯಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಗಿಡಗಳನ್ನು ನಡಿಸಿದರೆ ಸಾಲದು ಅವುಗಳು ಹೆಚ್ಚು ಹೆಚ್ಚಾಗಿ ಬೆಳೆಯುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ನಮ್ಮ ಮಾನ್ಯ ಮಂತ್ರಿಗಳು ವನಮಹೋತ್ಸವಗಳನ್ನು ಮಾಡಿದರೇ ವಿನಃ ಅವುಗಳ ರಕ್ಷಣೆ ಯಾವ ರೀತಿ ಆಗಬೇಕು. ಎಂಬುದರ ಕಡೆಗೆ ಗಮನ ಕೊಡಲಿಲ್ಲ. ಕೆರೆಗಳನ್ನು ದುರಸ್ತು ಮಾಡಿಸಲಿಲ್ಲ, ಕೆರೆಗಳಿಂದ ನೀರು ಬರತಕ್ಕ ನಾಲೆಗಳನ್ನು ಸರಿಪಡಿಸಲಿಲ್ಲ, ಕೆರೆಗಳ ಒಳ ಅಂಗಳವನ್ನು ರಾಜಕೀಯ ಸಂತ್ರಸ್ತರಿಗೆ ಕೊಟ್ಟು ನೀರನ್ನು ಶೇಖರಿಸಲು ಇರತಕ್ಕ ಸೌಲಭ್ಯವನ್ನೂ ಕೂಡ ಕಡಿಮೆ ಮಾಡಿದ್ದಾರೆ. ಈ ರೀತಿ ಸರ್ಕಾರದವರೇ ಕ್ಷಾಮಕ್ಕೆ ಕಾರಣರಾಗಿದ್ದಾರೆಯೇ ವಿನಃ ದೇವರಲ್ಲ. ಯಾವ ರೀತಿಯಲ್ಲೂ ದೇವರು ಜನರನ್ನು ನೋಯಿಸಬೇಕೆಂದು ಇಲ್ಲ. ಜನರು ಎಂದರೆ ನಿಜವಾಗಿಯೂ ಆ ದೇವರಿಗೆ ಕರುಣೆ ಇದೆ ಎಂದು ನನಗೆ ಅನಿಸುತ್ತದೆ. ಅನೇಕ ವೇಳೆ ಮಳೆ ಬರುವುದೇ ಅದಕ್ಕೆ ಒಂದು ಕುರುಹು ಎಂದು ಹೇಳುತ್ತೇನೆ. ಈಗ ನನ್ನ ಕ್ಷೇತ್ರದ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ನನ್ನ ಕ್ಷೇತ್ರ ಬಹುಭಾಗ ಕೃಷಿ ಪ್ರದೇಶ. ಅಲ್ಲಿ ಸಾಮಾನ್ಯವಾಗಿ ಮಂತ್ರಿಗಳ ಅಭಿಪ್ರಾಯ

(ಶ್ರೀ ಎನ್. ಎ. ಚನ್ನೇಗೌಡ.)

ದಲ್ಲಿ ನೀರಾವರಿ ಸೌಲಭ್ಯಗಳು ಮತ್ತು ಪಂಪುಗಳು ಇದೆ ಎಂದು ಭಾವಿಸಬಹುದು, ಅಲ್ಲಿ ಏನೂ ಅಭಾವವೇ ಇಲ್ಲ, ಕ್ಷಾಮದ ಪರಿಸ್ಥಿತಿ ಇಲ್ಲವೇ ಇಲ್ಲ ಎಂದು ತಿಳಿದುಕೊಂಡಿದ್ದಾರೆ. ನಿಜವಾಗಿಯೂ ನಮ್ಮ ನೆರೆಯ ನಾಗಮಂಗಲ ತಾಲ್ಲೂಕು ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳ ಸದಸ್ಯರನ್ನು ಬೇಕಾದರೆ ವಿಚಾರ ಮಾಡಿ ತಿಳಿದುಕೊಳ್ಳಿ. ಮೇಲುಕೋಟೆ ಮತ್ತು ಚಿನಕುರುಳಿ ಹೋಬಳಿಗಳಲ್ಲಿ ನಿಜವಾದಪ್ಪ ಕ್ಷಾಮ ಪರಿಸ್ಥಿತಿ ಇದೆ. ಬೆಟೆಹಳ್ಳಿಯಿಂದ ತೆಂಕೆರೆವರೆಗೂ ಇರುವ ವಿಶಾಲವಾದ ಪ್ರದೇಶದಲ್ಲಿ ಒಂದು ತೊಟ್ಟು ನೀರು ಇಲ್ಲದೇ ಇರುವುದನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಪಾಂಡವಪುರದಿಂದ ಮೇಲುಗಡೆ ಮೇಲುಕೋಟೆ ಹೋಬಳಿ ಸ್ಥಿತಿ ಬಹಳ ಚಿಂತಾಜನಕವಾಗಿದೆ, ಈ ಪ್ರದೇಶಗಳಲ್ಲಿ ಇನ್ನೂ ನಾಟಿ ಹಾಕಿಲ್ಲ, ಅಲ್ಪ ಸಲ್ಪ ಹಾಕಿದ್ದರೂ ಕೂಡ ಮಳೆ ಇಲ್ಲದೇ ಸಂಪೂರ್ಣವಾಗಿ ನಾಶವಾಗಿದೆ. ಇಂತಹ ಭೀಕರ ಪರಿಸ್ಥಿತಿಯಲ್ಲಿ ಕ್ಷಾಮ ಇಲ್ಲ, ಅಭಾವ ಇದೆ ಎಂದರೆ ಅಧಿಕಾರಿಗಳು ಎಷ್ಟುಮಟ್ಟಿಗೆ ವರದಿ ಮಾಡಿದ್ದಾರೆ ಎನ್ನುವುದನ್ನು ನಾವು ತಿಳಿದುಕೊಳ್ಳಬಹುದು. ಇದು ಒಂದು ವರ್ಷದ ಕೊರತೆ ಅಲ್ಲ, ಕಳೆದ 6 ವರ್ಷಗಳಿಂದಲೂ ಕೂಡ ಸಕಾಲದಲ್ಲಿ ಮಳೆ ಬರುತ್ತಾ ಇಲ್ಲ, ಕ್ಷಾಮ ಪುನಃ ಪುನಃ ಬರುತ್ತಿರುವುದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡಿಲ್ಲ ಅವರ ಕೆಲಸ ಏನೆಂದರೆ ಎರ್ಲಾದರೂ ಮನೆಗೆ ಬೆಂಕಿ ಬಿದ್ದರೆ ಆಗ ಬೆಂಕಿಯನ್ನು ಆರಿಸುವುದಕ್ಕೆ ಬಾವಿ ತೋಡಿಸುವ ಕೆಲಸ ಮಾಡುವುದಾಗಿದೆ. ಶಾಶ್ವತವಾದ ಯಾವ ಕೆಲಸವನ್ನೂ ಕೂಡ ಮಾಡಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಕ್ಷಾಮ ಪರಿಹಾರದ ಬಗ್ಗೆ ಎರಡು ವಿಧವಾದ ಶಾಶ್ವತವಾದ ಕೆಲಸಗಳನ್ನು ಅವರು ಮಾಡಬೇಕು. ಒಂದು ಷಾರ್ಟ್‌ವರ್ಕ್ಸ್. ಗಂಜಿ ಕೇಂದ್ರಗಳನ್ನು ತೆಗೆಯುವುದು ಕುಡಿಯುವ ಭಾವಿ, ರಸ್ತೆ ದುರಸ್ತಿ ಇತ್ಯಾದಿ ಇದು ಬಹಳ ಅತ್ಯವಶ್ಯಕ. ಗಂಜೀ ಕೇಂದ್ರಗಳನ್ನು ತೆಗೆಸಿದರೂ ಕೂಡ ಅಲ್ಲೂ ಅನೇಕ ರೀತಿಯಲ್ಲಿ ಪ್ರಭಾವಗಳು ನಡೆದೇ ನಡೆಯುತ್ತದೆ. ಅರೀತಿ ಆಗದಂತೆ ನೋಡಿಕೊಳ್ಳಬೇಕು. ಅಭಾವ ಪ್ರದೇಶದಲ್ಲಿ ಕಂದಾಯವನ್ನು ರದ್ದು ಪಡಿಸುತ್ತೇವೆ ಎಂದು ಮಾನ್ಯಮಂತ್ರಿಗಳು ಹೇಳಿದರು. ಕಳೆದ ಮೂರು ವರ್ಷಗಳಿಂದ 4 ಆಣಿಗಿಂತ ಕಮ್ಮಿ ಬೆಳೆಯಾಗಿರತಕ್ಕ ಉತ್ತರ ಕರ್ನಾಟಕದ ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ಆ ರೀತಿ ಮಾಡಿ ನಮ್ಮ ಕ್ಷೇತ್ರದಲ್ಲಿ ಆ ಒಂದೂ ರಿಯಾಯಿತಿಯನ್ನು ಅಥವಾ ರೆಮಿಷನನ್ನು ಕೊಟ್ಟಿಲ್ಲ. ನಾನು ಅನೇಕವೇಳೆ ಅಧಿಕಾರಿಗಳಲ್ಲಿ ಹೋಗಿ ಹೇಳಿದ್ದೇನೆ. ನಾಳೆ ಮಾಡಿಸಿಕೊಡುತ್ತೇನೆ, ಆ ಅಧಿಕಾರಿಗೆ ತಿಳಿಸಿದ್ದೇನೆ, ಹಾಗೆ ಮಾಡುತ್ತಾರೆ ಹೀಗೆ ಮಾಡುತ್ತಾರೆ ಎಂದು ಕಾಲ ಕಳೆಯುತ್ತಾರೆಯೇ ಹೊರತು ಏನೂ ಮಾಡಿಲ್ಲ. ಮೂರು ವರ್ಷಗಳ ಕಾಲ ಏಕ ಪ್ರಕಾರ ಮಳೆ ಇಲ್ಲದೆ ರೈತರು ಬವಣಪಡಿಸುತ್ತಾ ಇದ್ದಾರೆ, ಅವರ ಕಡೆಗೆ ಗಮನ ಕೊಟ್ಟು ಕಂದಾಯವನ್ನು ಮಾಫಿ ಮಾಡುವ ಕೆಲಸಕ್ಕೆ ಕೈ ಹಾಕಿಲ್ಲ, ಅದರ ಜೊತೆಗೆ ಸೊಸೈಟಿಗಳ ಸಾಲ. ಇದೇ ಸಮಯದಲ್ಲಿ ಸೊಸೈಟಿಗಳು ಸಾಲವನ್ನೂ ಕೂಡ ಒತ್ತಾಯಪೂರ್ವಕವಾಗಿ ವಸೂಲು ಮಾಡುವುದಕ್ಕೆ ಪ್ರಯತ್ನ ಪಡುತ್ತಾ ಇದ್ದಾರೆ. ತಿನ್ನುವುದಕ್ಕೆ ಅನ್ನ ಇಲ್ಲ, ಹೊದೆಯುವುದಕ್ಕೆ ಬಟ್ಟೆ ಇಲ್ಲ ಇಂತಹ ಸಂದರ್ಭದಲ್ಲಿ ತೆಗೆದುಕೊಂಡಿರುವ ಸಾಲವನ್ನು ಹೇಗೆ ತಾನೆ ವಾಪಸ್‌ಕೊಡುತ್ತಾನೆ ! ಅವನು ಸಾಲವನ್ನು ವಾಪಸು ಕೊಡದಿದ್ದರೆ ಅವನಿಗೆ ಇನ್ನಾವ ಸೌಲಭ್ಯವೂ ಸಿಕ್ಕುವುದಿಲ್ಲ ಎಂದು ಹೇಳಿ ಅವನ ಮೇರೆ ಇಲ್ಲದ ಸಲ್ಲದ ಆರೋಪವನ್ನು ಮಾಡಿ ಕೇಸನ್ನು ಹಾಕುತ್ತಾ ಇದ್ದಾರೆ. ದುಡ್ಡನ್ನು ವಸೂಲು ಮಾಡಬಾರದು ಅಂತ ಅಲ್ಲ. ಷಾರ್ಟ್ ಟರ್ಮ್ ಸಾಲವನ್ನು ಮುಂದುವರಿಸಿಕೊಂಡು ಹೋಗಬಹುದು, ಅದನ್ನು ಮೀಡಿಯಂ ಟರ್ಮ್ ಆಗಿ ಕನ್‌ವರ್ಟ್ ಮಾಡಿಕೊಂಡರೆ ರೈತರಿಗೆ ಅನುಕೂಲವಾಗುತ್ತದೆ.

ದನಕರುಗಳಿಗೂ ಕೂಡ ಮೇವನ್ನು ತರಿಸಿಕೊಡುತ್ತೇವೆ ಸಾಗಾಣಿಕೆ ಖರ್ಚನ್ನು ನಾವು ರೈತರ ಮೇರೆ ಹಾಕುವುದಿಲ್ಲ ರೈತರು ಯಾವ ಕಡೆಯಿಂದ ಆದರೂ ತರಿಸಿಕೊಳ್ಳಬಹುದು ಎಂದು ಹೇಳುತ್ತಾ ಇದ್ದಾರೆ. ರೈತರಿಗೆ ಮೇವನ್ನು ಕೊಂಡುಕೊಳ್ಳುವುದಕ್ಕೇ ದುಡ್ಡಿಲ್ಲದಿರುವಾಗ ಸಾಗಿಸುವ ಖರ್ಚನ್ನು ಮಾತ್ರ ಸರ್ಕಾರದವರು ಕೊಡುತ್ತೇವೆ ಎಂದರೆ ಇದು ಹಾಸ್ಯಾಸ್ಪದವಾದುದು. ಇದರ ಜೊತೆಗೆ ರಾಂಗ್ ಟರ್ಮ್ ರಿಲೀಫ್ ವರ್ಕ್ಸ್ ಕೂಡ ತೆಗೆದುಕೊಳ್ಳಬೇಕು. ನಾನು ಮೊದಲೇ ಹೇಳಿದಂತೆ ಅರಣ್ಯವನ್ನು ಕಾರ್ಯಮೆಂಟ್ ಏರಿಯಾದಲ್ಲಿ ಬೆಳೆಸುವುದಾದರೆ ಇಂದಲ್ಲ ನಾಳೆಯಾದರೂ ಕೂಡ ಈ ಕ್ಷಾಮದ ಭೀಕರತೆಯನ್ನು ಕಡಿಮೆ ಮಾಡಬಹುದು. ಮತ್ತು ನಮ್ಮ ರಾಜ್ಯದ ವಾಟರ್ ಲೆವಲ್ಸ್‌ನ್ನು ಇನ್‌ವೆಸ್ಟಿಗೇಟ್ ಮಾಡಿಸಿ ಬೋರ್ ವೆಲ್ಸ್‌ನ್ನು ಹಾಕುವುದಕ್ಕೆ ಎಲ್ಲೆಲ್ಲಿ ಸಾಧ್ಯತೆ ಇದೆ ಎಂಬುದನ್ನು ಕಂಡುಹಿಡಿದು ಕೋ-ಆಪರೇಟೀವ್ ಬೇಸಿಸ್ ಮೇಲೆ ರೈತರಿಗೆ ಬೋರ್ ವೆಲ್ಸ್‌ನ್ನು ತೆಗೆಯುವುದಕ್ಕೆ ಹಣವನ್ನು ಒದಗಿಸಿಕೊಟ್ಟು ಆದನ್ನು ಅವರಿಂದ ಕಂತಿನ ಪ್ರಕಾರ ವಸೂಲು ಮಾಡಿಕೊಳ್ಳಬಹುದು ಎಂದು ಹೇಳುತ್ತೇನೆ. ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಕಲವು ಕಡೆ

ಬಂಡಿಂಗ್ ಕೆಲಸ ಮಾಡಿದ್ದಾರೆ. ಒಂದು ತಾಲ್ಲೂಕಿನಲ್ಲಿ 3-4 ಗ್ರಾಮಗಳಲ್ಲಿ ಮಾಡಿದ್ದಾರೆ. ಆ ರೀತಿ ಮಾಡುವುದರಿಂದ ಇಡೀ ತಾಲ್ಲೂಕಿನಲ್ಲಿ ಸಾಯಿಲ್ ಕನ್ಸರ್ವೇಷನ್ ಮಾಡಿದ ಹಾಗಾಗುವುದಿಲ್ಲ. ಅದಷ್ಟು ಈ ದಿಶೆಯಲ್ಲಿ ಕೆಲಸವಾಗಬೇಕು. ಈ ಅಭಾವ, ಕ್ಷಾಮದ ಕಾಲದಲ್ಲಿ ರಾಂಗ್ ರೇಂಜ್ ಪಾಲಸಿ ಹಾಕಿಕೊಂಡು ಡೆವಲಪ್‌ಮೆಂಟರ್ ಆಕ್ಟಿವಿಟೀಸ್‌ಗೆ ಹೆಚ್ಚು ಹಣ ಖರ್ಚು ಮಾಡಿದರೆ ಕೆಲಸಗಳೂ ಆಗುತ್ತವೆ ಮತ್ತು ಜನಗಳಿಗೆ ಕೆಲಸವೂ ಕೂಡ ದೊರೆತು ಅವರ ಜೀವನ ಸಾಗಿಸಲು ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಪಾಂಡವಪುರದಿಂದ ತುಮಕೂರಿಗೆ ಒಂದು ರೈಲ್ವೆ ರೈಸ್ ಹಾಕಬೇಕೆಂದು ಬೇಡಿಕೆ ಇದೆ, ಇಂತಹ ಸಮಯದಲ್ಲಿ ಈ ಕಾರ್ಯವನ್ನು ಕೈಕೊಂಡರೆ ಡೆವಲಪ್‌ಮೆಂಟರ್ ಕೆಲಸವೂ ಆಗುತ್ತದೆ ಮತ್ತು ತಕ್ಷಣದಲ್ಲಿ ಕ್ಷಾಮ ಪೀಡಿತ ಪ್ರದೇಶದ ಜನರಿಗೂ ಕೆಲಸ ಹೆಚ್ಚಾಗಿ ದೊರಕುತ್ತದೆ. ಇದೇ ರೀತಿ ಹೇಮಾವತಿ ನದಿ ಅಣೆಕಟ್ಟಿನ ಕೆಲಸವನ್ನು ಬಹಳ ತ್ವರಿತವಾಗಿ ಮಾಡಬೇಕು. ಲ್ಯಾಂಡ್ ಆಕ್ವಿಸಿಷನ್‌ಗೆ ಅಡ್ಡಿ ಬರದಿರುವ ಪ್ರದೇಶದಲ್ಲಿ ಹೇಮಾವತಿ ಅಣೆಕಟ್ಟಿನ ಕೆಳಭಾಗದ ನಾಲೆಗಳ ಕಾರ್ಯವನ್ನು ಪ್ರಾರಂಭಿಸಿ ಕ್ಷಾಮ ಪರಿಸ್ಥಿತಿಯಲ್ಲಿ ಬಳಲುವ ಜನರಿಗೆ ಕೆಲಸವನ್ನು ಒದಗಿಸಿ ಕೊಡಲು ಎಂದು ಒತ್ತಾಯ ಪಡಿಸುತ್ತೇನೆ. ಕೆಲಸ ಬೇಗ ಮಾಡದೆ 10—12 ವರ್ಷ ತೆಗೆದುಕೊಂಡರೆ ಕ್ಷಾಮ ಬರಲು ಅವಕಾಶವಾಗುವುದು, ಅನುಕೂಲವಾಗುವುದಿಲ್ಲ. ಅದರ ಬದಲು ಆದಷ್ಟು ಜಾಗ್ರತೆ ಹೇಮಾವತಿ ಯೋಜನೆಯನ್ನು ಕಾರ್ಯಗತ ಮಾಡಿದರೆ ಅನುಕೂಲವಾಗುವುದು. ಅಲ್ಲದೆ ನಾಲೆಯ ಮೇಲು ಭಾಗದಲ್ಲಿ ಖುಷ್ಕಿ ಜಮೀನುಗಳಿಗೆ ನೀರನ್ನೊದಗಿಸಲು ಲಿಫ್ಟ್ ಇರಿಗೇಷನ್ ಯೋಜನೆಯನ್ನು ಜಾರಿಗೆ ತರಬೇಕು. ನಾಲೆಯ ಮೇಲು ಭಾಗದಲ್ಲಿರುವ ಜನರಿಗೆ ಲಿಫ್ಟ್ ಇರಿಗೇಷನ್ನಿಗೆ ಅವಕಾಶ ಕೊಟ್ಟರೆ ತೊಂದರೆಯಾಗುವುದೆಂದು ಹೇಳಿ ಅದಕ್ಕೆ ಅವಕಾಶಕೊಡಲು ಚೀಫ್ ಎಂಜಿನಿಯರ ಅರ್ಡರಾಗಬೇಕೆಂದು ಹೇಳುತ್ತಿದ್ದಾರೆ. ಅದನ್ನು ಗಮನಿಸಿ ಹೆಚ್ಚು ಜನರಿಗೆ ಲಿಫ್ಟ್ ಇರಿಗೇಷನ್ನಿಗೆ ನಾಲೆಯ ಮೇಲು ಭಾಗದಲ್ಲಿ ಅಂದರೆ ಕೃಷ್ಣರಾಜ ಸಾಗರ ತೊಣ್ಣೂರು ಕೆರೆ ಮತ್ತು ಪಿ. ಸಿ. ನಾಲಾ ಸಿ. ಡಿ. ಎಸ್. ನಾಲಾ ಮುಂತಾದ ಪ್ರದೇಶಗಳಲ್ಲಿ ಬೆಳೆ ಬೆಳೆಯಲು ಅವಕಾಶ ಮಾಡಿಕೊಡಬೇಕು ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

†ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ನನ್ನಾತ್ಮನ್ಯ ಅಧ್ಯಕ್ಷರೇ, ನನ್ನೆಯ ದಿವಸ ಈ ಮೈಸೂರು ದೇಶದಲ್ಲುಂಟಾಗಿರುವ ಅಭಾವ ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರು ಕೆಲವು ಮಾತುಗಳನ್ನು ಹೇಳಿದ್ದಾರೆ. ನಿಜವಾಗಿಯೂ ಕೂಡ ಇವತ್ತು ಮೈಸೂರು ದೇಶದ ಬಗ್ಗೆ ಹೇಳುವುದಾದರೆ ಅದು ಬಹಳ ಕಷ್ಟಕರವಾದ ಸ್ಥಿತಿಯಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು. ಇಂದು ತುಮಕೂರು ಜಿಲ್ಲೆಯಲ್ಲಿ ಸೇರಿದ 90 ಜನರು ಕ್ಷಾಮದ ಬಾಯಿಗೆ ತುತ್ತಾಗಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಮತ್ತು ಉತ್ಪ್ರೇಕ್ಷೆಯಾಗಲಾರದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಂದು ತುಮಕೂರು ಜಿಲ್ಲೆಯಲ್ಲಿ ಅನೇಕ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ, ದನಗಳಿಗೆ ಕುಡಿಯಲು ನೀರಿಲ್ಲ, ಇಂಥ ಸಂಕಟಕರ ಪರಿಸ್ಥಿತಿ ಅಲ್ಲಿದೆ. ಸರಕಾರದವರು ಅದರ ಪರಿಹಾರಕ್ಕೆ ಕಾರ್ಯಕ್ರಮ ಹಾಕಿದ್ದಾರೆ. ಆದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಬಹಳ ಅಡಚಣೆಯಿದೆ. ಆದಷ್ಟು ಜಾಗ್ರತೆ ಇರುವ ಕಷ್ಟವನ್ನು ನಿವಾರಣೆ ಮಾಡುವುದಾಗಿ ಹೇಳುತ್ತಾರೆ. ಅದರೆ ನಾನು ಒಂದು ಅಂಶವನ್ನು ಹೇಳಬೇಕಾಗಿದೆ. ಇವತ್ತು ದೇಶದಲ್ಲಿರುವ ಎಲ್ಲಾ ಇಲಾಖೆಗಳ ಜನರೂ ಕೂಡ ಸೇರಿ ಇಂಥ ಕಾಲದಲ್ಲಿ ತಮ್ಮ ಕರ್ತವ್ಯವನ್ನು ಮಾಡಬೇಕು. ನಮ್ಮಲ್ಲಿ ಪಿ ಡಬ್ಲ್ಯು ಇರಿಗೇಷನ್, ಫಾರೆಸ್ಟ್ ಇರಿಗೇಷನ್, ಸಾಯಿಲ್ ಕನ್ಸರ್ವೇಷನ್ ಇರಿಗೇಷನ್ ಮುಂತಾದ ಅನೇಕ ಇಲಾಖೆಗಳಿವೆ. ಅವುಗಳೆಲ್ಲವೂ ತಮ್ಮ ಹಣವನ್ನು ಕೂಡಿಸಿ ಕೆಲಸ ಮಾಡಿದರೆ ಪರಿಹಾರ ಜಾಗ್ರತೆ ಆಗುತ್ತದೆ. ಜೊತೆಗೆ ಇಂಡಿಯಾ ಸರಕಾರದವರೂ ಸಹಾಯ ಸಾಕಷ್ಟು ಮಾಡಬೇಕು. ಮೈಸೂರು ಸರಕಾರದವರು ಪ್ಲಾನ್ ಮಾಡಿ 8 ಕೋಟಿ ಚಿಲ್ಲರೆ ಬೇಕೆಂದು ಕೇಳಿದರೆ ಕೇವಲ 2 ಕೋಟಿ ಚಿಲ್ಲರೆಯನ್ನು ಇಂಡಿಯಾ ಸರಕಾರದವರು ಮೈಸೂರಿಗೆ ಕೊಟ್ಟಿದ್ದಾರೆ. ಅದು ಏನೇನೂ ಸಾಲದು. ಇಂದು ನಮ್ಮ ದೇಶದ ಪರಿಸ್ಥಿತಿ ಬಹಳ ಕಷ್ಟಕರವಾಗಿರುವಾಗ ಇಂಡಿಯಾ ಸರಕಾರ ಜಾಸ್ತಿಯಾಗಿ ಸಹಾಯ ಮಾಡಬೇಕು. ಹೆಚ್ಚು ಆಹಾರ ಪದಾರ್ಥಗಳನ್ನೊದಗಿಸಬೇಕು. ಆ ರೀತಿ ಕೊಡುವಂತೆ ಈ ಸಭೆ ಮತ್ತು ಸರಕಾರ ಇಂಡಿಯಾ ಸರಕಾರವನ್ನು ಒತ್ತಾಯ ಮಾಡಬೇಕು ಮತ್ತು ಇಂಡಿಯಾ ಸರಕಾರದ ಮೇಲೆ ಪೂರ್ಣವಾದ ಒಂದು ಪ್ರಭಾವ ಬೀರಬೇಕು. ಹಾಗೆ ಮಾಡದಿದ್ದರೆ ನಿಜವಾಗಿಯೂ ಕೂಡ ಈ ದೇಶದಲ್ಲಿರುವ ಕಷ್ಟ ಪರಿಸ್ಥಿತಿಯನ್ನು ಪರಿಹಾರ ಮಾಡಲು ಸಾಧ್ಯವಾಗದೇ ಹೋಗಬಹುದು ಎಂಬ ಶಂಕೆ ಇದೆ. ಇಂದು 64 ಫ್ಯಾಮಿನ್ ಹೆಡ್‌ನಲ್ಲಿ ಸರಕಾರ ಕೊಡುವ ಹಣ ಏತಕ್ಕೂ ಸಾಲದು, ಈಗ ಕೊಟ್ಟಿರುವ ಹಣದ ಜೊತೆಗೆ ಸರಕಾರ ಇನ್ನೂ ಜಾಸ್ತಿಯಾಗಿ ಹಣ ಕೊಡಬೇಕು, ಜೊತೆಗೆ ಅಧಿಕಾರಿಗಳಿಗೆ ಸರಿಯಾದ ನಿರ್ದೇಶನ ಕೊಡಬೇಕು. ತುಮಕೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ ಅಲ್ಲಿನ ಜಿಲ್ಲಾಧಿಕಾರಿಗಳು ರಾವ ಹೊಸ ಕೆಲಸವನ್ನೂ ತೆಗೆದುಕೊಳ್ಳಬಾರದೆಂದು

(ಶ್ರೀ ಎಂ. ಎನ್. ರಾಮಣ್ಣ)

ಆಜ್ಞೆ ಮಾಡಿದ್ದಾರೆ. ಕ್ಷಾಮವಿಪೆಯೆಂಬುದನ್ನು ಒಂದು ಕಡೆ ನಾವು ಒಪ್ಪುತ್ತೇವೆ ಯಾವ ವರ್ಷವೂ ಕಾಣದ ಕಷ್ಟ ಇಂದು ಬಂದಿದೆ. ಅದಕ್ಕಾಗಿ ಹಣ ಕೊಟ್ಟಿದ್ದಾರೆ, ಅದನ್ನು ವಿನಿಯೋಗ ಮಾಡಿ ಎಂದರೆ ಜಿಲ್ಲಾಧಿಕಾರಿಗಳು ರೆವೆನ್ಯೂ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿರುವುದಾಗಿಯೂ ಹೊಸ ಕೆಲಸವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದೂ ಹೇಳುತ್ತಾರೆ. ಜೊತೆಗೆ ತುಮಕೂರು ಜಿಲ್ಲೆಯ ದೌರ್ಭಾಗ್ಯವೋ ಏನೋ ಎಲ್ಲಾ ಜಿಲ್ಲೆಗಳಲ್ಲೂ ಕಂದಾಯದನ್ನು ತಾತ್ಕಾಲಿಕವಾಗಿ ವಸೂಲು ಮಾಡಬಾರದು ಎಂದು ಹೇಳಿದರೂ ನಮ್ಮ ಜಿಲ್ಲೆಯಲ್ಲಿ ಆ ರೀತಿ ಯಾಕೂ ಹೇಳಿಲ್ಲ. ಅದಕ್ಕೆ ಬದಲಾಗಿ ನೇಕಡ 90ರಷ್ಟು ಕಂದಾಯವನ್ನು ಡಿಸೆಂಬರಿನೊಳಗೆ ವಸೂಲು ಮಾಡಬೇಕೆಂದು ಕಡ್ಡಾಯವಾಗಿ ಅಧಿಕಾರಿಗಳಿಗೆ ಹೇಳಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ನಿನ್ನೆ ಕಷ್ಟವಿರುವ ಕಡೆ ಕಂದಾಯವನ್ನು ತಾತ್ಕಾಲಿಕವಾಗಿ ನಿಲ್ಲಿಸಿ, ಕೊಡುವುದಕ್ಕೆ ಸಾಧ್ಯವಿರುವವರಿಂದ ಮಾತ್ರ ವಸೂಲಿ ಮಾಡಿ ಎಂದು ತಿಳಿಸಿರುವುದಾಗಿ ಹೇಳಿದ್ದಾರೆ. ಆದರೆ ಅಧಿಕಾರಿಗಳು ತಮ್ಮ ಅಧಿಕಾರವನ್ನು ಚರಾಯಿಸಿ ಎಲ್ಲರಿಂದಲೂ ವಸೂಲು ಮಾಡುವಂತೆ ಹೇಳುವ ಮನೋಭಾವವನ್ನು ಹೊಂದಿದ್ದಾರೆ. ಆದುದರಿಂದ ಕಳೆದ 4 ವರ್ಷಗಳಿಂದ, 1965—66 ರಿಂದ 68—69ರವರೆಗೆ ಜಮೀನು ಕಂದಾಯ ಮತ್ತು ಸರಕಾರಕ್ಕೆ ಕೊಡಬೇಕಾದ ಕಂತುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವುದಕ್ಕೆ ಸರಕಾರ ತಕ್ಷಣ ಆಜ್ಞೆ ಮಾಡಬೇಕು ಎಂದು ನಾನು ಮನವಿ ಮಾಡುತ್ತೇನೆ. ಜೊತೆಗೆ ಸರಕಾರದಿಂದ ತಗ್ಗಾಕ್ಕರು ಮುಂತಾದುವುಗಳ ಬಗ್ಗೆ ಸಾಲ ತೆಗೆದುಕೊಂಡಿರುವುದೇನಿದೆ ಅದರ ಕಂಶನ್ನು ವಸೂಲು ಮಾಡುವುದನ್ನು ನಿಲ್ಲಿಸಬೇಕು ಮತ್ತು ಅದರ ಮೇಲೆ ಸುಸ್ತಿ ಬಡ್ಡಿ ಹಾಕದಾರದು. 64—65ರಲ್ಲಿ ಕೊಡಬೇಕಾದ್ದನ್ನು ಕೊಟ್ಟಿಲ್ಲದಿರುವುದಕ್ಕೆ ಸುಸ್ತಿಬಡ್ಡಿ ಹಾಕಿ ವಸೂಲು ಮಾಡಬೇಕೆಂದು ಹೇಳುವ ನಂದರ್ಥವಿದೆ. ಆದರೆ ದೇಶದಲ್ಲಿ ಕಷ್ಟ ಪ್ರಾಪ್ತವಾಗಿರುವಾಗ ರೈತರಿಗೆ ಸ್ವಲ್ಪಮಟ್ಟಿಗಾದರೂ ಸಹಾಯ ಮಾಡಬೇಕಾದ್ದು ಸರಕಾರದ ಕರ್ತವ್ಯ ಎಂಬುದನ್ನು ಗಮನಿಸಿ ಅಧಿಕಾರಿಗಳಿಗೆ ಸರಕಾರ ಸೂಕ್ತ ಆದೇಶ ನೀಡಬೇಕು. ಎರಡನೆಯದಾಗಿ ಜಮೀನು ಅಭಿವೃದ್ಧಿ ಬ್ಯಾಂಕು ನೀರಾವರಿ ಬಾವಿಗಳಿಗೆ ಮತ್ತು ಪಂಪುಸೆಟ್ಟುಗಳಿಗೆ ಹಣ ಕೊಡುವುದಿದೆ. ಆದರೆ ಕ್ಷಾಮ ಪರಿಸ್ಥಿತಿಯಿರುವ ಕಡೆ ಈ ಬ್ಯಾಂಕು ಡಿಫಾಲ್ಟರ್ ಆಗಿರುವವರಿಗೆ ಬಾವಿಗಳಿಗೆ ಹಣ ಕೊಡುವುದಿಲ್ಲ ಮತ್ತು ಪಂಪುಸೆಟ್ಟುಗಳನ್ನೂ ಕೊಡುವುದಿಲ್ಲ. ಇದರಿಂದ ಅನೇಕ ರೈತರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಸಾಲ ತೆಗೆದು ಬಾವಿಗಳನ್ನು ತೋಡಿ ಪಂಪುಸೆಟ್ಟುಗಳ ಮೂಲಕ ನೀರನ್ನು ಉಪಯೋಗ ಮಾಡಿ ಬೆಳೆ ತೆಗೆಯಲು ಅಡ್ಡಿಯಾಗಿದೆ. ಇದಕ್ಕಾಗಿ ಸೂಕ್ತವಾದ ಆದೇಶವನ್ನು ಬ್ಯಾಂಕುಗಳಿಗೆ ಕೊಟ್ಟು ಎಲ್ಲಿ ಕ್ಷಾಮ ಜಾಸ್ತಿಯಾಗಿದೆ ಅಂಥ ಕಡೆ ಈ ಬ್ಯಾಂಕಿನ ಮೂಲಕ ಹೊಸದಾಗಿ ಬಾವಿ ಮಾಡುವುದಕ್ಕೆ ಮತ್ತು ಪಂಪುಸೆಟ್ಟುಗಳಿಗೆ ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬೆಳೆ ಸಾಕಷ್ಟು ತೆಗೆಯಲು ತೊಂದರೆಯಾಗುವುದು. ಜೊತೆಗೆ ಸಾಯಿಲ್ ಕನ್‌ಸರ್ವೇಷನ್ ಕೆಲಸಕ್ಕೆ ಜಾಸ್ತಿ ಹಣ ಖರ್ಚು ಮಾಡಿ ಅನೇಕರಿಗೆ ಕೆಲಸ ಒದಗಿಸುವುದಕ್ಕೆ ಸಾಧ್ಯವಿದ್ದರೂ ಇರುವ ಸಿಬ್ಬಂದಿ ಸಾಲದು. ರೆವೆನ್ಯೂ ಮಂತ್ರಿಗಳು ತುರುವೇಕೆರೆ ತಾಲ್ಲೂಕಿಗೆ ಬಂದಾಗ ಈ ಕೆಲಸವನ್ನು ಜಾಸ್ತಿಯಾಗಿ ಮಾಡಬೇಕೆಂದು ಹೇಳಿದಾಗ ಟೆಕ್ನಿಕರ್ ಸ್ಟಾಫ್ ಇಲ್ಲ, ಆದುದರಿಂದ ಸಾಧ್ಯವಿಲ್ಲ ಎಂದು ಹೇಳಿದರು. ನನ್ನ ಕ್ಷೇತ್ರದಲ್ಲಿ ಒಂದು ಹಳ್ಳಿಯಲ್ಲಿ ಸುಮಾರು 300 ಜನರು ಕೆಲಸಕ್ಕೆ ಬರುತ್ತೇವೆಂದು ಹೇಳಿದರೂ ಅಧಿಕಾರಿಯೂ ಅದನ್ನು ಸೂಪರ್‌ವೈಜ್ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಕೆಲಸ ಕೊಡುವುದಕ್ಕಾಗುವುದಿಲ್ಲ ಎಂದು ಬಂದಿದ್ದ ಕೂಲಿಗಳನ್ನು ವಾಪಸು ಕಳಿಸಿದರು. ಆದುದರಿಂದ ಜಾಸ್ತಿ ಟೆಕ್ನಿಕರ್ ಸಿಬ್ಬಂದಿಯನ್ನು ನೇಮಕ ಮಾಡಿ ಸಾಯಿಲ್ ಕನ್‌ಸರ್ವೇಷನ್ ಕೆಲಸ ಆಗಬೇಕಾಗಿರುವ ಕಡೆ ಹೆಚ್ಚು ಕೆಲಸ ಮಾಡಿಸುವಂತೆ ವ್ಯವಸ್ಥೆ ಮಾಡಬೇಕು.

ಆಹಾರದ ಬಗ್ಗೆ ಹೇಳುವುದಾದರೆ ಇವೊತ್ತು ಕೊಡುತ್ತಿರುವುದು ಏನೇನೂ ಸಾಲದು. ಅದರಲ್ಲಿಯೂ ಹಳ್ಳಿಯಲ್ಲಿರುವ ರೈತನಿಗೆ ಯಾವುದೇ ವಿಧವಾದ ಪ್ರಯೋಜನವೂ ಈಗ ಕೊಡುತ್ತಿರುವ ಆಹಾರದಿಂದ ಆಗುತ್ತಿಲ್ಲ. ವಿದ್ಯಾವಂತರಾಗಿರುವವರಿಗೆ, ಪಟ್ಟಣಗಳಲ್ಲಿ ಇರುವವರಿಗೆ ಸ್ವಲ್ಪ ಮಟ್ಟಿಗಾದರೂ ಕೊಟ್ಟು ಅವರನ್ನು ತೃಪ್ತಿಪಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ ವಿನಾ ಯಾವ ರೈತ ಬೆಳೆದು, ಈ ದೇಶದಲ್ಲಿರುವ ಪ್ರಜೆಗಳಿಗೆ ಕೊಡುತ್ತಿದ್ದಾನೆ ಅವನು ಇವೊತ್ತು ಕಷ್ಟಕ್ಕೆ ಸಿಕ್ಕಿದ್ದಾನೆ. ಅವನಿಗೆ ಯಾವುದೇ ವಿಧವಾದ ಪರಿಹಾರವನ್ನೂ ಕೊಡುತ್ತಿಲ್ಲ. ತುಮಕೂರು ಜಿಲ್ಲೆಯ ಉದಾಹರಣೆಯನ್ನು ಕೊಡುವುದಾದರೆ, 1965-66ರಲ್ಲಿ ಬರೀ ಅಭಾವ ಪರಿಸ್ಥಿತಿ ಮಾತ್ರ ಇದ್ದಂಥ ಕಾಲದಲ್ಲಿ ಒಂದು ತಿಂಗಳಿಗೆ 50-60 ಸಾವಿರ ಪಲ್ಲ ಧಾನ್ಯವನ್ನು ಕೊಡುತ್ತಿದ್ದರು. ಈಗ ಕ್ಷಾಮ ಪರಿಸ್ಥಿತಿ ಇರುವಾಗ ಐದಾರು ಸಾವಿರ ಪಲ್ಲ ಧಾನ್ಯವನ್ನು ಕೊಟ್ಟರೆ ಯಾರಿಗೆ ಕೊಡಲು ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ತುರುವೇಕೆರೆ ತಾಲ್ಲೂಕಿನ ಬಗ್ಗೆ

ಹೇಳುವುದಾದರೆ ಅಲ್ಲಿ 244 ಹಳ್ಳಿಗಳಿವೆ. 180 ಹಳ್ಳಿಗಳಲ್ಲಿ ಬಾವಿಗಳಲ್ಲಿ ನೀರಿಲ್ಲ, ಬಾವಿಗಳನ್ನು ಆಳಪಡಿಸುವುದಕ್ಕೆ ಸಾಧ್ಯವಿಲ್ಲದೆ ಇರುವ ಪರಿಸ್ಥಿತಿ ಇದೆ. ಏನನ್ನೂ ಕೊಡದೆ ಇದ್ದರೂ ಜನತೆಗೆ ಮತ್ತು ದನಕರುಗಳಿಗೆ ಕುಡಿಯುವ ನೀರನ್ನು ಕೊಟ್ಟರೆ ಸ್ವಲ್ಪಮಟ್ಟಿಗಾದರೂ ಪರಿಸ್ಥಿತಿ ಸುಧಾರಿಸುತ್ತದೆ. ಆದಷ್ಟು ಜಾಗ್ರತೆ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಆದೇಶವನ್ನು ಕೊಟ್ಟು ಕುಡಿಯುವ ನೀರಿನ ಬಗ್ಗೆ ಸ್ವಲ್ಪ ವ್ಯವಸ್ಥೆ ಮಾಡಬೇಕು.

ನಮ್ಮಲ್ಲಿರುವ ದನಕರುಗಳನ್ನು ನಾಕಬೇಕಾದಂಥ ಪರಿಸ್ಥಿತಿ ಬಂದಿದೆ. ಮನುಷ್ಯನಿಗೆ ಆಹಾರ ಎಷ್ಟು ಮುಖ್ಯವೋ ದನಗಳಿಗೂ ಅಷ್ಟೇ ಮುಖ್ಯ. ಅದನ್ನು ಒದಗಿಸಬೇಕಾದ್ದು ನಮ್ಮ ಕರ್ತವ್ಯ. ಸರ್ಕಾರದವರೇ ದನಗಳಿಗೆ ಮೇವನ್ನು ಒದಗಿಸುವುದು ಸ್ವಲ್ಪ ಕಷ್ಟವಾಗಬಹುದು. ಆದ್ದರಿಂದ ತಕಾವಿ ಸಾಲ ಮತ್ತು ಭೂ ಅಭಿವೃದ್ಧಿ ಸಾಲವನ್ನು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟರೆ ರೈತನಿಗೆ ಸ್ವಲ್ಪ ಅನುಕೂಲವಾಗುತ್ತದೆ.

'ಫ್ರೀ ಗಿಫ್ಟ್ ಫೀಡ್' ಎಂದು ಬಂದಿರುವುದನ್ನು ಅನೇಕ ಹಳ್ಳಿಗಳಿಗೆ ಹಂಚುವುದಕ್ಕಾಗಿ ಕೊಟ್ಟಿದ್ದಾರೆ. ಅದನ್ನು ಹಂಚುವಾಗ ಯಾರು ಕಷ್ಟದಲ್ಲಿದ್ದಾರೆ, ಯಾರು ಜೀವನ ಮಾಡಲು ಕಷ್ಟ ಪಡುತ್ತಿದ್ದಾರೆ ಅಂಥವರಿಗೆ ಕೊಡಿ ಎಂದರೆ ಅವನು ಆರ್ಡಿ ಬರೆದು ತಹಸೀಲ್ದಾರರಿಗೆ ಕೊಟ್ಟು, ಅವರಿಂದ ರವೆನ್ಯೂ ಇನ್‌ಸ್ಪೆಕ್ಟರಿಗೆ ತೆಗೆದುಕೊಂಡು ಬಂದು ಆಹಾರವನ್ನು ತೆಗೆದುಕೊಂಡು ಹೋಗು ಎಂದು ಹೇಳುತ್ತಾರೆ. ಇದು ನಿಜವಾಗಿಯೂ ಅನ್ಯಾಯ. ಗ್ರಾಮ ಪಂಚಾಯಿತಿ ಅಧಿಕಾರಿಗಳು ಅಥವಾ ಅದಕ್ಕೆ ಸಂಬಂಧಪಟ್ಟ ಯಾರೇ ಆಗಲಿ ಸರ್ಟಿಫಿಕೇಟನ್ನು ಕೊಟ್ಟರೆ ರೆವಿನ್ಯೂ ಇನ್‌ಸ್ಪೆಕ್ಟರ್ 'ಫ್ರೀ ಗಿಫ್ಟ್' ಕೊಡುವಂಥ ವ್ಯವಸ್ಥೆ ಮಾಡಬೇಕು.

ತುಮಕೂರು ಜಿಲ್ಲೆಯಲ್ಲಿ ಎರಡು ಸಾವಿರ ಬಾವಿಗಳಿಗೆ ಪಂಪ್‌ಸೆಟ್‌ಗೆ ಅರ್ಜಿಕೊಟ್ಟು ಪವರ್ ಕೊಡಿ ಎಂದು ಕೇಳಿದರೆ—ಸರ್ಕಾರ ತಾನು ಹಿಂದೆ ಮಾಡಿದ್ದ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದರೂ—ವಿದ್ಯುಚ್ಛಕ್ತಿ ಮಂಡಲಿಯವರು ೬೦೦ ಪೆಟ್‌ಗಳಿಗೆ ಮಾತ್ರ ಪವರ್ ಕೊಡುತ್ತೇವೆ, ಬಾಕಿಯದಕ್ಕೆ ಕೊಡಲು ದುಡ್ಡಿಲ್ಲ ಎಂದು ಹೇಳುತ್ತಾರೆ. ಯಾರು ಪವರ್ ಕೇಳಿದರೂ ಕೂಡ ಅದರಿಂದ ಸ್ವಲ್ಪಮಟ್ಟಿಗೆ ಬೆಳೆ ಜಾಸ್ತಿ ಬೆಳೆಯುವ ಹಾಗೆ ಇದ್ದರೆ ಅಂಥವರೆಲ್ಲರಿಗೂ ಯಾವುದೇ ವಿಧವಾದ ಅಡ್ಡಿಯನ್ನುಂಟುಮಾಡದೆ ಪವರ್ ಒದಗಿಸಬೇಕು.

ಈಗಾಗಲೇ ಪ್ರಾರಂಭವಾಗಿರುವ ಪರಿಹಾರ ಕಾಮಗಾರಿಗಳೇನಿವೆ ಅವನ್ನೆಲ್ಲ ರೈತನಾದವನು ಪುನಃ ಚೇತರಿಸಿಕೊಳ್ಳುವ ತನಕ ನಿಲ್ಲಿಸಬಾರದು ಎನ್ನುವ ಆದೇಶವನ್ನು ಸರ್ಕಾರದವರು ಕೊಡಬೇಕು. ಕಂದಾಯ ಮಾಫಿ ಮಾಡುವ ವಿಚಾರದಲ್ಲಿ ಅಥವಾ ಕಂದಾಯವನ್ನು ವಸೂಲು ಮಾಡುವುದನ್ನು ಮುಂದೂಡುವ ವಿಚಾರದಲ್ಲಿ ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಇದುವರೆಗೂ ಒಂದು ನೋಟಿಫಿಕೇಷನ್ ಸಹ ಹೊರಟಿಲ್ಲ. ಧಾರವಾಡ, ಬೆಳಗಾಂ, ವಿಜಾಪುರ ಇಂಥ ಕಡೆಗಳಿಗೆ ಮಾಡಿದ್ದಾರೆಯೇ ಏನಾ ಇತರ ಕಡೆಗಳಿಗೆ ಮಾಡಿಲ್ಲ. ಸರ್ಕಾರ ಈಗಲಾದರೂ ಕೂಡ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ರೈತನಿಂದ ಬಾಕಿ ಇರುವ ಕಂದಾಯದ ವಸೂಲಿಯನ್ನು ತಾತ್ಕಾಲಿಕವಾಗಿ ಮುಂದೂಡುವಂತೆ ಮಾಡಬೇಕು. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಕಂದಾಯವನ್ನು ಪೂರ್ಣವಾಗಿ ಮನ್ನಾ ಮಾಡಿದರೆ ಬಹಳ ಸಂತೋಷ. ನಾಲ್ಕು ವರ್ಷದಿಂದ ತನ್ನ ಜೀವನವನ್ನೇ ನಡೆಸುವುದಕ್ಕೆ ಶಕ್ತಿ ಇಲ್ಲದೇ ಇರುವ ರೈತ ಮುಂದಿನ ವರ್ಷ ಐದು ವರ್ಷಗಳ ಕಂದಾಯವನ್ನು ಕೊಡುವುದಕ್ಕೆ ಆತನಿಗೆ ಬಹಳ ಹೊರೆಯಾಗುತ್ತದೆ. ಈ ವಿಚಾರವನ್ನು ಸರ್ಕಾರ ಪರಿಶೀಲನೆ ಮಾಡಬೇಕು.

ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಹೇರಿ ಅದಷ್ಟು ಜಾಸ್ತಿಯಾಗಿ ಹಣವನ್ನು ಪರಿಹಾರ ಕಾರ್ಯಗಳಿಗಾಗಿ ಒದಗಿಸದೆ ಇದ್ದರೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಬಾವಿಗಳನ್ನು ಆಳಪಡಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಅನೇಕ ಜನ ಸ್ನೇಹಿತರು ಹೇಳಿದರು. ವ್ಯವಸಾಯ ಇಲಾಖೆಯಲ್ಲಿ ಬೋರಿಂಗ್ ಯಂತ್ರಗಳಿವೆ. ಅವು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಹೊಸದಾಗಿ ಯಂತ್ರಗಳನ್ನು ತರಿಸುವುದಕ್ಕಾಗಿ 23 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳುತ್ತಾರೆ. ಹೊಸ ಯಂತ್ರಗಳನ್ನು ತಂದು ಉಪಯೋಗ ಮಾಡುವುದು ಎರಡನೇ ಪ್ರಶ್ನೆ. ವ್ಯವಸಾಯ ಇಲಾಖೆಯಲ್ಲಿರತಕ್ಕ ಯಂತ್ರಗಳು ಸಮರ್ಪಕವಾಗಿ ಕೆಲಸ ಮಾಡುತ್ತ ಇವೆಯೇ ಇಲ್ಲವೇ ಎನ್ನುವುದನ್ನು ಸರ್ಕಾರ ನೋಡಬೇಕು. ತಡಬ ಎಂಬ ಊರಿನಲ್ಲಿ ಒಂದು ಬೋರಿಂಗ್ ಯಂತ್ರ ಕೆಲಸ ಮಾಡುತ್ತಿದ್ದು ಅದು ಒಂದು ತಿಂಗಳಿನಿಂದ ಕೆಲಸ ಮಾಡದೆ ಇದೆ. ಅದಕ್ಕೆ ಬೇಕಾದ ಕೆಲವು ಸಾಮಾನುಗಳು ಇನ್ನೂ ಬಂದಿಲ್ಲ. ಹೆಬ್ಬಾಳ ಫಾರಂನಲ್ಲಿ ಅನೇಕ

(ಶ್ರೀ ಎಂ. ಎನ್. ರಾವಣ್ಣ)

ಬೋರಿಂಗ್ ಯಂತ್ರಗಳಿವೆ. ಅವುಗಳನ್ನು ಕೊಡಿರಿ ಎಂದು ಎಷ್ಟೋ ಸಲ ಕೇಳಿದ್ದೇವೆ. ಈ ರೀತಿಯಾಗಿ ವ್ಯವಸಾಯ ಇಲಾಖೆಯಲ್ಲಿ ಮತ್ತು ಇತರ ಕಡೆ ಇರುವ ಬೋರಿಂಗ್ ಯಂತ್ರಗಳನ್ನು ಪೂರ್ಣವಾಗಿ ಉಪಯೋಗ ಮಾಡಿ ಆದಷ್ಟು ಜಾಗ್ರತೆ ಕಷ್ಟವಲ್ಲಿರುವ ರೈತನಿಗೆ ಸಹಾಯವನ್ನು ಒದಗಿಸುವುದಲ್ಲದೆ ತುಮಕೂರು ಜಿಲ್ಲೆಯನ್ನು ಕ್ಷಾಮ ಪ್ರದೇಶವೆಂದು ಸರ್ಕಾರ ಸಾರಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Before I call upon other members to speak, I would like to inform the hon'ble House that discussion on this subject will continue up to 7-00 P.M.

Sri S. S. SHETTAR.—Sir, the Central Study Team has given its opinion after examining the scarcity conditions in Mysore State and that is a very important document. Without going through that document we are not able to know what the real picture in the State is. They have mentioned two categories *viz.*, seriously-affected area and not so seriously-affected area. Many members have said that their area has not been properly examined and that their area which ought to have been declared as a drought-affected area has not been so declared. So, my submission is that the opinion given by the Central Study Team should be supplied to us tomorrow so as to facilitate discussion of this subject.

SEVERAL MEMBERS.—The discussion may be continued tomorrow.

Mr. DEPUTY SPEAKER.—The House now stands adjourned to meet tomorrow at 1-00 P.M.

The House adjourned at Six of the Clock to meet again at One of the Clock on Thursday the 5th September 1968.

WD 11210—GPB—600—11-10-1968

MYSORE LEGISLATIVE ASSEMBLY

Thursday, 5th September 1968.

The House met in the Assembly Chamber, Vidhana Soudha, Bangalore at One of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

Release of Funds for Development Works

31. Sri S. S. ARAKERI (Ballolli).—

Will the Minister for Development be pleased to state :—

whether it is a fact that funds have been released for development activities in Bilagi and Bagalkote Taluk in the Catchment area for the proposed Almatti Dam ?

A.—Sri P. M. NADGOUDA (Minister for Development).—

Yes. During 1967-68 the following grants to provide drinking water wells were released :—

Bilagi—Rs. 36,000.
Bagalkot—Rs. 4,000.

ಶ್ರೀ ಎಸ್. ಎಸ್. ಅರಕೇರಿ.—ಅಭಿವೃದ್ಧಿ ಕಾರ್ಯಗಳಿಗೆ ದುಡ್ಡನ್ನು ಒದಗಿಸಿದ್ದೀರಾ ಎಂದು ಕೇಳಿದರೆ ಉತ್ತರ ಹೇಳಿರುವುದು ಕುಡಿಯುವ ನೀರಿನ ಬಾವಿಗಳಿಗಾಗಿ ಹಣ ಒದಗಿಸಿದೆ ಎಂದು. ನಾನು ಕೇಳಿದ್ದು ಅಭಿವೃದ್ಧಿ ಅಕ್ಟಿವಿಟೀಸ್ ನಲುವಾಗಿ. ಉತ್ತರ ಕೊಟ್ಟಿರುವುದು ಕುಡಿಯುವ ನೀರಿಗೆ ಸಂಬಂಧಪಟ್ಟುದು. ಅಂದಮೇಲೆ ಅಭಿವೃದ್ಧಿಕಾರ್ಯಗಳಿಗೆ ಬೇರೆ ಏನಾದರೂ ಹಣವನ್ನು ಬಿಡುಗಡೆ ಮಾಡಿದ್ದೀರಾ ?

†ಶ್ರೀ ಪಿ. ಎಂ. ನಾಡಗೌಡ.—ಅಭಿವೃದ್ಧಿ ಕಾರ್ಯಗಳು ಅಂದರೆ ಕೃಷ್ಣಾ ಪ್ರಾಜೆಕ್ಟ್ ಕೆಳಗೆ ಏನು ಸಬ್‌ಮರ್ಜ್ ಏರಿಯಾ ಇದೆ ಅಲ್ಲ ಸಣ್ಣಪಟ್ಟ ಕಾರ್ಯಗಳನ್ನು ತೆಗೆದುಕೊಂಡು ಅದರಿಂದ ಜನತೆಗೆ ಅನುಕೂಲಮಾಡಬೇಕೆಂದು ನಿರ್ಧಾರಮಾಡಿದೆ. ಅಲ್ಲಿನ ಜನತೆಗೆ ಯಾವ ರೀತಿಯಲ್ಲಿಯೂ ಕಷ್ಟವಾಗಬಾರದೆಂದು ಅಭಿವೃದ್ಧಿ ಕಾರ್ಯಗಳನ್ನು ಎಂದರೆ ಪ್ರೈಮರಿ ಸ್ಕೂಲ್ ಬಿಲ್ಡಿಂಗ್ಸ್, ಮುಂತಾದುವನ್ನು 100 ಎಕರೆಗಳಷ್ಟು ಏಸ್ತೀರ್ಣದ ಪ್ರಾಜೆಕ್ಟ್ ಏರಿಯಾದಲ್ಲ ತೆಗೆದುಕೊಳ್ಳಲಾಗಿದೆ.

Sri SIDDIAH KASHIMATH.—May I know whether the amount is spent during 1967-68?

Sri P. M. NADGOUDA.—Yes.

Sri G. DUGGAPPA.—For what other purpose the grants were released and how much was released?

ಶ್ರೀ ಪಿ. ಎಂ. ನಾಡಗೌಡ.—ಈಗ ಹಣವನ್ನು ರಿಲೀಸ್ ಮಾಡಿದ್ದು ಕುಡಿಯುವ ನೀರಿನ ಬಾವಿಗಳಿಗಾಗಿ. ಬಾಕಿದ್ದಕ್ಕೆ ಏನೂ ಮಾಡಲಿಲ್ಲ.

Sri G. DUGGAPPA.—Have not the Government any scheme of development works in those areas and may I know whether the Officers have not submitted schemes?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಹೇಳಿದ್ದು ಸಬ್‌ಮರ್ಜ್ ಏರಿಯಾದಲ್ಲಿ ಎಲ್ಲಾ ಅಭಿವೃದ್ಧಿ ಯೋಜನೆಗಳು ಬರಬೇಕೆಂಬುದಾಗಿ. ಇದರ ಬಗ್ಗೆ ಸರ್ಕಾರದ ಆದೇಶವೂ ಇತ್ತು. ಆಲ್ಲಿ ಸಣ್ಣಪುಟ್ಟ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಬಂದುದರಿಂದ ಅಲ್ಲಿ ಎಲ್ಲಾ ಕಾರ್ಯಗಳನ್ನು ಮಾಡಿದೆ.

ಶ್ರೀ ಬಿ. ಬೊಡ್ಡಬೋರೇಗೌಡ.—ಇದರಲ್ಲಿ ಎಷ್ಟು ಬಾವಿಗಳಿಗಾಗಿ ಹಣ ಖರ್ಚು ಮಾಡಿದ್ದೀರಿ ಮತ್ತು ಎಷ್ಟು ಬಾವಿಗಳಲ್ಲಿ ನೀರು ಬಂದಿದೆ?

ಶ್ರೀ ಪಿ. ಎಂ. ನಾಡಗೌಡ.—ಎರಡು ತಾಲ್ಲೂಕುಗಳಿಗೆ 4 ಸಾವಿರ ಮತ್ತು 36 ಸಾವಿರ ರೂಪಾಯಿಗಳನ್ನು ಆ ಬಾಬಿಗೆ ಕೊಟ್ಟಿದೆ. ಎಷ್ಟುಕ್ಕೆ ಬಾವಿಗಳಲ್ಲಿ ನೀರು ಬಂದಿದೆಯೆಂಬ ಬಗ್ಗೆ ನನ್ನಲ್ಲ ಈಗ ಮಾಹಿತಿ ಇಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಈ ರೀತಿ ಸಣ್ಣ ಪ್ರಮಾಣದಲ್ಲಿ ಹಣವನ್ನು ರಿಲೀಜ್ ಮಾಡುವುದನ್ನು ನೋಡಿದರೆ ಅಲಮಟ್ಟಿ ಯೋಜನೆಯನ್ನು ಮೊಟಕು ಮಾಡುವ ಉದ್ದೇಶವಿದೆಯೆಂದು ತಿಳಿಯೋಣವೇ?

ಶ್ರೀ ಪಿ. ಎಂ. ನಾಡಗೌಡ.—ಆ ರೀತಿಯಾದಂಥ ಉದ್ದೇಶ ಸರ್ಕಾರಕ್ಕೆ ಇಲ್ಲ. ಸಣ್ಣಪುಟ್ಟ ಕಾರ್ಯಗಳಿಗೆ ಅನುಕೂಲಮಾಡಬೇಕೆಂದು ಆ ರೀತಿಯಾಗಿ ಮಾಡಿದೆ, ದೊಡ್ಡ ದೊಡ್ಡ ಅಭಿವೃದ್ಧಿ ಯೋಜನೆಗಳಿಗೆ ಎಂದು ಮಾಡಿಲ್ಲ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಉತ್ತರದಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವ ಸಲುವಾಗಿ ಬಳಗಿಗೆ 36 ಸಾವಿರ ರೂಪಾಯಿಗಳನ್ನೂ, ಬಾಗರ್‌ಕೋಟೆಗೆ 4 ಸಾವಿರ ರೂಪಾಯಿ ಗಳನ್ನೂ ಬಿಡುಗಡೆ ಮಾಡರಾಗಿದೆ ಎಂದು ಹೇಳಿದ್ದಾರೆ. ಈ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳು ಬಹುತೇಕ ಗಮನಿಸಿದಂತೆ ಕಾಣಲಿಲ್ಲ. ಕ್ಯಾಚ್‌ಮೆಂಟ್ ಏರಿಯಾದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಎಷ್ಟು ತೆಗೆದುಕೊಂಡಿದ್ದೀರಿ, ಏತಕ್ಕೆಂದರೆ ನೀರು ಕೊಡುವುದಕ್ಕೆ ಹಣ ಕೊಡುವುದು ಒಂದು ಕಾರ್ಯಕ್ರಮ, ರೋಡು ಇತ್ಯಾದಿ ಅಭಿವೃದ್ಧಿಕಾರ್ಯಗಳಿಗೆ ಹಣಕೊಡುವುದು ಒಂದು. ಆದ್ದರಿಂದ ಇತರ ಕಾರ್ಯಕ್ರಮಗಳು ಏನಿವೆ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ ಅಥವಾ ಅದನ್ನು ಬಿಟ್ಟು ಬಿಟ್ಟಿದ್ದೀರಾ?

ಶ್ರೀ ಪಿ. ಎಂ. ನಾಡಗೌಡ.—ನೀರು ಕೊಡುವ ಕಾರ್ಯಕ್ರಮವನ್ನು ಬಿಟ್ಟು ಬೇರೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ.

ಶ್ರೀ ಜಿ. ದುಗ್ಗಪ್ಪ.—ಈಗ ಪ್ರಶ್ನೆಯಲ್ಲಿ ಇರುವುದು ಕ್ಯಾಚ್ ಮೆಂಟ್ ಏರಿಯಾ ಎಂದು ಇದೆ. ಆದು ಆಯಕಟ್ಟು ಏರಿಯಾ ಎಂದು ಇರಬೇಕು. ಇದರಲ್ಲಿ ಯಾವುದು ಸರಿ?

ಶ್ರೀ ಪಿ. ಎಂ. ನಾಡಗೌಡ.—ಕ್ಯಾಚ್‌ಮೆಂಟ್ ಏರಿಯಾ ಎಂದರೆ ಸಬ್‌ಮರ್ಜ್ಡ್ ಏರಿಯಾ. ಅಪ್ಪರ್‌ಕೃಷ್ಣ ಮೇಲ್ದಂಡೆಯ ಯೋಜನೆಯ ಆಯಕಟ್ಟು ಪ್ರದೇಶದಲ್ಲಿ ಯಾವ ಅಭಿವೃದ್ಧಿ ಕಾರ್ಯ ಗಳನ್ನು ಮಾಡಿದರೂ ಕೂಡ ಅವು ಮುಚ್ಚಿ ಹೋಗುತ್ತದೆ. ಏತಕ್ಕೆಂದರೆ ಅದು ಸಬ್‌ಮರ್ಜ್ಡ್ ಏರಿಯಾ. ಆದ್ದರಿಂದ ಬೇರೆ ಅಭಿವೃದ್ಧಿಕಾರ್ಯಗಳನ್ನು ತೆಗೆದುಕೊಂಡಿಲ್ಲ. ಕುಡಿಯುವ ನೀರಿನ ಸೌಲಭ್ಯವನ್ನು ಕೊಡತಕ್ಕ ಕೆಲಸವನ್ನು ಮಾತ್ರ ಅಲ್ಲಿ ತೆಗೆದುಕೊಂಡಿದ್ದೇವೆ.

Sri G. DUGGAPPA.—I know perfectly well what is a catchment area. Apart from that, may I ask the Minister to consult his Secretary

and see what is catchment area ? It does not mean ayacut area or submergeable area.

ಉಪಾಧ್ಯಕ್ಷರು.—ಮಾನ್ಯ ಸದಸ್ಯರಿಗೆ ಏನು ಬೇಕು ಎನ್ನುವ ವಿಷಯವನ್ನು ಮಾನ್ಯ ಮಂತ್ರಿಗಳಿಗೆ ಬರೆದುಕಳುಹಿಸಿದರೆ ಅವರು ಅದಕ್ಕೆ ಉತ್ತರವನ್ನು ಕಳುಹಿಸುತ್ತಾರೆ.

Registration of Co-operatives Credit Society in Gadag Taluk

32. Sri K. H. PATIL (Gadag).—

Will the Minister for Development be pleased to state :—

(*a*) whether a proposal for Registration of a new Co-operative Credit Society in Binkadakatti, a village in Gadag Taluk, has been sponsored ;

(*b*) whether the local Service Co-operative Society has objected for the registration of the said society ;

(*c*) whether the orginators of the new society being monied people, ignoring the normal rules and procedure allow such societies to organise to harm the Co-operative movement by creating unhealthy competition in that village ;

(*d*) whether it is the policy of Government to favour the registration of similar type of societies in the same area of operation of existing society ;

(*e*) whether there are any allegations of corruption against the sponsors of the society referred to in clause (*a*) above ?

A.—Sri P. M. NADGOUDA (Minister for Development).—

(*a*) Yes.

(*b*) Yes.

(*c*) The New society proposes to help members in agricultural production activities. The question of competition, etc., does not arise.

(*d*) There is no objection, provided there is need for the same and the proposed society is a viable unit.

(*e*) No.

Sri K. H. PATIL.—How many families at Binikadakatti were excluded in the original Co-operative Credit Society ?

Sri P. M. NADGOUDA.—According to the information available 150 agriculturist families are made members in this society.

Sri K. H. PATIL.—Is it a fact that false report is submitted by the officers of the department against whom bribery charges have been made and applications were submitted to the Registrar, Deputy

(SRI K. H. PATIL)

Registrar, Minister and to the Secretary alleging that the Assistant Registrar has taken money and falsely submitted report and even to this day the number quoted is not correct? Are you denying this fact?

Sri P. M. NADGOUDA.—I totally deny the allegations and insinuations made against the officers.

Sri K. H. PATIL.—Are you still prepared to say after hearing me that the society consists of 150 members?

Sri P. M. NADGOUDA.—Yes, I do.

Sri C. K. RAJAIAH SHETTY.—When it is the policy that there should be one society for the region, what are the special reasons to hvae two societies?

Sri P. M. NADGOUDA.—According to the instructions issued by the Government if 150 agriculturists do form the society with a minimum share capital of Rs. 2,500, the Government has no option but to register it.

ಶ್ರೀ ಎಂ. ನಾಗಪ್ಪ.—(ಸಿ)ಗೆ ಉತ್ತರವಾಗಿ ಹೇಳಿರುವುದು ಸ್ಪಷ್ಟವಾಗಿಲ್ಲ. ಇದರಲ್ಲಿ ಹೇಳಿರುವಂತೆ ಮನಿವೆಂಡರಿಗಾಗಿ ಈ ಸೊಸೈಟಿ ಮಾಡುತ್ತಿರುವಿರೇ ಹೇಗೆ ವಿವರಗಳನ್ನು ತಿಳಿಸುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಅಗ್ರಿಕಲ್ಚರಿಸ್ಟ್ಸ್‌ಗೆ ಅನುಕೂಲವಾಗಲಿ ಎಂದು ಅವರು ಮನವಿ ಮಾಡಿ ಸೊಸೈಟಿ ಮಾಡುತ್ತೇವೆಂದು ಕೇಳಿದರು. ಅದರಿಂದ ಮಾಡಲಾಗಿದೆ.

Sri M. S. KRISHNAN.—Is it not a fact that some of the sponsors of this society are not only monied people but also the supporters of the Congress and that they can violate all the rules and form the society.

Sri P. M. NADGOUDA.—I dare say on the floor of the House of that they are all the supporters of the hon. Member Sri K. H. Patil.

ಶ್ರೀ ಎಸ್. ಎ. ಗುರ್ರೆಡ್ಡಿ.—ಸರ್ಕಾರದವರ ಮೂಲ ಉದ್ದೇಶ ಸೊಸೈಟಿಗಳಲ್ಲಿ ಹೆಚ್ಚು ಷೇರು ಬಂಡವಾಳ ಇರಬೇಕು ಎಂದು ಈಚೆಗೆ ಎರ್ಡ್ಮೂ ಸೊಸೈಟಿಗಳಲ್ಲೂ ನುಮಾರು ಒಂದು ಲಕ್ಷದಷ್ಟು ಷೇರು ಬಂಡವಾಳ ಇರಬೇಕು ಎಂದು ಸರ್ಕಾರದವರ ನೀತಿಯಾಗಿದೆಯಲ್ಲವೇ?

ಶ್ರೀ ಪಿ. ಎಂ. ನಾಡಗೌಡ.—ಅಂಥ ಹಾರ್ಡ್ ಅಂಡ್ ಫಾಸ್ಟ್ ರೂಲ್ಸ್ ಏನೂ ಇಲ್ಲ. ಆದರೆ ಹೆಚ್ಚು ಷೇರು ಬಂಡವಾಳ ಇರಬೇಕು ಎನ್ನುವುದು ಒಂದು ಉದ್ದೇಶವಾಗಿದೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಇಲ್ಲಿ ಈಗಾಗಲೇ ಒಂದು ಸೊಸೈಟಿ ಇದ್ದರೂ ಇನ್ನೊಂದು ಸೊಸೈಟಿಗೆ ಅಪ್ಪಣೆ ಕೊಟ್ಟಿರುವುದು ನಿಜವೇ?

ಶ್ರೀ ಪಿ. ಎಂ. ನಾಡಗೌಡ.—ಹೌದು.

ಶ್ರೀ ಜಿ. ದುಗ್ಗಪ್ಪ.—ಇಲ್ಲರುವ ಒಂದು ಸೊಸೈಟಿ ಬಹಳ ಚೆನ್ನಾಗಿ ಚಾಲೂ ಆಗಿ ನಡೆಯುತ್ತಿರುವಾಗ ಇನ್ನೊಂದು ಸೊಸೈಟಿಯನ್ನು ಇಲ್ಲಿ ಹೊಸದಾಗಿ ತೆರೆಯಲು ಇದ್ದಂತಹ ವಿಶೇಷ ಕಾರಣಗಳೇನು?

ಶ್ರೀ ಪಿ. ಎಂ. ನಾಡಗೌಡ.—ಇಲ್ಲಿನ ಸೊಸೈಟಿ ಚೆನ್ನಾಗಿದೆ. ಆದರೆ ಇಲ್ಲರುವ ಅಗ್ರಿಕಲ್ಚರಿಸ್ಟ್‌ಗಳು ತಮಗೆ ವ್ಯವಸಾಯ ಮತ್ತಿತರ ಬಾಬುಗಳಿಗಾಗಿ ಸರಿಯಾಗಿ ಹಣ ಪುರವಟೆಯಾಗುತ್ತಿಲ್ಲ. ಇದಕ್ಕಾಗಿ ಬೇರೆ ಒಂದು ಸೊಸೈಟಿ ಮಾಡುತ್ತೇವೆಂದು ಹೇಳಿದರು, ಅದಕ್ಕೆ ಅಪ್ಪಣೆ ಕೊಡರಾಗಿದೆ.

Sri K. H. PATIL.—Is it not the intention of the Government to defeat the cause of the ably and best-managed society and create rivalries in the small village because the Congress has no hold in that society and is Mr. K. H. Patil who has a hold in that society. Is it not with that view that the Government has encouraged this society ?

Sri P. M. NADGOUDA.—I totally deny all the insinuations made by the hon. Member.

150 ಮುಂದಿ ಇರುವ ಈ ಸೊಸೈಟಿಯು ಜನರು ನುಮಾರು ನಾಲ್ಕೆಂಟು ವರ್ಷಗಳಿಂದಲೂ ಇಲ್ಲಿ ಈಗಿರುವ ಸೊಸೈಟಿಯಿಂದ ನಮಗೆ ಜಸ್ಟಿನ್ ಸಿಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇದ ಕ್ಕಾಗಿ ಸರ್ಕಾರದ ಮೇಲೆ ಬಹು ಒತ್ತಾಯ ತರುತ್ತಿರುವುದರಿಂದ ಇಲ್ಲಿ ಇನ್ನೊಂದು ಸೊಸೈಟಿ ಮಾಡಿ ದರು. ಇದನ್ನು ರಿಜಿಸ್ಟರು ಮಾಡಲಾಗಿದೆ.

Nurses Training Course conducted in Private Hospital in Bangalore

33. Sri P. F. D'MELLOW (Nominated).—

Will the Minister for Health be pleased to state :—

(*a*) the names of private hospitals in Bangalore which conduct nurses training course to young women ;

(*b*) whether any of these hospitals have expanded their nurses training programme during the past three years, and if so, the names of such hospitals ;

(*c*) the qualifications prescribed for these nurses course and the method adopted for the selection of applicants for such courses by private hospitals in Bangalore ;

(*d*) the procedure followed before such institutions are permitted to conduct nurses training course ?

A.—Sri Y. RAMAKRISHNA (Minister for Health).—

(*a*) (i) St. Marthas's Hospital, Bangalore.
(ii) Church of South India Hospital, Bangalore.

(*b*) Yes ; both the hospitals mentioned above.

(*c*) SSLC or Marticulation. The method of selection is not known.

(*d*) The usual procedure is that an officer of the Department is deputed to inspect the institution and to furnish a report ; and on the basis of his report the hospitals are permitted to undertake the training course. This is followed in case of St. Martha's Hospital. No such procedure is followed in case of Church of South India Hospital since the candidates trained there appear for an examination of Christian Medical Board of South India.

Sri P. F. D'MELLOW.—Has Government any plans to raise the standard of nursing in this State by instituting a graduate course in nursing ?

† Sri Y. RAMAKRISHNA.—Yes; that proposal is under the active consideration of the Government.

Sri N. A. CHANNE GOWDA.—What control Government has got over these private hospitals which give training and may I know whether these examinations are recognised by Government ?

Sri Y. RAMAKRISHNA.—Yes, they are recognised by Government.

ಶ್ರೀ ಎಸ್. ಎಸ್. ಅರಕೇರಿ.—ಪ್ರೈವೇಟು ನರ್ಸಿಂಗು ಹೋಂಗಳಲ್ಲಿ ಟ್ರೇನಿಂಗು ಆಗಿರುವ ನರ್ಸುಗಳಿಂದ ಉತ್ತಮವಾದ ಕೆಲಸಗಳು ಆಗುತ್ತಿವೆ. ಆದೇ ಸ್ಟ್ಯಾಂಡರ್ಡ್‌ನಲ್ಲಿ ಸರಕಾರದ ಆಸ್ಪತ್ರೆಗಳಲ್ಲಿರುವ ನರ್ಸುಗಳಿಂದ ಆಗುತ್ತಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ವೈ. ರಾಮಕೃಷ್ಣ.—ಕಾರಣ ಬಹುಶಃ ಈಗ ಕಡಿಮೆ ಜನರು ಇರಬಹುದು ಮತ್ತು ಅವರ ಮೇಲೆ ಸರಿಯಾದ ಉನ್ನುವಾರಿ ವಹಿಸಬೇಕಾಗುತ್ತದೆ.

Sri B. P. GANGADHAR.—May I know whether the Government has any control over these institutions ?

Sri Y. RAMAKRISHNA.—We have no control.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಉತ್ತರದಲ್ಲಿ ಚರ್ಚ್ ಆಫ್ ಇಂಡಿಯಾ ಆಸ್ಪತ್ರೆಯಲ್ಲಿ ತರಬೇತು ಪಡೆವ ಅಭ್ಯರ್ಥಿಗಳು ದಕ್ಷಿಣ ಭಾರತದ ಕ್ರಿಶ್ಚಿಯನ್ ವೈದ್ಯಕೀಯ ಮಂಡಲಿಯವರು ನಡೆಸುವ ಪರೀಕ್ಷೆಗೆ ಕುಳಿತುಕೊಳ್ಳುವುದರಿಂದ ಅಂಥ ಕಾರ್ಯವಿಧಾನವನ್ನು ನದರಿ ಆಸ್ಪತ್ರೆಯ ವಿಷಯದಲ್ಲಿ ಅನುಸರಿಸರಾಗುವುದಿಲ್ಲ ಎಂದು ಹೇಳಿದ್ದೀರಿ. ಈಗ ನಿಮಗೆ ಕಂಟ್ರೋಲ್ ಏನಿದೆ ? ಆ ಬೋರ್ಡ್ ಮಾಡತಕ್ಕ ಎಕ್ಸಾಮಿನೇಶನ್ ರಿಕಗ್‌ನೈಸ್ ಮಾಡಿದ್ದೀರಾ ? ನಿಮ್ಮದು ಸುಪರ್‌ವಿಜನ್ ಇದೆಯೇ ?

ಶ್ರೀ ವೈ. ರಾಮಕೃಷ್ಣ.—ಸೇಂಟ್ ಮಾರ್ತಾ ಆಸ್ಪತ್ರೆ ವಿಚಾರ ಹೇಳುವುದಾದರೆ ಅಲ್ಲಿ ತರಬೇತು ತೆಗೆದುಕೊಳ್ಳತಕ್ಕ ನರ್ಸುಗಳು ಮೈಸೂರು ಸರ್ಕಾರವ ಪರೀಕ್ಷೆಗೆ ಕೂತುಕೊಳ್ಳಬೇಕು. ಅದಕೆ ಸ್ಕೀಸ್ಕರ ನಮ್ಮ ಜಾಯಿಂಟ್ ಡೈರೆಕ್ಟರ್ ಅಲ್ಲಿಗೆ ಹೋಗಿ ಪರಿಶೀಲನೆ ಮಾಡುತ್ತಾರೆ. ಚರ್ಚ್ ಆಫ್ ಸೌತ್ ಇಂಡಿಯಾ ಆಸ್ಪತ್ರೆಯಲ್ಲಿ ತರಬೇತು ಪಡೆದ ನರ್ಸುಗಳು ಬೆಲ್ಲೂರಿನಲ್ಲಿ ಪರೀಕ್ಷೆಗೆ ಕೂತು ಕೊಳ್ಳುತ್ತಾರೆ, ಅದು ನಮ್ಮ ಕಂಟ್ರೋಲ್‌ನಲ್ಲಿಲ್ಲ.

ಶ್ರೀ ಸಿದ್ಧಯ್ಯ ಕಾಶೀಮಠ.—ಈಗ ಇವರನ್ನು ಆಯ್ಕೆ ಮಾಡಿ ಟ್ರೇನಿಂಗ್‌ಗೆ ಕಳಿಸುತ್ತೀರಾ, ಅಥವಾ ಆಸ್ಪತ್ರೆಯ ಅಡಳಿತದವ್ರೇ ತರಬೇತಿಗಾಗಿ ಆರಿಸುತ್ತಾರೋ ?

Sri Y. RAMAKRISHNA.—The answer is there in the reply.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರ ನಡೆಸತಕ್ಕ ಆಸ್ಪತ್ರೆಗಳಲ್ಲಿ ಟ್ರೇನಿಂಗ್ ಕೋರ್ಸು ಪ್ರಾರಂಭ ಮಾಡಿ ಹೆಚ್ಚು ಶಿಕ್ಷಣ ಕೊಡುವುದಕ್ಕೆ ಅಡ್ಡಿ ಏನಿದೆ ?

ಶ್ರೀ ವೈ. ರಾಮಕೃಷ್ಣ.—ಈಗಾಗಲೇ 12 ಕೇಂದ್ರಗಳಲ್ಲಿ ತರಬೇತು ಕೊಡುತ್ತಿದ್ದಾರೆ. ಮುಂದೆ ಎಕ್ಸ್‌ಟೆಂಡ್ ಮಾಡುತ್ತೀದ್ದೇವೆ ಮತ್ತು ಒಂದು ನರ್ಸಿಂಗ್ ಕಾರೇಜು ಕೂಡ ಪ್ರಾರಂಭ ಮಾಡಬೇಕೆಂದು ಸರ್ಕಾರದ ಅಭಿಪ್ರಾಯದಲ್ಲಿದೆ.

Sri G. DUGGAPPA.—When the Government itself does not know the method of selection, what made Government recognise this course ?

Sri Y. RAMAKRISHNA.—It pertains to Church of South India Hospital, Bangalore and not to St. Martha's Hospital.

Sri G. DUGGAPPA.—Will Government apply its mind and see whether recongnition is not given to such institutions which have not given information regarding the method of selection of candidates ?

†Indicates that the remarks or speeches have not been revised by the member concerned.

ಶ್ರೀ ವೈ. ರಾಮಕೃಷ್ಣ.—ವೆಲ್ಲೂರಿಗೆ ಪರೀಕ್ಷೆಗೆ ಹೋಗುವ ದಾದಿಯರ ವಿಚಾರ ಗೊತ್ತಿಲ್ಲ. ಸೇಂಟ್ ಮಾರ್ತಾ ಆಸ್ಪತ್ರೆಯಲ್ಲಿರುವವರಿಗೆ ಮಾತ್ರ ಮೈಸೂರು ಸರ್ಕಾರದ ರಿಕಗ್‌ನಿಷನ್ ಇರುವುದು.

ಶ್ರೀ ಎಂ. ಎಸ್. ಕೃಷ್ಣನ್.—(ಸಿ)ಯಲ್ಲಿ ಆಯ್ಕೆ ವಿಧಾನ ತಿಳಿದಿರುವುದಿಲ್ಲವೆಂದು ಹೇಳುತ್ತೀರಿ. (ಡಿ)ಯಲ್ಲಿ ಸೇಂಟ್ ಮಾರ್ತಾ ಆಸ್ಪತ್ರೆಯಲ್ಲಿ ಒಂದು ರೀತಿಯಾದ ರೂಲ್ ಮತ್ತು ಬೇರೆ ಚರ್ಚ್ ಆಫ್ ಇಂಡಿಯಾ ಆಸ್ಪತ್ರೆಗೆ ಬೇರೆ ರೂಲ್ ಇದೆ ಎಂದು ಹೇಳಿದ್ದೀರಿ. ಈ ರೀತಿ ಎರಡು ರೀತಿಯ ರೂಲಿನಿಂದ ತಾರತಮ್ಯವಾಗುವುದಿಲ್ಲವೇ ? ಅದರಿಂದಾಗಿ ಈಗಾಗಲೇ ನರ್ಸುಗಳು ಕ್ವಾಲಿಟಿ ಸರಿಯಾಗಿಲ್ಲವೆಂದು ದೂರು ತಮಗೆ ಬರಲಿಲ್ಲವೆ ! ಮತ್ತು ಇದನ್ನು ನಿವಾರಣೆ ಮಾಡುವುದಕ್ಕೆ ಒಂದು ಪ್ರೊಸೀಜರ್ ಮಾಡದಿರುವುದರಿಂದ ಅನ್ಯಾಯವಾಗುವುದಿಲ್ಲವೇ !

ಶ್ರೀ ವೈ. ರಾಮಕೃಷ್ಣ.—ಅಂಥ ಅನ್ಯಾಯವಾಗುವುದಿಲ್ಲ. ನಾನು ನನ್ನ ಉತ್ತರದಲ್ಲೇ ಸ್ಪಷ್ಟವಾಗಿ ಹೇಳಿದ್ದೇನೆ. ಸೇಂಟ್ ಮಾರ್ತಾದಲ್ಲಿ ತರಬೇತಿ ಪಡೆದವರು ಮೈಸೂರು ಸರ್ಕಾರದ ಪರೀಕ್ಷೆಗೆ ಕೂತುಕೊಳ್ಳುತ್ತಾರೆ, ಅದಕ್ಕೆ ರೆಕಗ್ನಿಶನ್ ಸಿಕ್ಕಿದೆ. ಇನ್ನೊಂದು ಆಸ್ಪತ್ರೆಯಲ್ಲಿ ನಡೆಸತಕ್ಕ ತರಬೇತಿ, ಅದು ವೆಲ್ಲೂರಿನ ಆಸ್ಪತ್ರೆಯ ಕಾನೂನಿಗೆ ಒಳಪಟ್ಟಿದ್ದರಿಂದ, ನಮಗೆ ಯಾವ ರೀತಿಯು ಕಂಟ್ರೊಲ್ ಇಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಕೋರ್ಸು ನಡೆಸುವುದಕ್ಕೆ ಸರ್ಕಾರದಿಂದ ಗ್ರಾಂಟ್ ವಗ್ಯೆರೆ ಕೊಡಲಾಗುತ್ತದೆಯೇ, ಮತ್ತು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಏನಾದರೂ ಕೊಡುತ್ತಿದ್ದಾರೆಯೇ ?

ಶ್ರೀ ವೈ. ರಾಮಕೃಷ್ಣ.—ಸ್ಟೈಪೆಂಡ್ ಇಲ್ಲಿಯತನಕ 80 ರೂಪಾಯಿ ಕೊಡುತ್ತಿದ್ದರು, ಈಗ 130 ರೂಪಾಯಿ ಕೊಡುತ್ತಿದ್ದಾರೆ. ಖಾಸಗಿಯು ಆಸ್ಪತ್ರೆಯವರು ನಡೆಸತಕ್ಕದ್ದಕ್ಕೆ ಸೆಂಟ್ರಲ್ ಗೌರ್ಮೆಂಟ್ ಗ್ರಾಂಟ್ ಇನ್ ಏಡ್ ಕೊಡುತ್ತಿದ್ದಾರೆ. ನಾವು ಏನೂ ಕೊಡುತ್ತಿಲ್ಲ.

Construction of Anjaneya Temple

34. Sri GANGABOVI (Gulur).—

Will the Minister for Revenue be pleased to state :—

(*a*) when the construction of Sri Anjaneya Temple in the village Naruganahalli, Gulur Hobli of Tumkur Taluk was sanctioned by the Muzrai Department ;

(*b*) the reasons for not completing the construction of the temple which is half done ;

(*c*) the persons responsible for this delay and the action, if any, taken against them ?

A.—Sri H. V. KOUJALGI (Minister for Revenue).—

(*a*) During 1956.

(*b*) At the time of the execution of the work the existing mud walls were found not suitable as they were about to give way. Sufficient funds were not available at the credit of the village institution to rectify this defect. Hence sanction for a grant was sought for from the Central Muzrai Funds. By 1961 sufficient funds accrued at the credit and orders were also received to complete the work out of the temple funds. However, the contractor who was issued a notice to complete the work

(SRI H. V. KOUJALGI)

declined to do unless the rates provided in the estimate were revised as per the current schedule of rate and also cement and iron was made available to him by means of a recommendation to Bhadravathi Cement Works. The contractors' requirements have since been complied with. The revised estimate for Rs. 4,016 is under the scrutiny of the Public Works Department.

(*c*) No one can be held responsible for the delay in view of the circumstances explained in reply to clause (*b*) of the question.

ಶ್ರೀ ಗಂಗಾಬೋವಿ.—ತುಮಕೂರು ತಾಲ್ಲೂಕು ಗೂಳೂರು ಹೋಬಳಿಯ ನರುಗಾನ ಹಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದ ನಿರ್ಮಾಣ ಕಾರ್ಯ ವಿಳಂಬವಾಗುವುದಕ್ಕೆ ತಾವು ಇಲ್ಲಿ ಕಾರಣಗಳನ್ನು ಕೊಟ್ಟಿದ್ದೀರಿ, ಗೌಡಯನ್ನು ಕಟ್ಟತಕ್ಕ ಮಣ್ಣು ನರಿಯಾಗಿರಲಿಲ್ಲ ಅಂತ. ಹತ್ತು ವರ್ಷದಿಂದ ಈ ರೀತಿ ವಿಳಂಬವಾಗುತ್ತಾ ಇದೆಯೇನು ಸ್ವಾಮಿ?

ಶ್ರೀ ಎಚ್. ಎ. ಕೌಜಲಗಿ.—ವಿಳಂಬವಾದ ಸಂಗತಿ ಖರೆ ಅದೆ. ಮೊದಲು ಕಲ್ಲು ಮಣ್ಣಿಗೆ ಎಂದ ಕಟ್ಟಬೇಕೆಂದು ಇತ್ತು. ಅದು ಸಾಧ್ಯವಾಗುವುದಿಲ್ಲ ಎಂದು ತಜ್ಞರು ಅಭಿಪ್ರಾಯ ಕೊಟ್ಟರು, ಮೊದಲು 13 ನೂರು ರೂಪಾಯಿಗಳ ಎಸ್ಟಿಮೇಟ್ ಇತ್ತು. ಅನಂತರ ಎಸ್ಟಿಮೇಟ್ಸ್ ಮಾಡಿದಾಗ 33 ನೂರು ರೂಪಾಯಿ ಆಯಿತು. ಆಮೇಲೆ ಕಾರಣಾಂತರದಿಂದ ಕಂಟ್ರಾಕ್ಟರ್ಸ್ ಬರಲಿಲ್ಲ, ಪುನಃ ಎಸ್ಟಿಮೇಟ್ ಮಾಡಿದ್ದಾರೆ 4 ಸಾವಿರದ 16 ನೂರು ರೂಪಾಯಿ ಆಗಿದೆ. ಇನ್ನು ವಿಳಂಬವಾಗಲಿಕ್ಕೆ ಕಾರಣವಿಲ್ಲ.

Payment of T. A. and Family Allowance to Teachers selected for Training

35. Sri N. B. SIRDESAI (Khanapur).—

Will the Minister for Education be pleased to state:—

(*a*) whether primary school teachers from Karwar and Belgaum District selected for training at Vadgaon training College in Belgaum District in 1956 to 1958 underwent their training at their own expense;

(*b*) whether batches of teachers selected for training in 1954–55 and 58–59 were paid pay, D.A. and family allowance;

(*c*) whether representations in this regard were submitted by the teachers and the M.L.As.;

(*d*) whether amounts of loan paid to the teachers who underwent training in 1956 to 58 were recovered from them and if so, in what way?

A.—Sri K. V. SHANKARA GOWDA (Minister for Education).—

(*a*) Yes.

(*b*) The teachers selected for training in 1954–55 and who were either permanent teachers or temporary teachers with 5 years service on 15th June 1953 were paid full pay. The teachers selected in 1958–59

were sanctioned payment of full pay and allowances during the period of training regardless of the tenure of appointment they held or the length of their service.

(*c*) Some of the temporary teachers, as had not completed 5 years' service on 15th June 1953 and were selected for training prior to 1958-59 represented to the Director of Public Instruction.

(*d*) Yes. The loan was recovered after the completion of the course in monthly instalments of Rs. 15 plus interest thereon at 4 per cent per annum.

Sri N. B. SIRDESAI.—May I know what was the necessity of issuing two different and discriminating Government Orders such as applying five years service condition in case of teachers selected for training during 1954-55 and not considering the length of service in respect of teachers selected during 1958-59 ?

Sri K. V. SHANKARA GOWDA.—The rules were changed during 1958-59.

Sri N. B. SIRDESAI.—What was the necessity for changing the rules ?

Sri K. V. SHANKARA GOWDA.—We wanted to improve the service conditions of the teachers and therefore the rules had to be changed.

Sri B. P. KADAM.—May I know whether these rules apply to all teachers throughout the State or apply only to Marathi teachers of Belgaum and Karwar area ?

Sri K. V. SHANKARA GOWDA.—It applies to teachers throughout the State.

Sri N. B. SIRDESAI.—Is it not a fact that teachers selected for training in 1958-59 were subjected to injustice due to discriminating Government Order and would it not be better to reconsider their case to see that justice is done to them ?

Sri K. V. SHANKARA GOWDA.—They were governed by rules existing then. We thought that the rules would work hardship on them and therefore changed the rules in 1958.

Sri N. B. SIRDESAI.—Would the Government consider their case and refund the amount of their expense by treating the amount as rightful amounts of pay and D.A. ?

Sri K. V. SHANKARA GOWDA.—It cannot be done.

Loan for Irrigation Wells and Land Improvement

36. Sri K. SANGANGOUDA (Lingsugur).—

Will the Minister for Development be pleased to state :—

(*a*) the number of applications pending sanction in the Gulbarga Branch of the Central Co-operative Land Development Bank, pertaining

(SRI K. SANGANGOWDA)

to Lingsugur Taluk, Raichur District, about irrgation wells and Land Improvement loan;

(*b*) since how long they are pending;

(*c*) the reasons for the delay ?

A.—SRI B. L. GOUDA (Deputy Minister for Co-operation).—

(*a*) Nil.

(*b*) Does not arise.

(*c*) Does not arise.

ಶ್ರೀ ಕೆ. ಸಂಗನಗೌಡ.—ಗ್ರಾಂಟು ಆಫೀಸ್ ಗುಲ್ಬರ್ಗದಿಂದ ರಾಯಚೂರಿಗೆ ಸ್ಥಳಾಂತರ ಮಾಡಿದ ನಂತರ ಗುಲ್ಬರ್ಗ ಆಫೀಸಿನಲ್ಲಿ ಅರ್ಜಿಗಳು ಯಾವುದೂ ಉಳಿದಿಲ್ಲ ಎಂದು ಹೇಳುತ್ತಾ ಇದ್ದೀರಿ. ಗುಲ್ಬರ್ಗಾದಿಂದ ರಾಯಚೂರು ಆಫೀಸಿಗೆ ವರ್ಗವಾದ ಅರ್ಜಿಗಳು ಎಷ್ಟು ? ಮುಂಜೂರಾಗದೆ ಎಷ್ಟು ಅರ್ಜಿಗಳು ಉಳಿದಿವೆ ಎಂಬುದನ್ನು ತಿಳಿಸಬಲ್ಲಿರಾ ?

†ಶ್ರೀ ಬಿ. ಎಲ್. ಗೌಡ.—ಈಗ ಕೇವಲ 20 ಅರ್ಜಿಗಳು ಮಾತ್ರ ಪೆಂಡಿಂಗ್ ಇವೆ. ಲಿಂಗಸೂಗೂರು ಬ್ಯಾಂಚ್‌ನಲ್ಲಿ ಇದ್ದಂಥ 76ರ ಪೈಕಿ 26ರಕ್ಕೆ ನಿಯಮದ ಪ್ರಕಾರ ಪೂರ್ತಿ ಸಿಕ್ಕಿದೆ. ಅರ್ಧಕ್ಕಿಂತ ಹೆಚ್ಚಾಗಿ ಪೂರ್ತಿ ಮಾಡಿದ ಸಂದರ್ಭದಲ್ಲಿ ಮುಂಜೂರು ಮಾಡುತ್ತೇವೆ. ಈಗ ಅಭಾವ ಪರಿಸ್ಥಿತಿ ಇರುವುದರಿಂದ ಎರಾ್ಲ ಮುಂಜೂರು ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಸಂಗನಗೌಡ.—64-65, 65-66ರ ಸಾಲಿನ ಬಾವಿಗಳು ಕಂಪ್ಲೀಟ್ ಆಗದ ವಿನಹ 67-68, 68-69ರಲ್ಲಿ ಬಂದ ಅರ್ಜಿಗಳನ್ನು ಮುಂಜೂರು ಮಾಡಲಾಗುವುದಿಲ್ಲ ಅಂತ ತಿಳಿದುಕೊಂಡು ಕೇಂದ್ರ ಆಫೀಸಿನವರು ಪ್ರೈಮರಿ ಲ್ಯಾಂಡ್ ಬ್ಯಾಂಕುಗಳಿಗೆ ಸರ್ಕ್ಯುಲರ್ ಕಳುಹಿಸಿದ್ದಾರೆ ಮತ್ತು ಆ ಪ್ರಕಾರ ನಿರ್ಣಯ ಮಾಡಿದ್ದಾರೆ ಎಂಬುದನ್ನು ತಿಳಿಸಿದ್ದಾರೆಯೇ ?

ಶ್ರೀ ಬಿ. ಎಲ್. ಗೌಡ.—1964-65ನೇ ಸಾಲು ಮುಗಿದಿದೆ. 1967-68ರಲ್ಲಿ ಮುಂಜೂರಾದ ಬಾವಿಗಳಲ್ಲಿ ಅರ್ಧ ಪೂರ್ತಿಯಾಗಿದ್ದರೆ ಮಾತ್ರ ಕೊಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಅಭಿವೃದ್ಧಿ ಬ್ಯಾಂಕಿನಲ್ಲಿ ಸಾಲ ಮುಂಜೂರು ಮಾಡುವುದು ಯಾರು ಅರ್ಧಕ್ಕೆ ನಿಲ್ಲಿಸಿದ್ದಾರೋ ಅವರಿಗೆ ಕೊಡುವುದು ಸರಿ, ಅದು ಪೂರ್ಣವಾಗದೆ ಹೊಸದಾಗಿ ಮುಂಜೂರು ಮಾಡುತ್ತಿರುವುದು ಆ ಬಾವಿಗಳು ಪೂರ್ಣವಾಗದೇ ಇರುವುದಕ್ಕೆ ಕಾರಣವಲ್ಲವೇ ?

ಶ್ರೀ ಬಿ. ಎಲ್. ಗೌಡ.—ಕೋಆಪರೇಟೀವ್ ಸೆಕ್ಟರ್‌ನಲ್ಲಿ ಕೆಲಸ ಮಾಡುವಾಗ ಆ ರೀತಿ ಆಗುತ್ತದೆ. ಯಾರು ಅರ್ಧಮಾಡಿ ಮುಗಿಸಿದ್ದಾರೆ ಅವರಿಗೆ ಪೂರ್ತಿ ಮಾಡುವುದಕ್ಕೆ ಸಿಕ್ಕುತ್ತದೆ.

ಶ್ರೀ ಎಂ. ನಾಗಪ್ಪ.—ಈಗ 76 ಅರ್ಜಿಗಳಲ್ಲಿ 26 ಮುಂಜೂರು ಆಗಿವೆ ಎಂದು ಹೇಳಿದಿರಿ. ಉಳಿದವು ರಿಜೆಕ್ಟ್ ಆದುವೇ ಅಥವಾ ಯಾವ ಸ್ಟೇಜಿನಲ್ಲಿವೆ ?

ಶ್ರೀ ಬಿ. ಎಲ್. ಗೌಡ.—ನಾನು ಹೇಳಿದ್ದು 20 ಅರ್ಜಿಗಳು ಉಳಿದಿವೆ ಎಂದು.

ಶ್ರೀ ಎಂ. ನಾಗಪ್ಪ.—ಡಿಫಾಲ್ಟ್ ಆದಾಗ ರಿನ್ಯೂ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಪೆಂಡಿಂಗ್ ಇರುತ್ತವೆ.

ಶ್ರೀ ಎಚ್. ಎನ್. ನಂಜೇಗೌಡ.—ಕೇಂದ್ರ ಅಭಿವೃದ್ಧಿ ಬ್ಯಾಂಕು ಸೇಕಡ 50 ಭಾಗ ಬರ ಬೇಕಾದ ಹಣ ವಸೂಲಾಗದಿದ್ದರೆ ಅರ್ಜಿಗಳನ್ನು ರಿಜೆಕ್ಟ್‌ಮಾಡಬೇಕು ಎಂದು ತಿಳಿಸಿರುವುದು ನೀತಿಗೆ ವಿರುದ್ಧವಲ್ಲವೇ ?

ಶ್ರೀ ಬಿ. ಎಲ್. ಗೌಡ.—ಹಾಗೆ ಮಾಡಿರುವುದು ನಿಜ. ಅದು ನೀತಿಗೆ ವಿರುದ್ಧ ಅಲ್ಲ. ರಿಸರ್ವ್ ಬ್ಯಾಂಕಿನಿಂದ ಹಣ ಪಡೆಯಬೇಕಾಗಿದೆ. ಹೆಚ್ಚು ಅರ್ಜಿಗಳು ಬಂದಾಗ ಎಲ್ಲರಿಗೂ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಅನುಸರಿಸಿರುವ ನೀತಿ ಸರಿಯಾಗಿದೆ.

ಶ್ರೀ ಬಿ. ನಂಜಪ್ಪ.—ಯಾವುದಾದರೂ ಬ್ಯಾಂಕು ದಿವಾಳ್ತಿರಾಗಿದ್ದರೆ ಸಾಲ ಕೊಡುವುದಿಲ್ಲ ವೆಂದು ಹೇಳಿದರೆ ಈಗ ದೇಶದ ಪರಿಸ್ಥಿತಿ ಉಗ್ರವಾಗಿರುವಾಗ ಜನರಿಗೆ ಅದರಿಂದ ತೊಂದರೆ ಯಾಗುವುದಿಲ್ಲವೆ?

ಶ್ರೀ ಬಿ. ಎರ್.ಗೌಡ.—ಅದಷ್ಟು ಜನರಿಗೆ ಕೊಡಲಾಗುತ್ತಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಮೊದಲು ಎಷ್ಟು ಅರ್ಜಿಗಳು ಬಂದರೂ ಬಾವಿಗಳಿಗಾಗಿ ಸಾಲ ಮಂಜೂರು ಮಾಡಲಾಗುವುದು ಎಂದು ಹೇಳಿ, ಈಗ ಸುಮಾರು 300 ಅರ್ಜಿ ಕಳಿಸಿದರೆ 50 ಮಾತ್ರ ಮಂಜೂರುಮಾಡಿರುವುದು ಸರಿಯೇ?

ಶ್ರೀ ಬಿ. ಎಲ್. ಗೌಡ.—ಪ್ರಾರಂಭದಲ್ಲಿ ಎಲ್ಲರಿಗೂ ಸಹಾಯಮಾಡಬೇಕೆಂದಿದ್ದೆವು. ಡಿವ್ಯಾಂಡ್ ಜಾಸ್ತಿಯಾದ ಮೇಲೆ ಹೊಸ ನಿಯಮ ಮಾಡಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—300 ಅರ್ಜಿದಾರರಿಗೆ ಮುಂದಾದರೂ ಕೊಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ಪ್ರತಿಯೊಂದು ಬ್ಯಾಂಕಿಗೂ ಟಾರ್ಜೆಟ್ ಗೊತ್ತುಮಾಡಿದೆ.

ಶ್ರೀ ಎ. ಆರ್ ಪಂಚಗಾವಿ.—ಬಾವಿ ಪೂರ್ಣವಾಗಿದ್ದರೂ ಕಂಪ್ಲೀಷನ್ ಸರ್ಟಿಫಿಕೇಟ್ ಕೊಡುವಾಗ ಬಿ. ಡಿ. ಓ. ತಡಮಾಡಿದರೆ ಉಳಿದವರಿಗೆ ಶಿಕ್ಷೆಯೇಕೆ?

ಶ್ರೀ ಬಿ. ಎರ್. ಗೌಡ.—ತಡವಾಗುತ್ತಿದೆಯೆಂದು ದೂರು ಬಂದಮೇಲೆ ಬಿ. ಡಿ. ಓ ಅಲ್ಲದೆ ಅಸಿಸ್ಟೆಂಟ್ ರಿಜಿಸ್ಟ್ರಾರರೂ ಕೂಡ ಸರ್ಟಿಫಿಕೇಟ್ ಕೊಡಬಹುದು ಎಂದು ತಿಳಿಸಿರುವುದರಿಂದ ಈಗ ಜಾಗ್ರತೆ ಕೆಲಸವಾಗುತ್ತಿದೆ.

Posting of a permanent doctor to Shirthade Hospital

37. Sri RATNAKUMAR KATTEMAR (Mudabidri).—

Will the Minister for Health be pleased to refer to reply given to starred question No. 208 (Sl. No. 120.) on 16th December 1967 and state:—

(*a*) whether the Government is aware that even after the lapse of 18 months Shirthady Hospital in Moodbidri firka is without a permanent doctor;

(*b*) if so, the action proposed to be taken to post a permanent doctor to that Hospital?

A.—Sri Y. RAMAKRISHNA (Minister for Health).—

(*a*) Yes.

(*b*) Action is being taken to post a doctor early.

ಶ್ರೀ ರತನ್‌ಕುಮಾರ್ ಕಟ್ಟೆಮಾರ್.—ಆಸ್ಪತ್ರೆ ಪ್ರಾರಂಭಿಸಿ 18 ತಿಂಗಳಾಗಿದೆ ಎಂದಿರುವುದು ಸತ್ಯಕ್ಕೆ ದೂರವಾದುದು. ಅದು 18 ವರ್ಷ ಎಂದಿರಬೇಕು. ಅಲ್ಲಿನ ಡಾಕ್ಟರು ವರ್ಗವಾಗಿ 18 ತಿಂಗಳಾಗಿದೆ. ಆದರೆ ಬೇರೊಬ್ಬರನ್ನೇಕೆ ಹೋಸ್ಟ್ ಮಾಡಿಲ್ಲ?

† ಶ್ರೀ ಪ್ಯೆ. ರಾಮಕೃಷ್ಣ.—ಕಳೆದ 18 ತಿಂಗಳಲ್ಲಿ ಎರಡುಸಲ ಡಾಕ್ಟರನ್ನು ಪೋಸ್ ಮಾಡಿದರೂ ಅವರು ಹೋಗಲಿಲ್ಲ. ಆದುದರಿಂದ ಮೂರನೆಯ ಸಲ ಹೋಸ್ಟ್ ಮಾಡುತ್ತಿದ್ದೇವೆ.

1-30 P.M.

ಶ್ರೀ ರತ್ನಕುಮಾರ್ ಕಟ್ಟೆಮನೆ.—ಬರುವ ಅಸೆಂಬ್ಲಿ ಪ್ರಾರಂಭವಾಗುವುದರೊಳಗಾಗಿ ಮತ್ತೊಮ್ಮೆ ಪ್ರಶ್ನೆ ಕೇಳಲು ಅವಕಾಶವಿಲ್ಲದಂತೆ ಡಾಕ್ಟರನ್ನು ಪೋಸ್ಟ್ ಮಾಡುತ್ತೀರಾ ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಹೌಸ್ ಸರ್ಜನ್ ಕೋರ್ಸ್ ಮುಗಿಸಿಕೊಂಡು 30 ಜನ ಡಾಕ್ಟರುಗಳು ಇಷ್ಟರಲ್ಲಿಯೇ ಬರುವವರಿದ್ದಾರೆ. ಈ ತಿಂಗಳಲ್ಲಿ ಪೋಸ್ಟ್ ಮಾಡುತ್ತೇವೆ.

ಶ್ರೀಮತಿ ಕೆ. ಲೀಲಾವತಿ ರೈ.—ಡಾಕ್ಟರುಗಳನ್ನು ಪೋಸ್ಟ್ ಮಾಡುವಾಗ ಆಯಾ ಸ್ಥಳಗಳಿಗೆ ಹೋಗಲು ಇಚ್ಛೆ ಪಡುವವರನ್ನು ಪೋಸ್ಟ್ ಮಾಡಿದರೆ ಡಾಕ್ಟರುಗಳು ಹೋಗುತ್ತಾರೆ, ಬೇಡದವರಿಗೆ ಪೋಸ್ಟ್ ಮಾಡಿದರೆ ಅವರು ಹೋಗಿ ಸೇರುವುದಿಲ್ಲ. ಆದ್ದರಿಂದ ಹಳ್ಳಿಗಳಿಗೆ ಹೋಗಲು ಸಿದ್ಧವಾಗಿರುವವರನ್ನು ಪೋಸ್ಟ್ ಮಾಡುತ್ತೀರಾ, ಸ್ವಾಮಿ ?

Sri Y. RAMAKRISHNA.—I consider it as a suggestion.

ಶ್ರೀ ಕೆ. ಎಚ್. ರಂಗನಾಥ.—ಆರೋಗ್ಯ ಮುಖ್ಯಾಧಿಕಾರಿಗಳು ತಮಗೆ ಬೇಕುಬೇಕಾದ ವರನ್ನು ಬೇಕಾದ ಕಡೆಗೆ ವರ್ಗ ಮಾಡತಕ್ಕ ಒಂದು ನೀತಿಯನ್ನು ಅನುಸರಿಸುತ್ತ ಇರುವುದರಿಂದ ರಾಜ್ಯದಲ್ಲಿ ಕೆಲವು ಆಸ್ಪತ್ರೆಗಳಲ್ಲಿ ಡಾಕ್ಟರುಗಳ ಕೊರತೆ ಉಂಟಾಗಲು ಕಾರಣವಾಗಿರುವುದು ನಿಜವೇ ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಅಂಥ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರೇನಾದರೂ ಸರ್ಕಾರಕ್ಕೆ ಬರೆದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ವಿ. ಐತಾಳ.—ಶಿರ್ತಾಡಿ ಆಸ್ಪತ್ರೆಯಲ್ಲಿ ಡಾಕ್ಟರಿಲ್ಲದಿದ್ದರೂ ಔಷಧಿಗಳೆಲ್ಲ ಸರ್ಕಾರದ ರೆಕ್ಕೆಕ್ಕೆ ಹೋಗಿ ಗ್ರಾಮಗಳಿಂದ ಬಂದಂಥ ಜನರು ಅವರವರೇ ಔಷಧಿಗಳನ್ನು ತೆಗೆದುಕೊಂಡು ಹೋಗುತ್ತಿರುವುದು ನಿಜವೇ, ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ನಿಜವಲ್ಲ.

ಶ್ರೀ ಕೆ. ಎಚ್. ರಂಗನಾಥ.—ವರ್ಗಾವರ್ಗಿ ಮಾಡುವುದಕ್ಕೆ ಹಣ ಮತ್ತು ಇತರೆ ಪ್ರಭಾವ ಗಳನ್ನು ಉಪಯೋಗಿಸಿದರೆ ಮಾತ್ರ ಆಗುತ್ತದೆ ಇಲ್ಲದೆ ಹೋದರೆ ಆಗುವುದಿಲ್ಲ ಎನ್ನುತಕ್ಕದ್ದು ಬೀದಿಯ ಮಾತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಸರ್ಕಾರದ ಗಮನಕ್ಕೆ ಬಂದಿಲ್ಲ. ಬರೆದರೆ ಸರ್ಕಾರ ಗಮನಕೆ ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಪಿ. ಗಂಗಾಧರ.—ವರ್ಗಾವರ್ಗಿ ಆಗಬೇಕಾದಾಗ ಸಂಬಂಧಪಟ್ಟ ಶಾಖೆಗೆ ಯಾರು ಜಾಯಿಂಟ್ ಡೈರೆಕ್ಟರಾಗಿರುತ್ತಾರೆ ಅವರ ಸಲಹೆ ಪಡೆದು ಡೈರೆಕ್ಟರವರು ವರ್ಗ ಮಾಡಬೇಕು ಎಂದು ಇದ್ದರೂ ಕೂಡ ಈಗಿರತಕ್ಕ ಡೈರೆಕ್ಟರವರು ಜಾಯಿಂಟ್ ಡೈರೆಕ್ಟರನ್ನು ಕೇಳದೆ ತಮಗೆ ಯಾರು ಹಣವನ್ನು ಕೊಡುತ್ತಾರೆ, ಯಾರು ಒಂದು ಸಾವಿರ ರೂಪಾಯಿ ಕೊಡುತ್ತಾರೆ ಅವರಿಗೆ ಬೇಕಾದ ಜಾಗಗಳನ್ನು ಕೊಡುತ್ತಾರೆ ಎಂದು ಎಲ್ಲರೂ ಹೇಳುತ್ತಾರೆ. ಇದು ಸರ್ಕಾರಕ್ಕೆ ಗೊತ್ತಿದೆಯೇ ? ಹಾಗಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವೈ. ರಾಮಕೃಷ್ಣ.—ಸರ್ಕಾರಕ್ಕೆ ಗೊತ್ತಿಲ್ಲ. ಸರ್ಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಕೆ. ಎಚ್. ರಂಗನಾಥ.—ವರ್ಗಾವರ್ಗಿ ಕೆಲಸವನ್ನು ಡೈರೆಕ್ಟರವರಿಂದ ತಪ್ಪಿಸಿ ಒಬ್ಬ ಐ. ಎ. ಎಸ್ ದರ್ಜೆಯ ಅಧಿಕಾರಿಗಳ ವಶಕ್ಕೆ ಅದನ್ನು ಕೊಡತಕ್ಕುದು ಸೂಕ್ತವಲ್ಲವೇ?

ಶ್ರೀ ವೈ. ರಾಮಕೃಷ್ಣ.—ಅದು ಮಾನ್ಯ ಸದಸ್ಯರ ಸಲಹೆ.

ಶ್ರೀ ಜೆ. ಟಿ. ಗೋವಿಂದರೆಡ್ಡಿ.—ಡಾಕ್ಟರನ್ನು ಪೋಸ್ಟ್ ಮಾಡುವ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ನಾನು ಪತ್ರ ಬರೆದಿದ್ದೆ ಅದಕ್ಕೆ ಉತ್ತರ ಕೊಡದೆ ಇರುವುದು ನಿಜವೇ, ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸದಸ್ಯರು ಕಾಗದ ಬರೆದಿದ್ದಾರೆ. ಈ ತಿಂಗಳಲ್ಲಿ ಅಲ್ಲಿಗೂ ಡಾಕ್ಟರನ್ನು ಪೋಸ್ಟ್ ಮಾಡುತ್ತೇವೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಇಬ್ಬರು ಡಾಕ್ಟರನ್ನು ಕಳಿಸಿದ್ದರೂ ಅವರು ಹೋಗಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಯಾರಾದರೂ ಪ್ರಭಾವಕ್ಕೆ ಅಥವಾ ಲಂಚದ ಪ್ರಭಾವಕ್ಕೆ

ಒಳಪಟ್ಟು ಅವರನ್ನು ಬೇರೆ ಕಡೆಗೆ ಹಾಕಲಾಯಿತೋ ಅಥವಾ ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ, ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಕ್ರಮ ತೆಗೆದುಕೊಂಡಿದ್ದೇವೆ, ಅವರ ಅಪಾಯಿಂಟ್‌ಮೆಂಟ್ ಆರ್ಡರನ್ನು ಕ್ಯಾನಲ್ ಮಾಡಿದ್ದೇವೆ.

ಶ್ರೀ ಬಿ. ಪಿ. ಗಂಗಾಧರ.—ಡೈರೆಕ್ಟರ ಹುದ್ದೆಗೆ ನೇಮಿಸಿಕೊಳ್ಳುವಾಗ ಯಾವುದಾದರೂ ಆಸ್ಪತ್ರೆಯಲ್ಲಿ ಔಷಧಿ ಕೊಟ್ಟ ಅಥವಾ ರೋಗಿಗಳನ್ನು ಚಿಕಿತ್ಸೆ ಮಾಡಿದ ಅನುಭವವಾಗಲೀ ಅಥವಾ ಯಾವುದಾದರೂ ಮೆಡಿಕಲ್ ಕಾಲೇಜಿನಲ್ಲಿ ಪಾಠ ಹೇಳಿದ ಅನುಭವವಾಗಲೀ, ಇವು ಯಾವುದೇ ಅನುಭವವಾಗಲೀ ಇಲ್ಲದೆ ಎಲ್ಲೋ ಮುನ್ಸಿಪಾಲಿಟಿಯ ಔಷಧಿಕಾರಕುವ ಕಾರ್ಯದಲ್ಲಿದ್ದವರನ್ನು ಮುಖ್ಯಾಧಿಕಾರಿಗಳ ಹುದ್ದೆಗೆ ನೇಮಿಸಿರುವುದರ ಕಾರಣವೇನು, ಸ್ವಾಮಿ ?

shall not have any effect and if the modification is agreed to by the other House, the notification, order or rules, shall thereafter have effect of such modified notification, order or rules, or be of no effect, as the case may be. The Hon'ble Member Mr. Nagappa drew the Chair's attention to rule 288 and said that a member while speaking shall not refer to this matter. He contended that if occasion arises for discussion then reference will have to be made, which amounts to discussion of matters pending before the Court, because this would amount to *sub-judice* and discussion will have to be curtailed. Even conceding that point of view can rule 288 of our rules of Procedure and Conduct of Business, over-ride the statutory provisions of the co-operative societies Act? We are bound by the Co-operative Societies Act and according to section 130 of the Act, we are bound to place it on the Table of the House. Supposing it is ultimately found out that it is an invalid notification, *i.e.*, a notification issued without proper authority of law, or without having any authority, the Government has issued the notification, even then, it is not going to confer either any right on the Government or it is not going to affect the rights of any other person. It was tried to point out that this notification was issued without any authority. Even conceding all that, it is not going to confer any right on the Government by mere placeing it on the table of the House. Nor it takes away the rigths of any one else. By laying this notification on the table of the House, we are only performing the statutory duty enjoined on us by the Act.

Sri H. SIDDAVEERAPPA.—Our right is taken away by your placing it on the Table of the House.

Sri K. PUTTASWAMY.—If Mr. Siddaveerappa, who is an experienced administrator and parliamentarian, could point out the rule or provision of law which prevents laying of the notification on the Table of the House, we would certainly appreciate his point of view and we will not place it on the Table. But as per the Act, if we do not lay it on the Table of the House, we would be guilty of breach of the provisions of section 130 of the Co-operative Societies Act.

Sri B. P. GANGADHAR.—Sir, I want to submit that.....

Mr. DEPUTY SPEAKER.—We are not raising any debate on this. If Sri Gangadhar could point out any provision or rule as to whether the Speaker could prevent the Government from placing the notification on the Table of the House, he may please do so.

† Sri B. P. GANGADHAR.—Sir, the Government seems to have lost sight of the fundamentals. A notification was issued by the Government and suppose such a notification has been challenged in a court of law which has jurisdiction to decide the validity or invalidity or the *bona fides* of the Government, how can the Government be permitted to place that notification on the Table of the House? In this particular

(SRI B. P. GANGADHAR)

case, the notification in question has been challenged before a competent court which can take decision in the matter. That court issued a stay. That means that the notification is stayed. What follows is that the operation under that notification is stayed. That means that the said notification does not exist in the eye of law.

MR. DEPUTY SPEAKER.—What the member is submitting is not applicable to this matter. He may please point out whether the Government is prevented from placing any notification on the Table ?

SRI B. P. GANGADHAR.—I am trying to help the Hon'ble Speaker, not to commit a mistake. It is our duty as members to see that mistakes are not committed here. I am saying that the notification issued by the Government has been stayed by the Court and it means that it is not in existence in the eye of law. When that is the case how can this Government place that notification before the House for its approval ?

SRI H. SIDDAVEERAPPA.—I do not take much time. For the sake of brevity I did not explain it in full detail. I thought that perhaps the Minister would straightaway concede my point. But now the point is, in view of the fact that the stay order has been issued by the High Court in Writ Petition No. 1385/68, the effect is that the notification in question has been stayed. I am not entering into the merits. The operation of the Notification has been stayed. The Hon'ble Minister should not be permitted to lay it on the Table here.

SRI K. PUTTASWAMY.—Is the Notification declared illegal ?

SRI H. SIDDAVEERAPPA.—It is pending before the Court. We cannot say anything about the merits or demerits of the Notification. It is *sub-judice*.

SRI K. PUTTASWAMY.—I am making a sporting offer to the Opposition.

SRI H. SIDDAVEERAPPA.—I want a ruling in advance. If it is allowed to be placed, then we will move amendments and the House get seized of it. My own feeling is because the matter is seized by the High Court, the matter is *lis pendens* and we cannot refer to it. That is what I submit.

(*Interruptions*)

SRI P. M. NADGOUDA (Minister for Development).—Sir, I lay on the Table of the House :

> "The Mysore Taluk Board Budget and Accounts (Amendment) Rules 1967. Notification No. DPC 7 RPA 66 dated 7th May 1968 under section 246 of the Mysore Village Panchayats and Local Boards Act 1959.

Sri H. V. KOUJALGI (Minister for Revenue).—Sir, I lay on the Table of the House :

(*a*) Notification No. RDF 89 TKV 67 A, dated the 24th August 1968—The Mysore Land Improvements Loans (Amendment) Rules 1968 under section 10 (3) of the Mysore Land Improvement Loans Act 1963.

(*b*) The Mysore Agriculturists Loans (Amendment) Rules, 1968 Notification No. RDF 89 TKV 67-I dated 24th August 1968 under section 9 (3) of the Mysore Agriculturists Loans Act 1963.

(*c*) The Mysore Land Revenue (Amendment) Rules 1968 Notification No. RDF 9 TRM 66 dated the 15th April 1968 under section 198 of the Mysore Land Revenue Act 1964.

Mr. DEPUTY SPEAKER.—The notifications are laid on the Table.

Sri S. SIVAPPA.—I am raising a point of order Sir. Mr. Nad Gouda did not yield when we raised a point of order. The Point of order was not decided and ruling was not given and in the meanwhile the Minister for Development stood up and read something. I request you to see that the whole thing is expunged from the Proceedings and I insist that a ruling should be given on the point of order. Only afterwards anything can proceed further. Till the ruling is given by the Chair, nothing can go on record.

Mr. DEPUTY SPEAKER.—I have already given the ruling. I permitted the Minister to place it on the Table of the House. There is no point of order.

Sri K. H. RANGANATH.—On a point of order, Sir. There was a point of order raised by my learned friend Sri Siddaveerappa and the House was seized of it. It was under discussion. No ruling was given by the Speaker. I want to know whether the ruling was postponed.

(*At this stage the Hon'ble Minister for Development Sri Nadgouda left the House*)

Sri K. H. PATIL (Hubli).—I wonder where is the hurry for the Hon'ble Minister to run away like that. I request the Chair to kindly ask the Minister to come back, because the matter pertains to him.

ಶ್ರೀ ಮದೇವ್ ಜಿ. ಬಣಕಾರ್ (ಬ್ಯಾಡಗಿ).—ನೀವು ಗೂಂಡಾವ್ಯತ್ತಿ ನಡೆಸುವ ಹಾಗೆ ಮಾಡುತ್ತಿದ್ದೀರಿ. ನಾವು ಇಲ್ಲಿ ಏತಕ್ಕೋಸ್ಕರ ಬಂದಿರುವುದು ? ನಿನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತಿರುವಾಗ ಮಾನ್ಯ ಶ್ರೀ ನಂಜೇಗೌಡರ ಪ್ರಶ್ನೆ ಬಂತು. ಆಗ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಅಭಾವ ಪರಿಸ್ಥಿತಿ ದೇಶದಲ್ಲಿರುವಾಗ ಸದಸ್ಯತ್ವದ ಹಕ್ಕಿನ ಪ್ರಶ್ನೆಯ ಬಗ್ಗೆ ಚರ್ಚೆ ಮೊಟಕು ಮಾಡಿ ಎಂದು ಹೇಳಿದರು. ದೇಶದ ಅಭಾವ ಪರಿಸ್ಥಿತಿ ಬಗ್ಗೆ ಚರ್ಚೆಮಾಡಲು ಹೆಚ್ಚಿನ ಅವಕಾಶ ಕೊಡಿ ಎಂದೂ ಹೇಳಿದರು. ಅಂದಮೇಲೆ ಇವತ್ತು ದೇಶದಲ್ಲಿ ಬಂದಿರತಕ್ಕ ಗಂಡಾಂತರ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ ವಿರೋಧ ಪಕ್ಷದ ಸದಸ್ಯರನ್ನು ತುಳಿಯುವುದಕ್ಕೆ ಮಾಡಿರತಕ್ಕ ಕುತಂತ್ರ ಪ್ರಶ್ನೆ ಇಲ್ಲಿ ಬಂದಿದೆ. ಈಗ ಆ ನೋಟಿಫಿಕೇಷನ್ನನ್ನು ಕಾನೂನು ಬಾಹಿರವಾಗಿ ಪಾಸ್ ಮಾಡತಕ್ಕ ಎಮರ್ಜೆನ್ಸಿ ಏನು ಬಂದಿದೆ ಎಂಬುದನ್ನು ತಿಳಿಯ ಪಡಿಸಬೇಕು. ಇಲ್ಲದಿದ್ದರೆ ಈ ಸಭೆಯನ್ನು ಮುಂದುವರಿಸಲು ಅವಕಾಶ ಮಾಡಿಕೊಡುವುದಿಲ್ಲ.

ಶ್ರೀ ಆಜೀಜ್ ಸೇಟ್.— * * * * * * * *

Mr. DEPUTY SPEAKER.—Reporters need not take down anything. Now they may take down the remarks of Sri K. H. Patil.

Sri K. H. PATIL.—On a point of Order, Sir. The procedings are not being taken down by the official Reporters.

Mr. DEPUTY SPEAKER.—Because I have not allowed the hon'ble Member to speak.

Sri K. H. PATIL.—My point of Order is one of challenging the validity of the action of the Chair because the Chair is also bound by rules and regulations. The hon'ble Minister on the other side was acting contrary to the provisions of law. When the hon'ble Member Sri Siddaveerappa was on his leges and was on his Point of Order, without hearing him, without a decision on it, without it being recorded in the minutes, the hon'ble Minister was making a dash and was running away, leaving the situation there.

Sri B. V. MAGAVI (Deputy Minister for Public Works).—He has gone to the Upper House.

Sri K. H. PATIL.—I am terribly afraid of the consequences of this direction. It may be that our hon'ble friends on this side while talking on relevant points and using parliamentary sentences, may be using here and there some hot words on account of the adamant action of that side. We have been forced to use strong expressions and language. In a democratic set up, it is our duty to bring to light the mal-actions of this Government. It is the Speaker who has to protect the rights of the Members; it is his bounden duty to see that every word of ours uttered in this House, should go into the proceedings. A time will come when the proceedings of this House will be gone through by the saner elements and those saner elements will compliment us and say, "Here are sensible utterances. Here is *Viduravani*." If our speeches do not go into the record, it will be a reflection on the Oppositoion and the future generation will mistake us. Therefore I appeal to you and request you not to obstruct the recording of the proceedings. Our words may go into record in the manner we express them.

†Sri H. SIDDAVEERAPPA.—Sir, I am exteremely pained at the way in which these proceedings have developed. For that, we, on this side are not responsible. So far as you are concerned, I have the highest respect for you. At the time when our late lamented Speaker Mr. Baliga fell ill for three months, we gave the heartiest co-operation to you because we were fully ensured that justice would be meted out, But unfortunately on the last day on which you have to lay down your onerous office, we are sorry that this ugly development has taken place. I am extremely pained at the way in which the hon'ble Minister read his

---

**** Matter not recorded as ordered by the Chair.

statement; he rushed through it as though heavens would fall and every thing would come down. When I gave notice to you about this, an endorsement was issued, a reply was given to me; it is as follows:

> "With reference to your letter dated 5th September 1968 regarding laying of Notification No. DPC 173 CIM 68 dated 1st May 1968, I am directed to state that no objection can be taken for laying the notification."

Under what rule has this reply come to me? I want to know. Then I raised a Point of Order. I would like to make clear one point. So far as the subject matter of this Notification is concerned, it is not Veerendra Patil's Ministry that is responsible for this. As a matter of fact, it was some other Ministry that was in existence on 1st May 1968. I know how this notification has developed. Still I have not entered into the merits of the case deliberately. Supposing the High Court has passed a Stay Order on this notification, we cannot do anything in the matter. The subject matter of this Notification has been stayed. The High Court has issued an interim injunction. Therefore, I wanted a full ruling as to how it could be laid on the Table. I wanted to know something more from the hon'ble Minister for Parliamentary Affairs who is a good friend of mine, and for whom I have got respect. I thought he would bestow his considered attention and make his assertion. I was prepared to explain at length. But I did not like to take much time of the House because I thought that the hon'ble Minister for Parliamentary Affairs and the Minister concerned were aware of the facts of the case as also this Notification and the statutory Section. Section 29 of the Act empowers them to have only three Directors. Sections 28 and 29 have been given a go-by. As I already said, I am not going into the merits of the case. This subject was not referred to the Law Department; this file was not worked up there. When the Ministry consulted the concerned Secretary, he said that Notification would be illegal and he cannot allow it in all his conscience But still out of political vendetta this thing was done. My grievance is, we cannot be hustled like this; we are not men of straw. We were prepared to co-operate to the fullest extent with the young and energetic Chief Minister. But if this is the way they start, then we have to revise our opinion because in a democracy, it is the majority that must rule; the minority must have its say and the majority will have its sway—that is the dictum laid by the late lamented Speaker Mr. Baliga. Let us have a full discussion. We are going to have our full say. The Minister for Parliamentary Affairs complimented me. I do not know how far I can take those compliments. I do not know whether he subtly meant that being an old man, I did not understand the rules. I have raised this question with a full sense of responsibility. In the guise of subordinate legislation, this should not be allowed to be taken advantage of. The High Court is seized of this Notification. It is already pending before the High Court because a Writ Petition, the number of which I have already given, has been filed. We must be allowed

(SRI H. SIDDAVEERAPPA)

to move the amendment. Please give an exhaustive ruling on that after hearing us in detail. If you say, although the matter is pending in the High Court, since the Notification is laid on the Table of the House, amendments may be made and the matter is seized, I have no objection.

3-00 P.M.

Sri K. PUTTASWAMY.—Sir, in the statement that I made, I never made any insinuation against any hon'ble member and more so about Sri H. Siddaveerappa. I said he is an experienced man; I never said old. He is as young as I am, perhaps younger than me. The feelings of the hon'ble members on the other side seems to have been very much hurt because they are under an impression that we are trying to avoid or evade discussion on the merits of this question. Sri Siddaveerappa suggested whether a free discussion would be allowed on the Notification even though the matter is pending in a court of law. Sir, for that, none of us can give that assurance. It is a matter pending before the judiciary and there may be certain references made which may amount to *sub-judice* and there is no authority left in any one of us to give that assurance. Sir, I was trying to say that I was trying to make a sportive offer. Hon'ble member may ask: what is that sportive offer ? In the Rule it is said that the Notification will have to be laid on the table of the House for fifty days during which time any hon'ble member of this House can raise discussion. They are afraid that these fifty days may elapse and thereafter they may not be able to raise the discussion. Rules may come in the way of discussing the question on merits. What I meant by sportive offer was, whatever may be the obstacle in the way, if the opposition wants us to find time to have a discussion on this matter, when the matter is ultimately disposed of by the High Court, whether it ends in favour of Government or against Government, on behalf of the Government I would like to make a sportive offer that Government would find sufficient time for this House for discussing this question. I hope this assurance on behalf of the Government would satisfy the Hon'ble Members.

Mr. DEPUTY SPEAKER.—The subject matter before us is whether the Speaker has to allow the Minister to place the papers on the Table of the House. There is statutory provision that the Government is bound to place the Notifications issued, on the table of the House. This is my ruling.

Now the House will adjourn for half-an-hour.

The House rose at Five Minutes past Three of the Clock and re-assembled at Thirty-five Minutes past Three of the Clock.

[MR. DEPUTY SPEAKER in the Chair]

†ಶ್ರೀ ಎಸ್, ಶಿವಪ್ಪ.—ಸ್ವಾಮಿ, ಒಂದು ನೋಟಿಫಿಕೇಷನನ್ನು ಇಡಬೇಕು ಎಂದು ಇಲ್ಲಿ ಮಾನ್ಯ ಸಚಿವರು ಇದ್ದರು. ಈ ನೋಟಿಫಿಕೇಷನನ್ನು ಇಡತಕ್ಕ ಸಮಯದಲ್ಲಿ ತಾವು ಈ ಸಭೆಯಲ್ಲಿ ಕೆಲವು ಸದಸ್ಯರುಗಳು ಕೊಟ್ಟ ಅಭಿಪ್ರಾಯಗಳನ್ನೂ ಕೇಳಿದ್ದೀರಿ. ಮತ್ತು ಈಗ ಇಲ್ಲಿ ಇಡಬೇಕೆಂದು ತಂದಿದ್ದ ನೋಟಿಫಿಕೇಷನ್ ಯಾವ ಹುತದಲ್ಲಿದೆ ಎನ್ನುವುದನ್ನು ತಾವು ನಮಗೆ ತಿಳಿಸಬೇಕು. ಏತಕ್ಕೆಂದರೆ ನೋಟಿಫಿಕೇಷನ್ ಇಡುವುದು ಎಂದು ಅಜೆಂಡಾದಲ್ಲಿರುವ ಪ್ರೊಗ್ರಾಂ ಪ್ರಕಾರ ಇದನ್ನು ಇಡಬೇಕಾದ ಸಚಿವರು ಇಲ್ಲಿರಬೇಕಾಗಿತ್ತು. ಅವರು ಮೇಲ್ಮನೆಯಲ್ಲಿನ ಕೆಲಸದಿಂದಲೋ ಅಥವಾ ಬೇರೆ ಯಾವ ಕಾರಣಕ್ಕೋ ಅವರು ಸಭೆಯಿಂದ ಹೊರಗಡೆಗೆ ಹೋಗಿರುತ್ತಾರೆ. ಆದುದರಿಂದ ಈ ನೋಟಿಫಿಕೇಷನ್ ಗತಿ ಏನಾಯಿತು ಎನ್ನುವುದು ನಮಗೆ ಗೊತ್ತಿಲ್ಲ. ಇವೊತ್ತು ಈ ನೋಟಿಫಿಕೇಷನ್ ಬಗ್ಗೆ ಅನೇಕವಾದ ವಾದ ವಿವಾದಗಳು ಈಗಾಗಲೇ ನಡೆವೆ ಮತ್ತು ಇದು ಸಬ್ ಜುಡಿಸ್ ಆಗುತ್ತದೆ ಕಾರಣ ಹೈ ಕೋರ್ಟಿನಲ್ಲಿ ಇದರ ಬಗ್ಗೆ ವಿಚಾರವಾಗಿ ಒಂದು ಸ್ಟೇ ಆರ್ಡರು ಕೂಡ ಆಗಿದೆ. ಇವಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿ ಮಾಡುವುದು ಸರಕಾರವತಿಯಿಂದ ಹಾಗೂ ಸದಸ್ಯರುಗಳವತಿಯಿಂದ ಇಂತಹ ಒಂದು ಕ್ಲಿಷ್ಟ ಸಮಸ್ಯೆ ಹಾಗೂ ಅಡ್ಡಿ ಆತಂಕಗಳು ಬಂದಾಗ ಇದರ ವಿಚಾರವಾಗಿ ಇಂತಹ ಒಂದು ಸಂಶಯ ಬಂದಾಗ ಈ ಸಭೆಯು ನಿಯಮಾವಳಿಗಳ ಪ್ರಕಾರ ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ಅಡ್ವಕೇಟು ಜನರಲ್‌ರವರನ್ನು ಇಲ್ಲಿಗೆ ಕರೆಸಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ತೀರ್ಮಾನವಾಡುವುದು ಅಗತ್ಯ. ಅತ್ಯಂತ ಕ್ಲಿಷ್ಟವಾದ ನನ್ನಿವೇಶ ಇಲ್ಲಿ ಬಂದಿರುವುದರಿಂದ ತಾವು ಈ ಸಭೆಗೆ ಅಡ್ವಕೇಟು ಜನರಲ್‌ರವರನ್ನು ಬರಮಾಡಿ ಕೊಂಡು ಇದರಲ್ಲಿರತಕ್ಕ ಸಬ್‌ಜುಡಿಸ್ ಹಾಗೂ ನ್ಯಾಯದ ವಿಚಾರಗಳಿಗೆ ಸಂಬಂಧಪಟ್ಟಂತೆ ಇರುವ ಕ್ಲಿಷ್ಟ ಸಮಸ್ಯೆಗಳ ಬಗ್ಗೆ ಅವರ ಅಭಿಪ್ರಾಯಗಳನ್ನು ನಾವು ತೆಗೆದುಕೊಳ್ಳಬೇಕಾಗಿದೆ. ಇದು ಅತ್ಯವಶ್ಯಕ ಎಂದು ನಾನು ಭಾವನೆ ಮಾಡುತ್ತೇನೆ. ಇವಕ್ಕೋಸ್ಕರ ಮಾನ್ಯ ಸಚಿವರು ಇಲ್ಲಿ ಮುಂಡಿಸಬೇಕಾಗಿರುವ ನೋಟಿಫಿಕೇಷನನ್ನು ಮುಂದುವರಿಸಿ ಇಲ್ಲಿಗೆ ಅಡ್ವಕೇಟು ಜನರಲ್‌ರವರನ್ನು ಬರ ಮಾಡಿಕೊಂಡು ಅವರ ಅಭಿಪ್ರಾಯಗಳನ್ನೂ ತಿಳಿದುಕೊಂಡು ಅವರ ಅಪೇಕ್ಷೆ ಏನಿದೆ ಅದರ ಬಗ್ಗೆ ವಿಚಾರಮಾಡಿ ಅನಂತರ ಇದನ್ನು ತಾವು ಯೋಚನೆ ಮಾಡಬೇಕು. ಈ ಸಭೆಯ ಎಲ್ಲ ಸದಸ್ಯರ ಅಭಿಪ್ರಾಯವೂ ಒಂದು ರೀತಿಯಾದ ಸಂಶಯಕ್ಕೆ ಒಳಗಾಗಿದೆ. ಇದಕ್ಕಾಗಿ ನಾನು ತಮ್ಮಲ್ಲಿ ಇದನ್ನು ಮುಂದುವರಿಸಬೇಕು ಎಂದು ನಾನು ಇಲ್ಲಿ ಸೂಚನೆ ಮಾಡುತ್ತೇನೆ.

†ಶ್ರೀ ಎಸ್. ಬಂಗಾರಪ್ಪ (ಸಾಗರ).—ಸ್ವಾಮೀ, ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪ ನವರು ಹೇಳಿದುದರ ಜೊತೆಗೆ ತಾವು ಇದರ ಬಗ್ಗೆ ರೂಲಿಂಗು ಕೊಡುವುದಕ್ಕೆ ಮುಂಚೆ ಒಂದು ವಿಷಯವನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಈಗ ನಮ್ಮ ಮುಂದೆ ಇರತಕ್ಕ ಪ್ರಶ್ನೆ ಈ ನೋಟಿಫಿಕೇಷನನ್ನು ಈ ಸದನದ ಮುಂದೆ ತರುವ ಹಕ್ಕು ಸರಕಾರಕ್ಕೆ ಇದೆಯೇ ಎಂಬುದು. ಎರಡನೇದು, ಸಬ್‌ಜುಡಿಸ್ ಆಗಿರುವುದರಿಂದ ಇದನ್ನು ಮುಂಡಿಸಲು ಅವಕಾಶ ಕೊಡುವುದಕ್ಕೆ ಸಾಧ್ಯವೇ ಇಲ್ಲವೇ ಎನ್ನುವ ಪ್ರಶ್ನೆ ಇಲ್ಲಿ ಬಂದಿದೆ. ಸ್ವಾಮೀ ಇದರಲ್ಲಿ ಹಿಂದೆ ಮೂರು ಜನ ಇದ್ದುದನ್ನು 13 ಜನ ಇರಬೇಕು ಎಂದು ಯಾವ ನೋಟಿಫಿಕೇಷನ್ನು ಇಲ್ಲಿ ತಂದಿದ್ದಾರೆ ಇದರ ಬಗ್ಗೆ ಹೈ ಕೋರ್ಟಿನವರು ವಿಚಾರಮಾಡಿ ಒಂದು ಸ್ಟೇ ಆರ್ಡರು ಕೊಟ್ಟಿದ್ದಾರೆ. ಇದರಿಂದ ಇದರ ಸ್ಥಾನಮಾನವೇನು ಎನ್ನುವುದನ್ನು ನಾವು ಇಲ್ಲಿ ಮೊದಲಿಗೆ ಯೋಚನೆ ಮಾಡಬೇಕಾಗುತ್ತದೆ. ಹೀಗೆ ಸ್ಟೇ ಆರ್ಡರು ಕೊಟ್ಟಿರುವಾಗ Operation of this Notification is stayed pending the disposal of the case by the High Court. ಇವರ ಆಪರೇಷನ್ ಕಾನೂನು ರೀತಿಯಲ್ಲಿ ಸಾಧ್ಯವಿಲ್ಲ. ಏಕೆಂದರೆ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಪೆಂಡೆಂನ್ಸಿಯಲ್ಲಿರುವಾಗ ಇದನ್ನು ಇಲ್ಲಿ ತರುವುದಕ್ಕಾಗುವುದಿಲ್ಲ. ಹೈಕೋರ್ಟಿನವರೇ ಈ ನೋಟಿಫಿಕೇಷನ್ ಬಗ್ಗೆ ಅಭಿಪ್ರಾಯ ಕೊಟ್ಟ ಮೇಲೆ ಆಗ ನೋಟಿಫಿಕೇಷನ್ ಬಗ್ಗೆ ಕಾನೂನು ಪ್ರಕಾರ ಹೇಗೆ ಮಾಡಬೇಕು ಎನ್ನುವುದು ಆಲೋಚನೆ ಮಾಡುವುದಕ್ಕೆ ಸಾಧ್ಯ ಇಲ್ಲದಿದ್ದರೆ ಇಲ್ಲ. ಸರಕಾರದ ಬಳಿ ಇದರ ಸ್ಟೇ ಆರ್ಡರೇ ಇಲ್ಲ. ಮತ್ತು ಇದರ ಡಿಸಿಪನ್ ಕೂಡ ಇಲ್ಲ.

ಈಗ ಲೀಗಲ್ಲಾಗಿ ನೋಡಿದರೆ ಆ ನೋಟಿಫಿಕೇಷನ್ ನಮ್ಮ ಹೈ ಕೋರ್ಟಿನವರು ಸ್ಟೇ ಮಾಡಿರುವುದರಿಂದ ಕಾನೂನು ಪ್ರಕಾರ ಅದನ್ನು ಇಲ್ಲಿ ಮುಂಡಿಸುವುದಕ್ಕೆ ಅವಕಾಶವಿಲ್ಲ. ಅದು ಈಗ ಸಬ್‌ಜುಡೀಸ್. ಸರ್ಕಾರದವರು ಈಗ ಆ ನೋಟಿಫಿಕೇಷನ್ನನ್ನು ಸದನದ ಮುಂದೆ ತಂದರೆ ನಾವು ಅದಕ್ಕೆ ತಿದ್ದುಪಡಿಗಳನ್ನು ಸೂಚಿಸುತ್ತೇವೆ. ಆಗ ಇಲ್ಲಿ ಚರ್ಚೆ ನಡೆಯಬೇಕಾಗುವುದು. ಆದರೆ ಸಬ್‌ಜುಡೀಸ್ ಆಗಿರತಕ್ಕ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

(ಶ್ರೀ ಎಸ್. ಬಂಗಾರಪ್ಪ)

ಆ ವಿಷಯವನ್ನು ಶ್ರೀ ಸಿದ್ಧವೀರಪ್ಪನವರು ಚೆನ್ನಾಗಿ ಹೇಳಿದ್ದಾರೆ. ತಾವು ಆ ನೋಟಿಫಿಕೇಷನನ್ನು ಈ ಸದನದ ಟೇಬಲ್ ಮೇಲೆ ಇಡಲಾಗಿದೆ ಎಂದರೆ ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ. ಅಷ್ಟೆ ಅಲ್ಲದೆ ಅದನ್ನು ಒಂದುವೇಳೆ ಇಲ್ಲಿ ರ‍್ಯಾಟಿಫೈ ಮಾಡಬೇಕೆಂದರೆ ಅವಕ್ಕೂ ಕೂಡ ಈಗ ಇಲ್ಲಿ ಅವಕಾಶವಿಲ್ಲ. ಒಂದು ವಿಷಯ ನ್ಯಾಯಾಲಯದ ಮುಂದೆ ತೀರ್ಮಾನಕ್ಕೆ ನಿಂತಿರುವಾಗ ಅದನ್ನು ಇಂಥ ಸಭೆಗಳ ಮುಂದೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಎಂಬ ವಿಷಯವಲ್ಲಿ ಅಧ್ಯಕ್ಷರ ಅನೇಕ ರೂಲಿಂಗುಗಳಿವೆ, ಮತ್ತು ಇಲ್ಲಿ ಅಂಥ ಒಂದು ಪ್ರೀಸಿಡೆಂಟನ್ನು ನಾವು ಸಡೆಸಿಕೊಂಡು ಬಂದಿದ್ದೇವೆ.

ಈ ದಿವಸ ಆ ನೋಟಿಫಿಕೇಷನ್ ಸರ್ಕಾರದವರ ವಶದಲ್ಲಲ್ಲ. ಇದೆ ಎನ್ನುವುದು ಕಾನೂನಿಗೆ ಬಾಹಿರವಾದ ಮಾತು... .....

ಉಪಾಧ್ಯಕ್ಷರು.—ಅದನ್ನು ಇಲ್ಲಿ ಮಂಡಿಸುವುದೇ ಸರಿಯಿಲ್ಲವೆಂದು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಹೌದು. ಆ ನೋಟಿಫಿಕೇಷನ್ ಈ ದಿವಸ ಸರ್ಕಾರದವರ ವಶದಲ್ಲಲ್ಲ.

Mr. DEPUTY SPEAKER.—The Government is bound to place all the Notifications issued on the Table of the House. It is a very simple point. I have already stated that laying of papers on the Table is a statutory provision. Government is bound to lay all such papers on the Table. Sri Nagappa has sent an amendment. I will consult the Government and fix up a time and we will have a full-dressed, debate on it.

Sri S. SIVAPPA.—Whether the Notification can be placed on the Table or not is an important issue. That is why I suggested that the Advocate General be called. We know for certain that this is *sub judice*. This is the situation we are placed in. It is better to call the Advocate General and take his expert opinion. We are confused over this issue. The whole issue can be now postponed.

Mr. DEPUTY SPEAKER.—What is the opinion of the Minister for Parliamentary Affairs ?

ಶ್ರೀ ಕೆ. ಪುಟ್ಟಸ್ವಾಮಿ.— ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಕೇಳಿದೆ. ಈ ವಿಚಾರದಲ್ಲಿ ಅಡ್ವೋಕೇಟ್ ಜನರಲ್ಲರನ್ನು ಕರೆಸಿ ಈ ನೋಟಿಫಿಕೇಷನ್ ಸಭೆಯ ಮುಂದೆ ಇಡಬೇಕೋ-ಇಡಬಾರದೋ ಎಂಬ ವಿಚಾರದಲ್ಲಿ ಅವರ ಅಭಿಪ್ರಾಯ ಪಡೆಯಬೇಕೆಂದು ಅವರು ಬಾವ ಮಾಡಿದ್ದಾರೆ. ಆದರೆ ಈಗ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿರುವ ಪ್ರಕಾರ ಅಭಿವೃದ್ಧಿ ಶಾಖೆಯ ಸಚಿವರು ಇಲ್ಲಿ ಒಂದು ನೋಟಿಫಿಕೇಷನ್ ಮಂಡಿಸಿದ್ದಾರೆ.....

ಮಾನ್ಯ ಸದಸ್ಯರು.—ಪಾಯಿಂಟಾಫ್ ಆರ್ಡರ್, ಪಾಯಿಂಟಾಫ್ ಆರ್ಡರ್, ಸ್ವಾಮಿ.....

ಶ್ರೀ ಕೆ. ಪುಟ್ಟಸ್ವಾಮಿ.— ಮಾನ್ಯ ಅಧ್ಯಕ್ಷರೇ ಆ ನೋಟಿಫಿಕೇಷನ್ನನ್ನು ಈ ಸದನದ ಟೇಬಲ್ ಮೇಲೆ ಇಟ್ಟಿದ್ದಾರೆ ಎಂದು ಹೇಳಿದ್ದು ನನ್ನ ಅಭಿಪ್ರಾಯದ ಮಾತು. ಆ ಬಗ್ಗೆ ಈಗಾಗಲೆ ಒಬ್ಬ ಮಾನ್ಯ ಸದಸ್ಯರು ಅದಕ್ಕೆ ಒಂದು ತಿದ್ದುಪಡಿಯನ್ನು ಸಹಾ ಕಳುಹಿಸಿದ್ದಾರೆ.....

Sri G. DUGGAPPA.—I rise to a point of order. While discussing about the laying of notification by the Minister, the Hon'ble Minister for Parliamentary Affairs stated that the notification is laid. We do not know what happened. In fact he did not lay the notification on the Table of the House. When this is the fact, the Minister now says that the notification was laid on the Table. It is contrary to fact. Therefore he cannot say a thing which has not happened on the floor of this House.

ಶ್ರೀ ಮಹದೇವ್ ಜಿ. ಬಣಕಾರ್.—ಅಧ್ಯಕ್ಷರೇ, ಇಲ್ಲಿಯವರೆಗೂ ಇಲ್ಲಿ ನಡೆಯುತ್ತಿರುವ ಚರ್ಚೆಯನ್ನು ನೋಡಿದರೆ ಆ ನೋಟಿಫಿಕೇಷನ್ನನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಅವಕಾಶ ವಾಗಿಲ್ಲ. ಅದನ್ನು ಇಲ್ಲ ಮಂಡಿಸುವುದಕ್ಕೆ ಪ್ರಯತ್ನ ಮಾಡುವುದು ಕಾನೂನಿಗೆ ಬಾಹಿರವಾದ ವಿಷಯ. ಎಂಬುದಾಗಿ ಶ್ರೀಮಾನ್ ಸಿದ್ದವೀರಪ್ಪನವರು ಮೊದಲೇ ಹೇಳಿದ್ದಾರೆ. ಆದ್ದರಿಂದ ಅಧ್ಯಕ್ಷರು ಈಗ ಖಚಿತವಾಗಿ ಆ ನೋಟಿಫಿಕೇಷ್ನ ಸಭೆಯು ಮುಂದೆ ಇದೆಯೇ ಎಂಬುದನ್ನು ತಿಳಿಸ ಬೇಕು. ಇನ್ನು ಎರಡನೇಯದಾಗಿ ಈ ವಿಚಾರ ಹೈಕೋರ್ಟಿನ ಮುಂದೆ ವಿಚಾರಣೆಗಾಗಿ ನಿಂತಿರು ವಾಗ ಇಲ್ಲ ಅದನ್ನು ಯಾರೂ ಮೂವ್ ಮಾಡಬಾರದು ಎಂಬ ಕಾನೂನಿನ ನಿರ್ಬಂಧವಿರುವಾಗ ಅದನ್ನು ಟೇಬಲ್ ಮೇಲೆ ಇಡಲಾಗಿದೆ ಎಂಬ ಶಬ್ದಕ್ಕೆ ಸ್ವಲ್ಪ ತಾವು ಅರ್ಥವಿವರಣೆ ಕೊಡಬೇಕು. ಮುಖ್ಯವಾಗಿ ಆ ನೂಚನೆಯನ್ನು ಸಭೆಯ ಮುಂದೆ ಮಂಡಿಸಿದೆಯೇ—ಇಲ್ಲವೇ ಎಂಬುದನ್ನು ತಾವು ಖಚಿತವಾಗಿ ಹೇಳಬೇಕು.

Sri H. N. NANJE GOWDA.—The paper is not laid on the Table. The Minister says it is laid. The Chair may please clarify whether it is laid or not. If it is laid...

Mr. DEPUTY SPEAKER.—Order, order.

Sri K. PUTTASWAMY.—My contention is that the hon'ble Chair allowed the Minister for Development to lay the notification on the Table of the House. In pursuance of your direction he has placed the notification on the Table of the House. It is open to the other side.....

(*Interruptions*)

Mr. DEPUTY SPEAKER.—Order, order.

Sri H. N. NANJE GOWDA.—The Chair may please clarify the position. He says it is laid on the Table.

Mr. DEPUTY SPEAKER.—I have called upon the Minister to lay. The Minister has laid it on the Table.

Sri G. DUGGAPPA.—After the Minister lays the Notification on the table of the House, the Speaker must say that the Notification is laid on the Table of the House. The Speaker is bound to say that. Till then it cannot be said to be laid on the Table of the House. I want a clarification from the Chair on this point.

Mr. DEPUTY SPEAKER.—I have already given the clarification.

Sri G. DUGGAPPA.—The Chair has not said so and so it cannot be said that the Notification is laid on the Table of the House. You must clearly say so. Then only it will be deemed to have been laid on the Table of the House.

Mr. DEPUTY SPEAKER,—I have stated clearly.

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಈ ಸಭೆಯ ನಡವಳಿಕೆ ಕಣ್ಣು ಮುಚ್ಚಾಲೆಯ ಆಟವಲ್ಲ. ಇಲ್ಲಿ ಯಾವ ನಡವಳಿಕೆ ನಡೆದರೂ ಕೂಡ ಅದು ಬಹಿರಂಗವಾಗಿ ಎಲ್ಲರೂ ಒಪ್ಪತಕ್ಕ ರೀತಿಯಲ್ಲಿ ನಡೆಸುವುದು ತಮ್ಮ ಪವಿತ್ರವಾದ ಜವಾಬ್ದಾರಿ. ಅವರು ಇಟ್ಟುಬಿಟ್ಟರು, ಯಾವುದೋ ಘಳಿಗೆಯಲ್ಲಿ ಓದಿಬಿಟ್ಟರು. ಅಂದರೆ ಅದು ಸಭೆಯ ಘನತೆಗೆ ಗೌರವ ತರತಕ್ಕ ಮಾತಲ್ಲ. ಶಾಸನರಚನೆ ಮಾಡತಕ್ಕ ಕಾಲದಲ್ಲ ಎಲ್ಲರಿಗೂ ಗೊತ್ತಾಗತಕ್ಕ ರೀತಿಯಲ್ಲಿ ನಡವಳಿ ಇರಬೇಕೇ ಹೊರತು ಗರಾಚಿಯಾಗುತ್ತಾ ಇರುವಾಗ ಶ್ರೀಮಾನ್ ಸಿದ್ದವೀರಪ್ಪನವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದು ಅದರ ಬಗ್ಗೆ ರೂಲಿಂಗ್ ಕೊಡತಕ್ಕ ಪರಿಸ್ಥಿತಿ ಬಂದಾಗ ಆ ಮಧ್ಯೆ ಅವರು ನೋಟಿಫಿಕೇಷ್ನ ಇಟ್ಟಿದ್ದಾರೆ ಎಂದು ಹೇಳಿದರೆ.....

ಉಪಾಧ್ಯಕ್ಷರು :—ಅದು ಪ್ರೊಸೀಡಿಂಗ್ಸ್‌ನಲ್ಲಿ ಬಂದಿದೆ. ಈಗ ಸುಮಾರು ಒಂದೂವರೆಗಂಟೆ ಕಾಲ ಈ ಚರ್ಚೆಗೆ ಅವಕಾಶ ಕೊಟ್ಟಿದ್ದು ಆಯಿತು. ಇದನ್ನು ಇಲ್ಲಿಗೇ ನಿಲ್ಲಿಸಬೇಕು.

ಶ್ರೀ ಮಹದೇವ್ ಜಿ. ಬಣಕಾರ್.—ಅಧ್ಯಕ್ಷರೇ, ಇದುವರೆಗೂ ನಡೆದಿರತಕ್ಕ ಈ ಚರ್ಚೆಯಲ್ಲಿ ಈ ನೋಟಿಫಿಕೇಷನ್ ಇಲ್ಲ ಇಡುವುದಕ್ಕೆ ಕಾನೂನು ಬಾಹಿರವಾಗಿರುವುದರಿಂದ ಇದನ್ನು ಇಡಕೂಡದು ಎಂದು ವಾದ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಇಟ್ಟಿದ್ದಾಗಿದೆ ಎಂದು ಅವರು ವಾದ ಮಾಡಿದ್ದಾರೆ. ನನ್ನ ಒಂದು ಮಾತನ್ನು ತಾವು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಬೇಕು, ತಮಗೆ ಅಡ್ವೈಸ್ ಮಾಡುತ್ತೇನೆ ಎಂದು ತಿಳಿದುಕೊಳ್ಳಬೇಡಿ. Man must have the power of devil, but he must not use it as a devil. ರಾಕ್ಷಸನ ಶಕ್ತಿ ಇರಬೇಕು, ಆದರೆ ರಾಕ್ಷಸನಂತೆ ವರ್ತನೆ ಮಾಡಬಾರದು. ತಮಗೆ ಘನತೆ ಇದೆ, ಗೌರವ ಇದೆ. ಕಾನೂನಿನ ಹಕ್ಕು ಬಾಧ್ಯತೆಗಳು ಇವೆ. ಆ ಕಡೆ ಕಾಂಗ್ರೆಸ್ ಮೆಜಾರಿಟಿ ಇದೆ, ಅವರು ನಾವೆಲ್ಲ ಒಪ್ಪದೆ ಇದ್ದರೂ ಕೂಡ ಇದನ್ನು ಪಾಸ್ ಮಾಡಬಹುದು, ಆದರೆ ಇದು ಕಾನೂನು ಬಾಹಿರವಾಗಿರುವಾಗ ಇದನ್ನು ಒಪ್ಪುವುದಕ್ಕೆ ನಾನು ತಯಾರಾಗಿಲ್ಲ, ಇದನ್ನು ಟೇಬಲ್ ಆಫ್ ದಿ ಹೌಸ್ ಮೇಲೆ ಇಟ್ಟಿಲ್ಲ. ಆದ್ದರಿಂದ ಕಾನೂನು ಬಾಹಿರವಾಗಿ ನಡೆಯತಕ್ಕ ಈ ಕಾರ್ಯಕಲಾಪಗಳಲ್ಲಿ ವೈಯಕ್ತಿಕವಾಗಿ ನಾನು ಭಾಗವಹಿಸುವುದಕ್ಕೆ ತಯಾರಾಗಿಲ್ಲ ಎಂದು ಹೇಳಿ ಈ ಸಭೆಯಿಂದ ಹೊರಗೆ ಹೋಗುತ್ತೇನೆ ಸ್ವಾಮಿ.

(Sri Mahadev G. Banakar withdrew from the House)

ಶ್ರೀ ಎಚ್. ಎಕ್. ನಂಜೇಗೌಡ.—ಒಂದು ಕ್ರಿಯಾರೋಪ, ಸ್ವಾಮಿ. ತಾವು ಒಂದು ಮಾತನ್ನು ಅಪ್ಪಣೆ ಕೊಡಿಸಿದಿರಿ—ಏನೆಂದರೆ ಈ ಪೇಪರನ್ನು ಈ ಸಭೆಯ ಟೇಬಲ್ ಮೇಲೆ ಮಂಡಿನರಾಯಿತು ಎಂದು. ನೀವು ಈ ರೀತಿ ಅಪ್ಪಣೆ ಕೊಡಿಸಿದ ಮೇಲೆ ಒಂದುವೇಳೆ ಈ ರೀತಿ ಆಯಿತು ಅಂತ ಇಟ್ಟುಕೊಳ್ಳುವುದಾದರೆ ರೂಲ್ 288ರ ಪ್ರಕಾರ ಒಂದು ನೋಟಿಫಿಕೇಷನ್‌ನ್ನು ಸಭೆಯ ಟೇಬಲ್ ಮೇಲೆ ಮಂಡಿಸಿದ್ದಾದಮೇಲೆ ಅದಕ್ಕೆ ಇನ್ನು ಉಳಿದಂತಹ ಕಾರ್ಯಭಾರಗಳು, ತಿದ್ದುಪಡಿಗಳನ್ನು ಕೊಡುವುದು ಚರ್ಚೆಯಾಗುವುದು ಇದೆಲ್ಲಾ ಆಗಬೇಕು. ಆ ರೀತಿ ಮಾಡಬೇಕಾಗಿರತಕ್ಕ ಕಾಲದಲ್ಲಿ ನೀವು ಸರ್ಕಾರದವರಿಗೆ ಅವಕಾಶ ಕೊಟ್ಟು 30 ದಿವಸಗಳ ನಂತರ ಈ ಕಾರ್ಯಕಲಾಪಗಳಿಗೆ ಅವಕಾಶ ಕೊಡುತ್ತೇವೆ ಎಂದು ಹೇಳುವುದಕ್ಕೆ ನಾವು ತಯಾರಾಗಿಲ್ಲ. ಇದು ಹಕ್ಕುಬಾಧ್ಯತೆಯ ಪ್ರಶ್ನೆ. ನೋಟಿಫಿಕೇಷನ್‌ನ್ನು ಸಭೆಯ ಟೇಬಲ್ ಮೇಲೆ ಮಂಡಿಸಿದ ತಕ್ಷಣ ಅಮೆಂಡ್‌ಮೆಂಟ್ ಕಳುಹಿಸಿತಕ್ಕ ಹಕ್ಕು ಹಾಗೂ ಚರ್ಚೆಮಾಡತಕ್ಕ ಹಕ್ಕು ಈ ಸಭೆಯ ಸದಸ್ಯರ ಸಾರ್ವಭೌಮ ಹಕ್ಕು. ಇದನ್ನು ಅಧ್ಯಕ್ಷರೂ ಕೂಡ ಕಸಿದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ರೂಲ್ 288ರ ಪ್ರಕಾರ ಚರ್ಚೆಮಾಡಬೇಕಾಗಿರತಕ್ಕ ಕಾಲದಲ್ಲಿ ಸಬ್‌ಜ್ಯೂಡೀಸ್ ಆಗಿರತಕ್ಕ ವಿಷಯವನ್ನು ತಂದಿರುವಾಗ ನಾವು ಚರ್ಚೆಮಾಡುವುದಕ್ಕೆ ಅವಕಾಶವಿಲ್ಲ, ಟೀಕೆ ಮಾಡುವುದಕ್ಕೆ ಅವಕಾಶವಿಲ್ಲ ಎಂದರೆ ಹೇಗೆ? ಸಬ್‌ಜ್ಯುಡೀಸ್ ಆಗಿರತಕ್ಕ ನೋಟಿಫಿಕೇಷನ್‌ನ್ನು ಸಭೆಯಲ್ಲಿ ಮಂಡಿಸುವುದಕ್ಕೆ ಅವಕಾಶ ಕೊಟ್ಟು ನಮ್ಮ ಹಕ್ಕುಗಳನ್ನು ಮೊಟಕು ಮಾಡುತ್ತಾ ಇದ್ದೀರಿ. The Chair has committed a breach of privilege of this House. My point of order is that the Chair has acted against the privilege of this House. ಇದಕ್ಕೆ ಮೊದಲು ರೂಲಿಂಗ್ ಕೊಡಬೇಕೆಂದು ಹೇಳುತ್ತೇನೆ.

Mr. DEPUTY SPEAKER.—There is no merit in the point of order raised by Sri Nanje Gowda.

ಶ್ರೀ ಬಿ. ಪರಮೇಶ್ವರಪ್ಪ (ಅರಭಾವಿ).—ಇಷ್ಟೊಂದು ಅಮೂಲ್ಯವಾದ ಕಾಲವನ್ನು ದೇಶ ಬರಗಾಲಕ್ಕೆ ತುತ್ತಾಗಿರುವಾಗ ಅದರ ನಿವಾರಣೋಪಾಯಗಳನ್ನು ಸಲಹೆಮಾಡಲು ಸದುಪಯೋಗಪಡಿಸಿಕೊಳ್ಳಬೇಕೆಂದು ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇವತ್ತು ಈ ವಿಚಾರ ಚರ್ಚೆಯಾಗುತ್ತಾ ಇರುವುದನ್ನು ನೋಡಿದರೆ ತುಂಬಾ ವ್ಯಸನವಾಗುತ್ತದೆ. ಕಾನೂನು ಬಾಹಿರವಾಗಿರತಕ್ಕ ಯಾವುದೋ ಕೋರ್ಟಿನಲ್ಲಿ ಇರತಕ್ಕ ಒಂದು ಸನ್ನಿವೇಶವನ್ನು ತಂದು ಸಭೆಯ ಮುಂದೆ ಇಡಬಾರದು ಎಂದು ಹೇಳಿ ಅನೇಕ ಸಂದರ್ಭಗಳಲ್ಲಿ ಮಾನ್ಯ ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಾಗಿರುವಾಗ ಈಗ ಬಂದಿರತಕ್ಕ ವಿಚಾರ ಸಬ್‌ಜ್ಯುಡೀಸ್ ಆಗುತ್ತದೆಯೇ ಇಲ್ಲವೇ ಅಂತ ಹೇಳಿ ಅನೇಕರು ಅಭಿಪ್ರಾಯವನ್ನು ವ್ಯಕ್ತಪಡಿಸಿ ಇದು ಸಬ್‌ಜ್ಯುಡೀಸ್

ಆಗುತ್ತದೆ ಎಂದು ವಿರೋಧ ಪಕ್ಷದ ಸದಸ್ಯರು ಹೇಳಿದರು. ವಿರೋಧ ಪಕ್ಷದ ಮುಖಂಡರು ಅಡ್ವೋಕೇಟ್ ಜನರಲ್‌ರವರನ್ನು ಕರೆಸಿ ಇದು ಸರಿಯೇ ತಪ್ಪೇ ಅಂತ ಹೇಳಿ ಅವರ ಅಭಿಪ್ರಾಯವನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು. ಅಷ್ಟು ದೂರ ನಾನು ಹೋಗುವುದಿಲ್ಲ. ಇವತ್ತು ಅಡ್ವೋಕೇಟ್ ಜನರಲ್‌ರವರೇ ಬಹಳ ಬುದ್ಧಿವಂತರು ಅಂತ ಹೇಳಿ ನಾನು ತೀರ್ಮಾನಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ವಿರೋಧ ಪಕ್ಷದ ಮುಖಂಡರು ಇದ್ದಾರೆ, ಸರಿಯಾದ ರೀತಿಯಲ್ಲಿ ಒಂದು ಒಗ್ಗಟ್ಟಿನಿಂದ ಯಾವುದು ನ್ಯಾಯವಾದದ್ದೋ ಅದನ್ನು ವಿಚಾರ ಮಾಡಿ ಆ ಪ್ರಕಾರ ಮಾಡುವುದು ಉತ್ತಮವಾದದ್ದೇ ಹೊರತು ಅಮೂಲ್ಯವಾದ ಕಾಲವನ್ನು ಈ ರೀತಿ ಕಳೆಯುವುದಕ್ಕೆ ನಾವು ತಯಾರಾಗಿಲ್ಲ. ಈ ರೀತಿ ಕಾಲ ಕಳೆಯುತ್ತಾ ಇರುವುದನ್ನು ನೋಡಿದರೆ ಇದೇನು ಅಸೆಂಬ್ಲಿಯೋ ಅಥವಾ ಇನ್ನೇನಾದರೂ ಒಂದು ಸಂತೆಯೋ ಅನ್ನತಕ್ಕ ಭಾವನೆ ಬರುತ್ತದೆ. ಈ ರೀತಿ ಮಳೆ ಹೋಗಿ ಬೆಳೆ ಹೋಗಿ ದೇಶದಲ್ಲಿ ಅಭಾವ ಪರಿಸ್ಥಿತಿ ಉದ್ಭವವಾಗಿರುವಾಗ ಯಾವುದೋ ಒಂದು ವಿಚಾರವನ್ನು ತೆಗೆದುಕೊಂಡು ಕಾಲಹರಣ ಮಾಡುವುದು ಸರಿಯಲ್ಲ. ನಾವಾಗಲಿ ಅವರಾಗಲಿ ಇರತಕ್ಕ ವಿಚಾರ ನ್ಯಾಯವಾಗಿದ್ದರೆ ಚರ್ಚೆ ಮಾಡೋಣ, ಅದನ್ನು ಬಿಟ್ಟು ಈ ರೀತಿ ಎಲ್ಲಾ ಚರ್ಚೆಮಾಡಿಕೊಂಡು ಊರಿಗೆ ಹೋದರೆ ಹುಚ್ಚುಮುಂಡೇಗಂಡರಾ ಅಸೆಂಬ್ಲಿಗೇಕೋ ಹೋಗ್ತೀರಿ ಅಂತ ಊರಿನಲ್ಲಿ ಜನ ಹೇಳ್ತಾರೆ (ನಗು); ಈ ರೀತಿ ಮಾಡಬಾರದು ನ್ಯಾಯವಾಗಿ ನಡೆಯಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ,

Sri B. P. GANGADHAR.—Now the position is very clear. A particular Notification has been issued by Government and that particular Notification has been stayed by a competent High Court. All these facts are admitted. As I have already submitted, in the eye of law there is no such Notification issued even though it may be there on printed paper. In the eye of law there is no such Notification issued. If there is no Notification issued, it cannot be placed on the table of the House. In spite of that if the Government do not have the vision that such a Notification cannot be placed on the Table of the House, and if they place the Notification on the Table of the House it will amount to contempt of the High Court by the Government and the House will be liable for it. So even now I request the Government to be wise enough to see that the laying of the Notification here is withdrawn.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಈಗ ಸಾಕಾದಷ್ಟು ಚರ್ಚೆಯಾಗಿದೆ. ಲೀಡರ್ ಆಫ್ ದಿ ಅಪೋಸಿಷನ್ ಅಡ್ವೋಕೇಟ್ ಜನರಲ್‌ರವರನ್ನು ಕರೆಸಿಕೊಂಡು ಅವರ ಅಭಿಪ್ರಾಯ ತೆಗೆದು ಕೊಳ್ಳೋಣ ಎಂದು ಹೇಳಿದರು. ಆದರೂ ಕೂಡ ಅಡಮೆಂಟಾಗಿ ನೋಟಿಫಿಕೇಷನ್ ಮೂವ್ ಮಾಡಿಯೇ ಮಾಡುತ್ತೇವೆ ಎಂದರೆ ರೂಲ್ 116 ಹಾಗೂ 117ರ ಪ್ರಕಾರ ನೋಟಿಫಿಕೇಷನ್ನನ್ನು ಇಟ್ಟರೆ ಒಪ್ಪುತ್ತೇನೆ. 117ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಇದ್ದೇ ಇರುತ್ತದೆ. ಪಾರ್ಲಿಮೆಂಟರಿ ಮಿನಿಸ್ಟರು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ, ಆಬ್ಜೆಕ್ಷನ್ ಬರುತ್ತದೆ, ಹೈಕೋರ್ಟ್ ಹೇಳಿದೆ ಇದನ್ನು ಒಪ್ಪಿಕೊಳ್ಳಿ. ಈಗ ನೋಟಿಫಿಕೇಷನ್ ಇಟ್ಟುಬಿಡುತ್ತೇವೆ. ಮೂರು ತಿಂಗಳ ಮೇಲೆ ಬೇಕಾದರೆ ಚರ್ಚೆ ಮಾಡೋಣ ಎಂದು ಹೇಳಿದರು. ಹಾಗಾದರೆ ಇದನ್ನು ಈ ಸೆಷನ್‌ನಲ್ಲಿ ಅಲ್ಲದೇ ಇದ್ದರೆ ಇನ್ನೊಂದು ಸೆಷನ್‌ನಲ್ಲಿ ಇಡಬಹುದು. ಏಕೆ ಅತುರ ಅತುರವಾಗಿ ಮಾಡಬೇಕು ಅನ್ನುವುದು ಅರ್ಥವಾಗುವುದಿಲ್ಲ. ಪ್ರೊಸೀಜರ್ ಇದೆ, ಬೇಕಾದರೆ ಈಗ ಹೌಸನ್ನು ಅಡ್ಜರ್ನ್ ಮಾಡಿ ಲೀಡರ್ ಆಫ್ ದಿ ಅಪೋಸಿಷನ್ ಮತ್ತು ಲೀಡರ್ ಆಫ್ ದಿ ಹೌಸ್ ಇಬ್ಬರನ್ನೂ ಕರೆಸಿಕೊಂಡು ತಾವು ಒಂದು ತೀರ್ಮಾನವನ್ನು ಮಾಡಬಹುದು. ಜಾಯಿಂಟ್ ಕಾನ್ಸಿರ್, ರೆಸ್‌ಪಾನ್ಸಿಬಿಲಿಟಿ ಇರುತ್ತದೆ. ಶ್ರೀಮಾನ್ ವೀರೇಂದ್ರ ಪಾಟೀಲ್‌ರವರೇ ಪಾರ್ಲಮೆಂಟರಿ ಮಂತ್ರಿಗಳೊಡನೆ ಮಾತನಾಡಿ ಇದನ್ನು ಬಗೆಹರಿಸಬಹುದು, ಅದು ಬಿಟ್ಟು ನನಗೇನೂ ಜವಾಬ್ದಾರಿ ಇಲ್ಲ ಎಂದು ಅವರು ಸುಮ್ಮನೆ ಕುಳಿತಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಈ ನೋಟಿಫಿಕೇಷನ್ನನ್ನು ಇನ್ನು ಒಂದು ತಿಂಗಳ ಮೇಲೆ ಇಟ್ಟರೆ ಸರ್ಕಾರದ ಬಂಡವಾಳ ಏನೂ ಹೋಗುವುದಿಲ್ಲ.

(ಶ್ರೀ ಅಜೀಜ್ ಸೇಟ್)

4-00 P.M.

ಇಡದೇ ಇದ್ದರೂ ಸರಕಾರಕ್ಕೇನೂ ಅಪಾಯವಿಲ್ಲ. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಈಶ್ವರ ತನ್ನ ಇಬ್ಬರು ಮಕ್ಕಳಿಗೂ ಪ್ರಪಂಚವನ್ನು ಯಾರು ಬೇಗ ನುತ್ತಿ ಬರುವರೋ ಅವರಿಗೆ ಇನಾಮನ್ನು ಕೊಡುವುದಾಗಿ ಹೇಳಿದನಂತೆ. ಹಾಗೆ ಹೇಳಿದ ಮೇಲೆ ಒಬ್ಬ ಮಗ ನುತ್ತಿಕೊಂಡು ಬಂದನಂತೆ, ಇನ್ನೊಬ್ಬ ಅಲ್ಲೇ ಇದ್ದನಂತೆ. ಹೀಗೆ ಮಂತ್ರಿಗಳು ಮಾಡುವುದು ಸರಿಯಲ್ಲ. ಆದುದರಿಂದ ಈ ಸಭೆಯನ್ನು ಕೊಂಡಕಾಲ ಅಡ್ಜರ್ನ್ ಮಾಡಿ ಒಂದು ತೀರ್ಮಾನಕ್ಕೆ ಬಂದು ನಂತರ ಅದನ್ನು ಶ್ರೀಮಾನ್ ವೀರೇಂದ್ರ ಪಾಟೀಲರು ಸಭೆಗೆ ತಿಳಿಸುವುದು ಸೂಕ್ತ ಎಂದು ನಾನು ಸಲಹೆಮಾಡುತ್ತೇನೆ.

Sri S. S. SHETTAR.—I rise on a point of order, Sir. The High Court has directed the Government not to implement the notification that is attempted to be placed on the Table of the House. Government is attempting to place this notification on the table of the House at its own risk. I learn that some amendment has already been moved by the hon. Member Sri Nagappa. The moment this House has come to know that the High Court has issued a stay order in respect of this notification, its operation, even though it is placed on the Table of the House, might be stayed by the Speaker also to respect the sentiments of the High Court.

ಶ್ರೀ ಎಸ್ ಶಿವಪ್ಪ.—ಈಗ ಸಾಕಷ್ಟು ಚರ್ಚೆಯಾಗಿದೆ. ಈಗಲಾದರೂ ಇದನ್ನು ಸಭೆಯ ಮುಂದೆ ಮಂಡಿಸುವುದಿಲ್ಲವೆಂದು ತಿಳಿಸಿದರೆ ಸಭೆಯ ಘನತೆ ಗೌರವ ಉಳಿಯುತ್ತದೆ. ಹಾಗಿಲ್ಲದೆ ಹಟ ಮಾಡಿ ಸಭೆ ಮುಂದೆ ನೋಟಿಫಿಕೇಷನ್ ಇಟ್ಟೇಇಡುತ್ತೇವೆ ಎಂದು ಹೇಳುವುದಾದರೆ ನ್ಯಾಯರಹಿತವಾದ, ಕೆಲಸವಾಗುವುದರಿಂದ ಅನ್‌ಕಾನ್‌ಸ್ಟಿಟ್ಯೂಷನರ್ ಆಗುವುದರಿಂದ ನಾವು ಬೇರೆ ಕ್ರಮ ಕೈಗೆದುಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು.—ನಾನು ಮಂಡಿಸುವುದಕ್ಕೆ ಅವಕಾಶ ಕೊಟ್ಟೆ. ಕಾನೂನು ಪ್ರಕಾರ ಏನಾದರೂ ನೋಟಿಫಿಕೇಷನ್ ಸರಕಾರ ಹೊರಡಿಸಿದರೆ ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕು. ಹಾಗೆ ತರಲು ಅಧ್ಯಕ್ಷರು ಅವಕಾಶ ಕೊಟ್ಟು ಮಂಡಿಸುವಂತೆ ತಿಳಿಸಿದರು ಅಷ್ಟೆ.

ಶ್ರೀ ಎಲ್ ಶ್ರೀಕಂಠಯ್ಯ.—ನೋಟಿಫಿಕೇಷನ್ನನ್ನು ಟೇಬಲ್ ಮೇಲೆ ಇಟ್ಟರೆ ಚರ್ಚೆ ಮಾಡುವ ಹಕ್ಕು ನಮಗೆ ಬರುತ್ತದೆ. ಈಗಿರುವ ಸೂಕ್ಷವಾದ ಪ್ರಶ್ನೆ ನೋಟಿಫಿಕೇಷನ್ ಬಗ್ಗೆ ಹೈಕೋರ್ಟಿನ ಸ್ಟೇ ಆರ್ಡರಿರುವುದರಿಂದ ಚರ್ಚೆ ಮಾಡಬಹುದೇ ಎಂಬ ವಿಚಾರದಲ್ಲಿ ರೂಲಿಂಗ್ ಕೊಡಬೇಕು. ಚರ್ಚೆ ಮಾಡಬಹುದು ಎಂದರೆ ಮಾತೋಣ. 30 ದಿವಸಗಳಾಗುವುದಕ್ಕೆ ಮುಂಚೆ ಚರ್ಚೆ ಮಾಡಬಹುದೇ ಎಂಬುದನ್ನು ವಿಚಾರಮಾಡಬೇಕು.

ಉಪಾಧ್ಯಕ್ಷರು.—ಸರಕಾರವನ್ನು ಕನ್‌ಸರ್ಟ್ ಮಾಡಿ ಒಂದು ಟೈಂ ನಿಗದಿಮಾಡಿ ಚರ್ಚೆ ಮಾಡೋಣ.

Sri D. B. KALMANKAR (Aland).—I rise on a point of order under rule 71, Sir. The rule says :

> "If a motion for leave to introduce a Bill is opposed, the Speaker, after permitting, if he thinks fit, a brief explanatory statement from the member who moves and from the member who opposes the motion may, without further debate, put the question :
>
> Provided that where a motion is opposed on the ground that the Bill initiates legislation outside the legislative competence of the Assembly, the Speaker may permit a full discussion thereon."

Rules 116, 117 and 228 have been sufficiently debated by Hon'ble Members on this side. Now, the matter is *sub-judice* and when the Hon'ble Member Sri Siddaveerappa was on a point of order, the Hon'ble Minister tried to introduce that Bill. The question whether that is proper, has to be decided. When a member of the House is standing on a point of order, no other member can stand and try to hustle through the proceedings. My submission is that, under the various rules which have been pointed out by the members on this side, the matter is sub-judice and it has been stayed by the High Court. So, even the laying of the notification on the table of this House can be opposed at the initial stage and we are opposing it now, because this Assembly is not competent to take further action such as allowing amendments, discussion thereon, etc. This is a matter which cannot be laid on the Table of the House. According to me, there has not been any laying of the notification on the Table of the House, because when the members on this side were standing on points of order, how could the Hon'ble Minister lay it on the Table of the House? The matter involved is a very delicate matter and so the Advocate-General must be called here and his advice sought on this matter. After that, the ruling may be given.

†SRI M. S. KRISHNAN.—Sir, I have one submission to make. It was stated that the Treasury Benches, particularly the Hon'ble Minister who placed this Notification on the Table of the House has just done his duty and it has got to be done according to the Rules of Procedure or the Constitution. I would like to bring to your kind notice that as far as Section 116 is concerned, it does not say that even if some Notification has been made earlier it should be placed on the Table only in this manner. They have the right to place it on the Table and it is usual that you may have the right to allow them to place it on the Table. Now since there is a stay order by the High Court on the Notification, it is not proper on the part of the Treasury Benches or the Minister to place it on the Table of the House, and it is not proper on the part of the Chair to allow him to place it on the Table. I submit that it should not be taken to this length to force the Chair to take some action which the Chair may not like. I request you therefore to accept the suggestion made by the Hon'ble the Leader of the Opposition in this regard.

† ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಸರ್ಕಾರದ ವತಿಯಿಂದ ನಿನು ಕಾರ್ಯಕಲಾಪ ಗಳಾಗುತ್ತವೆ, ಮತ್ತು ಯಾವ ಯಾವ ಗವರ್ನಮೆಂಟ್ ಆರ್ಡರ್, ಮತ್ತು ನೋಟಿಫಿಕೇಷನ್‌ಗಳನ್ನು ಸರ್ಕಾರ ಹೊರಡಿಸುತ್ತದೆ, ಅವನ್ನು ಕಾನೂನು ಪ್ರಕಾರ ಈ ಸಭೆಯ ಗಮನಕ್ಕೆ ತರುವುದರ ಉದ್ದೇಶವಾಗಿ ಆ ಎಲ್ಲ ನೋಟಿಫಿಕೇಷನ್‌ಗಳನ್ನೂ ನಾವು ಇಲ್ಲಿ ಟೇಬಲ್ ಮೇಲೆ ಇಡಬೇಕಾದಂಥ ಒಂದು ಕರ್ತವ್ಯವನ್ನು ನಾವು ಇಲ್ಲಿಯವರಗೂ ಮಾಡಿದ್ದೇವೆಯೇ ಹೊರತಾಗಿ ಮತ್ತೆ ಯಾವುದೂ ಮಾಡಿಲ್ಲ. ನೋಟಿಫಿಕೇಷನ್‌ಗಳಲ್ಲಿರುವುದೇ ಸರಿಯೋ ಇಲ್ಲವೋ ಎನ್ನುವಂಥ ವಿಚಾರಗಳು ಬೇರೆ. ಈಗ ಈ ನೋಟಿಫಿಕೇಷನ್ ಬಗ್ಗೆ ಎರಡು ಪ್ರಶ್ನೆಗಳಿವೆ. ಒಂದು ಪ್ರಶ್ನೆ, ಮಾನ್ಯ ವಿರೋಧಪಕ್ಷದ ನದನ್ಯರು ಹೇಳುತ್ತಾರೆ ನೋಟಿಫಿಕೇಷನ್ ಅನ್ನು ಸಭೆಯ ಮುಂದೆ ಇಟ್ಟೇ ಇಲ್ಲ ಎಂದು. ಅದನ್ನು ಇನ್ನೂ ಸಭೆಯ ಮುಂದೆ ಇಟ್ಟಿಲ್ಲ, ನರನರನೆ ಓದಿ ಮಂತ್ರಿಗಳು ಇಲ್ಲಿಂದ ಓದಿ ಹೋದರು ಎನ್ನುವಂಥ ಕೆಲವು ಮಾತುಗಳನ್ನೂ ಅವರು ಹೇಳಿದ್ದಾರೆ. ಅವರು ಯಾವ ರೀತಿಯಿಂದ ಕೆಲವು

(ಶ್ರೀ ವೀರೇಂದ್ರ ಪಾಟೀಲ್)

ವಿಚಾರಗಳನ್ನು ವ್ಯಕ್ತ ಮಾಡಿದ್ದಾರೋ ಅದರ ಮೇಲೆ ನಾನು ಏನು ಹೇಳುವುದಕ್ಕೂ ಹೋಗುವುದಿಲ್ಲ. ನೋಟಿಫಿಕೇಷನ್ ಸಭೆಯ ಮುಂದೆ ಇಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಸಭೆಯ ಮುಂದೆ ನೋಟಿಫಿಕೇಷನ್ ಇಟ್ಟಿದ್ದಾರೆಯೇ ಇಲ್ಲ ಇನ್ನೂ ಇಡಬೇಕಾದ ಪ್ರಶ್ನೆ ಪರಿಶೀಲನೆಯಾಗುತ್ತಿದೆಯೇ ಎನ್ನುವಂಥದ್ದು ಮಾನ್ಯ ಸಭೆ ಮತ್ತು ಅಧ್ಯಕ್ಷರು ನಿರ್ಣಯ ಮಾಡುವುದಕ್ಕೆ ಬಿಡುತ್ತೇನೆ. ಅಧ್ಯಕ್ಷರು ಪರ್ಮಿಷನ್ ಕೊಟ್ಟಿಲ್ಲ ಎಂದು ಹೇಳುವುದಾದರೆ ಅವರ ನಿರ್ಣಯಕ್ಕೆ ತಲೆಬಾಗುತ್ತೇನೆ. ನೋಟಿಫಿಕೇಷನ್ ಮಂಡಿನರಾಗಿದೆ ಎಂದರೆ ಮುಂದಿನ ಪ್ರಶ್ನೆ ಬರುತ್ತದೆ. ಶ್ರೀಮಾನ್ ನಾಗಪ್ಪನವರ ತಿದ್ದುಪಡಿ ಬಂದಿದೆ. ಅದರ ಬಗ್ಗೆ ಎಷ್ಟರಮಟ್ಟಿಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂಥದ್ದರ ಸಾಧಕ ಬಾಧಕಗಳನ್ನು ತಾವು ವಿಚಾರ ಮಾಡಬೇಕಾಗುತ್ತದೆ. ಅವಶ್ಯ ಬಂದರೆ ಅಡ್ವೊಕೇಟ್ ಜನರಲ್ ಜೊತೆಯಲ್ಲಿ ವಿಚಾರ ಮಾಡಬಹುದು. ಅಡ್ವೊಕೇಟ್ ಜನರಲ್ಲರನ್ನು ಕರೆಸಿ, ನಾನೂ ಬರುವುದಕ್ಕೆ ತಯಾರಿದ್ದೇನೆ, ವಿರೋಧ ಪಕ್ಷದ ನಾಯಕರೂ ಬರಲಿ. ಎಲ್ಲರೂ ಚರ್ಚೆ ಮಾಡಿ ಎಷ್ಟರಮಟ್ಟಿಗೆ ತಿದ್ದುಪಡಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆ ಎಂದು ಅಥವಾ ಇಲ್ಲ ಎನ್ನುವ ವಿಚಾರ ತೀರ್ಮಾನವಾದ ಮೇಲೆ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

†ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಮುಂದೆ ಬರತಕ್ಕ ತಿದ್ದುಪಡಿಗಳನ್ನು ಚರ್ಚೆಮಾಡುವ ಕಾಲದಲ್ಲಿ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಎಷ್ಟರಮಟ್ಟಿಗೆ ಅದನ್ನು ಚರ್ಚೆ ಮಾಡಬಹುದು ಎನ್ನುವುದನ್ನು ತೀರ್ಮಾನ ಮಾಡೋಣ, ನಾನೂ ಬರುತ್ತೇನೆ, ವಿರೋಧಪಕ್ಷದ ನಾಯಕರೂ ಬರಲಿ ಎಂದು ಈಗತಾನೆ ಸಭಾನಾಯಕರು ಹೇಳಿದರು. ನೋಟಿಫಿಕೇಷನ್ ಇಲ್ಲಿ ಇಟ್ಟಮೇಲೆ ತಿದ್ದುಪಡಿಯ ಮೇಲೆ ಚರ್ಚೆಯಾಗುವುದು ಸಾಧ್ಯವಿಲ್ಲ ಎನ್ನುವುದೇ ನಮ್ಮ ವಾದ. ಇದು ಹೈಕೋರ್ಟ್‌ನಲ್ಲಿ ಪೆಂಡಿಂಗ್‌ನಲ್ಲಿ ಇರುವುದರಿಂದ ಅದೇ ವಿಷಯವನ್ನು ಈ ಒಂದು ಸನ್ನಿವೇಶದಲ್ಲಿ, ಇದೇ ಕಾಲದಲ್ಲಿ ತೆಗೆದುಕೊಂಡು ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯವನ್ನೂ ತೆಗೆದುಕೊಳ್ಳುವುದು ಸೂಕ್ತವೇ ಹೊರತು, ಆ ಮೇಲೆ ತೆಗೆದುಕೊಂಡರೆ ಆಗುವ ಪರಿಣಾಮವೇನು ಎನ್ನುವುದು ನಮಗೆ ಗೊತ್ತಿದೆ. ಆದುದರಿಂದ ನಾವು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇರತಕ್ಕ ವಿಷಯವನ್ನು ನಾವು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ನಮಗೆ ಸ್ಪಷ್ಟವಾಗಿ ಗೊತ್ತಿದೆ. ಆದುದರಿಂದ ಈಗಲೇ ಅಡ್ವೊಕೇಟ್ ಜನರಲ್ ಅವರನ್ನು ಕರೆಸಿ, ನೋಟಿಫಿಕೇಷನ್ ಸಭೆಯ ಮುಂದೆ ಇಡುವುದು ಎಷ್ಟರಮಟ್ಟಿಗೆ ಸೂಕ್ತ ಅಥವಾ ಇಲ್ಲ ಎನ್ನುವುದರ ಬಗ್ಗೆ ಅವರ ಅಭಿಪ್ರಾಯವನ್ನು ಪಡೆದು ತಾವು ಈ ಸಂದರ್ಭದಲ್ಲಿ ತೀರ್ಮಾನ ಮಾಡುವುದು ಒಳ್ಳೆಯದು.

ಉಪಾಧ್ಯಕ್ಷರು.—ಈ ಸಭೆಯಲ್ಲಿ ನೋಟಿಫಿಕೇಷನ್ ಮಂಡಿಸಲು ಅಡ್ವೊಕೇಟ್ ಜನರಲ್ ಅವರನ್ನು ಕರೆಸಬೇಕು ಎನ್ನುವ ಪ್ರಶ್ನೆ ಇಲ್ಲ. ನಾನು ಅದನ್ನು ಅನೇಕಸಾರಿ ಹೇಳಿದ್ದೇನೆ ನೋಟಿಫಿಕೇಷನ್ ಮಂಡಿಸುವುದಕ್ಕೆ ಅಧ್ಯಕ್ಷರು ಮಾನ್ಯ ಮಂತ್ರಿಗಳಿಗೆ ಅವಕಾಶ ಕೊಟ್ಟರೆ ಅವರು ಮಂಡಿಸುತ್ತಾರೆ. ಈಗ ಒಂದು ತಿದ್ದುಪಡಿ ಬಂದಿದೆ. ಅದರ ಮೇಲೆ ಚರ್ಚೆ ನಡೆಯುವ ವಿಷಯದ ಬಗ್ಗೆ ಸಭಾ ನಾಯಕರು ಹೇಳಿದಂತೆ ವಿಚಾರ ಮಾಡೋಣ.

ಶ್ರೀ ಎಸ್. ಶಿವಪ್ಪ.—ನೋಟಿಫಿಕೇಷನ್ ಈ ಸಭೆಯಲ್ಲಿ ಮಂಡನೆಮಾಡುವುದಕ್ಕೆ ಅದರಲ್ಲಿ ಕಾನೂನುಬಾಹಿರವಾದ ವಿಚಾರವಿದೆಯೇ ಎನ್ನುವುದರ ಬಗ್ಗೆ ಅಡ್ವೊಕೇಟ್ ಜನರಲ್ ಅವರೊಡನೆ ಸಮಾಲೋಚನೆ ಮಾಡಬೇಕು, ಕಾನೂನುಬಾಹಿರವಾದ, ನ್ಯಾಯ ಬಾಹಿರವಾದ ಒಂದು ವಿಚಾರವನ್ನು ಇಪ್ಪತ್ತು ಸಭೆಯ ಮುಂದೆ ಮಂಡನೆ ಮಾಡಬಹುದೇ ಎನ್ನುವುದೇ ಬಹಳ ಗಹನವಾದ ವಿಚಾರ. ಅದನ್ನು ನಾವು ಹೇಳುತ್ತಿರುವುದು. ನೋಟಿಫಿಕೇಷನ್ ಮಂಡನೆಗೆ ನಾವು ಒಪ್ಪುವುದಿಲ್ಲ. ಅದಕ್ಕೆ ನಾವು ಬದ್ಧರಾಗಿಲ್ಲ, ಅದಕ್ಕೆ ನಾವು ಭಾಗಿಗಳಲ್ಲ. ಇದೇ ವ್ಯವಸ್ಥೆ ಮುಂದುವರಿಯುವುದಾದರೆ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಇಷ್ಟೊತ್ತು ನಾವು ಸಿದ್ಧವಾಗಿಲ್ಲ. ಈ ವರ್ತನೆ ಏನಿದೆ, ನ್ಯಾಯಬಾಹಿರವಾದ ಕೃತಿಯನ್ನು ನಾವು ಮಾಡುತ್ತಿದ್ದೇವೆಂದು ಹೇಳಿದರೆ ಆ ಕೃತಿಯಲ್ಲಿ ಭಾಗವಹಿಸುವುದಕ್ಕೆ ನಾವು ತಯಾರಿಲ್ಲ. ನಮ್ಮ ಪ್ರತಿಭಟನೆಯನ್ನು ತೋರಿಸುವುದಕ್ಕಾಗಿ ಈ ಸಭೆಯ ಕಾರ್ಯಕಲಾಪಗಳನ್ನು ಬಹಿಷ್ಕರಿಸಿ ಹೊರಗೆ ಹೋಗುತ್ತೇವೆ ಸ್ವಾಮಿ ?

(The members of the Opposition withdrew from the House)

PRESENTATION OF PETITIONS

Mr. DEPUTY SPEAKER.—Now both members Sri S. S. Shettar and Sri Mallappa are absent. Next item.

ELECTION OF SPEAKER

Sri D. M. SIDDAIAH.—Sir, I move :

"That Sri S. D. Kothavale be elected as Speaker of the Legislative Assembly."

Sri A. R. BADRINARAYAN.—Sir, I second the motion.

Mr. DEPUTY SPEAKER.—I will put it to Vote of the House. The question is :

"That Sri S. D. Kothavale be elected as Speaker of the Legislative Assembly."

The motion was adopted.

Sri S. D. Kothavale is declared elected as Speaker of this House. I request the mover and seconder to lead the new Speaker to the Chair and I request all the members to stand till the Speaker occupies his seat.

Sri D. M. Siddaiah and Sri A. R. Badrinarayan led Sri S. D. Kothavale to the Chair. After shaking hands with the Hon'ble Deputy Speaker, Hon'ble Sri S. D. Kothavale occupied the Chair.

Mr. SPEAKER.—Before taking my seat I wish to thank very sincerely this august House for doing me the great honour of electing me to this Chair—the greatest honour this august House can ever confer on any member of this House.

FELICITATION TO THE SPEAKER

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ನನ್ಮಾನ್ಯ ಅಧ್ಯಕ್ಷರೇ, ತಾವು ಇವೊತ್ತಿನ ದಿವಸ ಈ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಹೊಂದಿದುದಕ್ಕಾಗಿ ನಾನು ತಮಗೆ ಹಾರ್ದಿಕ ವಂದನೆಗಳನ್ನು ಸಲ್ಲಿಸುತ್ತೇನೆ. ತಾವು ಈ ಮನೆಗೆ ಹೊಸಬರಲ್ಲ. ತಾವು ಅನೇಕ ವರ್ಷಗಳಿಂದ ಈ ವಿಧಾನ ಸಭೆಯ ಸದಸ್ಯರಾಗಿ ಅಪಾರವಾದ ಸೇವೆಯನ್ನು, ಈಗಾಗಲೇ ಸಲ್ಲಿಸಿದ್ದೀರಿ. ಪ್ರಜಾ ರಾಜ್ಯದಲ್ಲಿ ವಿಧಾನಸಭೆಯ ಕಾರ್ಯಕಲಾಪಗಳ ಬಗ್ಗೆ ಅಪಾರವಾದ ಜ್ಞಾನವನ್ನು ಈಗಾಗಲೇ ತಾವು ಸಂಪಾದಿಸಿಕೊಂಡಿದ್ದೀರಿ ಎನ್ನುವ ಮಾತು ನಮ್ಮೆಲ್ಲರಿಗೂ ಅಭಿಮಾನ ಹಾಗೂ ಹೆಮ್ಮೆಪಡುವಂಥ ವಿಷಯವಾಗಿದೆ. 1907ರಲ್ಲಿ ಜನ್ಮವೆತ್ತಿ ಬಾಲ್ಯಾವಸ್ಥೆಯಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸಿಕೊಂಡು ಬಂದು 1928ರಲ್ಲಿ ಬೊಂಬಾಯಿ ಯೂನಿವರ್ಸಿಟಿಯ ಬಿ.ಎ. (ಆನರ್ಸ್) ಡಿಗ್ರಿಯನ್ನು ಪಡೆದಿರಿ. 1930ರಲ್ಲಿ ಎಲ್ ಎಲ್.ಬಿ. ಡಿಗ್ರಿ ಪಡೆದು ತಾವು ವಕೀಲ ವೃತ್ತಿಯನ್ನು ಪ್ರಾರಂಭಿಸಿದ್ದೀರಿ.

(ಶ್ರೀ ವೀರೇಂದ್ರ ಪಾಟೀಲ್)

ತಮ್ಮ ರಾಜಕೀಯ ಜೀವನ ಚಿಕ್ಕೋಡಿ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ಪ್ರಾರಂಭವಾಯಿತೆಂದು ನಾನು ಕೇಳಿದ್ದೇನೆ. ಅನೇಕ ವರ್ಷಗಳ ಕಾಲ ಚಿಕ್ಕೋಡಿ ಪಂಚಾಯತಿಯ ಅಧ್ಯಕ್ಷರಾಗಿ ಬೆಳಗಾಂ ಜಿಲ್ಲೆಯ ರೋಡ್ಸ್ ಬೋರ್ಡ್ ಸದಸ್ಯರಾಗಿ, ಹೋಂ ಗಾರ್ಡ್ಸ್ ಕಮಾಂಡೆಂಟಾಗಿ ತಾವು ಸೇವೆ ಸಲ್ಲಿಸಿದ್ದೀರಿ 1952ರಲ್ಲಿ ಚುನಾವಣೆ ಹೊಂದಿ ಬೊಂಬಾಯಿ ಅಸೆಂಬ್ಲಿಯ ಸದಸ್ಯರು ಆಗಿದ್ದೀರಿ. ಅಲ್ಲಿ ಸುಮಾರು 2–3 ವರ್ಷಗಳವರೆಗೂ ಬೊಂಬಾಯಿ ಅಸೆಂಬ್ಲಿಯಲ್ಲಿ ಬೊಂಬಾಯಿ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ತಾವು ಕೆಲಸಮಾಡಿದ್ದೀರಿ. 1957ರಲ್ಲಿ ಮತ್ತೆ ಚುನಾವಣೆ ಹೊಂದಿ ಈ ಮನೆಗೆ ತಾವು ಬಂದಿದ್ದೀರಿ. 1962ರಿಂದ 67ರ ವರೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಸದಸ್ಯರಾಗಿ ಅಪಾರವಾದ ಸೇವೆಯನ್ನು ಸಲ್ಲಿಸಿ 1967ರಲ್ಲಿ ಸಾರ್ವತ್ರಿಕ ಚುನಾವಣೆಯಾದನಂತರ ಮತ್ತೆ ತಾವು ವಿಜಯಶಾಲಿಗಳಾಗಿ ಈ ಮಾನ್ಯ ಸಭೆಯ ಸದಸ್ಯರಾಗಿ ಕೆಲಸಮಾಡಿದ್ದೀರಿ. ಈ ಮಾನ್ಯ ಸಭೆಯ ಸದಸ್ಯರಾಗಿ ಮತ್ತು ನಮ್ಮ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಅಧ್ಯಕ್ಷರಾಗಿ ತಾವು ಎಷ್ಟೊ ಹೆಚ್ಚಿಗೆ ಕೆಲಸಗಳನ್ನು ಮಾಡಿದ್ದೀರಿ, ಎಷ್ಟು ನುರಿತವರು ಆಗಿದ್ದೀರಿ, ಎಷ್ಟು ಅನುಭವವುಳ್ಳವರಿದ್ದೀರಿ ಎಂಬುದು ನಮ್ಮೆಲ್ಲರಿಗೂ ವಿದಿತವಾದ ವಿಷಯವಾಗಿದೆ. ತಾವು ಸರ್ವಾನುಮತದಿಂದ ಆಯ್ಕೆ ಹೊಂದಿದ್ದು ನಮ್ಮೆಲ್ಲರಿಗೂ ಗೌರವ ತಂದಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಈಗ ಯಾವ ಒಂದು ಸ್ಥಾನವನ್ನು ಅಲಂಕರಿಸಿದ್ದೀರೋ ಅದು ಎಂತಹ ಸ್ಥಾನವೆಂಬುದು ತಮಗೇ ಗೊತ್ತಿದೆ. ಒಂದು ಸ್ಥಾನವನ್ನು 6 ವರ್ಷಗಳವರೆಗೆ ದಿವಂಗತ ವೈಕುಂಠ ಬಾಳಿಗಾ ಅವರು ಅಲಂಕರಿಸಿ ಈ ಸ್ಥಾನದಲ್ಲಿ ಯಾವ ಒಂದು ಒಳ್ಳೆಯ ಸೇವೆ ಈ ಸಭೆಗೆ ಮತ್ತು, ಈ ಸಭೆಯ ಮುಖಾಂತರ ನಮ್ಮ ನಾಡಿಗೆ ಮಾಡಿರುವುದು ಸರ್ವರಿಗೂ ವಿದಿತವಾದ ವಿಚಾರವಾಗಿದೆ. ಅವರು ಯಾವ ಒಂದು ಸತ್ಸಂಪ್ರದಾಯವನ್ನು ಬೆಳೆಸಿಕೊಂಡು ಬಂದು ಈ ಮನೆಯಲ್ಲಿ ಇರತಕ್ಕ ಸದಸ್ಯರನ್ನು, ಈ ಕಡೆಯೇ ಇರಲಿ, ಆ ಕಡೆಯೇ ಇರಲಿ ಒಂದು ನಿಷ್ಪಕ್ಷಪಾತದೃಷ್ಟಿಯಿಂದ ಹಾಗೂ ಒಂದು ನ್ಯಾಯದೃಷ್ಟಿಯಿಂದ ನೋಡಿಕೊಂಡು, ಈ ಸಭೆಗೆ ಗೌರವ ತರುವ ದೃಷ್ಟಿಯಿಂದ ಸಭಾ ಕಾರ್ಯಕಲಾಪಗಳನ್ನು ಮಾಡಿಕೊಂಡು ಬಂದಿದ್ದರೋ, ಅದೇ ರೀತಿಯಾಗಿ ತಾವೂ ಸಹ ಆ ಒಂದು ಸತ್ಸಂಪ್ರದಾಯವನ್ನು ಕಾಪಾಡಿಕೊಂಡು ಬರುತ್ತೀರೆಂದು ನನಗೆ ಸಂಪೂರ್ಣ ಭರವಸೆ ಇದೆ. ಇನ್ನು ಹೆಚ್ಚಿಗೆ ಹೇಳದೆ, ತಾವು ಸರ್ವಾಮತದಿಂದ ಆಯ್ಕೆ ಹೊಂದಿದ್ದರಿಂದ ನನ್ನ ಪರವಾಗಿಯೂ ಮತ್ತು ನನ್ನ ಪಕ್ಷದ ಪರವಾಗಿಯೂ ತಮಗೆ ಇನ್ನೊಮ್ಮೆ ಹಾರ್ದಿಕ ಸ್ವಾಗತವನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಹರಿಯೂರು).—ಮಾನ್ಯ ನೂತನ ಅಧ್ಯಕ್ಷರೇ, ಈ ದಿವಸ ತಾವು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವುದಕ್ಕಾಗಿ ಮೊಟ ಮೊದಲನೆಯದಾಗಿ ಹೃತ್ಪೂರ್ವಕವಾಗಿ ತಮ್ಮನ್ನು ಅಭಿನಂದಿಸುತ್ತೇನೆ. ನಾನು ಈಗ ಸುಮಾರು ಒಂದೂವರೆ ವರ್ಷದಿಂದ ಉಪಾಧ್ಯಕ್ಷನಾಗಿ ಕೆಲಸ ಮಾಡುತ್ತಿರುವುದರಿಂದ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದು ಎಷ್ಟು ಕಷ್ಟವೆಂಬುದು ನನಗೆ ಗೊತ್ತಾಗಿದೆ. ತಾವು ತುಂಬ ನುರಿತವರು, ಒಳ್ಳೆಯ ಅಡ್ವೊಕೇಟ್ ಎಂಬುದಾಗಿ ನಾನು ಕೇಳಿದ್ದೇನೆ. ಈ ಮೈಸೂರು ಅಸೆಂಬ್ಲಿ ಇದೀ ಭಾತಖಂಡದಲ್ಲಿ ಒಂದು ಘನತೆ, ಗೌರವ ಇಟ್ಟುಕೊಂಡು ಇಲ್ಲಿಯವರೆಗೂ ನಡೆದುಕೊಂಡು ಬಂದಿದೆಯೆಂದು ನಾನು ಕೇಳಿದ್ದೇನೆ. ಇದುವರೆಗೂ ಏನು ಈ ಮೈಸೂರು ಅಸೆಂಬ್ಲಿ ಒಂದು ಘನತೆ, ಗೌರವವನ್ನು ಇಟ್ಟುಕೊಂಡು ಬಂದಿದೆಯೋ ಅದನ್ನು ಮುಂದಿಯೂ ಉಳಿಸಿಕೊಂಡು ಬರುತ್ತದೆಂಬ ನಂಬಿಕೆ ನನಗೆ ಪೂರ್ಣವಾಗಿ ಇದೆ. ನಾನು ಮೊದಲೇ ಹೇಳಿದ ಹಾಗೆ ತಾವು ಬಹಳ ಬುದ್ಧಿವಂತರು. ಈಗ ತಾವು ಅಧ್ಯಕ್ಷರಾಗಿ ಆಯ್ಕೆಯಾದುದು ಬಹಳ ಸಂತೋಷವಾಗಿದೆ. ನಾನೂ ಸಹ ಹೊಸಬ. ಇದೇ ಜನರಲ್ ಎಲೆಕ್ಷನ್ನಲ್ಲಿ ಮೊಟ ಮೊದಲನೆಯದಾಗಿ ಆರಿಸಿ ಬಂದವರೂ, ನನಗೆ ಒಂದು ಅವಕಾಶ ಸಿಕ್ಕಿದ್ದಕ್ಕೆ ನಾನು ಸ್ವಲ್ಪಮಟ್ಟಿಗೆ ಕಾನೂನು ಮತ್ತು ರೂಲ್ಸ್ ಆಫ್ ಪ್ರೊಸೀಜರ್—ಇದನ್ನು ಚೆನ್ನಾಗಿ ಸ್ಟಡಿ ಮಾಡಿಕೊಂಡಿದ್ದೇನೆ. ಇನ್ನೂ ನನಗೆ ಹೆಚ್ಚಿಗೆ ತಮ್ಮ ಗೈಡೆನ್ಸ್ ಬೇಕಾಗಿದೆ. ದಿವಂಗತ ಬಾಳಿಗಾ ಅವರು ಸಾಕಷ್ಟು ಹೇಳಿಕೊಟ್ಟಿದ್ದಾರೆ. ಅವರು ಚೆನ್ನಾಗಿ ನನಗೆ ಹೇಳಿಕೊಟ್ಟಿದ್ದರಿಂದಲೇ ನನಗೆ ಈ ಸಭೆಯನ್ನು ನಡೆಸುವ ಜ್ಞೆನ್ಯ ಬಂತು. ಇನ್ನೂ ತುಂಬ ತಮ್ಮ ಗೈಡೆನ್ಸ್ ಬೇಕಾಗಿದೆ. ತಾವು ಖಂಡಿತವಾಗಿ ಈ ಸಭೆಯ ಗೌರವ, ಘನತೆಗಳನ್ನು ಇನ್ನೂ ಹೆಚ್ಚಿಗೆ ಉಳಿಸಿಕೊಂಡು ಬರುತ್ತೀರೆಂದು ನಾನು ನಂಬಿದ್ದೇನೆ. ತಾವು ಅವಿರೋಧವಾಗಿ ಆರಿಸಿ ಬಂದುದಕ್ಕೆ ಮತ್ತೊಮ್ಮೆ ತಮಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಅಧ್ಯಕ್ಷರೇ, ತಾವು ಈ ಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾದುದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ. ಮೈಸೂರು ಮೊದಲನಿಂದಲೂ ಒಳ್ಳೆಯ ಕೀರ್ತಿಯನ್ನು ಗಳಿಸಿಕೊಂಡು ಬಂದಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತದ ಕಾಲದಲ್ಲಿ ಬೇರೆಕಡೆ ಶಾಸನ ಸಭೆಗಳು ಇಲ್ಲದಿರುವಾಗ ಮೈಸೂರು ವಿಧಾನಸಭೆಗೆ ಹೆಚ್ಚಿನ ಗೌರವ ಇತ್ತು. 1932ನೇ ಇಸವಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿಸಭೆ ಇಡೀ ದೇಶದಲ್ಲಿ ಆದರ್ಶವಾದ ಸಭೆಯಾಗಿತ್ತು. ಈ ಮೈಸೂರು ರಾಜ್ಯ ಆಗಲೂ ರಾಮರಾಜ್ಯ ವೆಂಬ ಕೀರ್ತಿ ಪಡೆದಿದೆ. ಇಂತಹ ಒಂದು ಸಂದರ್ಭದಲ್ಲಿ ಲೋಕಸಭೆಯಲ್ಲಿ ಅಧ್ಯಕ್ಷರಾಗಿದ್ದಂಥ ವಿಠ್ಠಲ್ ಬಾಯ್ ಪಟೇಲ್ ಮತ್ತು ಮಾವಲಂಕರ್ ಅವರನ್ನು ನಾವು ಜ್ಞಾಪಿಸಿಕೊಳ್ಳಬೇಕಾಗಿದೆ. ಅದೇ ರೀತಿಯಲ್ಲಿ ನಮಗೆ ಆದರ್ಶರಾಗಿ ಈ ಸಭಾಧ್ಯಕ್ಷತೆ ವಹಿಸಿ ಅಚಂದ್ರಾರ್ಕವಾಗಿ ಕೀರ್ತಿಯನ್ನು ಗಳಿಸಿದಂಥ ದಿವಂಗತ ಶ್ರೀಮಾನ್ ಬಾಳಿಗಾ ಅವರನ್ನೂ ಸಹ ನಾವು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾಗಿದೆ. ಮೈಸೂರು ರಾಜ್ಯಾಂಗ ಸಭೆ ಇದ್ದಾಗ್ಗೆ ಶ್ರೀಮಾನ್ ಡಿ. ಎಚ್. ಚಂದ್ರಶೇಖರಯ್ಯನವರು ಕೆಲಸಮಾಡಿ ವಿಠ್ಠಲ್ ಬಾಯ್ ಪಟೇಲರ ಹಾಗೆ ಹೆಸರು ಪಡೆದಿದ್ದರು ಎಂದು ಪತ್ರಿಕೆಗಳಲ್ಲಿ ಅಗ್ರಲೇಖನಗಳು ಬಂದಿವೆ ಎಂಬುದಾಗಿ ನಾನು ಕೇಳಿದ್ದೇನೆ. ಈ ಸ್ಥಾನ ಬಹಳ ಕಠಿಣವಾದುದೆಂಬುದು ನಮಗೆಲ್ಲರಿಗೂ ಗೊತ್ತಿದೆ, ತಮಗೂ ಗೊತ್ತಿದೆ. ತಾವು ನಮ್ಮ ಪಕ್ಷದವರಾಗಿ ಆಯ್ಕೆಯಾದರೂ ಪಕ್ಷಾತೀತರಾಗಿದ್ದೀರಿ. ಈ ಅಧ್ಯಕ್ಷ ಸ್ಥಾನದಿಂದ ಈ ಸಭೆಯು ಗೌರವವನ್ನು ಎತ್ತಿ ಹಿಡಿದು ಕಾನೂನುಬದ್ಧವಾಗಿ ಒಂದು ಸತ್ಸಂಪ್ರದಾಯವನ್ನು ಹಾಕಿ ಪ್ರಜಾಪ್ರಭುತ್ವವನ್ನು ಬೆಳಸಿಕೊಂಡು ಹೋಗುತ್ತೀರೆಂಬ ನಂಬಿಗೆ ನಮಗೆ ಇದೆ. ವಯಸ್ಸಿನಲ್ಲಿ ಹಾಗೂ ಜ್ಞಾನದಲ್ಲಿ ತಾವು ಹಿರಿಯರಾಗಿದ್ದೀರಿ. ತಾವು ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಸೇವೆ ಸಲ್ಲಿಸುತ್ತಿರುವಾಗ ಶ್ರೀ ನಂಜರಾಜ್ ಅರಸ್ ಅವರು ಯಾವುದಾದರೂ ಕಾನೂನು ವಿಷಯ ಬಂದಾಗ್ಗೆ, ಆ ವಿಷಯವನ್ನು ಮಾನ್ಯ ಶ್ರೀ ಕೊತಾವಳಿಯವರಿಗೇ ವಹಿಸುತ್ತಿದ್ದೆ, ಎಂದು ಹೇಳುತ್ತಿದ್ದರು. ಆದ್ದರಿಂದ ಸರ್ವ ದೃಷ್ಟಿಯಿಂದಲೂ ಕೂಡ ಈ ಸಭೆಯ ಅಧ್ಯಕ್ಷರಾಗಿ ಕೆಲಸಮಾಡುವುದಕ್ಕೆ ಹೆಚ್ಚಿನ ಅನುಭವವುಳ್ಳವರಾಗಿದ್ದೀರಿ. ಈ ಸಭೆಯು ಘನತೆ ಗೌರವಗಳನ್ನು ತಾವು ಎತ್ತಿ ಹಿಡಿದು, ಗತಿಸಿದ ಬಾಳಿಗಾ ಅವರ ಮೇಲ್ಪಂಕ್ತಿಯನ್ನು ಈ ಸಭೆಯಲ್ಲಿ ನಡೆಸಿಕೊಂಡು ಬಂದು ನಮ್ಮ ಪಕ್ಷಕ್ಕೇ ಆಗಲೀ ಅಥವಾ ವಿರೋಧಪಕ್ಷಕ್ಕೇ ಆಗಲಿ ಏಕಭಾವನೆಯಿಂದ ವರ್ತಿಸುತ್ತೀರೆಂದು ನಾನು ತಿಳಿದಿದ್ದೇನೆ. ತಾವು ನ್ಯಾಯನಿಷ್ಠೆಯಿಂದಲೂ, ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಚಾಕಚಕ್ಯತೆಯಿಂದಲೂ ಮತ್ತು ದೂರದೃಷ್ಟಿಯಿಂದಲೂ ಈ ಸಭೆಯ ಕಾರ್ಯಕರಾಪಗಳನ್ನು ನಡೆಸಿಕೊಂಡು ಬರುತ್ತೀರೆಂದು ನಾನು ನಂಬಿದ್ದೇನೆ. ಮೊಟ್ಟಮೊದಲನೆಯದಾಗಿ ತಮಗೆ ನನ್ನ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮ್ಮ ಉಪಾಧ್ಯಕ್ಷರು ಸುಮಾರು ಒಂದೂವರೆ ವರ್ಷಗಳಿಂದ ದಿವಂಗತ ಶ್ರೀ ಬಾಳಿಗಾ ಅವರ ಸ್ಥಾನದಲ್ಲಿ ಇದ್ದು ನಮ್ಮೆಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಅವರು ಈ ಸಾರಿ ಹೊಸದಾಗಿ ಚುನಾಯಿತರಾಗಿ ಬಂದರೂ ಕೂಡ ಸಾಕಷ್ಟು ಒಳ್ಳೆಯ ರೀತಿಯಲ್ಲಿ ಈ ಸಭೆಯನ್ನು ನಡೆಸಿಕೊಂಡು ಬಂದಿರುವುದರಿಂದ ಮುಂದೆ ಅವರೂ ಸಹ ಉತ್ತಮ ಅಧ್ಯಕ್ಷರಾಗುವ ಸೂಚನೆಗಳನ್ನು ತೋರಿಸಿಕೊಟ್ಟಿದ್ದಾರೆ.

4-30 P.M.

ಶ್ರೀಮಾನ್ ಬಾಳಿಗಾರವರು ಹೇಗೆ ಅವರಿಗೆ ಅನೇಕ ವಿಚಾರಗಳನ್ನು ತನ್ನ ತಮ್ಮನ ಹಾಗೆ ತಿಳಿಸಿ ನಡೆಸಿಕೊಂಡು ಬಂದಿದ್ದಾರೋ, ಹಾಗೆಯೇ, ತಾವು ಮಂಜುನಾಥರ್‌ವರನ್ನು ಚೆನ್ನಾಗಿ ತರಬೇತು ಮಾಡಿ, ಮುಂದಿನ ಚುನಾವಣೆ ಆದಾಗ ಶ್ರೀ ಮಂಜುನಾಥರವರೇ ಅಧ್ಯಕ್ಷರಾಗುವುದಕ್ಕೆ ತಕ್ಕವರನ್ನಾಗಿ ಮಾಡಬೇಕೆಂದು ನಾನು ತಮ್ಮನ್ನು ಪ್ರಾರ್ಥಿಸಿ, ಮತ್ತೊಮ್ಮೆ ತಾವು ಅವಿರೋಧವಾಗಿ ಚುನಾಯಿಸಲ್ಪಟ್ಟದ್ದಕ್ಕೆ ಮನಸಾರೆ ಅಭಿನಂದಿಸಿ, ನಿಮಗೆ ನಮ್ಮೆಲ್ಲರ ಸಹಕಾರ, ಸಹಾನುಭೂತಿ ಇದೆ ಎಂದು ತಿಳಿಸಿ, ಭಗವಂತ ತಮಗೆ ಶಕ್ತಿಸಾಮರ್ಥ್ಯಗಳನ್ನು ಕೊಡಲಿ, ನೀವು ಒಬ್ಬ ಆದರ್ಶವಾದ ಸಭಾಧ್ಯಕ್ಷರಾಗಿ ಬೆಳಗುವಂತೆ ಪರಮಾತ್ಮನು ಕಾಪಾಡಲಿ ಎಂದು ಪ್ರಾರ್ಥಿಸಿ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಆರ್. ಬದರೀನಾರಾಯಣ್ (ಶಿವಮೊಗ್ಗ).—ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಮತ್ತು ಶ್ರೀಮಾನ್ ಸಿದ್ದಯ್ಯನವರು ಹೇಳಿದ ವಿಚಾರಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ, ತಾವು ಈ ಸಭೆಯ ಸಭಾಪತಿಗಳಾಗಿ ಅವಿರೋಧವಾಗಿ ಚುನಾಯಿ

(ಶ್ರೀ ಎ. ಆರ್. ಬದರೀನಾರಾಯಣ್)

ಸಲ್ಪಟ್ಟದ್ದಕ್ಕೋಸ್ಕರ, ತಮ್ಮನ್ನು ಬಹಳ ಸಂತೋಷದಿಂದ ಅಭಿನಂದಿಸುತ್ತೇನೆ. ತಮ್ಮ ವಿಚಾರವಾಗಿ ನನ್ನ ಹಿಂದೆ ಮಾತನಾಡಿದಂತಹ ಸ್ನೇಹಿತರು ಅನೇಕ ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ಅದನ್ನು ನಾನು ಪುನರಪಿ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ತಮ್ಮ ಸೇವೆ ಬಹಳ ಅಪಾರವಾದ ಸೇವೆ. ಅದು ಎಲ್ಲಾ ಕ್ಷೇತ್ರಗಳಲ್ಲೂ ಇದ್ದು, ಸಭಾಪತಿಗಳಾಗಿಯೂ ಕೂಡ ಅನೇಕ ಸಂದರ್ಭಗಳಲ್ಲಿ ಬಹಳ ದಕ್ಷತೆಯಿಂದ ನಡೆಸಿಕೊಂಡು ಬಂದಿದ್ದೀರಿ. ಅದಕ್ಕೆ ಬೇಕಾದಷ್ಟು, ಸಾಕಾದಷ್ಟು ಹಿನ್ನೆಲೆಯೂ ಕೂಡ ತಮಗೆ ಇದೆ. ಈ ಸಭೆಗೆ ಸರಿಯಾದಂತಹ, ಒಬ್ಬ ಸಭಾಪತಿಗಳು ಬೇಕು ಎಂಬುದನ್ನು ನೋಡಿದಾಗ ನಮ್ಮ ಕಣ್ಣಿನ ಮುಂದೆ ಶ್ರೀ ಕೊಠವಾಲೆಯವರಲ್ಲದೆ, ಇನ್ನು ಯಾರಿದ್ದಾರೆ ಎಂಬ ದೃಶ್ಯ ಬರುತ್ತಿತ್ತು. ಅದನ್ನು ಯೋಚನೆ ಮಾಡಿ ನಮ್ಮ ಪಕ್ಷದವರು ತಮ್ಮನ್ನು ಒಮ್ಮತದಿಂದ ಈ ಸ್ಥಾನಕ್ಕೆ ಆರಿಸಿದ್ದಾರೆ. ತಾವು ಇವತ್ತಿನ ದಿವಸ ಸಭಾಪತಿಗಳಾಗಿ ಆರಿಸಲ್ಪಟ್ಟಿದ್ದೀರಿ. ಈ ಸಭೆಯ ಪರಂಪರೆ ಬಹಳ ಮಹತ್ವದ್ದಾಗಿದೆ ಎನ್ನತಕ್ಕಂತದ್ದನ್ನು ನಮ್ಮ ಸ್ನೇಹಿತರು ಹೇಳಿದ್ದಾರೆ. ತಮಗೆ ಈ ಪರಂಪರೆಯನ್ನು ಎತ್ತಿ ಹಿಡಿದುಕೊಂಡು ನಡೆಸಿಕೊಂಡು ಬರುವುದಕ್ಕೆ ಸ್ವಲ್ಪ ಸಮಯವಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಶ್ರೀಮಾನ್ ದಿವಂಗತ ಬಾಳಿಗಾರವರು ಏನು ಒಂದು ಈ ಕುರ್ಚಿಯಲ್ಲಿ ಕುಳಿತು, ಬಹಳ ಒಳ್ಳೆಯ ನಯವಾದಂತಹ ರೀತಿಯಲ್ಲಿ ಈ ಸಭೆಯನ್ನು ನಡೆಸಿಕೊಂಡು ಹೋಗುತ್ತಿದ್ದರೋ, ಅದೇ ರೀತಿಯಲ್ಲಿ ತಾವೂ ನಡೆಸಿಕೊಂಡು ಹೋಗತಕ್ಕದ್ದು, ತಮಗೆ ಸ್ವಲ್ಪ ಕಷ್ಟವಾಗಬಹುದು. ಬರೇಕಾನೂನಿನ ದೃಷ್ಟಿಯಲ್ಲದೆ, ಅವರಲ್ಲಿ ಒಳ್ಳೆಯ ಮೃದು ಸ್ವಭಾವದ ಮಾನವೀಯತೆ ಕೂಡ ಇತ್ತು. ಒಟ್ಟಿನಲ್ಲಿ ಅವರು ಆದಷ್ಟು ಮಟ್ಟಿಗೆ ಸರಿಯಾಗಿ, ಎಲ್ಲರನ್ನೂ ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋಗಲು ಪ್ರಯತ್ನ ಮಾಡುತ್ತಿದ್ದರು. ತಮಗೆ ಗೊತ್ತಿರಬಹುದು, ಇಲ್ಲಿ ನಮಯೋಚಿತವಾದ ಜವಾಬನ್ನು ಹೇಳುವುದಕ್ಕೆ ಗೊತ್ತಿರಬೇಕು, ವಿವೇಚನಾ ಶಕ್ತಿ ಬಹಳವಾಗಿರಬೇಕು. ಇಲ್ಲದಿದ್ದರೆ ಈಸಭೆಯಲ್ಲ ಎಷ್ಟು ಕಷ್ಟವಾಗಬಹುದು ಎಂಬುದನ್ನು ನಾವು ಕಂಡಿದ್ದೇವೆ. ಆದ್ದರಿಂದ ಒಂದು ಮಾತು ತಮಗೆ ಹೇಳುವುದಾದರೆ ತಮಗೆ ವಿಶಾಲವಾದಂತಹ ಅನುಭವ ಇದೆ ಬ್ಲಾನ ಇದೆ, ಮತ್ತು ಬೇಕಾದಷ್ಟು ತಿಳಿವಳಿಕೆ ಇದೆ. ಒಂದೊಂದು ಸಲ ತಮಗೆ ಉದ್ರೇಕವಾದಂತಹ ರೀತಿಯಲ್ಲಿ ವರ್ತಿಸಲು ಈ ಸಭೆಯಲ್ಲಿ ಅವಕಾಶ ಬರಬಹುದು, ಬಂದಿವೆ, ಮತ್ತು ಉದ್ರೇಕ ಗೊಂಡಿದ್ದೀರಿ. ಆದರೆ ಇವತ್ತಿನ ಸಂದರ್ಭದಲ್ಲಿ ನಮ್ಮ ಪಕ್ಷ ನಮ್ಮ ಸರ್ಕಾರ ಚೆನ್ನಾಗಿ ಬೆಳಗಬೇಕಾದರೆ, ಅದು ತಮ್ಮ ಮೇಲೆ ಬಹಳವಾಗಿ ಅವಲಂಬಿಸಿಕೊಂಡಿದೆ. ಅದು ಬಹಳ ಮುಖ್ಯವಾದ ವಿಚಾರ. ಸ್ವಲ್ಪ ತಮಗೆ ಏನಾದರೂ ಸಿಟ್ಟು ಬರತಕ್ಕ ಸಂದರ್ಭ ಒದಗಿದಾಗ ಕೂಡ ತಾವು ದಯವಿಟ್ಟು, ಸ್ವಲ್ಪ ಸೌಮ್ಯ ರೀತಿಯಿಂದ ಈ ಸಭೆಯನ್ನು ಬಹಳ ಚೆನ್ನಾಗಿ, ಬಹಳ ಯಶಸ್ವಿಯಾಗಿ ನಡೆಸಿಕೊಂಡು ಹೋಗತಕ್ಕ ಶಕ್ತಿ ಇದೆ. ಅದಕ್ಕೆ ಬೇಕಾದಂತಹ ಸಮಾಧಾನ ತೆಗೆದುಕೊಂಡು ಮಾಡಬೇಕೆಂದು ಬಹಳ ವಿನಯದಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು, ದೇವರು ತಮಗೆ ಅವಿರೋಧವಾಗಿ ಆರಿಸಿ ಬಂದುದಕ್ಕೆ ಯಶಸ್ಸನ್ನು ಕೋರಲು ಮತ್ತು ನಿಮ್ಮ ಮುಂದಿನ ಬವಿಷ್ಯ ಬಹಳ ಚೆನ್ನಾಗಿ ನಡೆಯಲಿ, ತಮ್ಮ ಕಾರಾವಧಿಯಲ್ಲಿ ಈ ಸಭಾಪತಿಯ ಸ್ಥಾನವನ್ನು ಅಲಂಕರಿಸಿ, ದಿವಂಗತ ಬಾಳಿಗಾರವರು ಹೇಗೆ ತಮ್ಮ ಸ್ಥಾನಮಾನವನ್ನು ಪಾಲಿಸಿಕೊಂಡು ಬಂದಿದ್ದರೋ, ಅದೇ ರೀತಿ ತಾವು ನಡೆದುಕೊಂಡು ಬಂದು ಎಲ್ಲರೂ ಹೆಮ್ಮೆ ಪಡುವಂತೆ ಆಗಲಿ, ಭಗವಂತನು ಹಾಗೆ ತಮಗೆ ಕರುಣಿಸಲಿ ಎಂದು ಪಾರ್ಥಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri S. R. KANTHI (Hungund).—Mr. Speaker Sir, I rise to congratulate you heartily on your unanimous election as the Speaker of this august House. Sir, you will agree with me that you and I have been very close friends since the year 1952. I am sure, I have definite knowledge about your virtues and capacity as well as your defects. Today, I am happy that this House has unanimously elected you as the Speaker, because you have ample virtues to deserve this high post. Another speaker who spoke before me has laid stress that there are grave situations in this House where a lot of tact and patience is required. I have no doubt in my mind, that you have the necessary tact. But I request you that you must also have abundant patience and I am sure, in course of time, you will develop a high pitch of

patience. You were also a spokesman on behalf of the party in power. On many an occasion you have defended the Government with all your ability. Now that opportunity of defending the Government is gone and you have the larger and greater task before you of defending the rights and privileges of this august House. You have, at the same time, to see that no section of this House is favoured more than the other, or no individual is favoured more than the other. Sometimes even though you hold the balance between sections and sections, between this side and that side, the allegations are commonly made against the Speaker that he is partial to one side. This is a very common experience. Even the stalwart like late Mr. Baliga had to face such situations. Even when I was the Speaker, I too had to face many such situations, when the members charged me saying that I was partial or favourable to this side and unfavourable to the other side. Also, sometimes in the heat of emotions, members make all sorts of wild charges against the Speaker. At that time, what is required is tact and I think, you possess that, and you will be able to avoid the ugly situations that might arise. Then Sir, you have to carry the great traditions of not only late Mr. Baliga but of all those illustrious Speakers of the Mysore Legislative Assembly that proceded him. Just now. Mr. D. M. Siddaiah told you one or two instances where the illustrious Speakers adorned your Chair. You keep all that in your mind and at the same time I request you, when you look round the House, you look to your right side also. There has been a greatest handicap on this side because the Speakers are prone to look to the left and not to the right. Of course the situation is like that. So Sir, you look to the right and left and to all the sides so that whatever the right side has to say will be fully aired.

I congratulate once again on your unanimous election and on the bright opportunity that has been afforded to you to show that you are no less competent than the previous illustrious Speakers.

MAJOR P. F. D'MELLOW (Nominated).—Mr. Speaker, Sir, I rise merely to ensure that the voice on this side of the House is not entirely still and that this side also shares the happiness on your election. I Congratulate you very sincerely on the high office to which you have been elected. It is not my intention to contradict what the Hon'ble speaker Mr. Kanthi has just now said. Of course, he is right. But it would not be out of place for me, representing as I do a very very minority voice to also plead in the words, if I may quote the Manual of Procedure of Westminster that while the Speaker holds the scales even, and while he has every right to expect from the minorities the support that he is entitled to, but nevertheless, it is the cardinal principle that protection of the minorities is one of the cardinal duties, if I may say so, and privilege, of the Speaker. I merely mention this so that the voice of the Opposition Benches representing a small minority voice is not entirely forgotten on this occasion when we are congratulating you. We certainly congratulate you and I am sure we shall expect from you and receive from you the same courtesy and kindness that has always been characteristic of this House during the days of your illustrious predecessor. Thank you.

† ಶ್ರೀ ಎನ್. ಪಿ. ಅಗ್ನಿಹೋತ್ರಿ.—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ತಾವು ಈ ಮಹಾಸಭೆಗೆ ಅಧ್ಯಕ್ಷರು ಆದುದು ನಮಗೆಲ್ಲರಿಗೂ ಬಹಳ ಅಭಿಮಾನ ಮತ್ತು ಆನಂದದ ಸಂಗತಿಯಾಗಿದೆ. ತಾವು ಜ್ಞಾನವೃದ್ಧರು, ವಯೋವೃದ್ಧರು ಈ ಪ್ರಜಾಪ್ರಭುತ್ವದಲ್ಲಿ ಡ್ಯೆರಕ್ಟ್ ಆಗಿ ಅಸೆಂಬ್ಲಿಗೆ ಬಂದ ವರಲ್ಲ. ಮೊದಲು ಪಂಚಾಯತಿ ಸಮಿತಿಯ ಅಧ್ಯಕ್ಷರಾಗಿ, ನಂತರ ಅಸೆಂಬ್ಲಿ ಸದಸ್ಯರಾಗಿ ಅನೇಕ ಜವಾಬ್ದಾರಿ ಸ್ಥಾನಗಳಲ್ಲಿ ತಾವು ಕರ್ತವ್ಯ ನಿರ್ವಹಿಸಿ ಈ ದಿವಸ ನಿಮ್ಮ ದಕ್ಷತೆಯನ್ನು ಪ್ರದರ್ಶಿಸಿ ಎಲ್ಲರ ಮನಸ್ಸನ್ನೂ ಗೆದ್ದು ಸರ್ವಾನುಮತದಿಂದ ಅಧ್ಯಕ್ಷರಾಗಿ ಆದುದು ನಮ್ಮೆಲ್ಲರಿಗೂ ಅತ್ಯಂತ ಆನಂದ ಎನಿಸುತ್ತದೆ. ನೀವು ಯಾವುದೇ ಕಾರ್ಯವನ್ನು ತೆಗೆದುಕೊಂಡರೂ ಬಹಳ ದಕ್ಷತೆ ಮತ್ತು ಶಿಸ್ತು ಸಂಘಟನೆಯಿಂದ ಮಾಡುತ್ತೀರೆಂದು ನಾನು ಬಲ್ಲೆ. ತಾವು ಪಿ. ಎ ಸಿ. ಛೇರ್ಮನ್ ಆಗಿದ್ದಾಗ ಕೆಲಸ ಮಾಡಿದ ಸಂದರ್ಭದಲ್ಲಿ ಯಾವ ಪ್ರಕಾರ ಕಮಿಟಿಯನ್ನು ನಡೆಸುತ್ತಾ ಇದ್ದಿರಿ ಎನ್ನುವುದನ್ನು ಅಲ್ಲಿಯ ಸದಸ್ಯರು ಹೇಳಿದ್ದಾರೆ. ಇಂತಹ ಯೋಗ್ಯರಾದ ಛೇರ್ಮನ್ ಅವರನ್ನು ಎಂದೂ ಕಂಡಿಲ್ಲಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನೆನಪು ಮಾಡುತ್ತೇನೆ. ಈ ದಿವಸ ಕಾಂಗ್ರೆಸ್ಸಿನ ಮುಖಂಡರಾದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರೂ ಕೂಡ ಬನವೇಶ್ವರರ ಉದಾಹರಣೆ ಕೊಟ್ಟು ಉತ್ತಮವಾದ ಮಾತುಗಳನ್ನು ಹೇಳಿದ್ದಾರೆ. ಬನವೇಶ್ವರರ ವಚನದಲ್ಲಿ ಹೇಳಿದ ಹಾಗೆ, ನನಗಿಂತ ಕಿರಿಯವರಿಲ್ಲ ಶಿವಶರಣರಿಗಿಂತ ಹಿರಿಯವರಿಲ್ಲ ಎನ್ನುವುದನ್ನು ಈ ಪ್ರಜಾ ಪ್ರಭುತ್ವದಲ್ಲಿ ಆಚರಣೆಗೆ ತಂದಿದ್ದೀರಿ. ಉದಾಹರಣೆಗೆ ಹೇಳಬೇಕಾದರೆ ಒಬ್ಬ ಸಾಮಾನ್ಯ ಕಾರ್ಯ ಕರ್ತರಾದ ತಾವು ಪೇನಲ್ ಆಫ್ ಛೇರ್ಮನ್ ಆಗಿ ಮೊದಲು ನೇಮಕವಾದಿರಿ. ಉದ್ಘೋಕದ ವಾತಾವರಣ ಇದ್ದಾಗ ಮನೆಯನ್ನು ಒಳ್ಳೆಯ ರೀತಿಯಲ್ಲಿ ನಡೆಸುತ್ತೀರೆಂದು ಉತ್ಕೃಷ್ಟ ಅಧಿರಾಷೆ ಶ್ರೀಮಾನ್ ನಿಜಲಿಂಗಪ್ಪನವರಿಗೆ ಇತ್ತು. ಅವತ್ತಿನಿಂದಲೂ ನಿಮಗೆ ಹೇಳುತ್ತಾ ಇದ್ದೆ, ಮುಂದಿನ ಅಧ್ಯಕ್ಷರು ನೀವು ಆಗುತ್ತೀರಿ ದಯವಾಡಿ ಹಲ್ಲುಹಾಕಿರಿ ಇಲ್ಲವಿದ್ದರೆ ಅಧ್ಯಕ್ಷರು ಆದ ನೀವು ಹೇಳುವುದು ನಮಗೆ ತಿಳಿಯುವುದಿಲ್ಲ ನಾವು ಹೇಳುವುದು ನಿಮಗೆ ತಿಳಿಯುವುದಿಲ್ಲ ಎಂದು. ಈ ಸಭೆಯ ಘನತೆ ಗೌರವಗಳನ್ನು ಹಿಂದಿನ ಎಲ್ಲಾ ಅಧ್ಯಕ್ಷರು ಯಾವ ಪ್ರಕಾರ ನಡೆಸಿಕೊಂಡು ಬಂದರೋ ಅದಕ್ಕಿಂತ ಹೆಚ್ಚಿನ ರೀತಿ ನಡೆಸುತ್ತೀರಿ ಎನ್ನುವ ಆಸೆ ನನಗೆ ಇದೆ. ನಮ್ಮ ಗೆಳೆಯರಾದ ಶ್ರೀಮಾನ್ ಬದ್ರಿನಾರಾಯಣ್‌ರವರು ಹೇಳಿದರು ನೀವು ಉದ್ರೇಕಗೊಳ್ಳದೆ ಶಾಂತಿರೀತಿಯಿಂದ ಇರಬೇಕು ಎಂದು. ಎಲ್ಲಾಸಿಟ್ಟನ್ನೂ ಬಿಡುವುದುಕ್ಕೆ ಹೋಗಬಾರದು. ನೀವು ಪೂರಾ ಸಿಟ್ಟು ಕಳೆದು ಕೊಂಡರೆ ಉತ್ತಮವಾದ ಸ್ಪೀಕರ್ ಆಗಲಿಕ್ಕಿಲ್ಲ. ಸಿಟ್ಟು ಬಾಬೇಕಾದ ಸಂದರ್ಭ ಇದ್ದರೆ ಸಿಟ್ಟು ಮಾಡಬೇಕು. ಶಾಂತಿ ವಾತಾವರಣ ನಿರ್ಮಾಣ ಮಾಡುವ ಕಾಲದಲ್ಲಿ ಶಾಂತಿಯಿಂದ ವರ್ತಿಸ ಬೇಕು. ಈ ಎಲ್ಲಾ ಗುಣಗಳು ನಿಮ್ಮಲ್ಲಿವೆ ಎನ್ನುವುದು ಗೊತ್ತಿದೆ. ಬುದ್ಧಿಯಲ್ಲಿ ತಕಬುದ್ಧಿ, ಸಹಸ್ಯಾರು ಬುದ್ಧಿ ಇರಬಹುದು. ನಿಮಗೆ ಕೋಟಿ ಬುದ್ಧಿ ಇರುವುದರಿಂದ ಕೊಠಾವಳಿ ಎನ್ನುವ ಒಳ್ಳೆಯ ಹೆಸರನ್ನು ಇಟ್ಟಿದ್ದಾರೆ. ಅದುದರಿಂದ ನಿಮಗೆ ಬುದ್ಧಿ ಕಲಸುವ ಸಾಮರ್ಥ್ಯ ಯಾರಿಗೂ ಇಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿ ನಿಮಗೆ ದೇವರು ಆಯುರಾರೋಗ್ಯವನ್ನು ಕೊಡಲಿ ಎಂದು ಆಶಿಸುತ್ತೇನೆ. ವಿಶೇಷತಃ ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ರಿಟೈರ್ ಆದನಂತರ ಸ್ಪೀಕರ್ ಆಗುವ ಗುಣವನ್ನು ಶ್ರೀಮತಿ ಕೊತಾವಳೆಯವರು ನಿಮಗೆ ತಂದುಕೊಟ್ಟಿದ್ದಾರೆ. ಆದ್ದರಿಂದ ಅವರಿಗೂ ದೇವರು ಆಯುರಾರೋಗ್ಯವನ್ನೂ ಸುಖಸಂಪತ್ತನ್ನೂ ಕೊಡಲಿ ಮತ್ತು ನಿಮ್ಮ ಅಧ್ಯಕ್ಷತೆಯಲ್ಲಿ ಈ ಸಭೆಯ ಘನತೆ ಗೌರವಗಳು ಹಿಂದೂಸ್ಥಾನದಲ್ಲಿ ಇನ್ನೂ ಹೆಚ್ಚಾಗಿ ಬೆಳೆದು ಈ ಸಭೆಯು ಒಂದು ಮಾದರಿ ಅಸೆಂಬ್ಲಿಯಾಗಿ ಪರಿಣಮಿಸಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗಾವಿ.—ಸ್ವಾಮಿ, ಅಧ್ಯಕ್ಷರೇ, ಈ ಮಾನ್ಯ ಸಭೆಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿಸಿದ್ದಕ್ಕಾಗಿ ನನಗೆ ಮತ್ತು ವೈಯುಕ್ತಿಕವಾಗಿ ಮತ್ತು ನಮ್ಮ ಭಾಗದ ಜನತೆಗೆ ಅತ್ಯಂತ ಆನಂದವನ್ನುಂಟುಮಾಡಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಾವು ಒಳ್ಳೆಯ ವಕೀಲರಾಗಿದ್ದುದಲ್ಲದೆ ಅನೇಕ ಸಂದರ್ಭದಲ್ಲಿ ಸಾಮಾನ್ಯ ಜನರೊಡನೆ ಒಳ್ಳೆಯ ರೀತಿಯಿಂದ ನಡೆದುಕೊಂಡು ಬಂದು ಅವರೊಡನೆ ಬೆರೆತು ಒಳ್ಳೆಯ ಕಾರ್ಯವನ್ನು ಮಾಡುತ್ತಾ ಬಂದಿದ್ದೀರಿ. ಒಳ್ಳೆಯ ಕಾರ್ಯಕರ್ತನಂತೆ ಕೆಲಸ ಮಾಡುತ್ತಾ ನಮ್ಮ ಪಕ್ಷದಲ್ಲಿದ್ದುಕೊಂಡು ಇಲ್ಲಿಯವರೆಗೆ ಪಕ್ಷದ ಸೇವೆಯನ್ನೂ, ಜನರ ಸೇವೆಯನ್ನೂ ಮಾಡುತ್ತಾ ಬಂದಿದ್ದೀರಿ. ಅದೇ ಪ್ರಕಾರ ಅನೇಕ ಸಂದರ್ಭಗಳಲ್ಲಿ ನಮ್ಮ ಪಕ್ಷವನ್ನು ಸಮರ್ಥಿಸುತ್ತಾ ಈ ವಿಧಾನ ಸಭೆಯಲ್ಲಿ ಅತ್ಯಂತ ಯಶಸ್ವಿಯಾಗಿ ಭಾಗವಹಿಸುತ್ತಾ ಬಂದಿದ್ದೀರಿ. ತಮ್ಮ ಅನುಭವ ಅಪಾರವಾದುದು. ಅನೇಕ ಸ್ಪೀಕರ್ ಕೆಳಗೆ ಮಂತ್ರಿ ವಿಧಾನಸಭೆಯಲ್ಲೂ ಕೂಡ ಮೆಂಬರ್ ಆಗಿ ಕೆಲಸಮಾಡಿದ ಅನುಭವ ಕೂಡಾ ತಮಗೆ ಇದೆ. ಆ ಅನುಭವದ ಪೂರ್ತಿಫಲ ಈ ವಿಧಾನಸಭೆಗೆ ಸಿಕ್ಕುತ್ತದೆ. ತಾವು ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಹೋಗುತ್ತೀರಿ ಎನ್ನುವುದರಲ್ಲಿ ನಮಗೆ ವಿಶ್ವಾಸ

ಇದೆ. ತಾವು ಈ ಸಭೆಯಲ್ಲಿ ಎಲ್ಲಾ ಸದಸ್ಯರನ್ನೂ ಆ ಕಡೆಯವರೇ ಇರಲಿ ಈ ಕಡೆಯವರೇ ಇರಲಿ, ಮೆಜಾರಿಟಿ ಅಥವಾ ಮೈನಾರಿಟಿ ಇರಲಿ ಎಲ್ಲಾ ಪಕ್ಷಗಳೂ ಒಂದೇ ಎನ್ನುವ ರೀತಿ ನಡೆಸಿಕೊಂಡು ಅವರ ಎಲ್ಲಾ ಹಕ್ಕು ಭಾದ್ಯತೆಗಳನ್ನೂ ಮತ್ತು ಈ ಸಭೆಯ ಘನತೆ ಗೌರವಗಳನ್ನೂ ಕಾಪಾಡಿಕೊಂಡು ಹೋಗುತ್ತೀರಿ ಎನ್ನುವುದರಲ್ಲಿ ಪೂರ್ತಿ ವಿಶ್ವಾಸ ನನಗೆ ಇದೆ. ಅದರಲ್ಲೂ ವಿಶೇಷತಃ ನಮ್ಮ ಭಾಗದವರು. ಬೆಳಗಾಂ ಜಿಲ್ಲೆಯವರಿಗೆ ಪೂರ್ತಿ ಅಭಿಮಾನ ಮತ್ತು ಆನಂದವಾಗಿದೆ ಎಂದು ಹೇಳಿ ನಾನು ನಮ್ಮ ಎಲ್ಲಾ ಸದಸ್ಯರುಗಳಪರವತಿಯಿಂದ ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಸ್ವಾಮಿ, ಈ ದಿವಸ ತಾವು ಈ ನಮ್ಮ ವಿಧಾನ ಸಭೆಗೆ ಅಧ್ಯಕ್ಷರಾಗಿ ಚುನಾಯಿತರಾಗಿರುವುದು ನನಗೆ ಸಂಪೂರ್ಣ ಸಂತೋಷವಾಗುತ್ತದೆ. ಈ ಹಿಂದೆ ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದಂತಹ ಉಪಾಧ್ಯಕ್ಷರಾದ ಶ್ರೀ ಮಂಜುನಾಥ ಅವರೂ ಸಹ ಬಹಳ ದಕ್ಷತೆಯಿಂದ, ಅವರ ಶಕ್ತಿ ಮೀರಿ ಬಹಳ ಚೆನ್ನಾಗಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಿದ್ದಾರೆ. ಅವರಿಗಾಗಿ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಶ್ರೀಮಾನ್ ಬಾಳಿಗಾ ಅವರು ಅಧ್ಯಕ್ಷರಾಗುವುದಕ್ಕೆ ಮೊದಲು ಈ ಸಭೆಗೆ ಅಧ್ಯಕ್ಷರಾಗಿದ್ದವರೂ ಸಹ ಈ ಸಭೆಗೆ ಹೆಚ್ಚಿನ ಒಂದು ಗೌರವವನ್ನು ದೊರಕಿಸಿಕೊಟ್ಟಿದ್ದಾರೆ. ಹಿಂದಿನ ಅಧ್ಯಕ್ಷರು ಇಂಡಿಯಾ ದೇಶದಲ್ಲೇ ನಮ್ಮ ಈ ಸಭೆ ಮಾದರಿಯಾಗಿದೆ ಎಂಬುದನ್ನು ತೋರಿಸಿದರು. ತಾವೂ ಸಹ ಮೇಧಾವಿಗಳು, ಪ್ರತಿಭಾವಂತರು ಎಂದು ಕೀರ್ತಿಯನ್ನು ಪಡೆದವರು. ತಮ್ಮಲ್ಲಿ ದಕ್ಷತೆ ಇದೆ, ಬುದ್ಧಿವಂತಿಕೆ ಇದೆ, ಚತುರತೆ ಇದೆ. ಈ ಸಭೆಯ ಅಧ್ಯಕ್ಷರಾಗುವುದಕ್ಕೆ ಇರಬೇಕಾದಂತಹ ಗುಣಗಳು ಮತ್ತು ಅರ್ಹತೆಗಳೆಲ್ಲಾ ತಮಗೆ ಇದೆಯೆಂದು ನಾನು ನಂಬಿದ್ದೇನೆ, ಮತ್ತು ಕಂಡುಕೊಂಡಿದ್ದೇನೆ. ಈ ಸಭೆಗೆ ಹಿಂದಿನ ಅಧ್ಯಕ್ಷರು ಉಪಾಧ್ಯಕ್ಷರು ತಂದಂಥ ಗೌರವಕ್ಕಿಂತ ಹೆಚ್ಚಿನ ಗೌರವವನ್ನು ಈ ಸಭೆಗೆ ದೊರಕಿಸಿಕೊಡುತ್ತೀರಿ ಎಂದು ಹೇಳಿ ತಮಗೆ ನನ್ನ ಅಭಿನಂದನೆಗಳನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಸನ್ಮಾನ್ಯ ಅಧ್ಯಕ್ಷರೇ, ಮಳೆ ಬೆಳೆಗಳನ್ನು ಕಳೆದುಕೊಂಡು ಅಭಾವಪರಿಸ್ಥಿತಿಗೆ ತುತ್ತಾಗಿರತಕ್ಕ ಈ ಸಮಯದಲ್ಲಿ ಈ ಸಭೆಯಲ್ಲಿಯೂ ಅಭಾವವನ್ನುಂಟು ಮಾಡಿದ್ದಂತಹ ಅಧ್ಯಕ್ಷರ ಸ್ಥಾನವನ್ನು ತಾವು ಭರ್ತಿಮಾಡಿದ್ದೀರಿ, ಈ ಸಂದರ್ಭದಲ್ಲಿ ತಾವು ಈ ಸಭೆಯ ಅಧ್ಯಕ್ಷರ ಸ್ಥಾನಕ್ಕೆ ಚುನಾಯಿತರಾಗಿ ಈ ಸ್ಥಾನವನ್ನು ತಾವು ಅಲಂಕರಿಸಿರುವುದು ನನಗೆ ತುಂಬಾ ಸಂತೋಷವನ್ನುಂಟುಮಾಡಿದೆ. ತಾವು ತುಂಬಾ ಹಿರಿಯರು, ಜ್ಞಾನಿಗಳು ಹಾಗೂ ವಯೋವೃದ್ಧರೂ ಆಗಿದ್ದೀರಿ. ನಾನು ಈ ಸಾರಿ ಪ್ರಥಮವಾಗಿ ಈ ಸಭೆಗೆ ಚುನಾಯಿತನಾಗಿ ಬಂದಿರುವುದರಿಂದ ಇಂಥಾ ಸಂದರ್ಭಗಳಲ್ಲಿ ಹಿರಿಯರ ವಿಷಯದಲ್ಲಿ ಯಾವರೀತಿ ಮಾತನಾಡಬೇಕೆಂಬ ವಿಷಯದಲ್ಲಿ ನಾನು ಸಾಕಷ್ಟು ಅನುಭವವನ್ನು ಹೊಂದಿಲ್ಲ. ಮತ್ತು ಇಂಥಾ ಅವಕಾಶಗಳು ನನಗೆ ಸಿಕ್ಕಿಲ್ಲ. ಈ ಸಭೆಯ ಅಧ್ಯಕ್ಷರಾಗುವುದಕ್ಕೆ ಇರಬೇಕಾದಂತಹ ಅಪೇಕ್ಷಿತವಾದ, ಉತ್ತಮವಾದ ಗುಣಗಳನ್ನು ತಾವು ಹೊಂದಿದ್ದೀರೆಂದು ನಾನು ನಂಬಿದ್ದೇನೆ. ಈ ಸಭೆಯ ಕಾರ್ಯಕಲಾಪಗಳನ್ನು ತುಂಬಾ ಯಶಸ್ವಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ದೇವರು ತಮಗೆ ಎಲ್ಲಾ ವಿಧವಾದ ಸೌಲಭ್ಯ, ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಡಲಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಚಿಕ್ಕೇಗೌಡ (ಗುಬ್ಬಿ) —ಮಾನ್ಯ ಅಧ್ಯಕ್ಷರೇ, ತಾವು ಈ ದಿವಸ ಈ ಸಭೆಗೆ ಅಧ್ಯಕ್ಷರಾಗಿ ಚುನಾಯಿತರಾಗಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಈಗ ನುಮಾರು ಒಂದೂವರೆ ವರ್ಷದ ಹಾಗಾಯಿತು ನಾನು ಸದಸ್ಯನಾಗಿ ಈ ಸಭೆಗೆ ಬಂದು ನಿಮ್ಮೊಡನೆ ಬಿಳಿತವಾಗಿ ಕೆಲಸ ಮಾಡಿಕೊಂಡು ಬಂದಿರುವುದರಿಂದ ತಮ್ಮ ಪರಿಚಯ ನನಗೆ ಇದೆ. ತಾವು ಬಹಳ ಬುದ್ಧಿವಂತರು. ಹಿಂದೆ ಶ್ರೀಮಾನ್ ಬಾಳಿಗಾ ಅವರು ಈ ಸಭೆಯ ಅಧ್ಯಕ್ಷರಾಗಿದ್ದಾಗ ತಾವು ಪ್ಯಾನಲ್ ಆಫ್ ಚೇರ್ಮನ್‌ಗೆ ನೇಮಕವಾಗಿ ಆಗಾಗ್ಗೆ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಈ ಕೆಲಸವನ್ನು ನಿರ್ವಹಿಸುತ್ತಿದ್ದಿರಿ. ತಮ್ಮ ಪಕ್ಷದವರೆಲ್ಲರೂ ಸೇರಿ ತಮ್ಮನ್ನು ಒಮ್ಮತದಿಂದ ಈ ಸಭೆಯ ಅಧ್ಯಕ್ಷರ ಸ್ಥಾನಕ್ಕೆ ಚುನಾಯಿಸಿದ್ದಾರೆ. ತಾವೂ ಸಹ ಬುದ್ಧಿವಂತರು. ಈ ಸಭೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತೀರಿ. ಆದರೆ ನಮ್ಮ ಸ್ನೇಹಿತರು ಹೇಳಿದಹಾಗೆ ತಮಗೆ ಸಿಟ್ಟು ಬಂದಾಗ ಜಾಸ್ತಿ ಗಲಾಟೆ ಮಾಡಿಕೊಳ್ಳಬೇಡಿರಿ, ರೇಗ ಬೇಡಿ. ಸ್ವಲ್ಪ ಶಾಂತಿಯನ್ನು ತಗೆದುಕೊಂಡು ಶಾಂತಿಯಿಂದ ಕಾರ್ಯಕಲಾಪಗಳನ್ನು ನಡೆಸಿ ಕೊಂಡು ಹೋಗಿ. ನಾನು ಇನ್ನು ಹೆಚ್ಚಿಗೆ ಏನನ್ನೂ ಹೇಳಲಾರೆ. ತಮಗೆ ಕನ್ನಡ ಅಷ್ಟು ಚೆನ್ನಾಗಿ ಬರುವುದಿಲ್ಲ. ಆದ್ದರಿಂದ ಕನ್ನಡವನ್ನು ಸ್ವಲ್ಪ ಚೆನ್ನಾಗಿ ಮಾತ

(ಶ್ರೀ ಚಿಕ್ಕೇಗೌಡ)

ನಾಡುವುದನ್ನು ಚೆನ್ನಾಗಿ ಪ್ರಾಕ್ಟೀಸ್ ಮಾಡಿಕೊಳ್ಳಿರಿ ಎಂದು ಪ್ರಾರ್ಥನೆ ಮಾಡಿಕೊಂಡು, ತಾವು ಈ ಸಭೆಯ ಅಧ್ಯಕ್ಷರ ಸ್ಥಾನಕ್ಕೆ ಒಮ್ಮತದಿಂದ ಆರಿಸಿ ಬಂದಿದ್ದೀರಿ. ಕಾಶಿ ವಿಶ್ವನಾಥ ಮತ್ತು ಬದರಿ ನಾರಾಯಣನು ತಮಗೂ ಮತ್ತು ತಮ್ಮ ಕುಟುಂಬಕ್ಕೂ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಡಲಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ತಾವು ಈ ಸಭೆಯ ಅಧ್ಯಕ್ಷರ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾದುದಕ್ಕಾಗಿ ನಾನು ಸಂತೋಷಪಡುತ್ತೇನೆ. ಅಧ್ಯಕ್ಷರ ಕರ್ತವ್ಯ ಪರಿಪಾಲನೆಯ ಪ್ರಜ್ಞೆ, ವಿಶ್ವಾಸವುಳ್ಳಂಥಾ ತಮಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹೊಸದಾಗಿ ಪ್ರಥಮಬಾರಿಗೆ ಈಸಭೆಗೆ ಚುನಾಯಿತರಾಗಿ ಬಂದು ನಾವು ಕೆಲವರು ಹಿಂಭಾಗದಲ್ಲಿ ಕೊನೆಯಲ್ಲಿ ಕುಳಿತುಕೊಂಡಿದ್ದೇವೆ. ಆದ್ದರಿಂದ ನಮಗೆ ಹೆಚ್ಚಿನ ಅವಕಾಶವನ್ನು ಈ ಸಭೆಯಲ್ಲಿ ಗುಂಟು ಮಾಡಿಕೊಡಬೇಕೆಂದು ನಾನು ನನ್ನ ಪರವಾಗಿಯೂ ಮತ್ತು ನನ್ನ ಮಿತ್ರರ ಪರವಾಗಿಯೂ ತಮ್ಮಲ್ಲಿ ಸವಿನಯದಿಂದ ಪ್ರಾರ್ಥನೆ ಮಾಡಿಕೊಂಡು ಮತ್ತೊಮ್ಮೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ತಮಗೆ ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ, ಅಧ್ಯಕ್ಷರೇ, ಈ ಸಭಾಧ್ಯಕ್ಷರುಗಳ ವಿಷಯವನ್ನು ಕುರಿತು ಮಾತನಾಡುವಾಗ ಈ ಸಭೆ ಅವರಿಂದ ಏನು ನಿರೀಕ್ಷಣೆ ಮಾಡುತ್ತದೆ ಎಂದರೆ, ಈ ಸಭೆಯನ್ನು ಅವರು ಚಮತ್ಕಾರವಾಗಿ ನಡೆಸಿಕೊಂಡು ಹೋಗುತ್ತಾರೆ, ಜನಗಳ ಮೆಚ್ಚುಗೆಗೆ ಪಾತ್ರರಾಗುತ್ತಾರೆ ಎನ್ನುವುದನ್ನು ಸಾಮಾನ್ಯವಾಗಿ ಹೇಳತಕ್ಕದ್ದು ರೂಢಿ. ಸಭಾಪತಿಗಳ ಸ್ಥಾನ ನನಗೆ ಗೊತ್ತಿರುವ ಹಾಗೆ ಇಡೀ ಸರ್ಕಾರ ಎನ್ನತಕ್ಕಂಥ ಯಂತ್ರವನ್ನು ಪ್ರಜಾರಾಜ್ಯದಲ್ಲಿ ಎಷ್ಟರಮಟ್ಟಿಗೆ, ಯಾವಗುರಿಗೆ ಆ ಯಂತ್ರವನ್ನು ತೆಗೆದುಕೊಂಡು ಹೋಗಬೇಕು ಎನ್ನತಕ್ಕದ್ದನ್ನು ಆಂತರಿಕವಾಗಿ ರೂಢಿಸಿಕೊಳ್ಳತಕ್ಕ ಸ್ಥಾನ. ಈ ಸಭೆಯಲ್ಲಿ ಕೆಲವು ವಿಚಾರಗಳ ಬಗ್ಗೆ ಕಟ್ ಮೋಷನ್‌ಗಳು, ಪ್ರಶ್ನೆಗಳು, ಮತ್ತು ನಿರ್ಣಯಗಳನ್ನು ತಂದು ಚರ್ಚೆ ಮಾಡಿದರೂ ಕೂಡ ಆ ಬಗ್ಗೆ ಸರ್ಕಾರದ ಗುರಿ ಏನು ಎನ್ನುವುದನ್ನು ಅರಿಯುವುದು ಕಷ್ಟ. ಯಾವ ಯಾವ ಸಂದರ್ಭದಲ್ಲಿ ಎಷ್ಟೆಷ್ಟು ಕಾಲಾವಕಾಶವನ್ನು ಸದಸ್ಯರಿಗೆ ಒದಗಿಸಿ ಕೊಡಬೇಕೆಂಬುದನ್ನು ಅರಿತು ಅದರಂತೆ ಸದಸ್ಯರಿಗೆ ಕಾಲಾವಕಾಶವನ್ನು ಒದಗಿಸಿಕೊಟ್ಟು ತನ್ಮೂಲಕ ಸರ್ಕಾರ ಹಾಗೂ ಪ್ರಜಾಕೋಟಿಯ ನಾಡಿಯನ್ನು ಪರೀಕ್ಷೆ ಮಾಡಿ ತಮ್ಮ ಗುರಿಯ ಕಡೆಗೆ ಸರ್ಕಾರದ ಗಮನವನ್ನು ಸೆಳೆಯಬೇಕು. ಅಂಥಾ ಒಂದು ಕಾಲಾವಕಾಶವನ್ನು ಮಾಡಿಕೊಡತಕ್ಕ ಶಕ್ತಿಯನ್ನುಳ್ಳಂಥಾದ್ದು ಈ ಅಧ್ಯಕ್ಷರ ಸ್ಥಾನ. ಅನೇಕಪೇಳೆ ನಾನು ಈ ಸಭೆಯಲ್ಲಿ ನೋಡಿರುವ ಹಾಗೆ ಮತ್ತು ನನ್ನ ಸುತ್ತಮುತ್ತ ಇರತಕ್ಕವರು ಹೇಳಿರುವುದನ್ನು ನೋಡಿದರೆ, ಅವರು ಹೇಳಿದ್ದನ್ನು ಕೇಳಿದ್ದರಲ್ಲಿ ನಾನು ಮಾತನಾಡುವಾಗ ಇನ್ನು ಸ್ವಲ್ಪ ಕಾಲಾವಕಾಶವನ್ನು ಅಧ್ಯಕ್ಷರು ಕೊಟ್ಟಿದ್ದರೆ ನನ್ನ ಭಾಷಣವನ್ನು ಮುಗಿಸುತ್ತಿದ್ದೆ. ಆದರೆ ಅವಕ್ಕೆ ಅಧ್ಯಕ್ಷರು ನನಗೆ ಕಾಲಾವಕಾಶವನ್ನು ಕೊಡಲಿಲ್ಲ ಎಂದು ಕೆಲವರು ಹೇಳುತ್ತಾರೆ. ನಾನು ಏನೋ ಒಂದು ಮುಖ್ಯವಾದ ವಿಷಯವನ್ನು ಹೇಳಬೇಕಾಗಿತ್ತು. ಆ ಸಮಯಕ್ಕೆ ಸರಿಯಾಗಿ ಅಧ್ಯಕ್ಷರು ನನಗೆ ತಕ್ಷಣ ಬೆಲ್ ಹೊಡೆದು ಕೂಡಿಸಿದರು, ಎಂದು ಕೆಲವರು ಹೇಳುತ್ತಾರೆ. ಇನ್ನೊಂದು ಪ್ರಶ್ನೆಯನ್ನು ಕೇಳುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದರೆ ನನಗೆ ಬೇಕಾದ ಉತ್ತರ ಸರ್ಕಾರದ ಕಡೆಯಿಂದ ದೊರಯುತ್ತಿತ್ತು ಎಂದು ಕೆಲವರು ಹೇಳುತ್ತಾರೆ. ಇಂಥಾ ಸಂದರ್ಭಗಳಿರ್ವಾ ಬರುತ್ತವೆ. ಆದ್ದರಿಂದ ಇಂಥಾ ಸಂದರ್ಭಗಳನ್ನೆರ್ವಾ ಅಧ್ಯಕ್ಷರು ಗಮನದಲ್ಲಿಟ್ಟುಕೊಂಡು ಸದಸ್ಯರಿಗೆ ಕಾಲಾವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ಇಂಥಾ ಸಂದರ್ಭಗಳಲ್ಲಿ ಶ್ರೀ ರಾಮನ ಗುಣವನ್ನು ಅನುಸರಿಸಬೇಕಾಗುತ್ತದೆ. 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ', ಎನ್ನುವ ಹಾಗೆ ಯಾವ ಯಾವ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ಪ್ರಜೆಗಳ ಅಶೋತ್ತರಗಳನ್ನು ನೆರವೇರಿಸಬೇಕು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಅದರಂತೆ ನಡೆಯುಕೊಳ್ಳಲು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕು. ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡತಕ್ಕ ಇಕ್ಕಳ ಅಧ್ಯಕ್ಷರ ಕೈಯಲ್ಲಿ ಇರೆ. ಆದ್ದರಿಂದ ತಾವು ನಿರ್ದಾಕ್ಷಿಣ್ಯವಾಗಿ ಸಂದರ್ಭವನ್ನು ಅರಿತು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕು. ಸದಸ್ಯರಿಗೆ ಮಾತನಾಡಲು ಹೆಚ್ಚು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೊಂದವರ, ಬೆಂದವರ ಅಬಲೆಯರ ಸಮಸ್ಯೆಗಳು, ವಿಚಾರಗಳು ಸರ್ಕಾರದ ಮುಂದೆ ಬಂದಾಗ, ಸಭೆಯ ಮುಂದೆ ಬಂದಾಗ ಅವುಗಳ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟು ಆಗ ಸರ್ಕಾರದ ಲಗಾಮನ್ನು ಹಿಡಿದು ಅವರ ಆ ವಿಚಾರಗಳಲ್ಲಿ ಸರಿಯಾದ ರೀತಿಯಲ್ಲಿ ವರ್ತಿಸು

ವಂತೆ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕು. ಜನಗಳಿಂದ ವೋಟು ಪಡೆದುಕೊಂಡು ಈ ಸಭೆಗೆ ಚುನಾಯಿತರಾಗಿ ಬಂದವರು ನಾವು ಇಲ್ಲಿ ಮಾತನಾಡುವುದಕ್ಕೆ. ಜನತೆಯ ಅಭಿಪ್ರಾಯವನ್ನು ಸರ್ಕಾರದ ಮುಂದೆ ಇಡುವುದಕ್ಕೆ ಅವಕಾಶ ಸಿಕ್ಕಲಿಲ್ಲ, ನನ್ನ ಹೆಸರು ಪತ್ರಿಕೆಯಲ್ಲಿ ಬರಲಿಲ್ಲ, ಎನ್ನುವವರೂ ಇದ್ದಾರೆ. ಅಂತಹ ಅಕ್ಷೇಪಣೆಗಳಿಗೆ ಅವಕಾಶವನ್ನು ಕೊಡಬಾರದು. ವಿಶ್ವಾಸದಿಂದ ಈ ಸಭೆಯನ್ನು ನಡೆಸಿಕೊಂಡು ಹೋಗಬೇಕು. ಎಷ್ಟೇ ತೊಂದರೆಯಾದರೂ ಕೂಡ ಕಷ್ಟದಲ್ಲಿರುವವರ, ನೊಂದವರ, ಬೆಂದವರ ವಿಷಯುಗಳನ್ನು ಈ ಸಭೆಯಲ್ಲಿ ಹೇಳುವಾಗ, ಸರ್ಕಾರದ ಗಮನಕ್ಕೆ ಅದನ್ನು ತಂದು ಸರ್ಕಾರದಿಂದ ಅದಕ್ಕೆ ಬೇಕಾದಂತಹ ಉತ್ತರವನ್ನು ಪಡೆಯುತಕ್ಕಂಥ ಕಾಲದಲ್ಲಿ ಚಟಕ್ಕನೆ ಕ್ಲೋಸ್ ಮಾಡಬಾರದು. ಈ ಸಭೆಯು ಹಾಗೂ ಜನತೆಯ ವಿಶ್ವಾಸಕ್ಕೆ ಪಾತ್ರರಾಗಿ ಚಮತ್ಕಾರದಿಂದ ಈ ಸಭೆಯ ಕಾರ್ಯಕರಾಪಗಳನ್ನು ನಡೆಸಿಕೊಂಡು ಹೋಗತಕ್ಕ ಬುದ್ಧಿಶಕ್ತಿ ತಮಗೆ ಇದೆಯೆಂದು ನಾನು ನಂಬಿಕೊಂಡಿದ್ದೇನೆ. ಇದುವರೆಗೆ ಎಷ್ಟೋ ಜನ ಅಧ್ಯಕ್ಷರುಗಳು ಈ ಸಭೆಗೆ ಬಂದು ಹೋಗಿದ್ದಾರೆ. ಆದರೆ ಅಧ್ಯಕ್ಷರ ಹೆಸರು ಶಾಶ್ವತವಾಗಿ ಇರುತ್ತದೆ. ಈಗ ಜನತೆ ಸೂರ್ಯವಂಶದಲ್ಲಿ ಶ್ರೀರಾಮನನ್ನು ನೆನೆಸಿಕೊಳ್ಳುತ್ತಾರೆ. ಬೇರೆ ಯಾರನ್ನೂ ಜನತೆ ನೆನೆಸಿಕೊಳ್ಳುವುದಿಲ್ಲ. ಹಾಗೆ ದಿವಂಗತ ಬಾಳಿಗ ಅವರ ಹೆಸರನ್ನು ಜನ ಸ್ಮರಣೆ ಮಾಡಿಕೊಳ್ಳುತ್ತಾರೆ. ತಾವು ಅವಿರೋಧವಾಗಿ ಈ ಸಭೆಗೆ ಆಯ್ಕೆಯಾಗಿದ್ದೀರಿ. ತಮ್ಮ ಹೆಸರು ಚಿರಸ್ಥಾಯಿಯಾಗಿ ಉಳಿಯುವ ಹಾಗೆ, ಜನತೆ ತಮ್ಮ ಹೆಸರನ್ನು ಮುಂದೆ ನೆನೆಸಿಕೊಳ್ಳುವ ಹಾಗೆ ಮಾಡಬೇಕು ಮುಂದಿನ ಈ ಸಭೆಯು ಅಧ್ಯಕ್ಷರ ರ್ಯಾಂಕ್ ತರುಣರದು. ತರುಣರಾದ ನಮ್ಮ ಉಪಾಧ್ಯಕ್ಷರಾದ ಶ್ರೀ ಮಂಜುನಾಥ್ ಅವರು ಬಹಳ ಚೆನ್ನಾಗಿ ಕಾರ್ಯಕರಾಪಗಳನ್ನು ನಡೆಸಿದ್ದಾರೆ. ಮೊದಲನೆಯ ಬಾರಿಗೆ ಈ ಸಭೆಗೆ ಅವರು ಚುನಾಯಿತರಾಗಿ ಬಂದಿದ್ದರೂ, ಕೇವಲ ಚಿಕ್ಕವರೂ ರಾಯರು ಆದ ಅವರು ಬಹಳ ದಕ್ಷತೆ, ಚಾಕಚಕ್ಯತೆಯಿಂದ ಯಶಸ್ವಿಯಾಗಿ ಈ ಸಭೆಯ ಕಾರ್ಯಕರಾಪಗಳನ್ನು ನಡೆಸಿದರು. ಪುಸ್ತಕವನ್ನು ಓದಬೇಕೆಂದು ಜನ ಹೇಳುತ್ತಾರೆ. ಅದು ನಿಜ. ಆದರೆ ಪುಸ್ತಕದ ಬದನೇಕಾಯಿ ಏನಿದೆ. ಅವಕಾಶ ಸಿಕ್ಕಿದಾಗ ಚೆನ್ನಾಗಿ ಕೆಲಸ ಮಾಡಬೇಕು. ಅದೇರೀತಿಯಲ್ಲಿ ಅವಕಾಶ ಸಿಕ್ಕಿದಾಗ ನಮ್ಮ ತರುಣರಾದ ಶ್ರೀ ಮಂಜುನಾಥ್ ಅವರು ಬಹಳ ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ. ಇದು ನಿಜವಾಗಿಯೂ ಮನಮುಟ್ಟುವ ರೀತಿಯಲ್ಲಿ ಸಂತೋಷದಿಂದ ಹೇಳತಕ್ಕ ವಿಚಾರ. ಶ್ರೀಮಾನ್ ಸಿದ್ದಯ್ಯನವರು ಈಗತಾನೆ ಅಧ್ಯಕ್ಷರಿಗೆ ಅಭಿನಂದನೆ ಮಾಡುತ್ತಾ ಅವರಿಗೆ ಶ್ರೀ ಮಂಜುನಾಥ ಅವರನ್ನು ಸೂಕ್ತ ರೀತಿಯಲ್ಲಿ ತರಬೇತುಗೊಳಿಸಿ ಎಂದು ಹೇಳಿದರು. ಇದು ಮುಂದಿನ ಅಧ್ಯಕ್ಷರ ಸ್ಥಾನಕ್ಕೆ 3½ ವರ್ಷಗಳ ಇನ್‌ವಿಜೇಷನ್ ಎಂದು ಅರ್ಥವಾಗುತ್ತದೆ. ಅವಕಾಶ ಸಿಕ್ಕಿದಾಗ ತರುಣರು ಯಾವ ರೀತಿ ಕೆಲಸಮಾಡುತ್ತಾರೆಂಬುದನ್ನು ಶ್ರೀಮಾನ್ ಮಂಜುನಾಥ್ ಅವರು ಎತ್ತಿ ತೋರಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಹೃತ್ಪೂರ್ವಕವಾದ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಸರ್ಕಾರ ಎನ್ನುವ ಯಂತ್ರವನ್ನು ಚೆನ್ನಾಗಿ ನಡೆಸಿಕೊಂಡು ಹೋಗುವುದಕ್ಕೆ ಆಶೀರ್ವಾದ ಹಾಗೂ ಎಚ್ಚರಿಕೆಯನ್ನು ಕೊಡತಕ್ಕ ಒಂದು ಹೈರಣಿಯನ್ನು, ಶಕ್ತಿಯನ್ನು ಭಗವಂತನು ತಮಗೆ ಕೊಡಲಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

5-00 P. M.

ಶ್ರೀ ಕೆ. ಲೀರಾವತಿ ರೈ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ತಾವು ಇಂದು ಸ್ಪೀಕರ್ ಆಗಿ ಚುನಾಯಿತರಾಗಿದ್ದೀರಿ. ಮೊದಲಿಗೆ ತಾವು ನಮ್ಮೊಟ್ಟಿಗೆ ಕುಳಿತುಕೊಂಡು ಹೆಣ್ಣು ಮಕ್ಕಳೊಡನೆ ತಮಾಷೆ ಮಾಡುತ್ತಿದ್ದುದು ನಮಗಿನ್ನೂ ನೆನಪಿಗೆ ಬರುತ್ತದೆ. ನಾವು ಇಲ್ಲಿರುವ ಹೆಣ್ಣು ಮಕ್ಕಳು ಅಬಲೆಯರು ಎಂದು ಇದ್ದರೂ ಅವರು ಅಬಲೆಯರಲ್ಲ ಸಬಲೆಯರು ಎನ್ನುವುದನ್ನು ತಮಗೆ ಶೋರಿಸಿಕೊಟ್ಟದ್ದಾರೆ. ಉದಾಹರಣೆಯಾಗಿ ಹೇಳುವುದಾದರೆ ನಮ್ಮ ಹೈಮಂಬಿನಿಸ್ವರು ಅಬಲೆಯರಾಗಿದ್ದರೂ ಅವರು ಈಗ ಸಬಲೆಯರಾಗಿ ಹೇಗೆ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದಕ್ಕಾಗಿ ನಾನು ತಮ್ಮಲ್ಲಿ ಹೇಳುವುದು ನಮ್ಮ ಹೆಣ್ಣುಮಕ್ಕಳು ಅಲ್ಪಸಂಖ್ಯೆಯಲ್ಲಿದ್ದರೂ ನಮ್ಮ ಕಡೆಗೂ ಸ್ವಲ್ಪ ಗಮನವಿಟ್ಟು ಸಹಾಯಮಾಡಬೇಕು. ಅಬಲೆಯಹಾಗಿದ್ದರೂ ಸಬಲೆಯರಾಗಿದ್ದಾರೆ ಎನ್ನುವ ನಂದರ್ಭ ಬಂದಾಗ ತೋರಿಸುತ್ತಾರೆ ಎನ್ನುವುದು ತಮಗೂ ಗೊತ್ತಿದೆ. ಮಾನ್ಯ ಸದಸ್ಯರು ಒಬ್ಬರು ಇಲ್ಲಿ ತಾವು ಈಚೆಗೆ ಹಲ್ಲು ಕಟ್ಟಿಸಿಕೊಂಡಿದ್ದೀರಿ ಆದರಿಂದಾಗಿ ತಾವು ಇನ್ನೂ ಚೆನ್ನಾಗಿ ಮಾತಾಡಲು ಅನುಕೂಲವಾಗುತ್ತದೆ ಎಂದೂ ಹೇಳಿದರು. ಅದು ತುಂಬಾ ಸಂತೋಷ. ನಮ್ಮ ಹೆಂಗಸರು ಯಾವುದೇ ತಪ್ಪುಮಾಡಿದರೂ ಅವುಗಳನ್ನೆರ್ಲಾ ಮನ್ನಿಸಿ ನಮ್ಮನ್ನು ಸಬಲೆಯರಾದ ಹೆಂಗಸರಂತೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಿಂದೆ ಇದ್ದ ನಮ್ಮ ಅಧ್ಯಕ್ಷರಾದ ಬಾಳಿಗಾರವರು ಹೆಣ್ಣು ಮಕ್ಕಳು ಯಾರಾದರೂ ಈ ಕಡೆ ಎದ್ದಕೂಡಲೇ

(ಶ್ರೀಮತಿ ಲೀಲಾವತಿ ರೈ)

ಅವರಿಗೆ ಸಹಾಯ ಮಾಡುತ್ತಿದ್ದರು. ತಾವು ಅದೇ ರೀತಿ ನಮ್ಮ ಕಡೆಗೆ ಲಕ್ಷ್ಯಕೊಡಬೇಕು ಎಂದು ಸಲಹ ಮಾಡುತ್ತೇನೆ. ತಾವು ಇಂದು ಇಂತಹ ಉನ್ನತ ಸ್ಥಾನವನ್ನು ಪಡೆದಿರುವುದಕ್ಕಾಗಿ ದೇವರು ತಮಗೆ ಆಯುರಾರೋಗ್ಯ ಕೊಟ್ಟು ಈ ಸಭೆಯ ಘನತೆ ಹಾಗೂ ಗೌರವಗಳನ್ನು ಕಾಪಾಡಿಕೊಂಡು ಹೋಗುವ ಶಕ್ತಿಯನ್ನು ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೇ, ತಾವು ವಯಸ್ಸಿನಿಂದ, ವಿದ್ಯೆಯಿಂದ ಮತ್ತು ಅಪಾರವಾದ ಲೌಕಿಕ ಅನುಭವದಿಂದ ಮತ್ತು ಈ ಸಭೆಯ ನಿಯಮಾವಳಿಗಳ ಅಪಾರವಾದ ಅನುಭವದಿಂದ ಹಾಗೂ ತಿಳುವಳಿಕೆಗಳಿಂದ ಇಂದು ಸರ್ವಾನುಮತದಿಂದ ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿರುವುದು ತುಂಬಾ ಸಂತೋಷದ ಸಂಗತಿ. ಈ ಸ್ಥಾನಕ್ಕೆ ತಾವು ಅತ್ಯಂತ ಅರ್ಹರಾಗಿದ್ದೀರಿ. ನನಗಾದರೂ ತುಂಬಾ ಸಂತೋಷವಾಗಿದೆ. ತಮ್ಮ ಅಧಿಕಾರಾವಧಿಯಲ್ಲಿ ಈ ಸಭೆಯ ಹಿಂದಿನ ಅಧ್ಯಕ್ಷರುಗಳು ಸ್ಥಾಪನೆ ಮಾಡಿರತಕ್ಕ ಹಾಗೂ ಬಿಟ್ಟು ಹೋಗಿರತಕ್ಕ ಸತ್ಸಂಪ್ರದಾಯಗಳನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆಸತಕ್ಕ ಶಕ್ತಿ ತಮ್ಮಲ್ಲಿ ಇದೆ. ಈ ದೇಶದಲ್ಲಿ ಇಂದು ಇರತಕ್ಕ ರಾಜಕೀಯ ಪರಿಸ್ಥಿತಿಯಲ್ಲಿ ಇದು ತಮಗೇನೂ ಹೊಸದಲ್ಲ. ಈ ಸಭೆಯ ಕಾರ್ಯಕಲಾಪಗಳನ್ನು ಎಷ್ಟು ಸಮರ್ಪಕವಾಗಿ ಮತ್ತು ಎಷ್ಟು ನಿಯಮದಿಂದ ನಾವು ನಡೆಸಿಕೊಂಡು ಹೋಗಲು ಸಾಧ್ಯ ಎನ್ನುವುದನ್ನು ನಾನು ತಮಗೆ ಹೇಳಬೇಕಾಗಿಲ್ಲ. ತಾವು ಈ ಸಭೆಯನ್ನು ಒಳ್ಳೆಯ ರೀತಿಯಿಂದ ನಡೆಸುತ್ತೀರಿ ಮತ್ತು ಹಾಗೆ ನಡೆಸುವುದರಿಂದ ಎಲ್ಲ ಜನತೆಯ ಆದರ ಹಾಗೂ ಪ್ರೀತಿಗಳು ತಮಗೆ ಬರುತ್ತವೆ ಮತ್ತು ಈ ಕಾರ್ಯವನ್ನು ಮಾಡುವುದಕ್ಕೆ ತಾವು ಸಮರ್ಥರಾಗಿರುತ್ತೀರಿ. ತತ್ಕಾಲದಲ್ಲಿ ತಮ್ಮೊಡನೆ ನಿಕಟ ಬಾಂಧವ್ಯವನ್ನು ಇಟ್ಟುಕೊಂಡು ದಿನ ದಿನದ ಕಾರ್ಯಕಲಾಪಗಳಲ್ಲಿ ವ್ಯವಹರಿಸಬೇಕಾದ ಜವಾಬುದಾರಿ ನನ್ನ ಮೇಲೆ ಇದೆ. ಈ ಕಾರ್ಯವನ್ನು ನಾನು ನಿಷ್ಠೆಯಿಂದ ಮಾಡುತ್ತೇನೆ ಎನ್ನುವ ಭರವಸೆ ತಮಗೆ ಕೊಡುತ್ತಿದ್ದೇನೆ. ನಮ್ಮ ದುರದೃಷ್ಟವೋ ಏನೋ ಇಂದು ಇಲ್ಲಿ ನಮ್ಮ ಎದುರು ಪಕ್ಷದ ಸದಸ್ಯರು ಒಬ್ಬರೂ ಇಲ್ಲ. ಅವರೂ ಇದ್ದಿದ್ದರೆ ಇಂದು ಈ ಸಭೆಗೆ ಒಂದು ರೀತಿಯಾದ ಶೋಭೆ ಹಾಗೂ ಕಳೆ ಬರುತ್ತಿತ್ತು. ಆದರೂ ಅವರೆಲ್ಲರ ಹಕ್ಕುಬಾಧ್ಯತೆಗಳನ್ನು ಎಷ್ಟು ಮಟ್ಟದಲ್ಲಿ ಎತ್ತಿ ಹಿಡಿಯಬೇಕೆಂದು ಅವರು ಹೇಳುತ್ತಿದ್ದರೋ ಅದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಎದುರು ಪಕ್ಷದವರ ಹಕ್ಕುಬಾಧ್ಯತೆಗಳನ್ನು ಎತ್ತಿ ಹಿಡಿಯುವುದರಲ್ಲಿ ನಾನು ಸಹಾಯ ಮಾಡುತ್ತೇನೆ ಎಂದು ಆಳುವ ಪಕ್ಷದ ಹಾಗೂ ಆಡಳಿತ ನಡೆಸತಕ್ಕವರ ವತಿಯಿಂದ ಹೇಳಬೇಕಾದ ಅಗತ್ಯವಿಲ್ಲದಿದ್ದರೂ ಅಧ್ಯಕ್ಷರುಗಳು ಎದುರು ಪಕ್ಷದವರ ಕಡೆಗೆ ಪಕ್ಷಪಾತದಿಂದ ನಡೆದುಕೊಳ್ಳುತ್ತಾರೆ ಎನ್ನುವ ಭಾವನೆ ಕೂಡ ಬರದಂತೆ ನಾವು ನೋಡಿಕೊಳ್ಳುವುದು ನಮ್ಮ ಆಡಳಿತ ಪಕ್ಷದವರ ಕರ್ತವ್ಯ. ಎದುರು ಪಕ್ಷದವರ ಹಕ್ಕುಬಾಧ್ಯತೆಗಳಿಗೆ ನಾವು ಯಾವತ್ತೂ ಚ್ಯುತಿ ತಂದಿಲ್ಲ. ಆ ರೀತಿಯಾದ ಅಪವಾದನೆಗಳು ಬಂದು ಸ್ವಲ್ಪಮಟ್ಟಿಗೆ ತಾವು ಪಕ್ಷಪಾತ ತೋರಿದರೂ ಆ ಅಪವಾದನೆಗಳನ್ನು ನಾವೇನೂ ಹೆಚ್ಚಾಗಿ ಗಮನಿಸುವುದಿಲ್ಲ. ತಾವು ಆ ಸ್ಥಾನದಿಂದ ಸರಿಯಾದ ನ್ಯಾಯ ಹಾಗೂ ನಿಷ್ಠೆಯಿಂದ ನಡವಳಿಕೆಗಳನ್ನು ಅನುಸರಿಸಿಕೊಂಡು ಬರುತ್ತೀರಿ ಎಂದು ನಾನು ನಂಬಿಕೊಂಡಿದ್ದೇನೆ. ಮತ್ತು ತಾವು ನಮಗಿಂತ ಸ್ವಲ್ಪ ಹೆಚ್ಚು ಔದಾರ್ಯವನ್ನು ತಾವು ಅವರಿಗೆ ತೋರಿಸಿದರೂ ನಾವು ಅದಕ್ಕೆ ಆಕ್ಷೇಪಣೆ ಮಾಡುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷವು ಎಷ್ಟು ಮುಖ್ಯವೋ ವಿರೋಧ ಪಕ್ಷವು ಅಷ್ಟೇ ಮುಖ್ಯವಾದುದು. ಪ್ರಜಾಪ್ರಭುತ್ವವು ಯಶಸ್ವಿಯಾಗಿ ನಡೆಯಬೇಕಾದರೆ ಆಡಳಿತ ಪಕ್ಷದ ಥೋರಣ್ ಬೇರೆಯಾಗಿರಬಹುದು, ವಿರೋಧ ಪಕ್ಷಗಳ ಥೋರಣ್ ಬೇರೆಯಾಗಿರಬಹುದು, ಅದಕ್ಕೆ ಕಾರಣಗಳು ಬೇರೆ. ಆದರೆ ವಿರೋಧ ಪಕ್ಷದವರು ಕೊಡತಕ್ಕ ಯಾವುದೇ ಅಭಿಪ್ರಾಯಗಳಾಗಲಿ ಆಳುವ ಪಕ್ಷದವರು ಸೂಕ್ತ ಮನ್ನಣೆ ನೀಡುವುದು ಅವಶ್ಯಕ. ಆದರಲ್ಲೂ ಸಂಸತ್ತು ವ್ಯವಹಾರ ಶಾಖೆಯು ನಡವನಾಗಿರುವ ನಾನು ವಿರೋಧ ಪಕ್ಷದ ಮಾನ್ಯ ಸದಸ್ಯರುಗಳಿಗೆ ತಮ್ಮ ಮೂಲಕ ಒಂದು ಭರವಸೆಯನ್ನು ಇಲ್ಲಿ ಕೊಡಲು ಅಪೇಕ್ಷೆ ಮಾಡುತ್ತೇನೆ. ಅವರ ಹಕ್ಕು ಬಾಧ್ಯತೆಗಳಿಗೆ ಯಾವ ಚ್ಯುತಿಯೂ ಬಾರದಂತೆ ನೋಡಿಕೊಳ್ಳುವ ಪ್ರಯತ್ನ ಮಾಡುತ್ತೇನೆ. ನಾನಾದರೂ ಅವರ ಗೈರುಹಾಜರಿನಲ್ಲಿ ಇಲ್ಲಿ ಒಂದು ವಿನಂತಿಯನ್ನು ಮಾಡಲು ಅಪೇಕ್ಷಿಸುತ್ತೇನೆ. ಅವರ ಮನೋಭಾವನೆಗಳಿಗೂ ಆಡಳಿತ ನಡೆಸುವವರ ಮನೋಭಾವನೆಗಳಿಗೂ ಆಡಳಿತ ನಡೆಸುವಾಗ ಅನೇಕ ವಿಚಾರಗಳಲ್ಲಿ ಜಿಜ್ಞಾಸೆಗಳು ವಾದ ವಿವಾದಗಳು ಬರಬಹುದು. ಆದರೆ ಅವರ ಅಭಿಪ್ರಾಯಗಳನ್ನು ತಿಳಿಸಿದರೆ, ಅವುಗಳನ್ನು ನಾವು ಕೂಡ ಯಾವ ಆಧಾರದ ಮೇಲೆ ತಪ್ಪಾಗಿದೆ ಅಥವಾ ಸರಿಯಾಗಿದೆ ಎಂದು ತೀರ್ಮಾನ ಮಾಡಿ, ಅದಷ್ಟು ಒಮ್ಮತ ತೀರ್ಮಾನ ಮಾಡಲು ಅವಕಾಶವಾಗುತ್ತದೆ. ಅವರೊಡನೆ ವಿಚಾರ ವಿನಿಮಯ ಮಾಡಿ ತೀರ್ಮಾನ ತೆಗೆದುಕೊಂಡರೆ ಆಗ ಪ್ರಜಾಪ್ರಭುತ್ವ ಯಶಸ್ವಿಯಾಗಿ ಆಗುತ್ತದೆ. ಪ್ರಜಾ

ಪ್ರಭುತ್ವ ಯಶಸ್ವಿಯಾಗಬೇಕಾದರೆ ಅದಕ್ಕೆ ರೂಪ ಕೊಡತಕ್ಕ ಈ ಸಭೆಯ ಕಾರ್ಯಕಲಾಪಗಳು ಎಲ್ಲರ ಮೆಚ್ಚಿಗೆ ಪಡೆಯುವಂತೆ ಸಮಂಜಸವಾಗಿ ನಡೆಯಲು ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಯಾವ ಮಾರ್ಗವನ್ನು ಅನುಸರಿಸಬೇಕೋ ಅದನ್ನು ತಾವು ಅನುಸರಿಸಲು ಅವಕಾಶವಾಗುತ್ತದೆ ಎನ್ನುವ ವಿನಂತಿಯನ್ನು ತಮ್ಮ ಮೂಲಕ ಇಲ್ಲಿ ಮಾಡುತ್ತೇನೆ. ತಾವು ಈ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿರುವ ನಡವಳಿಕೆಗಳನ್ನು ಅನೇಕ ವರ್ಷಗಳಿಂದಲೂ ತಿಳಿದುಕೊಂಡು ಇದರಲ್ಲಿ ಪಾರಂಗತರಾಗಿದ್ದೀರಿ. ತಮಗೆ ಇದರ ಬಗ್ಗೆ ವ್ಯವಹಾರ ಮಾಡುವ ಚಾಕಚಕ್ಯತೆ ಹಾಗೂ ಜಾಣ್ಮೆ ಇದೆ ಮತ್ತು ಬುದ್ಧಿವಂತಿಕೆ ಇದೆ. ಈ ಸಭೆಯಲ್ಲಿ ಕೆಲವು ವೇಳೆ ಅನಪೇಕ್ಷಿತವಾದ ಕೆಲವು ಕಹಿ ಘಟನೆಗಳಾಗಿ ಅದು ಹೊರಗೆ ಚರ್ಚೆಯಾಗುವುದನ್ನು ನಾವು ಕೇಳಿದ್ದೇವೆ, ಇಂತಹ ಪ್ರಸಂಗಗಳನ್ನು ನಿವಾರಣೆ ಮಾಡುವುದಕ್ಕೆ ತಮ್ಮಲ್ಲಿ ಸರಿಯಾದ ನೈಪುಣ್ಯವಿದೆ ಎನ್ನುವ ನಂಬಿಕೆಯನ್ನೂ ನಾನು ಇಟ್ಟುಕೊಂಡಿದ್ದೇನೆ. ಈ ನಂಬಿಕೆ ಸಫಲವಾಗಬೇಕಾದರೆ ವಿರೋಧ, ಪಕ್ಷದ ಸದಸ್ಯರು ನಿಮ್ಮೊಡನೆ ಸಹಕರಿಸುತ್ತಾರೆ ಎಂದು ನಂಬುತ್ತೇನೆ. ತಾವು ಆಡಳಿತ ಪಕ್ಷದವರಾಗಿದ್ದರೂ, ಆಡಳಿತ ಪಕ್ಷ ಹಾಗೂ ವಿರೋಧ, ಇವೆರಡು ಪಕ್ಷಗಳೂ ನಮ್ಮ ಪಕ್ಷವಾಗಿ ಹೇಗೆ ನಡೆಯಬೇಕು ಎನ್ನುವುದರ ಮುತ್ಸದ್ದಿತನ ತಮ್ಮಲ್ಲಿದೆ ಮತ್ತು ತಾವು ಈ ವಿಧಾನ ಸಭೆಯನ್ನು ನಡೆಸುವುದಕ್ಕೆ ನಮ್ಮಿಂದ ಎಷ್ಟು ಸಹಕಾರ ಹಾಗೂ ಬೆಂಬಲ ಬೇಕೋ ಅವನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಅದೇ ರೀತಿ ವಿರುದ್ಧ ಪಕ್ಷದವರೂ ಸಹ ಸಹಕಾರ ಕೊಡಬೇಕೆಂದು ಅವರಲ್ಲೂ ವಿನಂತಿ ಮಾಡುತ್ತೇನೆ. ತಾವು ಈ ಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಲು ಭಗವಂತನು ತಮಗೆ ಬೇಕಾದ ಶಕ್ತಿ, ಸಂಯಮ ಹಾಗೂ ಜಾಣ್ಮೆಯನ್ನು ಕರುಣಿಸಲಿ ಮತ್ತು ತಮಗೆ ಮಂಗಳವಾಗಲಿ.

Mr. SPEAKER.—I am grateful to the hon'ble the Leader of the House, the Deputy Speaker, the Congress Party whip and the Minister for Parliamentary Affairs and other hon'ble members who have made very generous references to me and have also given certain guide lines for me. I am grateful to them all for that. I am aware that I am succeeding to the Chair adorned by the late lamented Sri Baliga who was a brilliant man. I do not claim that brilliance. But I assure you that I will follow the traditions laid down by him and also the Parliamentary traditions of the Mother of Parliament the House of Commons, for, we have borrowed our Constitution from them, though we have developed our own conventions here for the last 20 years.

One of the great British Parliamentarians has said: A person occupying the position of a Speaker need not be a superior or brilliant man. But, he must be a man with an human approach. I think, this view expressed by that great Parliamentarian is a source of encouragement to me. It shall be my endeavour to uphold the highest parliamentary traditions and also follow the guide lines indicated by the hon'ble members today in this regard.

I know very generous references have been made about me. I hardly deserve them but at the same time it gives me an idea that I enjoy a substantial esteem of the hon'ble members here. That heartens me and gives me courage to function here in the hope that whatever service that I will be rendering from this place will be welcomed by the hon'ble members here. I shall try my level best. Many qualities are necessary for the successful functioning of a Speaker. Some of them are indicated by hon'ble members who have spoken today. The best and most important quality in a Speaker is, as I see, for absolute independence and impartiality. The Speaker has got to be independent and has got to be very impartial. Many hon'ble members have made reference to that. I submit to this Hon'ble House that from now on,

(MR. SPEAKER)

I do not consider myself as a member of the Government nor as a member of opposition but a member of this august House and I shall function as such and uphold the highest traditions and privileges of every individual member of this House.

While the Speaker functions, he must be independent. There may be some mistakes made by members here and there. The view advocated on this side or the other side may not be correct. It is for the Speaker to take the best decision in accordance with the best parliamentary traditions so that the interest of the people is best served.

Hon'ble Members know that Legislative Assembly is a corporate unit and there are various groups and various sections forming part of this House with varying ideologies and varying opinions and views. But in spite of this diversity of views and ideologies, this House should function as a corporate unit for the welfare of the people. That corporate unit is symbolised by the position of the office of the Speaker. So, I have to bear that burden and display and exercise my function in such a manner that this corporate unit is utilised to serve the interest of the people first and last.

Here, as I said, there are parties and they are bound to be there in a democracy. But the parties have to function in a broad frame-work of the corporate unit of the House. They have to function harmoniously with the object of serving the people of the State. I must point out here that the course employed in this House for coming to a decision is debate and dialogues. Debates and dialogues should be carried on in a harmonious manner. There need not be mutual recriminations. They are not necessary, for they only create bitterness. I understand there must be lively debate and there must be sparkling debate. But all this should be done in an atmosphere of cordiality. If we have to advance the interest of the people, we have got to function in that manner for the development, benefit and welfare of the people.

I have already mentioned that from now onwards I cease to be a Congressman. I shall not, so long as I hold this office, participate in the deliberation of the Congress Party. Therefore, I need not reiterate that I shall be functioning with a sense of impartiality to all sides and all sections of the House and shall try to help all individual members as a friend. The Speaker, as many hon. members indicated, is not here to work as a school-master for the purpose of enforcing rules, but the approach has got to be friendly and sympathetic. I shall endeavour to discharge my duty in that spirit. I shall be a friend to every individual member. I shall help every individual member to the best of my ability. It shall be my function not only to preserve and protect the interest of the minorities, but also the rights and privileges of every individual member.

Some lady member said that they should be given special opportunity and so also some other hon'ble member expressed a similar view. I believe it shall be my duty to give opportunity to all without any distinction and while doing so, it shall be my endeavour to pay attention to the back benchers and to the lady members and to the new comers so that they may have their training in this House which will enable them to make their contribution to parliamentary democracy.

As we are all aware not only in this House but elsewhere parliamentary democracy is passing through difficult times. The job of a Speaker is not an easy one. We are seeing it here and elsewhere. I say it is a place of honour. It shall be my task as Speaker to guide the deliberations of this House in a spirit of cordiality and in a spirit of understanding and sympathy. Sometimes it so happens that the time at the disposal of the House is short and it is not possible more often than not to accommodate all members. All members are eager to express views and opinions and to put questions and supplementaries. Therefore, it becomes a hard job for the Speaker. to accommodate them all. But, sometimes when he is unable to accommodate all of them, probably members might think that the Speaker is indifferent to them. But I assure all the hon'ble members that I would not be indifferent to anybody. I shall try to utilise the time at the disposal of the House to the best possible advantage and as far as possible to give opportunities to all the hon'ble members to express their opinions.

Now a suggestion is made that there should be no occasion for expression of anger or irritation on my part. I welcome the suggestion and I can assure the Members that there would not be a single occasion so far as I am concerned when you will be able to say that the Speaker is irritated or doing something out of anger. That position will never occur. I expect the same thing from all members who want to participate in the proceedings of the House so that there is no irritation or anger or bitterness as a result of the speeches made here or views expressed here. I shall try my best to see that we work in an atmosphere of cordiality.

A suggestion is made by the hon'ble Minister for Parliamentary Affairs that there should be better understanding between the leaders of various sections and parties here. I have been thinking of that. I have always been thinking of that, In order to facilitate smooth work in the House and to see that the time of the House is properly utilised it is necessary that there should be complete understanding between the various parties and groups here. It shall be my endeavour to bring together the leaders of various parties and sections together as often as possible and to see that democracy functions here very well and the proceedings are conducted in the best way, in an atmosphere of cordiality and sympathetic understanding of each other's views.

I am sorry the members of the opposition parties are not here. I very much miss them. That cannot be helped. But let them know

(MR. SPEAKER)

that I am here to protect the interests of all and, particularly as suggested by the Minister for Parliamentary Affairs, the interests of the minorities. As a great parliamentarian has stated, it is for the minority to have its say and it is for the majority to rule. No democrocy can succeed unless the minorlty is satisfied that its views have been heard and properly appreciated. But with that appreciation it is for the majority to take decision and try to accommodate their views to the extent possible. I shall be trying to achieve that objective and for that purpose I request all the hon'ble members to extend their co-operation in this mighty task. The task is a mighty one and therefore it calls for all round co-operation.

I thank you again for my unanimous election to this office and I hope that unanimity is a symbol of the genuine co-operation which will be a tower of strength to me in discharging my duties of the Speaker. Thank you.

Now there is still time.

HON'BLE MEMBERS.—We shall adjourn.

Mr. SPEAKER.—If that is the feeling I have no objection. There is still half an hour.

HON'BLE MEMBERS.—We shall adjourn.

Mr. SPEAKER.—Now the House will rise and meet tomorrow at 1 P.M.

The House adjourned at Thirty Minutes past Five of the Clock to meet again at One of the Clock on Friday, the 6th September 1968.

V-3,31(61)N 68
N 68-13-1-5
(B) 4855

WD 11229—GPB—600—19-10-1968

MYSORE LEGISLATIVE ASSEMBLY

Friday, 6th September 1963.

The House met in the Assembly Chamber, Vidhana Soudha, Bangalore-1, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

MR. SPEAKER.—Question 46 by Sri B. B. Sayanak.

SRI M. NAGAPPA.—Sir, the first question may be postponed because it is mentioned here as Minister of State. As per the Rules of Procedure there is no such Minister. I submit that this question may be postponed and taken up after Question Hour.

MR. SPEAKER.—Yes, will the Hon'ble Member state why it should be done so?

SRI M. NAGAPPA.—Sir, because this is a Question Hour I do not want to take much time. I bring this as a point of order under Rule 311. Under Rule 44 supplementaries are to be answered by Minister. So, the Minister is defined under the rules. Under rule (2) the Minister means a member of the Council of Ministers and includes a Deputy Minister and Parliamentary Secretary. So, there is no Minister as "Minister of State" under the rules. Unless the rules are amended they cannot be deemed to be Ministers for the purpose of these rules and the proceedings of this House. So, I submit that unless rules are amended, this House cannot recognise the State Ministers as Ministers under the rules of procedure. I submit that he being a private member need not be allowed to answer the question as State Minister.

MR. SPEAKER.—Is there anything to be said by the Treasury Benches on this?

SRI K. H. PATIL.—The silence of the Treasury Benches means that they agree to the proposition that has been put forward by this side.

SRI H. SIDDAVEERAPPA.—On a previous occasion also the same question was raised and thereupon the particular question was postpnoed. I think it was Sri Linga Reddy's question.

Mr. SPEAKER.—I may tell Sri K. H. Patil that the interpretation of rules is a matter within the purview of the Speaker. Of course, what the Treasury Benches say will be considered and what is said by members on the other side also will be considered.

Is there anything to be urged on behalf of the Treasury Benches?

Sri G. B. SHANKAR RAO.—Nothing, Sir.

Mr. SPEAKER.—The hon'ble member may please see the definition of the word "Minister" given in Rule 2.

> "'Minister' means a member of the Council of Ministers and includes a Deputy Minister and a Parliamentary Secretary."

This definition consists of two parts. It defines in the first instance a Minister as a member of the Council of Ministers. The other part is the inclusive definition, namely, that the definition includes a Deputy Minister and a Parliamentary Secretary.

Sri K. H. PATIL.—May I request the Chair that this question may be taken up later after the Question Hour because if it is taken up now the time for the other questions will be taken away. Moreover many members on this side would like to be heard because this is an important point of interpretation of rules on which we would like to enlighten the Speaker.

Mr. SPEAKER.—I assure the hon'ble members that when enlightenment and education is necessary I shall certainly request the hon'ble members to educate me, but when matters are simple, it does not serve anybody's purpose to unnecessarily spend the time of the House on those points.

Sri M. NAGAPPA.—I simply submitted thinking that it will come later on for further discussion. If the Chair is giving the ruling just now, I have to state that I have collected several rulings on the definition of Council of Ministers and as to whether it includes Ministers of State or not. I have to submit those rulings to the Chair and so I request the Chair that this matter may be taken up after Question Hour when we may have a full-dressed debate on the question and then the Chair may give the ruling.

Mr. SPEAKER.—Without any detriment to any future interpretation I shall just give my interpretation on this, subject to modification later on. I shall leave the question open for further discussion.

Sri M. NAGAPPA.—This matter will come up time and again. Therefore, I submit let us dispose it of once and for all after having a full-dressed debate and hearing both sides. So I request that I may be given permission to submit all those rulings now.

Mr. SPEAKER.—Where is the time for that? This is Question Hour.

Sri M. NAGAPPA.—So I request that the ruling may be reserved and it may be given after hearing the full-dressed debate.

Mr. SPEAKER.—I do not know how many questions are set down for reply by Ministers of State in this List.

Sri M. NAGAPPA.—Those questions can be included in tomorrow's list if the matter is disposed of today because this point will come up in regard to the questions of other Ministers of State also. So I submit it is better a full-dressed debate is held on this matter. Then we will fully argue this point. After hearing the members on both sides the Chair has got every right to give its own ruling. I have nothing to say against that.

Mr. SPEAKER.—I respect your suggestion very well. It should not come in the way of normal business of the House. So I shall leave the matter open to be interpreted later on. For the time being to serve the purpose of today I shall give my interpretation.

ಶ್ರೀ ಹೆಚ್. ಬಿ. ಜ್ಞಾನಯ್ಯ.—ಇದಕ್ಕೆ ಬೇರೆ ಮಂತ್ರಿಗಳು ಬೇಕಾದರೆ ಇಲ್ಲಿ ಉತ್ತರ ಕೊಡಬಹುದು. ಮೊದಲಿಗೆ ಬೇರೆ ಪ್ರಶ್ನೆಗಳನ್ನು ತಗೆದುಕೊಂಡು ಮುಗಿಸಿ ಅನಂತರ ಇದರ ಬಗ್ಗೆ ವಿಚಾರ ಮಾಡಬಹುದು.

Mr. SPEAKER.—There may be many such questions. I shall hold over these questions only today. We shall dispose of them again. I shall take up the matter after the Question Hour. In the meanwhile hon'ble members may be ready with their authorities.

Revised Scales of Pay to Teachers

47. Sri SUBBARAO HALSNAD (Byndoor).—

Will the Minister for Education be pleased to state :—

(*a*) whether the revised scales of pay of 1961 have been made applicable to Government servants including teachers under all Managements ;

(*b*) whether all the teachers are paid their salaries according to these scales ;

(*c*) whether it has come to the notice of the Government that some teachers in Coondapur Taluk of South Kanara District have not been paid the arrears of weightage in these scales from the last 7 years ;

(*d*) whether the D.E.O. of S.K. District made an enquiry in this regard ; if so, the result of the enquiry ;

(*e*) whether there was any need for such an enquiry ;

(*f*) whether there are no records in the D.E.O's office which reveal the non-payment of such arrears ;

(*g*) the person responsible for such a long delay and reasons for delay ;

(SRI SUBBARAO HALSNAD)

(*h*) whether such bills were to be sent for pre-audit; if so, when they were sent for pre-audit;

(*i*) what are the steps taken by the D.E.O. to prepare fresh bills with a view to see that such teachers may be paid their dues without any further delay?

A.—Sri K. V. SHANKARA GOWDA (Minister for Education).—

(*a*) Yes.

(*b*) The scale is applicable to all aided and Government Schools.

(*c*) Yes; on account of the managements of aided schools preferring belated claims for sanction of arrear grants.

(*d*) No enquiry was conducted.

(*e*) Does not arise in view of reply to clause (*d*) above.

(*f*) The Department pays grant-in-aid to the institutions and acquittance rolls are maintained in the schools concerned and not with the D.E O.

(*g*) The managements of the schools concerned are entirely responsible for the delay. Their claims for grant-in-aid were preferred late.

(*h*) The arrear grant-in-aid claims received in the D.P.I's Office are being examined and sanctioned.

(*i*) On receipt of D.P.I's sanction of arrear claims, the managements of the schools concerned have to prepare bills, get them countersigned and draw the amount from the Treasury.

ಶ್ರೀ ಸುಬ್ಬರಾವ್ ಹಲಸನಾಡ್.—ಇಲ್ಲಿ (ಡಿ) ಗೆ ಉತ್ತರವಾಗಿ ವಿಚಾರಣೆ ಮಾಡಲಿಲ್ಲ ಎಂದು ತಿಳಿಸಿದೆ. ಏಕೆ ವಿಚಾರ ಮಾಡಲಿಲ್ಲ?

ಶ್ರೀ ಕೆ. ವಿ. ಶಂಕರಗೌಡ.—ಅವಶ್ಯಕತೆ ಕಂಡು ಬರಲಿಲ್ಲ. ಆದ್ದರಿಂದ ವಿಚಾರ ಮಾಡಲಿಲ್ಲ.

ಶ್ರೀ ಸುಬ್ಬರಾವ್ ಹಲಸನಾಡ್.—ಆ ತನಿಖೆಯನ್ನು ಮುಗಿಸಲಿಕ್ಕೆ ಇನ್ನೂ ಎಷ್ಟು ಕಾಲ ಬೇಕು?

ಶ್ರೀ ಕೆ. ವಿ. ಶಂಕರಗೌಡ.—ಮ್ಯಾನೇಜ್‌ಮೆಂಟಿನವರು ಅವರ ಕ್ಲೇಮುಗಳನ್ನು ಕಳುಹಿಸುವುದರಲ್ಲೇ ನಿಧಾನವಾಗಿದೆ. ಅವು ಬಂದಕೂಡಲೆ ಮಂಜೂರು ಮಾಡರಾಗುವುದು.

Sri G. DUGGAPPA.—The D.P.I. has the power to condone the delay and pay the arrears. Has such action been taken?

Sri K. V. SHANKARA GOWDA.—The D.P.I. has no power to condone the delay. The clams will have to go for pre-audit and it will have to be condoned there by the Accountant General and afterwards we will have to pay it.

Sri G. DUGGAPPA.—If they approach the Government, will Government consider the question sympathetically as it is a question affecting the teachers?

Sri K. V. SHANKARA GOWDA.—We will definitely condone the delay and make the payment.

Sri P. V. AITHALA.—Is there any time limit prescribed ?

Sri K. V. SHANKARA GOWDA.—The claim relating to a particular year will have to be made within that year. In this case, it has not been made so far but it has been made after three or four years.

Sri D. B. KALMANKAR.—How much time is going to be required to sanction the arrears after the D.D.P.I. receives such claims ?

Sri K. V. SHANKARA GOWDA.—I have already said that the delay was because of the delay in sending the claim by the management. Soon after the claim was received, the D.P.I. has sanctioned it. The bill will have to be preferred by the management ; it will have to be sent to the Treasury and the Treasury will have to make the payment.

Sri N. A. CHANNE GOWDA.—Have the teachers made any complaint to Government against the management ?

Sri K. V. SHANKARA GOWDA.—No such complaint is before me.

Sri SIDDIAH KASHIMATH.—May I know how many bills are pending with Government ?

Sri K. V. SHANKARA GOWDA.—I want notice.

Sri B. P. GANGADHAR.—May I know whether the Government have prescribed any time limit for payment of such monies due to certain persons ?

Sri K. V. SHANKARA GOWDA.—I do not think there is any time limit.

Sri D. B. KALMANKAR.—Supplementary to (*e*) : In the interest of teachers who are hit by the delay, may I know whether such enquiry is not necessary ?

Sri K. V. SHANKARA GOWDA.—Enquiry in this case is not necessary ; it is a plain case.

Sri K. H. PATIL.—May I know whether salary is being disbursed every month as in the case of Government teachers ?

Sri K. V. SHANKARA GOWDA.—In the case of high school teachers, cent per cent salary is being paid by G vernment and it is being disbursed every month.

ಶ್ರೀ ಎಚ್. ಬಿ. ಜ್ವಾಲನಯ್ಯ.—ಆಡಳಿತ ವರ್ಗದವರು ಸರಿಯಾದ ಸಮಯದಲ್ಲಿ ಈ ಬಿಲ್ಲನ್ನು ಕಳುಹಿಸದೇ ಇದ್ದ ಸಂದರ್ಭದಲ್ಲಿ ಉಪಾಧ್ಯಾಯರೇ ನೇರವಾಗಿ ಸರ್ಕಾರದವರಿಗೆ ಈ ಬಗ್ಗೆ ತಿಳಿಸಿಕೆಯನ್ನು ಕೊಟ್ಟರೆ ಅದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಆಡಳಿತ ವರ್ಗದಿಂದ ಬರದಿದ್ದರೆ, ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Sri M. S. KRISHNAN.—Has it come to the notice of the Government that quite a number of Aided educational institutions privately managed, have not been paying their teachers according to the scales prescribed by the Government and what checks and counter-checks the Government have for this ?

Sri K. V. SHANKARA GOWDA.—I do not think that this supplementary arises out of this question.

Mr. SPEAKER.—I am not acquainted with the names of all the members. If I commit a mistake, the same may be excused for some time. I will try to acquaint myself with the names of all the Members.

ಶ್ರೀ ಎನ್. ಎ. ಚನ್ನೇಗೌಡ.—ಉಪಾಧ್ಯಾಯರುಗಳಿಗೆ ತೊಂದರೆಯಾಗಿದೆ ಎಂದು ಹೇಳಿ ತಮ್ಮ ಗಮನಕ್ಕೆ ತೆಗೆದುಕೊಂಡು ಬಂದರೆ ಮ್ಯಾನೇಜ್‌ಮೆಂಟಿನವರ ಮೇರೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ಕಾರಣಗಳು ಇರುತ್ತವೆ. ಆದ್ದರಿಂದ ಇದಕ್ಕೆರ್ಕಾ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಈ ರೀತಿ ಡಿಲೇ ಆಗುವುದಕ್ಕೆ ಕಾರಣ, ಕೆಲವು ಆಡಳಿತ ವರ್ಗದವರು ಬೇಕು ಬೇಕಂತ ಉದ್ದೇಶಪೂರ್ವಕವಾಗಿಯೇ ಮಾಡುತ್ತಿರುವುದು ನಿಜವಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ಉದ್ದೇಶ ಇದೆ ಅಂತ ಹೇಳುವುದಕ್ಕಾಗುವುದಿಲ್ಲ. It cannot be said so because they have subsequently submitted the return.

ಶ್ರೀ ಸಿದ್ದಯ್ಯ, ಕಾಶೀಮಠ್.—ಪ್ರಾಥಮಿಕ ಉಪಾಧ್ಯಾಯರುಗಳಿಗೆ ಪ್ರತಿತಿಂಗಳ ಪಗಾರ ಸರಿಯಾಗಿ ಕೊಡುವಿದ್ದರೆ ಕಷ್ಟವಾಗುತ್ತದೆ. ಆದ್ದರಿಂದ ಪ್ರತಿ ತಿಂಗಳೂ ಅವರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

Sri K. V. SHANKARA GOWDA.—That is a different question altogether.

Taking over of Hospital at Moolky

48. Sri K. RATNAKUMAR SHETTY (Mudabidri).—

Will the Minister for Health be pleased to state :—

the decision taken by the Government regarding taking over of the hospital at Moolky by the Government as proposed by the M.L.A. of Moodabidri and Moolky Town Panchayat?

A.—Sri G. BASAVANNAPPA (Deputy Minister for Health).—

It has been decided not to take over the hospital at Moolky.

ಶ್ರೀ ಕೆ. ರತ್ನಕುಮಾರ್ ಶೆಟ್ಟಿ.—ಮುಲ್ಕಿಯಲ್ಲಿ ತಾವು ಆಸ್ಪತ್ರೆ ಕಟ್ಟಿಸಿಕೊಡುವುದು ಬೇಡ, ಅಲ್ಲಿ 15 ವರ್ಷದಿಂದ ಆಸ್ಪತ್ರೆ ಇದೆ, ರೋಗಿಗಳು ಬರುತ್ತಾರೆ, ಡಾಕ್ಟರು ಇದ್ದಾರೆ. ಈಗ ಅಲ್ಲಿ ತಾಲ್ಲೂಕುಬೋರ್ಡಿನ ಆಸ್ಪತ್ರೆಯನ್ನು ನಡೆಸಲಕ್ಕೆ ಸಾಧ್ಯವಿಲ್ಲ, ಅದನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳಿ 5-6 ವರ್ಷಗಳಿಂದ ಹೇಳಿದರೂ ಇನ್ನೂ ಕೂಡ ತೆಗೆದುಕೊಂಡಿಲ್ಲ; ಕಡೆಗಾಣಿಸಿದ್ದೀರಿ. ಇದು ಯಾವ ಕಾರಣದಿಂದ? ಹಣದ ಕೊರತೆಯಿಂದಲೋ ಅಥವಾ ನಮ್ಮ ಮೇಲೆ ದ್ವೇಷವಿದ್ದು ಯಾವುದು ಕೇಳಿದರೂ ಕೊಡಕೂಡದು ಎಂಬ ಭಾವನೆಯನ್ನು ಸರ್ಕಾರ ತಾಳಿದಿಯೋ? ಒಂದುವೇಳೆ ಅಂತ ಭಾವನೆಯನ್ನು ತಾಳಿದ್ದರೆ ನಮ್ಮ ಮೂಡಬಿದ್ರೆ ಪ್ರಾಂತ್ಯವನ್ನು ಮೈಸೂರಿನಿಂದ ಬೇರೆ ಇಡಬೇಕೆಂದು ಅಪೇಕ್ಷೆ ಪಡುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಇಲ್ಲ, ಅಂತಹ ಆಸ್ಪತ್ರೆಗಳನ್ನು ವಿಲೇಜ್ ಪಂಚಾಯ್ತಿ ಮತ್ತು ತಾಲ್ಲೂಕುಬೋರ್ಡ್ ಆಕ್ಟ್ ಸೆಕ್ಷನ್ 103ನೇ ಪ್ರಕಾರ ತಾಲ್ಲೂಕು ಬೋರ್ಡಿನವರೇ ನಡೆಸಬೇಕು, ಅದು ಅವರ ಒಬ್ಲಿಗೇಟರಿ ಕೆಲಸವಾಗಿದೆ. ಆದ್ದರಿಂದ ತಾಲ್ಲೂಕು ಬೋರ್ಡಿನವರು ನಡೆಸುತ್ತಾ ಇದ್ದು ಅದರಲ್ಲಿ ಏನಾದರೂ ನ್ಯೂನತೆ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ, ಅದರ ಬಗೆ ವ್ಯವಸ್ಥೆ ಮಾಡರಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗಾಗಲೇ ರಾಜ್ಯದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಆಸ್ಪತ್ರೆಗಳನ್ನು ಸರ್ಕಾರದವರೇ ನಡೆಸಿಕೊಂಡು ಬರುತ್ತಾ ಇದ್ದೀರಿ. ಕೆಲವು ತಾಲ್ಲೂಕುಗಳಲ್ಲಿ ಡೆವಲಪ್‌ಮೆಂಟ್ ಬೋರ್ಡು ಮತ್ತು ತಾಲ್ಲೂಕು ಬೋರ್ಡಿನವರಿಗೆ ಕೊಟ್ಟಿದ್ದೀರಿ. ತಾಲ್ಲೂಕು ಬೋರ್ಡಿನವರಿಗೆ ತಮ್ಮ ಉಳಿದ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದರ ಜೊತೆಗೆ ಆಸ್ಪತ್ರೆಗಳನ್ನೂ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಆದಕಾರಣ ಸರ್ಕಾರದವರು ಯೂನಿಫಾರಂ ಆಗಿ ಎಲ್ಲಾ ತಾಲ್ಲೂಕು ಹಾಸ್ಪೆಟಲ್‌ಗಳನ್ನೂ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿದೆಯೇ ಹೇಗೆ?

ಶ್ರೀ ಜಿ. ಬಸವಣ್ಣಪ್ಪ.—ಅವರಿಗೆ ಕೊಡುತ್ತಾ ಇದ್ದ ರೆವಿನ್ಯು 20 ಪರ್ಸೆಂಟ್‌ನ್ನು 40 ಪರ್ಸೆಂಟ್‌ಗೆ ಹೆಚ್ಚು ಮಾಡಲಾಗಿದೆ, ಆದ್ದರಿಂದ ಇನ್ನು ಮುಂದೆ ಸರಿಯಾಗಿ ನಡೆಯುತ್ತದೆ ಎಂದು ಹೇಳಬಹುದು.

ಶ್ರೀ ಬಿ. ಎಂ. ಇದಿನಬ್ಬ.—ಮಂಗಳೂರು ತಾಲ್ಲೂಕು ಬೋರ್ಡ್ ಹಾಸ್ಪೆಟಲ್‌ನ್ನು ತಾಲ್ಲೂಕು ಬೋರ್ಡಿನಿಂದ ಸರ್ಕಾರದವರೇ ತೆಗೆದುಕೊಳ್ಳಬೇಕೆಂದು ಠರಾವುಮಾಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಬಸವಣ್ಣಪ್ಪ.—ಬಂದಿದೆ. ಆದರೆ ಮುನಿಸಿಪಾಲಿಟಿಗಳವರು ಮತ್ತು ಸ್ಥಾನಿಕರು ಬಹಳ ಹೆಚ್ಚಿನ ನಿಗಾ ವಹಿಸಿದ್ದರೆ ಅಲ್ಲಿಯ ಆಸ್ಪತ್ರೆ ಸರಿಯಾಗಿ ಕೆಲಸಮಾಡುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ತಾಲ್ಲೂಕು ಅಭಿವೃದ್ಧಿಮಂಡಲಿಯಿಂದ ಆಸ್ಪತ್ರೆಯನ್ನು ನಡೆಸುವುದಕ್ಕೆ ಆಗದೇ ಹೋದ ಪಕ್ಷದಲ್ಲಿ ಆಸ್ಪತ್ರೆ ನಡೆಸುವುದು, ಅಲ್ಲಿನ ಆರೋಗ್ಯ ಮತ್ತು ನೈರ್ಮಲ್ಯವನ್ನು ಕಾಪಾಡುವುದು ಸರ್ಕಾರದ ಒಂದು ಕಡ್ಡಾಯವಾದ ಕರ್ತವ್ಯವಲ್ಲವೇ?

ಶ್ರೀ ಜಿ. ಬಸವಣ್ಣಪ್ಪ.—ಹೌದು, ಆದ್ದರಿಂದಲೇ ಅದಕ್ಕೆ ಸರ್ಕಾರದ ಪರವಾಗಿ ಗ್ರಾಂಟನ್ನು ಕೊಡಬೇಕು, ಅದನ್ನು ಕೊಡಲಾಗುತ್ತಿದೆ.

Sri H. SIDDAVEERAPPA.—The question is of a local nature.

Mr. SPEAKER.—Hon'ble Member Sri Siddaveerappa was quite right in bringing to my notice that the question is of a local nature. I think, the correct policy in questions of local nature is to allow only one or two supplementaries by members of that area, beeause other Members may not have the necessary knowledge about it. It may kindly be remembered that while putting supplementaries, arguments should not be put forth and motives should not be attributed. Questions should be put in a befitting manner.

Sri P. V. AITHALA.—The members coming from a particular area about which this question pertains, should be given an opportunity.

Mr. SPEAKER.—The member may put a direct question.

Mr. SPEAKER.—Hon'ble Members press and I repeat this for their information that any matter which they want to raise other than a matter on a point of order should be raised under rule 312 and that procedure should be followed. If the matter which the Hon'ble Member wants to raise is important, the Chair will certainly sympathetically consider it. This is the only way of bringing any matter before this House. It may please be noted that there is nothing like zero hour under the procedure here or under the procedure at Lok Sabha or under the procedure of any other Legislature here or elsewhere. Let that be noted.

I assure the Hon'ble Members that the rules will be interpreted very sympathetically on the points that are raised. But the position is that it should be based on the procedure itself and there cannot be any breach of the procedure. Therefore, I request the Hon'ble Members to consider this position and respect the rules made by themselves.

MOTION *re*: SCARCITY CONDITIONS PREVAILING IN CERTAIN AREAS OF THE STATE

(Debate contd.)

Mr. SPEAKER.—Next item is the discussion on the motion moved by the Hon'ble Chief Minister regarding scarcity conditions. Now as many as 6 members have spoken on the subject.

***** Matter not recorded as ordered by the Chair.

Sri S. S. SHETTAR (Hubli).—I have not yet completed my speech. I have taken only 10 minutes.

2-30 P.M.

Mr. SPEAKER.—The time at our disposal is very limited and I leave it to the whips on either side to regulate the debate and select speakers from their respective parties to offer observations and ask them to bear in mind the limitations of time. In a democracy there is self-discipline. The Chair does not like to stop any Hon'ble Member from making observations. I do not like to do it. If the Hon'ble Member has already taken some time, I have no objection to allow him further time if the party whip has no objection. The allocation of time for speakers is in the hands of the whips. I leave the matter to the whips.

ಶ್ರೀ ಎನ್. ಹುಚ್ಚವಾಸಿ ಗೌಡ (ಹುಲಿಯೂರುದುರ್ಗ).—ಈ ವಿಷಯದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವದಕ್ಕೆ ಇಷ್ಟ ಪಡುತ್ತೇನೆ. ಈ ವಿಷಯದಲ್ಲಿ ಚರ್ಚೆಯಾಗುವುದಕ್ಕೆ ಕಾಲ ಕಡಿಮೆ ಎಂಬುದಾಗಿ ಬಿಜಿನೆಸ್ ಅಡ್ವೈಸರಿ ಕಮಿಟಿಯವರು ಗೊತ್ತುಮಾಡುತ್ತಾರೆ. ಅದಾದ ಮೇಲೆ ಸಾಮಾನ್ಯವಾಗಿ ಅರ್ಧ ಕಾಲ ಕಾಂಗ್ರೆಸ್ ಪಕ್ಷದವರಿಗೆ ಬಿಟ್ಟು ಇನ್ನುಳಿದ ಅರ್ಧಕಾಲವನ್ನು ಎದುರು ಪಕ್ಷದವರಿಗೆ ಕೊಡಿ. ಈ ವಿರೋಧ ಪಕ್ಷದಲ್ಲಿ ಅನೇಕ ಪಕ್ಷಗಳು ಇರುವುದರಿಂದ ಆಯಾ ಪಕ್ಷಗಳ ನಂಬ್ಯೆ ತಿಳಿದುಕೊಂಡು ನಾವು ಟೈಂ ಅಲಾಟ್ ಮಾಡುತ್ತೇವೆ. ಕಡ್ಡರಿಂದ ನಾನು ಗೊತ್ತು ಮಾಡಿ ಕಳುಹಿಸಿರುವ ಟೈಂ ಪ್ರಕಾರ ತಾವು ಅನುಸರಿಸದೇ ಹೋದರೆ ಎಲ್ಲಾ ಸದಸ್ಯರಿಗೂ ಅವಕಾಶ ಕಲ್ಪಿಸಿಕೊಡಲು ಕಷ್ಟವಾಗುತ್ತದೆ. ದಯವಿಟ್ಟು ನನ್ನ ಸಲಹೆ ಪ್ರಕಾರ ಮಾಡಬೇಕು.

Sri B. P. GANGADHAR.—Sir, some of us have sent notices under Rule 59 and 63 on scarcity matters. Such of the Members who have sent notices may be allowed to speak and represent grievances of their particular areas or constituencies.

ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್ಕೆರೆ).—ನಮ್ಮ ಅಡಳಿತಪನ್ನು ಕನ್ನಡದಲ್ಲಿ ನಡೆಸಬೇಕೆಂದು ಬಹಳ ಮಂದಿ ಹೇಳಿದ್ದಾರೆ. ಸರ್ಕಾರದವರೂ ಆ ರೀತಿ ಹೇಳುತ್ತಿದ್ದಾರೆ. ಆದ್ದರಿಂದ ಅಧ್ಯಕ್ಷರಾದ ತಾವು ಕನ್ನಡದಲ್ಲಿ ಯಾವತ್ತು ಮಾತನಾಡುವದು ಬಹಳ ಮುಖ್ಯ. ಈ ಸರ್ಕಾರದಲ್ಲಿ ಕನ್ನಡ ಬಾರದೇ ಇರತಕ್ಕ ಅಧಿಕಾರಿಗಳು ಯಾರಾದರೂ ಇದ್ದರೆ ಅವರು ಕೂಡಲೇ ಕನ್ನಡವನ್ನು ಕಲಿಯುಬೇಕು. ತಾವು ಮಾತ್ರ ನಿಜವಾಗಿ ಕಂಪಲ್ಸರಿಯಾಗಿ ಇಲ್ಲಿ ಕನ್ನಡವನ್ನೇ ಬಳಸಬೇಕು. ಮಾನ್ಯ ಮಂತ್ರಿಗಳೂ ಸಹ ಮಾತನಾಡುವಾಗ ಇಲ್ಲಿ ಕನ್ನಡವನ್ನೇ ಹೆಚ್ಚಾಗಿ ಬಳಸಬೇಕು. ತಾವು ಅಡತಕ್ಕಂಥ ಮಾತು ಬಂಗಾರದಂಥ ಮಾತು ಆಗಿದೆ. ಅದು ಇಂಗ್ಲೀಷಿಗಿಂತ ಬಹಳ ಚೆನ್ನಾಗಿದೆ. ಆದರೆ ಏನು ಮಾಡುವುದು ಆ ಇಂಗ್ಲೀಷ್‌ನ ಮೇಲೆ ಒಂದು ತರಹ ವ್ಯಾಮೋಹ ಇದೆ. ನೀವು ಉತ್ತರ ಕರ್ನಾಟಕ ಜನ ಮಾತನಾಡುವ ಭಾಷೆ ಒಂದು ತರಹದಲ್ಲಿ ಇರುತ್ತದೆ. ಅಲ್ಲಿನ ಭಾಷೆಯಲ್ಲಿ ಮಾತನಾಡಿದರೂ ಪರವಾ ಇಲ್ಲ.

ಅಧ್ಯಕ್ಷರು.—ನನಗೆ ಎಷ್ಟು ಸಾಧ್ಯವೋ ಅಷ್ಟು ಕನ್ನಡದಲ್ಲಿ ಮಾತನಾಡುತ್ತೇನೆ. ಒಂದು ವೇಳೆ ತಪ್ಪುಗಳಾದರೆ ಕ್ಷಮಿಸಬೇಕಾಗಿದೆ. ಏಕೆಂದರೆ ನನಗೆ ಅಷ್ಟು ಚೆನ್ನಾಗಿ ಕನ್ನಡ ಬರುವುದಿಲ್ಲ.

ಶ್ರೀ ಪಾಟಾಳ್ ನಾಗರಾಜ್.—ಆ ರೀತಿಯಾಗಿ ತಾವು ಇಲ್ಲಿ ಕನ್ನಡದಲ್ಲಿ ಮಾತನಾಡಬೇ ಇತ್ತಾರೆ, ತಮ್ಮನ್ನು ಕನ್ನಡದವರಲ್ಲವೆಂದು ಯಾರಾದರೂ ತಿಳಿದುಕೊಳ್ಳುತ್ತಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ನಿನ್ನೆ ದಿವಸ ಸಂಪುಟದ ಸಭೆ ಸೇರಿ ರಿಲೀಫ್ ಕಾಮಗಾರಿ ವಿಚಾರದಲ್ಲಿ ಬಹಳ ಮುಖ್ಯವಾದಂಥ ತೀರ್ಮಾನಗಳನ್ನು ತೆಗೆದು ಕೊಂಡಿದ್ದಾರೆ. ಆ ತೀರ್ಮಾನವೇನೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ತಿಳಿಸಿದರೆ ಅನೇಕರು ಮಾತನಾಡದೆ ಇರಬಹುದು. ಒಂದು ವೇಳೆ ಕೆಲವರು ಮಾತನಾಡಬೇಕೆಂದರೆ ಅವರಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಬಹುದು. ಆ ವಿಚಾರವನ್ನು ಈ ಮಾನ್ಯ ಸಭೆಗೆ ತಿಳಿಸಬೇಕೆಂದು ಪ್ರಾರ್ಥನೆ.

†ಶ್ರೀ ಎಸ್. ಎಸ್. ಶೆಟ್ಟರ್.—ಸನ್ಮಾನ್ಯ ಅಧ್ಯಕ್ಷರೇ, ಭಾರತದಲ್ಲಿ ಜನಸಂಘ ಪಕ್ಷವೆಂಬುದು ಒಂದುರಾಜಕೀಯ ಪಕ್ಷವಾಗಿರುತ್ತದೆ. ಅಂಥಾದ್ದರಲ್ಲಿ ನನ್ನನ್ನು 10 ನಿಮಿಷಗಳಲ್ಲಿ ಮಾತನಾಡಬೇಕೆಂದು ಹೇಳಿದ್ದಾರೆ. ಅಧ್ಯಕ್ಷರು ನನಗೆ ಕೊಟ್ಟ ವೇಳೆಯಲ್ಲಿ ನಾನು ನನ್ನ ಮಾತನ್ನು ಮುಗಿಸಲು ಪ್ರಯತ್ನಿಸುತ್ತೇನೆ. ಈಗ ಅನೇಕ ಊರುಗಳಿಂದ ಅನೇಕ ಜನರಿಂದ ಸದಸ್ಯರಿಗೆ ಪತ್ರಗಳು ಬಂದಿತ್ತಾ ಇವೆ. ನನಗೂ ಕೂಡ ರೋಣತಾಲ್ಲೂಕಿನ ಒಂದು ಭಾಗದಿಂದ ಒಂದುಪತ್ರ ಬಂದಿದೆ. ಆ ಪತ್ರಗಳನ್ನು ಅವಲೋಕಿಸುವುದರಿಂದ ಮತ್ತು ಪರಿಶೀಲನೆಮಾಡುವುದರಿಂದ ಸರ್ಕಾರದವರು ಈ ಬರಗಾಲ ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸಿಲ್ಲವೆಂಬ ವಿಷಯ ಆ ಪತ್ರಗಳ ಮುಖಾಂತರ ವಿದಿತವಾಗುತ್ತಿದೆ. ಅವರು ಪತ್ರದಲ್ಲಿ ಕೆಲವು ಮಾತುಗಳನ್ನು ಉಲ್ಲೇಖಿಸಿದ್ದಾರೆ. ಜನರು ಅನಿರ್ದಿಷ್ಟವಾಗಿ ತಂತಮ್ಮ ಊರುಗಳನ್ನು ಬಿಟ್ಟು ಬೇರೆ ಊರುಗಳಿಗೆ ಉದ್ಯೋಗ ಹುಡುಕಿಕೊಂಡು ಹೋಗುವ ಕಾಲ ಸನ್ನಿಹಿತವಾಗಿದೆ. ಮತ್ತು ಆಹಾರಕ್ಕಾಗಿ ಜನರು ಬಹಳ ಕಷ್ಟಪಡುತ್ತಿದ್ದಾರೆಂಬುದಾಗಿ ಉಲ್ಲೇಖಮಾಡಿದ್ದಾರೆ. ಇದಲ್ಲದೆ ಕೆಲವು ನೆರೆಹೊರೆಯ ಪ್ರಾಂತಗಳಲ್ಲಿ ಆಹಾರದ ಬೆಲೆ ಏರುತ್ತಿದೆಯೆಂಬುದನ್ನು ನಮ್ಮೆಲ್ಲರ ಗಮನಕ್ಕೆ ತರಲು ಬಯಸಿದ್ದಾರೆ. ಇದನ್ನು ನೋಡಿದರೆ, ಸರ್ಕಾರದವರು ಬರಗಾಲ ಕಾಮಗಾರಿಯನ್ನು ಪ್ರತಿಯೊಂದು ವರ್ಷವೂ ನಡೆಸಿ ಬರಗಾಲ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಪ್ರಯತ್ನಮಾಡಿದ್ದರೂ ಸಹ ಕಳೆದ ಮೂರು ನಾಲ್ಕು ವರ್ಷಗಳಿಂದ ಅದು ಸಾಧ್ಯವಾಗಲಿಲ್ಲ. ಈ ವರ್ಷವೂ ಕೂಡ ಈ ಬರಗಾಲ ಹೆಚ್ಚು ಹೆಚ್ಚು ಬೆಳೆಯುತ್ತಿದೆಯೆಂದು ನಾನು ಈ ಸಂದರ್ಭದಲ್ಲಿ ಈ ಸಭೆಯಲ್ಲಿ ಉಲ್ಲೇಖಿಸಲಿಕ್ಕೆ ಬಯಸುತ್ತಿದ್ದೇನೆ.

ಅಧ್ಯಕ್ಷರು.—ಎರಡೂ ಕಡೆಯಲ್ಲಿಯೂ ಒಂದೇ ತರಹ ಅಭಾವಪರಿಸ್ಥಿತಿ ಇದೆಯೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದ್ದರಿಂದ ಅದನ್ನು ಯಾವ ರೀತಿ ಎದುರಿಸಬೇಕೆಂದು ಅಷ್ಟು ಹೇಳಿದರೆ ಸಾಕು.

ಶ್ರೀ ಎಸ್. ಎಸ್. ಶೆಟ್ಟರ್.—ಹಾಗಾದರೆ ನಾನು 5 ನಿಮಿಷಗಳಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನನಗೆ ಅಧ್ಯಕ್ಷರು ಬಹಳ ಉಪಕಾರ ಮಾಡಿದ್ದಾರೆ. ನಮ್ಮ ಕಾಮಗಾರಿಯ ಒಂದು ಶಬ್ದ ಅಥವಾ ಅದೇಶವಿದ್ದಂತೆ ನಡೆಯುವುದೇ ನನಗೆ ಆನಂದ. ರೂಲ್ 279 ಈ ರೀತಿ ಇದೆ :

> "A motion that the policy or situation or statement or any other matter be taken into consideration shall not be put to the vote of the Assembly, but the Assembly shall proceed to discuss such matter immediately after the mover has concluded his speech and no further question shall be put at the conclusion of the debate at the appointed hour unless a member moves a substantive motion in appropriate terms to be approved by the Speaker and the vote of the Assembly shall be taken on such motion."

ಮೇಲ್ಕಂಡ ರೂಲ್ 279 ರಂತೆ ಈ ಸಬ್‌ಸ್ಟಾಂಟಿವ್ ಮೋಷನನ್ನು ಸಭೆಯ ಮುಂದೆ ಮುಂಡಿಸಲು ತಮ್ಮ ಅಪ್ಪಣೆ ಬೇಡುತ್ತೇನೆ :

> "This House is of the opinion that the Central Study Team ought to have taken into consideration the grave situation in Mysore State due to the existing famine conditions in more than half the State and it should have recommended the allocation of funds according to the needs of the State. Therefore a Commission may be appointed to reassess the grave situation due to drought conditions in the State and find out permanent and effective solution for eradicating the evils of drought, the House requests the Central Government to give all the aid to the Mysore Government..."

ಸ್ವಾಮಿ, ನಾನು ಈ ಒಂದು ಸಬ್‌ಸ್ಟಾನ್‌ಟೀವ್ ಮೋಷನ್ ಅನ್ನು ಮೂವ್ ಮಾಡುವುದಕ್ಕೆ ಇಚ್ಛೆಯನ್ನು ವ್ಯಕ್ತಪಡಿಸಿ ಇದಕ್ಕೆ ಸಂಬಂಧಪಟ್ಟ ಹಾಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

Mr. SPEAKER.—Please send that motion in writing.

Sri S. S. SHETTAR.—I have sent a typed copy day-before-yesterday itself.

Mr. SPEAKER.—I shall look into it.

Sri S. S. SHETTAR.—I shall refer to the Memorandum presented to the Central Study Team. On page 29 of the Memorandum, figures relating to the average daily labour attendance on "64 Famine Relief" works for May 1968 have been given for 16 Districts. Figures have been given indicating as to how many workers have been engaged in relief works. ಬೆಂಗಳೂರು ಒಂದೇ ಜಿಲ್ಲೆಯಲ್ಲಿ ಸಾಧಾರಣವಾಗಿ 5,056 ಜನಗಳು ಕೆಲಸ ಮಾಡುತ್ತಾರೆ ಎಂದು ಈ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಬೆಂಗಳೂರಿನಲ್ಲಿ ಜನಸಂಖ್ಯೆ ಜಾಸ್ತಿ ಇದೆ. ಹಳ್ಳಿಗಳಲ್ಲಿರತಕ್ಕ ಜನಸಂಖ್ಯೆಯ ಅಂಕ ಅಂಶಗಳನ್ನು ತೆಗೆದುಕೊಂಡರೆ 11 ಲಕ್ಷ 45 ಸಾವಿರದ 880 ಜನರು ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಆ ಒಂದು ಸಂಖ್ಯೆಗೆ ಅನುಗುಣವಾಗಿ 100ಕ್ಕೆ 60 ಜನ ನಿರುದ್ಯೋಗಿಗಳು ಇದ್ದಾರೆಂದು ಸರ್ಕಾರದವರು ಪ್ರಕಟಣೆ ಮಾಡಿದ್ದಾರೆ. ಬರಗಾಲ ಬರುವುದಕ್ಕೆ ಪೂರ್ವದಲ್ಲಿ ಕೊಟ್ಟಂತಹ ಅಂಕ ಅಂಶ ಇವು. ಬಾಗಾಲ ಬರುವುದಕ್ಕೆ ಮುಂಚೆ 100ಕ್ಕೆ 60 ಜನ ನಿರುದ್ಯೋಗಿಗಳಿದ್ದಾರೆ ಎಂದು ಗೊತ್ತಾಗುತ್ತದೆ. ಬರಗಾಲ ಬಂದಮೇಲೆ ಎಷ್ಟು ಜನ ನಿರುದ್ಯೋಗಿಗಳು ಇವ್ವಾರೆ ಎನ್ನುವ ಅಂಕ ಅಂಶಗಳನ್ನು ನೋಡಿದರೆ ಗಾಬರಿಯಾಗುತ್ತದೆ.

ಅಮೇಲೆ ಧಾರವಾಡ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಅಂಕ ಅಂಶಗಳನ್ನು ನೋಡುವುದಾದರೆ 100ಕ್ಕೆ 57 ಜನ ನಿರುದ್ಯೋಗಿಗಳು ಅಲ್ಲಿ ಇದ್ದಾರೆ. ಧಾರವಾಡ ಡಿಸ್ಟ್ರಿಕ್ಟಿನಲ್ಲಿ 2,482 ಜನಗಳು ಉದ್ಯೋಗದಲ್ಲಿ ತೊಡಗಿದ್ದಾರೆ. ಅಲ್ಲಿನ ಜನಗಳಿಗೆ ಉದ್ಯೋಗವನ್ನು ದೊರಕಿಸುವಂತಹ ಪ್ರಧಾನವಾದಂತಹ ಕೆಲವು ಕೆಲಸಗಳನ್ನು ಕಾರ್ಯಗತ ಮಾಡಬೇಕು. ಈಗ ಎರ್ನಾಕಡೆಗಳಿಂದ ಬಂದ ವರ್ತಮಾನದ ಪ್ರಕಾರ ಕೆಲಸ ಎಲ್ಲೂ ಪ್ರಾರಂಭವಾಗಿಲ್ಲ ಎಂದು ತಿಳಿದು ಬಂದಿದೆ. ಇದೀ ಮೈಸೂರು ರಾಜ್ಯದಲ್ಲಿ 45 ಸಾವಿರ ಜನ ಬಂಡಿಂಗ್ ವರ್ಕ್ಸ್‌ನಲ್ಲಿ ತೊಡಗಿದ್ದಾರೆಂದು ಪ್ರಕಟಿಸಿದ್ದಾರೆ. ಈ ಸೂಚನೆ ಅಷ್ಟು ಸಮಾಧಾನಕರವಾಗಿಲ್ಲ ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಇದರಲ್ಲಿ ಮುಖ್ಯವಾದ ಒಂದು ಅಂಶವೇನೆಂದರೆ ಯಾವುದೇ ಕ್ಷಾಮಪರಿಸ್ಥಿತಿ ದೇಶದಲ್ಲಿ ಬಂದಾಗ ಸರ್ಕಾರ ಏನು ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಇದ್ದ ಪರಿಸ್ಥಿತಿಯನ್ನು ನಿವೇದಿಸಿಕೊಳ್ಳಬೇಕು. ಈಗಾಗಲೇ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಕಳುಹಿಸಿದಂತಹ ಸ್ಟಡಿ ಟೀಮಿನವರು ಕೊಟ್ಟಂತಹ ವರದಿಯ ಪ್ರಕಾರ ನಮ್ಮ ಸರ್ಕಾರಕ್ಕೆ ಸಹಾಯಧನವನ್ನು ಕೊಡಬೇಕಾಗುತ್ತದೆ ಎನ್ನುವ ಮಾತನ್ನು ತಿಳಿಸಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು 1-2-68 ರಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ನಮ್ಮ ರಾಜ್ಯಕ್ಕೆ ಸ್ಕೇರ್ಸಿಟಿ ಕೆಲಸಕ್ಕಾಗಿ ಕನಿಷ್ಟಪಕ್ಷ 10 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಉಲ್ಲೇಖಿಸಿದ್ದಾರೆ. ಆ ಹಣ ಲಭಿಸದೆ ಇರುವುದರಿಂದ ಮತ್ತು ಸಂಪೂರ್ಣವಾಗಿ ಅದನ್ನು ಉಪಯೋಗಿಸುವುದಕ್ಕೆ ಸಾಧ್ಯವಲ್ಲದೇ ಇರುವುದರಿಂದ, ಸ್ಟೇಟ್‌ಮೆಂಟ್ 10 ರಲ್ಲಿ ಹೇಳಿರುವ ಹಾಗೆ, ಈ ಕೆಲಸಕ್ಕೆ 8 ಕೋಟಿ 30 ಲಕ್ಷ ರೂಪಾಯಿಗಳು ಆದರೆ ಸಾಕು ಎಂದು ಹೇಳಿದ್ದಾರೆ. ಇಪ್ಪೊತ್ತಿನ ಎಮರ್ಜೆನ್ಸಿ ಫೀಡಿಂಗ್ ಸಲುವಾಗಿ ಬೇಕಾದಂತಹ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ 2 ಕೋಟಿ 25 ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ಹೇಳಿದ್ದಾರೆ. ನಾನು ಪತ್ರಿಕೆಯಲ್ಲಿ ಓದಿರುವ ಹಾಗೆ 8 ಕೋಟಿ 30 ಲಕ್ಷ ರೂಪಾಯಿಗಳು 67-68 ನೇ ಸಾಲಿಗೆ ಸಂಬಂಧಿಸಿದ್ದು ಎನ್ನುವ ಮಾತನ್ನು ಹೇಳಿದ್ದಾರೆ. ಈಗ 1968-69 ನೇ ಸಾಲಿಗೆ ಸಂಬಂಧಪಟ್ಟ ಹಾಗೆ ಹಿಂದಿನ ಬಾಕಿ ಎಷ್ಟು ಇತ್ತು ಕೇಂದ್ರ ಸರ್ಕಾರದ ಸ್ಟಡಿ ಟೀಮಿನವರು ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ಸರ್ಕಾರದವರು ಜನತೆಯ ಮುಂದೆ ಇಟ್ಟಿಲ್ಲ ಎಂದು ಹೇಳಬೇಕಾಗುತ್ತದೆ. ಅಭಾವ ಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಕೆಲಸಗಳು ಪ್ರಾರಂಭವಾಗಿಲ್ಲ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಸ್ಟಡಿ ಟೀಮಿನವರು ಕೂಡ ನಮ್ಮ ರಾಜ್ಯದಲ್ಲಿ ಉಂಟಾಗಿರತಕ್ಕ ದುಷ್ಕಾಲ ಪರಿಸ್ಥಿತಿಯ ಬಗ್ಗೆ ಸರಿಯಾದ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದವರಲ್ಲಿ ನಿವೇದಿಸಿಲ್ಲ. ರಾಜ್ಯ ಸರ್ಕಾರದವರು ಎಷ್ಟು ಒತ್ತಡದಿಂದ ಪರಿಸ್ಥಿತಿಯನ್ನು ತಿಳಿಸಿಕೊಟ್ಟರೂ ಅಷ್ಟು ಒತ್ತಡವಾದ ತಿಳಿಸಿಲ್ಲ ಎಂದು ನಾನು ಸ್ಪಷ್ಟ ಮಾಡಬೇಕಾಗುತ್ತದೆ. 1965-66 ನೇ ಇಸವಿಯಿಂದ ಒಂದೇ ಸಮನಾಗಿ ನಮ್ಮ ದೇಶದಲ್ಲಿ ದುಷ್ಕಾಲ ಬರುತ್ತಿದೆ.

ಪರಿಣಾಮಕಾರಿಯಾದಂತಹ ಕೆಟ್ಟ ಪರಿಣಾಮವನ್ನು ಬೀರುವಂತಹ ಇಂಥಾ ಪರಿಸ್ಥಿತಿಯನ್ನು ನೋಡಿದರೆ ಇದಕ್ಕೆ ಪ್ರತ್ಯೇಕವಾದ ಒಂದು ವ್ಯವಸ್ಥೆಯನ್ನು ಮಾಡಬೇಕು. ಈ ಬಗ್ಗೆ ಸರ್ಕಾರದ ವರು ಈಗ ಏನೊಂದು ಕ್ರಮವನ್ನು ತೆಗೆದುಕೊಂಡಿದ್ದಾರೆಯೋ ಇದರಿಂದ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಭಾವ ಪರಿಸ್ಥಿತಿ ಪುನಃ ನಮ್ಮ ರಾಜ್ಯಕ್ಕೆ ಬಾರದ ರೀತಿಯಲ್ಲಿ ಯಾವುದಾದರೂ ಒಂದು ಖಾಯಂ ವ್ಯವಸ್ಥೆಯನ್ನು ಮಾಡತಕ್ಕಂಥ ಪ್ರಯತ್ನ ಮಾಡ ಬೇಕಾಗಿತ್ತು. ರಾಜ್ಯದ ಅನೇಕ ಕಡೆ ಮಳೆ ಆಗದೆ ಬೆಳೆಯೆಲ್ಲಾ ಒಣಗಿ ಹೋಗಿ ಜನ ಆಕಾಶದ ಕಡೆ ನೋಡುತ್ತಿದ್ದಾರೆ. ಪೊನ್ನೆ ರೇಡಿಯೋದಲ್ಲಿ ಪ್ರಸಾರ ಮಾಡಿದ್ದನ್ನು ನೋಡಿದರೆ ಪುನಃ ಸ್ವಡಿ ಟೀವಿನವರು ನಮ್ಮ ರಾಜ್ಯಕ್ಕೆ ಬರುತ್ತಾರೆ ಅನಿಸುತ್ತದೆ. ಅದರ ಸಲುವಾಗಿ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿ ಅವರ ಮುಖಾಂತರ ಈಗ ನಮ್ಮ ರಾಜ್ಯದಲ್ಲಿ ಇರುವಂತಹ ತೊಂದರೆಗಳನ್ನು ಆ ಸ್ವಡೀ ಟೀವಿನವರ ಮುಂದೆ ನಿವೇದಿಸಿಕೊಂಡರೆ ಅದರಿಂದ ಅನುಕೂಲ ವಾಗುತ್ತದೆ. ಮತ್ತು ದುಷ್ಕಾಲ ಪರಿಸ್ಥಿತಿಯನ್ನು ಎದುರಿಸಲು ಏನೇನು ಯೋಜನೆಗಳನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಬೇಕು. ರ ್ತಗಳ ಕೆಲಸ ಸಣ್ಣ ಸಣ್ಣ ಕೆರೆಗಳ ರಿಹೇರಿ ಕೆಲಸ, ಹೂಳು ತೆಗೆಸುವುದು ಇತ್ಯಾದಿ ಕಾಮಗಾರಿಗಳನ್ನು ಮಾಡಬೇಕು. 1967–68 ನೇ ಸಾಲ ನಲ್ಲಿ ಸ್ಕೇರ್ಸಿಟಿ ಕೆಲಸಕ್ಕಾಗಿ ಏನೊಂದು ಹಣವನ್ನು ಖರ್ಚು ಮಾಡಿ, ಕೆಲವು ಯೋಜನೆಯನ್ನು ಕಾರ್ಯಗತ ಮಾಡಬೇಕಾಗಿತ್ತೋ ಅದನ್ನು ಮಾಡದೆ ಯಾವುದೋ ಒಂದು ದೊಡ್ಡ ನೆಪವನ್ನು ಹೇಳುವುದಕ್ಕೆ ಸರ್ಕಾರ ಹೊರಟಿದೆ. ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಭಾಗದಲ್ಲಿ ಯಾವ ಯಾವ ಕೆರೆಗಳ ಕೆಲಸ ಆಗಿ, ನೀರಾವರಿ ಸೌಲಭ್ಯಗಳನ್ನು ಒದಗಿಸಿ ಕೊಟ್ಟು ಸಾಗುವಳಿಯಾಗಬೇಕಾಗಿದ್ದ ಜಮೀನನ್ನು ಬಿಟ್ಟು ಬಿಡುವಂತಹ ಪರಿಸ್ಥಿತಿ ಬಂದಿದೆ. ಇಂತಹ ಕೆರೆಗಳು ಬೇಕಾದ ಹಾಗೆ ಇವೆ. ಹೀಗೆ ಕೆರೆಗಳು ಬಿತ್ತಿ ಹೋದ ಕಾಲದಲ್ಲಿ ಇಲ್ಲಿಗೆ ಸರಿಯಾಗಿ ನೀರು ಬರುವ ವ್ಯವಸ್ಥೆ ಬಗ್ಗೆ ಸರಕಾರ ಯೋಚನೆ ಮಾಡಬೇಕು. ಇನ್ನು ಬಾವಿಗಳ ಬಗ್ಗೆ ನೋಡಿದರೆ ಇದು ಒಂದು ದೊಡ್ಡ ಅಭಾಸವಾಗಿದೆ. ಬಾವಿಗಳನ್ನು ಏನೋ ಮಾಡಬೇಕೆಂದು ಕೆಲಸಗಳನ್ನು ಪಾರಂಭ ಮಾಡುತ್ತಾರೆ ಆದರೆ ಇದರ ಕೆಲಸಗಳು ಸಾಕಷ್ಟು ಸಮಾಧಾನಕರವಾಗಿ ಆಗುತ್ತಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ನೋಡಿದರೂ ಎಷ್ಟೋ ಬಾವಿಗಳನ್ನು ತೆಗೆಸುತ್ತಿದ್ದಾರೆ. ಆದರೆ ಎಷ್ಟೋ ಕಡೆಗಳಲ್ಲಿ ಬಾವಿಗಳಲ್ಲಿ ನೀರೇ ಬರುತ್ತಿಲ್ಲ. ಬರೀ ಮಾತಿನಲ್ಲಿ ಬಾವಿಯಾಗುತ್ತಿವೆ. ಮತ್ತು ಅವು ಕೆಲಸಕ್ಕೆ ಬಾರದ ರೀತಿಯಲ್ಲಿ ಆಗುತ್ತಿವೆ.

ಇನ್ನು ನಮಗೆ ಒದಗಿಸಿರುವ ಸ್ಟೇಟ್‌ಮೆಂಟಿನ ಬಗ್ಗೆ ಒಂದು ಮುಖ್ಯವಾದ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಪುಟ 26 ರಲ್ಲಿ ಕೊಟ್ಟಿರುವ ಸ್ಟೇಟ್‌ಮೆಂಟು ನಂಬರು 9 ರಲ್ಲಿದೆ. ಇದರಲ್ಲಿ ಬೆನಿಫಿಷಿಯರೀಸ್ ಬಗ್ಗೆ ಅಲಾಟು ಮಾಡಿರುವುದು 9,49,600 ಹಾಗೂ ಉಪಯೋಗಿಸಿರುವುದು 5,05,455 ಎಂದು /ಕೊಡಲಾಗಿದೆ. ಇದರ ಮೇರೆ ಸರ್ವೇ ಟೀಂ ನಡೆಸಿರುವುದು ಮತ್ತು ಇತ್ತರ ಸಾಕ್ಷಿ ವಿವರಗಳನ್ನು ಸಂಪೂರ್ಣವಾಗಿ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಎನ್ನುವುದು ಇದರಿಂದ ವಿದಿತವಾಗುತ್ತದೆ. ನಮ್ಮ ಮಿತ್ರರು ಇದರಲ್ಲಿ ಕೂಡ ಎಲ್ಲ ಅಂಕೆ ಅಂಶಗಳನ್ನೂ ತೆಗೆದುಕೊಂಡಿಲ್ಲ. ಇದನ್ನು ನೋಡಿದರೆ ಎಷ್ಟು ದುಡ್ಡು ಕೊಟ್ಟಿದ್ದರೂ ಅದನ್ನು ಪೂರ್ಣವಾಗಿ ಖರ್ಚು ಮಾಡಿಲ್ಲ ಎನ್ನುವುದು ಇದರಿಂದ ವಿದಿತವಾಗುತ್ತದೆ. ಕಾಮಗಾರಿಗಳನ್ನು ಕೂಡ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಮತ್ತು ಇದರ ಕೆಲಸಗಳನ್ನು ಮಾಡುವಾಗ ಸರಕಾರದ ವತಿಯಿಂದ ಇರುವ ಅಧಿಕಾರಿಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ನಾನು ಬೇರೆ ಹೇಳಬೇಕಾಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ವಿವರಣೆ ಮಾಡುವಾಗ ಶಿಬ್ಬಂದಿಯವರು ಸ್ವಲ್ಪಮಟ್ಟಿನ ಜವಾಬುದಾರಿಯಿಂದ ಇದನ್ನು ಮಾಡಲಿಲ್ಲ ಎನ್ನುವ ಅಭಿಪ್ರಾಯವನ್ನೂ ಅವರು ವ್ಯಕ್ತ ಪಡಿಸಿದ್ದಾರೆ. ವಿರೋಧ ಪಕ್ಷದವರು ಇಲ್ಲಿ ಕೆಲವಾರು ಸೂಚನೆಗಳನ್ನು ಸರಕಾರಕ್ಕೆ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಇದನ್ನು ಸರಕಾರ ಸರಿಯಾಗಿ ಯೋಚನೆಮಾಡಬೇಕು. ಇವೊತ್ತು ಶಿಬ್ಬಂದಿಯ ಒಂದು ನೆಪ ಹಾಕಿ ಇಲ್ಲಿನ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗದೇ ಇದ್ದರೆ ಅದಕ್ಕಾಗಿ ನಾವು ವಿಷಾದಪಡಬೇಕಾಗಿದೆ. ಆದುದರಿಂದ ನಾನು ಸರಕಾರಕ್ಕೆ ಸೂಚನೆ ಕೊಡುವುದು ಈ ರಿಲೀಫ್ ವರ್ಕ್ಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಒಂದು ಕಮಿಟಿ ಮಾಡಬೇಕು ಎಂದು ನಾನು ಇಲ್ಲಿ ಒಂದು ಸಬ್‌ಸ್ಟಾಂಟೀವ್ ಮೋಷನ್ ಕಳುಹಿಸಿದ್ದೇನೆ. ಅದರಂತೆ ಒಂದು ಕಮಿಟಿ ನೇಮಕ ಮಾಡಿದರೆ ಆ ಕಮಿಟಿಯ ಮುಖೇನ ಕೇಂದ್ರ ಸರಕಾರಕ್ಕೆ ನಮ್ಮ ಬೇಡಿಕೆಯನ್ನು ಸಲ್ಲಿಸುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಅವರು ಕೊಟ್ಟ ಹಣವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲೂ ಅನುಕೂಲವಾಗುತ್ತದೆ. ಇದರ ಕಡೆಗೆ ಲಕ್ಷ್ಯ ಕೊಡಬೇಕು ಎಂದು ನಾನು ಇಲ್ಲಿ ಸಲಹೆಮಾಡುತ್ತೇನೆ.

ಶ್ರಿ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಇವೊತ್ತಿನ ದಿನ ನಮ್ಮ ಮೈಸೂರು ರಾಜ್ಯದಲ್ಲಿ ಮಳೆ ಬಾರದೆ ಇರತಕ್ಕ ಪರಿಸ್ಥಿತಿಯಲ್ಲಿ ಈ ಸಭೆಯ ಮಾನ್ಯ ಸದಸ್ಯರುಗಳು ಅನೇಕ ಗಮನಾರ್ಹವಾದ ವಿಷಯಗಳನ್ನು ಈ ಸಭೆಯ ಮುಖೇನ ಸರಕಾರಕ್ಕೆ ತಿಳಿಸಿದ್ದಾರೆ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಈ ಸಭೆಯ ಮುಂದೆ ಅಭಾವ ಪರಿಸ್ಥಿತಿಗಳ ಬಗ್ಗೆ ರಾಜ್ಯ ಸರಕಾರದವರು ಕೈಗೊಂಡಿರುವ ಕಾರ್ಯಕ್ರಮಗಳು ಹಾಗೂ ಮುಂದೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಹೇಳುತ್ತಾ ಇಲ್ಲಿ ಒಂದು ಠರಾವನ್ನೂ ಮಂಡಿಸಿದ್ದಾರೆ. ಈಗಾಗಲೇ ಮೂರು ನಾಲ್ಕು ದಿನಗಳಿಂದಲೂ ಯಾವಯಾವ ಭಾಗದಲ್ಲಿ ಎಂತಹ ಪರಿಸ್ಥಿತಿಗಳಿವೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಸಕಾಲದಲ್ಲಿ ಮಳೆ ಬಾರದಂತಹ ಪರಿಸ್ಥಿತಿ ಇರುವುದರಿಂದ ಇಂದು ಅಭಾವದ ಪರಿಸ್ಥಿತಿ ಕಾಣುತ್ತಿದೆ. ಈ ಅಭಾವ ಪರಿಸ್ಥಿತಿ ಇವೊತ್ತಿನ ದಿವಸದ್ದಲ್ಲ. ಪ್ರತಿ ವರ್ಷವೂ ಬರುತ್ತಲೇ ಇರುತ್ತದೆ. ಆದರೆ ಇಂದು ಈ ಪರಿಸ್ಥಿತಿ ಬಹಳ ತೀವ್ರವಾಗಿ ಕಣ್ಣಿಗೆ ಕಾಣಿಸುತ್ತಿದೆ. ಇಲ್ಲ ತಂದಿರುವ ಠರಾವಿನಂತೆ ನಾವು ನೋಡುವುದಾದರೆ ನಮ್ಮ ದೇಶದಲ್ಲಿ ನೂಮಾರು ಹದಿಮೂರು ಸಾವಿರ ಹಳ್ಳಿಗಳಲ್ಲಿ ಅಭಾವದ ಪರಿಸ್ಥಿತಿಯುಂಟಾಗಿದೆ ಎನ್ನುವ ಒಂದು ಅಂಶವನ್ನೂ ಇಲ್ಲ ಸರಕಾರದವರು ಹೇಳಿದ್ದಾರೆ. ಇದು ಒಂದೆರಡು ಜಿಲ್ಲೆಗಳನ್ನೂ ಬಿಟ್ಟಿಲ್ಲ ಯಾವ ಒಬ್ಬ ಮಾನ್ಯ ಸದಸ್ಯರೇ ಆಗಲಿ ಇಲ್ಲ ಹೇಳಿರುವುದನ್ನು ನೋಡಿದರೆ ಮಳೆಬಾರದೇ ಇರುವುದರಿಂದ ದನಕರುಗಳಿಗೆ ಕುಡಿಯಲು ನೀರಿಲ್ಲ, ಮೇವಿಲ್ಲ, ಎನ್ನುವುದು ಇದರಿಂದ ಗೊತ್ತಾಗುತ್ತದೆ. ಯಾವ ಜಿಲ್ಲೆಯನ್ನು ತೆಗೆದುಕೊಂಡರೂ ನರಿಯೇ ನಮ್ಮ ದೇಶದಲ್ಲಿ ಸುಮಾರಾಗಿ ಮೂರು ವರ್ಷದಿಂದಲೂ ಒಂದೆಲ್ಲ ಒಂದು ರೀತಿಯಲ್ಲಿ ಅಭಾವದ ಪರಿಸ್ಥಿತಿ ಬರುತ್ತಲೇ ಇರುವುದನ್ನು ನಾವು ನೋಡುತ್ತಿದ್ದೇವೆ: ಇದಕ್ಕೆ ಕಾರಣವೇನು ? ಮಳೆಬಾರದೇ ಇರುವುದು ಒಂದೇ ಕಾರಣವಲ್ಲ. ಇಂದು ನಮ್ಮ ದೇಶದಲ್ಲಿ ಇರುವ ವೃಕ್ಷಗಳ ಸಂಪತ್ತು ಕಡಿಮೆಯಾಗುತ್ತಾ ಬರುತ್ತಿದೆ. ಅರಣ್ಯ ಸಂಪತ್ತನ್ನು ಕಡಿಮೆ ಮಾಡುವುದರಿಂದಾಗಿ ಇಂದು ನಮ್ಮ ದೇಶದಲ್ಲಿ ಮಳೆ ಬರುತ್ತಿಲ್ಲ. ರೈತರ ಭಾಷೆಯಲ್ಲೇ ಹೇಳಬೇಕೆಂದರೆ ಕಾಡು ಹೋದ ಮೇಲೆ ಮಳೆ ಎಲ್ಲಿಂದತಾನೇ ಬರುತ್ತದೆ. ಅನೇಕರ್ ತಾಲ್ಲೂಕಿನ ಬನ್ನೇರುಘಟ್ಟ ಪ್ರದೇಶದಲ್ಲಿ ಅರಣ್ಯ ಸಂಪತ್ತು ಇತ್ತು. ಈಗ ಅದು ಕಡಿಮೆಯಾಗಿ ಇಲ್ಲಿ ಮಳೆ ಬರುವುದೇ ಇಲ್ಲ. ಮಳೆ ಬಾರದೇ ಇರುವುದಕ್ಕೆ ಅರಣ್ಯ ಸಂಪತ್ತು ನಮ್ಮ ದೇಶದಲ್ಲಿ ಕಡಿಮೆ ಯಾಗುತ್ತಿರುವುದೇ ಮುಖ್ಯ ಕಾರಣವಾಗಿದೆ. ಇಂದು ದೇಶದಲ್ಲಿರುವ ಅರಣ್ಯಸಂಪತ್ತು ನಾಶವಾಗದ ರೀತಿಯಲ್ಲಿ ಏರ್ಪಾಡು ಮಾಡುವುದು ನಮ್ಮ ಸರಕಾರದ ಮುಖ್ಯ ಕರ್ತವ್ಯ ಎಂದು ನಾನು ಹೇಳಬೇಕಾಗಿದೆ.

ಮತ್ತೊಂದು ಮುಖ್ಯ ಕಾರಣ ಈ ದೇಶದಲ್ಲಿ ಎರ್ಲೋ ಕೆಲವು ಕಡೆಗಳಲ್ಲಿ ಅಲ್ಪಸ್ವಲ್ಪ ಮಳೆ ಬಂದಿದ್ದರೂ ಆ ಮಳೆಯ ನೀರನ್ನು ಸಕಾಲದಲ್ಲಿ ಸರಿಯಾಗಿ ಉಪಯೋಗಿಸಿಕೊಳ್ಳದೇ ಇರುವುದನ್ನು ನೋಡಿ ತುಂಬಾ ವಿಷಾದವಾಗಿದೆ. ಈಗ ನಮ್ಮ ದೇಶದಲ್ಲಿ ಹಾಸ್ತಿಯಾಗಿ ದೊಡ್ಡ ದೊಡ್ಡ ಆಣೆಕಟ್ಟುಗಳು ಹಾಗೂ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕೆ ಹೋಗುವುದರಿಂದ ನಮಗೆ ಮಳೆಬಂದಂತಾಗುವುದಿಲ್ಲ. ಅಲ್ಲದೆ ಮಳೆಯಿಂದ ಬರತಕ್ಕ ನೀರನ್ನು ಸದುಪಯೋಗಪಡಿಸಿಕೊಳ್ಳಲಲ್ಲ ಮತ್ತು ಮಳೆ ಬಂದಾಗ ಸಣ್ಣ ಪುಟ್ಟ ಕೆರೆಗಳಲ್ಲಿ ನೀರು ನಿಲ್ಲುವಂತೆ ಮಾಡಿ ಅದಕ್ಕೆ ತಕ್ಕ ಅಣೆಕಟ್ಟುಗಳನ್ನು ಹಾಗೂ ಕುಂಟೆಗಳನ್ನು ಕಟ್ಟಿದ್ದರೆ ನೀರನ್ನು ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದಾಗಿತ್ತು ಎಂದು ನಾನು ಇಲ್ಲಿ ಹೇಳಬೇಕಾಗಿದೆ. ನೂಮಾರು 36 ಸಾವಿರಕ್ಕೆ ಮೇಲ್ಪಟ್ಟು ಕೆರೆಗಳು ನಮ್ಮ ದೇಶದಲ್ಲಿದ್ದರೂ ಅವುಗಳಲ್ಲಿ ಎಷ್ಟೋ ಕೆರೆಗಳಿಗೆ ನೀರು ಬಂದರೂ ಅಲ್ಲಿ ನೀರು ನಿಲ್ಲುವುದಿಲ್ಲ. ಇದಕ್ಕೆ ಕಾರಣ ಅಲ್ಲಿರುವ ತೂಬುಗಳು ಸರಿಯಾಗಿಲ್ಲ ಮತ್ತು ಕೋಡಿ ಇಲ್ಲ. ಇದು ಬಹು ವಿಷಾದದ ಸಂಗತಿ. ಅಲ್ಲದೆ ಅನೇಕ ಕೆರೆಗಳಲ್ಲಿ ಮಳೆಯಿಂದ ಬಂದ ನೀರು ರಾತ್ರಿ ಇದ್ದರೂ ಬೆಳಗಾಗುವುದರೊಳಗಾಗಿ ಅಲ್ಲ ನೀರೇ ನಿಲ್ಲುವುದಿಲ್ಲ. ಇದನ್ನು ಸರಿಯಾಗಿ ಸರಕಾರ ಪರಿಶೀಲನೆ ಮಾಡಿ ನೋಡಿಲ್ಲ. ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಇತರ ಕಾಮಗಾರಿಗಳನ್ನು ಮಾಡಲಕ್ಕೆ ರಸ್ತೆಗಳನ್ನು ಮಾಡಲಕ್ಕೆ ಇತ್ಯಾದಿ ಕೆಲಸಗಳಿಗೆ ಕೋಟಿಗಟ್ಟಲೆ ಹಣ ವೆಚ್ಚ ಮಾಡುತ್ತಿದ್ದಾರೆಯೇ ಹೊರತು ಇದರ ಕಡೆಗೆ ಹೆಚ್ಚು ಲಕ್ಷ್ಯ ಕೊಡುತ್ತಿಲ್ಲ.

Mr. SPEAKER.—The House will now rise and meet again at 3-30 P.M. The hon'ble member may resume his speech at 3-30.

The House rose at Three of the Clock and re-assembled at Forty Minutes past Three of the Clock.

[Mr. DEPUTY SPEAKER in the Chair]

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಉಪ ಸಭಾಪತಿಗಳವರೇ, ಈಗಾಗಲೇ ಅಭಾವ ಪರಿಸ್ಥಿತಿಯ ವಿಷಯದಲ್ಲಿ ನಾನು ಮಾತನಾಡುತ್ತಾ, ಈ ಅಭಾವ ಪರಿಸ್ಥಿತಿಯ ಮೂಲಕ ಬಂದಿರತಕ್ಕ ಸಮಸ್ಯೆಯನ್ನು ಪರಿಹಾರ ಮಾಡತಕ್ಕ ನಿಂದರ್ಭದಲ್ಲಿ ಈ ಒಂದು ವಿಶೇಷವಾದಂತಹ ಮತ್ತು ಜನಗಳಿಗೆ ಅನುಕೂಲವಾಗತಕ್ಕ ಕೆಲವು ಕಾಂಗಾರಿಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ. ಈಗಾಗಲೇ ಹೇಳಿದ ಹಾಗೆ ಈ ಒಂದು ಕೆರೆಗಳ ವಿಷಯದಲ್ಲಿ ಹೇಳುವುದಾದರೆ ನಣ್ಣ ನೀರಾವರಿ ಆಶ್ರಯದಲ್ಲಿರತಕ್ಕ ಸಾವಿರಾರು ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಕೆಲಸ ಕಾರ್ಯಗಳನ್ನು ಮಾಡುವಾಗ ಬಹಳ ಮುಖ್ಯವಾದಂತಹದು ಅವುಗಳ ತೂಬು ಮತ್ತು ಕೋಡಿಗಳನ್ನು ರಿಪೇರಿ ಮಾಡುವುದು. ಅದನ್ನು ಇಂತಹ ಅಭಾವ ಪರಿಸ್ಥಿತಿಯಲ್ಲಿ ತೆಗೆದುಕೊಳ್ಳಬೇಕಾದ್ದು ಬಹಳ ಅವಶ್ಯಕ. ಕೆರೆಗಳಲ್ಲಿರತಕ್ಕ ಹೂಳುಮಣ್ಣನ್ನು ತೆಗೆಸಬೇಕು, ನೂರಾರು ವರ್ಷಗಳಿಂದ ಈ ಕೆರೆಗಳಲ್ಲಿ ಹೂಳು ಮಣ್ಣು ತುಂಬಿಕೊಂಡು ಅವುಗಳಲ್ಲಿ ನೀರು ನಿಲ್ಲದೇ ಹರಿದುಕೊಂಡು ಹೊರಟು ಹೋಗುತ್ತಾ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಒಂದು ನಿದರ್ಶನ ಕೊಡುವುದಾದರೆ ನನ್ನ ತಾಲ್ಲೂಕಿನಲ್ಲಿರತಕ್ಕ ಅಮಾನಿ ದೊಡ್ಡ ಕೆರೆ, 2,400 ಎಕರೆ ಆಚ್ಚು ಕಟ್ಟು ಇದೆ. 1964-65ರಲ್ಲಿ ಅದಂತಹ ಅಭಾವ ಕಾಲದಲ್ಲಿ ಕೆರೆ ಬತ್ತಿ ಹೋದಾಗ ಅದನ್ನು ಲೋಕೋಪಯೋಗಿ ಇಲಾಖೆಯವರು ಪರಿಶೀಲಿಸಿದ ನಂತರ ಅದರಲ್ಲಿ ನುಮಾರು ಆರು ಅಡಿ ಹೂಳು ಮಣ್ಣು ಇದೆ ಎಂದು ಹೇಳಿದರು. ಈ ರೀತಿ ಎಷ್ಟೋ ಕೆರೆಗಳಲ್ಲಿ ಮಣ್ಣು ತುಂಬಿಕೊಂಡು ತೊಂದರೆಯಾಗುತ್ತಾ ಇದೆ, ನೀರು ನಿಲ್ಲುವುದಿಲ್ಲ ಎನ್ನುವುದಕ್ಕೆ ಆ ಒಂದು ಉದಾಹರಣೆಯನ್ನು ಹೇಳಿದೆ. ಇವತ್ತಿನ ದಿವಸ ನನ್ನ ತಾಲ್ಲೂಕಿನಲ್ಲಿರತಕ್ಕ ಅಭಾವ ಪರಿಸ್ಥಿತಿಯ ವಿಚಾರ ಹೇಳಬೇಕಾಗಿದ್ದರೆ ದೇಶದಲ್ಲಿ 100-150 ತಾಲ್ಲೂಕುಗಳಲ್ಲಿ ಯಾವ ಒಂದು ಅಭಾವ ಪರಿಸ್ಥಿತಿ ಇದೆಯೋ ಅದೇ ಒಂದು ಪರಿಸ್ಥಿತಿ ನಮ್ಮ ಹೊಸಕೋಟೆ ತಾಲ್ಲೂಕಿನಲ್ಲೂ ಕೂಡ ಇದೆ. ಅಲ್ಲಿ ಒಂದು ಹೆದ್ದಾರಿ ಇದೆ ಅದು ಬಹಳ ಕರ್ವ್ ಇರುವುದರಿಂದ ಅದನ್ನು ನೇರ ಮಾಡಬೇಕೆಂದು ಹೊರಟಿದ್ದಾರೆ, ಅದಕ್ಕೆ ಈ ಕೆರೆಯಲ್ಲಿರತಕ್ಕ ಹೂಳು ಮಣ್ಣನ್ನು ತೆಗೆದು ರಸ್ತೆ ನೇರ ಮಾಡುವುದಕ್ಕೆ ಹಾಕಬೇಕೆಂದು ಈ ಸಭೆಯ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೊಂದು ವಿಷಯವೇನೆಂದರೆ ಈ ಅಭಾವ ಬಂದಿರುವ ಕಾಲದಲ್ಲಿ ಬಾವಿಗಳನ್ನು ಆಳಪಡಿಸುವುದಕ್ಕೆ ಸರ್ಕಾರದವರು ಯಾವ ಅಡ್ಡಿ ಆತಂಕವೂ ಇಲ್ಲದೇ ಪ್ರೈಮರಿ ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಸಾಲ ಕೊಡಬೇಕಾವರೆ ಇತಕ್ಕ ನಿಯಮಗಳನ್ನು ನಡಿಲಪಡಿಸುವುದಾದರೆ ಹೆಚ್ಚು ನೆರವನ್ನು ಪಡೆದುಕೊಳ್ಳಲಿಕ್ಕೆ ಅವಕಾಶವಾಗುತ್ತದೆ ಎಂಬ ಸಲಹೆಯನ್ನು ಮಾಡುತ್ತಾ ಇದ್ದೇನೆ. ಅನೇಕ ರೈತರು ಬಾವಿಗಳನ್ನು ತೋಡಿಸಿ ಅದರ ಕೆಲಸ ಅರ್ಧಂಬರ್ಧವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವ ಪ್ರಕಾರ ಸಿ.ಡಿ. ಪ್ರೋಗ್ರಾಂ ಮತ್ತು ಲಬರಲೈ ನಡ್ ಸ್ಕೀಂ ಪ್ರಕಾರ 37 ಸಾವಿರ ಬಾವಿಗಳು ಆಗಬೇಕಾಗಿರತಕ್ಕ ಕಡೆ 25 ಸಾವಿರ ಬಾವಿಗಳ ಕೆಲಸ ಇನ್ನೂ ಪೂರ್ತಿಯಾಗಬೇಕಾಗಿದೆ. 12 ಸಾವಿರ ಬಾವಿಗಳು ಮಾತ್ರ ಪೂರ್ತಿಯಾಗಿವೆ. ಆದ್ದರಿಂದ ಅವುಗಳನ್ನು ಪೂರ್ಣ ಮಾಡಲು ತೀವ್ರ ಯೋಜನೆಯನ್ನು ಹಾಕಿಕೊಂಡು ರೈತರಿಗೆ ಅವಕಾಶ ಕಲ್ಪನೆ ಮಾಡಿ ಸಾಕಾದಷ್ಟು ಹಣವನ್ನು ಒದಗಿಸಬೇಕೆಂದು ಸರ್ಕಾರದವರನ್ನು ಈ ಸಭೆಯ ಮೂಲಕ ಪ್ರಾರ್ಥಿಸುತ್ತೇನೆ. ಈ ಕೆಲಸಗಳನ್ನು ಮಾಡತಕ್ಕ ವಿಧಾನ ನೋಡಿದರೆ ಬಹಳ ದುಃಖದಿಂದ ಹೇಳಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಇವತ್ತಿನ ದಿವಸ ಈ ಸಭೆಯಲ್ಲೂ ಹೇಳಿದ್ದಾರೆ ಹೊರಗಡೆಯೂ ಹೇಳಿದ್ದಾರೆ. ಎಷ್ಟೇ ಹಣ ಖರ್ಚಾಗಲಿ ಸರ್ಕಾರದವರು ಹಣ ಕೊಡುತ್ತೇವೆ ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಲು ಕೇಂದ್ರದ ಹಣವನ್ನೂ ಸಹ ಪಡೆಯುತ್ತೇವೆ ಎಂದು. ಸೆಂಟ್ರಲ್ ಸ್ಟಡಿ ಟೀಮ್ ನವರು ಬಂದಿದ್ದರು, ಅವರು ಮುಂದೆ ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಸಂಬಂಧ ಪಟ್ಟ ತಜ್ಞರು ಸರಿಯಾದ ಅಂಕಿ ಅಂಶಗಳನ್ನು ಇಟ್ಟು ಪರಿಣಾಮಕಾರಿಯಾಗಿ ಒತ್ತಾಯ ಮಾಡಿಲ್ಲ ಎಂದು ಹೇಳುವುದಕ್ಕೆ ಒಂದು ನಿದರ್ಶನವನ್ನು ಕೊಡುವುದಾದರೆ 1966-67ರಲ್ಲಿ ಖರ್ಚು ಮಾಡಿರತಕ್ಕ ಹಣ ಕೇವಲ ಶೇಕಡ 50 ಭಾಗ ಖರ್ಚು ಮಾಡಿ 1968-69ರ ಸಾಲಿಗೆ ಈಗಿನ ಪರಿಸ್ಥಿತಿಯಲ್ಲಿ ಕೇವಲ 10 ಕೋಟಿ ರೂಪಾಯಿಗಳು ನಮ್ಮ ಬಡ್ಜೆಟ್‌ನಲ್ಲಿ ಈ ಬಾಬಿಗೆ ಇಡರಾಗಿದೆ ಎಂದು ಹೇಳಿದ್ದೀರಿ. ಕಳೆದ ಮೂರು ವರ್ಷಗಳಿಂದ ಸತತವಾಗಿ ಈ ಒಂದು ಅಭಾವ ಪರಿಸ್ಥಿತಿ ಕಾಣುತ್ತಾ ಇದೆ. ಹಾಗಿರುವಾಗ ಹಣದ ಬೇಡಿಕೆಯನ್ನು ಇಡುವಾಗ ಅಧಿಕಾರಿಗಳು ಯಾವ ವೇಗದಲ್ಲಿ ಕೆಲಸ ಮಾಡುತ್ತಾರೆ ಎಂಬುದು ಬಹಳ ಮುಖ್ಯವಾದದ್ದು, ತಾಲ್ಲೂಕು ಲೆವರ್ ಸ್ಕೇರ್ಸಿಟಿ ಕಮಿಟಿ ಅಂತ ಇದೆ, ಅವರು ಮೊನ್ನೆ ತಾನೆ ತೀರ್ಮಾನ ತೆಗೆದುಕೊಂಡಿದ್ದಾರೆ; ಸರ್ಕಾರದ ಆದೇಶದ ಪ್ರಕಾರ ಯಾರು ಹಣ ಖರ್ಚು ಮಾಡಬೇಕು, ತಾಲ್ಲೂಕು ಬೋರ್ಡಿನವರೇ, ಪಿ.ಡಬ್ಲ್ಯು.ಡಿ. ಅವರೇ ಎಂಬುದು ಇವತ್ತಿಗೂ ಈ ಸಮಸ್ಯೆ ನಿವಾರಣೆಯಾಗಿಲ್ಲ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಇವತ್ತಿನ ದಿವಸ

(ಶ್ರೀ ಎನ್. ಚಿಕ್ಕೇಗೌಡ)

ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಆಗಲಿ, ಅಸಿಸ್ಟೆಂಟ್ ಕಮಿಷನರವರ ರೆವಲ್‌ನಲ್ಲಾಗಲಿ, ತಹಸೀಲ್ದಾರರ ಮಟ್ಟದಲ್ಲಾಗಲಿ ಎಷ್ಟು ಕೆಲಸ ನಡೆಯಬೇಕೋ ಅಷ್ಟು ಕೆಲಸ ನಡೆಯುತ್ತಿಲ್ಲ, ಮಧ್ಯವರ್ತಿಗಾರರು ಸೇರಿಕೊಂಡಿದ್ದಾರೆ. ನಾಮಿನಲ್ ರೋರ್ ಅಂತ ಇದೆ, ಇದನ್ನು ಇಂಪ್ಲಿಮೆಂಟ್ ಮಾಡತಕ್ಕ ಕಾಲದಲ್ಲಿ ಅನೇಕ ನ್ಯೂನತೆಗಳು ಇವೆ. ಕಂಟ್ರಾಕ್ಟ್‌ದಾರರು ಬಹಳ ಅನ್ಯಾಯ ಮಾಡುತ್ತಾ ಇದ್ದಾರೆ ಹಣದ ರೂಪದಲ್ಲಿ ಬೇಡ ಧಾನ್ಯದ ರೂಪದಲ್ಲಿ ಕೊಡಿ ಎಂದರೆ ಅದನ್ನೂ ಕೂಡ ಬ್ಲಾಕ್ ಮಾರ್ಕೆಟ್ ಮಾಡತಕ್ಕ ಜನ ಇದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಈಗ ಬಂದಿರತಕ್ಕ ಅಭಾವ ಪರಿಸ್ಥಿತಿಯನ್ನು ತನ್ನ ಒಂದು ಕುಟುಂಬದ ಪರಿಸ್ಥಿತಿ ಎಂದು ತಿಳಿದುಕೊಳ್ಳತಕ್ಕ ಅಧಿಕಾರಿಗಳು ಬಹಳ ಕಡಿಮೆ ಇದ್ದಾರೆ. ಬೇಕಾದಷ್ಟು ಹಣ ಕೊಟ್ಟರೂ ಖರ್ಚು ಮಾಡದೇ ಇರುವುದಕ್ಕೆ ಕಾರಣ ಅವರ ಮನಸ್ಸಿನ ಮೇರೆ ಪರಿಣಾಮವಾಗದೇ ಅವರು ಕರ್ತವ್ಯ ಲೋಪ ಮಾಡಿರುವುದೇ ಆಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಒಬ್ಬ ಅಧಿಕಾರಿ ಇಲ್ಲಿ ಬೇಡದವನನ್ನು ಇನ್ನೊಂದು ಕಡೆಗೆ ವರ್ಗ ಮಾಡಿದರೆ ಅಲ್ಲೂ ಅದೇ ಕೆಲಸ ಮಾಡುತ್ತಾರೆ, ಆದ್ದರಿಂದ ಅವರಿಗೆ ಸರಿಯಾಗಿ ಎಚ್ಚರಿಕೆ ಕೊಟ್ಟು, ಇಂತಹ ಒಂದು ಪರಿಸ್ಥಿತಿಯಲ್ಲಿ ಅವರು ಸರಿಯಾಗಿ ಕೆಲಸ ಮಾಡದಿದ್ದರೆ ಅವರ ಸೀನಿಯಾರಿಟಿ ಮತ್ತು ಅವರಿಗೆ ಕೊಡತಕ್ಕ ಪ್ರಮೋಷನ್‌ನ್ನು ನಿಲ್ಲಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದು ಒಬ್ಬ ಅಧಿಕಾರಿಯನ್ನು ಪರೀಕ್ಷೆ ಮಾಡತಕ್ಕ ಸಂದರ್ಭ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಅವರುಗಳಿಗೆ ಸರಿಯಾದಂತಹ ಆದೇಶವನ್ನು ಸರ್ಕಾರದವರು ಕೊಡಬೇಕೆಂದು ಈ ಸಭೆಯ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನೇಕ ಸದಸ್ಯರು ಮಾತನಾಡುತ್ತಾ, ತಾಲ್ಲೂಕು ಬೋರ್ಡ್ ಮಂಡಲಗಳ ಮುಖೇನ ಕೆಲಸ ಮಾಡಬಾರದು ಎಂದು ವಾದ ವಿವಾದಗಳು ಉಂಟಾಗುತ್ತವೆ, ಕೆಲಸ ಸರಿಯಾದ ರೀತಿಯಲ್ಲಿ ನಡೆಯುವುದಿಲ್ಲ ಎಂದು ಹೇಳಿದರು. ತಾಲ್ಲೂಕು ಅಭಿವೃದ್ಧಿ ಮಂಡಲಿಗಳೂ ಕೂಡ ನಮ್ಮ ಹಾಗೆಯೇ ಚುನಾಯಿತರಾದ ಪ್ರತಿನಿಧಿಗಳಿಂದ ಕೂಡಿದ ಸಂಸ್ಥೆಗಳು, ನಮಗೆ ಯಾರು ಓಟು ಕೊಟ್ಟು ಕಳುಹಿಸಿದ್ದಾರೋ ಅದೇ ಜನ ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಗೂ ಓಟು ಕೊಟ್ಟು ಕಳುಹಿಸಿದ್ದಾರೆ, ಅವರನ್ನು ಅಲ್ಲರತಕ್ಕವರು ಪ್ರತಿನಿಧಿಸುತ್ತಾರೆ, ಆದ್ದರಿಂದ ಅವರಿಂದಲೇ ಆಗುವುದಿಲ್ಲ ಎಂದರೆ ಬಹಳ ದುಃಖದಿಂದ ಹೇಳಬೇಕಾಗುತ್ತದೆ ಮತ್ತೆ ಯಾವ ಸಂಸ್ಥೆ ಮೂಲಕ ತಾನೇ ಮಾಡುವುದಕ್ಕೆ ಸಾಧ್ಯವಾದೀತು ? ಆದ್ದರಿಂದ ತಾಲ್ಲೂಕು ಬೋರ್ಡು ಮುಖೇನವೇ ನಮ್ಮ ಕೆಲಸವನ್ನು ಮಾಡುವುದು ಅನುಕೂಲ, ಆ ಒಂದು ತೀರ್ಮಾನವನ್ನು ಮಾಡಿರುವುದು ಸೂಕ್ತವಾಗಿದೆ ಎಂದು ನನ್ನ ಅಭಿಪ್ರಾಯ.

ಮತ್ತೊಂದು ಮುಖ್ಯವಾದ ವಿಷಯ. ಶಾಶ್ವತವಾದ ಪರಿಹಾರ ಕಾಮಗಾರಿಗಳ ವಿಷಯದಲ್ಲಿ ಸರಿಯಾದ ಯೋಜನೆಗಳನ್ನು ಸರಕಾರ ಮಾಡಿಲ್ಲ ಎಂದು ದುಃಖದಿಂದ ಹೇಳಬೇಕಾಗಿದೆ. ಹಿಂದೆ ಏಳೆಂಟು ವರ್ಷಗಳ ಕೆಳಗೆ ತಾಲ್ಲೂಕು ಮತ್ತು ಸಬ್‌ಡಿವಿಜನ್ ಮಟ್ಟದಲ್ಲಿ ಯೋಜನೆ ಮಾಡಿ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳಬೇಕೆಂದು ತೀರ್ಮಾನವಾಯಿತು. ರಾಜ್ಯ ಸರಕಾರ ಎರಡ್ಮೂ ಡಿವಿಜನ್ನುಗಳ ಅಂಕೆ ಅಂಶವನ್ನು ಸಂಗ್ರಹ ಮಾಡಿ 48 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಕಳಿಸಿತ್ತು. ಇದನ್ನು ಮತ್ತೆ ಮಾಡಬೇಕು.

ಇನ್ನೊಂದು ಮುಖ್ಯವಾದ ವಿಷಯ ವಿದ್ಯುಚ್ಛಕ್ತಿ ಬೋರ್ಡಿಗೆ ಸಂಬಂಧಪಟ್ಟದ್ದೆ. ಆ ಬೋರ್ಡು ಒಂದು ಕಮರ್ಷಿಯಲ್ ಕನ್‌ಸರ್ನ್ ಇದ್ದ ಹಾಗಿದೆ. ಯಾವ ಕೆಲಸವನ್ನು ಕೈಕೊಳ್ಳಬೇಕಾದರೂ ಅದು ಲಾಭ ಬಾರದಿದ್ದರೆ ತೆಗೆದುಕೊಳ್ಳುವುದಿಲ್ಲ. ಆದುದರಿಂದ ಸರಕಾರವೇ ವಿದ್ಯುಚ್ಛಕ್ತಿ ಇಲಾಖೆಯನ್ನು ವಹಿಸಿಕೊಂಡು ನಡೆಸಿದರೆ ಅನುಕೂಲವಾಗುತ್ತದೆ. ಈ ಬೋರ್ಡ ಯಾವ ಕೆಲಸ ಮಾಡಬೇಕಾದರೂ ಹಣ ಇಲ್ಲ, ಲಾಭವಿಲ್ಲ ಎಂದು ಹೇಳುವುದು. ಈ ದಿವಸ ಇರುವ ಕ್ಷಾಮ ಪರಿಸ್ಥಿತಿಯಲ್ಲಿ ರೈತರಿಗೆ ಅನುಕೂಲವಾಗಲ ಎಂದು ಹಣದ ವಿಚಾರದಲ್ಲಿ ಯೋಚನೆ ಮಾಡದೆ ಜನರಿಗೆ ವಿದ್ಯುಚ್ಛಕ್ತಿ ಬೋರ್ಡು ಬೇಕಾದ ಸೌಲಭ್ಯ ಒದಗಿಸಬೇಕು. ಒಂದೊಂದು ತಾಲ್ಲೂಕ್‌ನಲ್ಲಿ ಪಂಪು ಸೆಟ್ಟುಗಳಿಗೆ 200-300 ಅರ್ಜಿಗಳು ಬಂದು, ಅವುಗಳಿಗೆ ಗಮನ ಕೊಡದಿರುವುದರಿಂದ ಹಾಗೆಯೇ ಉಳಿದಿವೆ. ಅದನ್ನು ಗಮನಿಸಿ ಯಾರು ಪಂಪ್ಪುಸೆಟ್ಟು ಕೇಳುತ್ತಾರೋ ಅವರಿಗೆಲ್ಲಾ ಕೊಡುವಂತೆ ಆದೇಶ ನೀಡಬೇಕು.

ಮತ್ತೊಂದು ವಿಷಯವೇನೆಂದರೆ ಇಂದು ನಮ್ಮ ದೇಶದಲ್ಲಿ ಒಂದು ದೊಡ್ಡ ಸಮಸ್ಯೆ ಇದೆ. ಅದು ಬಾವಿ ತೋಡುವುದಕ್ಕೆ ಸಂಬಂಧಪಟ್ಟದ್ದು. ಓಪನ್ ವೆರ್ಸ್ ನಿರ್ಮಿಸುವುದು ಕಷ್ಟ. ಆದುದರಿಂದ ಜಿಯರಾಜಿಕರ್ ಇಲಾಖೆಯ ಮೂಲಕ ನಡೆದಿರುವ ಸರ್ವೆ ಅಂಕೆಅಂಶ ತರಿಸಿ ಟ್ಯೂಬ್ ವೆರ್ಸ್ ಮತ್ತು ಬೋರ್‌ವೆರ್ಸ್ ನಿರ್ಮಿಸಲು ಇರುವ ಯಂತ್ರಗಳನ್ನು ತರಿಸಿ ರೈತರಿಗೆ ಕೆಲಸ ಮಾಡಿ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ಇಂದು ಜನರಿಗೆ ಆಹಾರ ಬೇಕಾಗಿದೆ. ಈಗ ಬೆಳೆ ಸರಿಯಾಗಿ ಆಗದಿರುವುದರಿಂದ ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರೆ ಬಹಳ ಕಷ್ಟ ಬರಬಹುದು. ಇದರ ವಿಷಯದಲ್ಲಿ ಹೆಚ್ಚು ಗಮನಕೊಟ್ಟು ಬಫರ್ ಸ್ಟಾಕ್ ಇಡಲು ಪ್ರಯತ್ನ ಮಾಡಬೇಕು. ಗ್ರಾಮಾಂತರಗಳಲ್ಲಿ ಈಗ ಕೊಡುತ್ತಿರುವ ಮೈಲೋ ಸಾಲದು, ಅದು ಕೂಲಿಗಾರರಿಗೆ ಬೇಕು, ನಮ್ಮ ರಾಜ್ಯಕ್ಕೆ 10 ಸಾವಿರ ಟನ್ ಬೇಕೆಂದು ಕೇಳಿರುವುದು ಸಾಲದಿರುವುದರಿಂದ ಕೇಂದ್ರ ಸರಕಾರದಿಂದ ಹೆಚ್ಚು ಪಡೆಯಬೇಕು. ಆಹಾರ ಪದಾರ್ಥಗಳಿಗೆ ರೈತರಿಗೆ ಕೊಡುವ ಬೆಲೆ ಸಾಲದು, ಕನ್‌ಸ್ಯೂಮರ್ಸ್‌ಗೂ ಬೆಲೆ ಹಾಸ್ತಿಯಾಗಿದೆ. ಸೇಲ್ಸ್ ಟ್ಯಾಕ್ಸನ್ನು ಆಹಾರ ಪದಾರ್ಥಗಳ ಮೇಲೆ ಹಾಕುವುದರಿಂದ ಸುಮಾರು ಎರಡೂವರೆ ಕೋಟಿ ರೂಪಾಯಿ ಸರಕಾರಕ್ಕೆ ಬರುತ್ತದೆ. ರೈತರು ಹೆಚ್ಚು ಬೆಳೆಯಬೇಕಾದರೆ ಅವರಿಗೆ ಬೆಳೆದ ಪದಾರ್ಥಗಳಿಗೆ ಹೆಚ್ಚು ಬೆಲೆ ಕೊಡಬೇಕು ಮತ್ತು ಕನ್‌ಸ್ಯೂಮರ್ಸ್‌ಗೂ ಹೆಚ್ಚು ಟ್ಯಾಕ್ಸ್ ಮಾಡಬಾರದು.

ಸಾಯಿಲ್ ಕನ್‌ಸರ್ವೇಷನ್ ಕೆಲಸ ಬಹಳ ಮುಖ್ಯವಾದುದು. ಅದನ್ನು ಕಾರ್ಯಗತ ಮಾಡಲು ಸಿಬ್ಬಂದಿ ಸಾಲದು. ಈಗ ಮೂರು—ನಾಲ್ಕು ತಾಲ್ಲೂಕುಗಳಿಗೆ ಒಂದು ಸಬ್ ಡಿವಿಜನ್ ಮಾಡಿದ್ದಾರೆ ಅದು ಸಾಲದು, ಪ್ರತಿಯೊಂದು ತಾಲ್ಲೂಕಿಗೂ ಒಂದು ಸಬ್ ಡಿವಿಜನ್ ಕೊಟ್ಟು ಸಿಬ್ಬಂದಿ ಹೆಚ್ಚು ಮಾಡಿ ತೀವ್ರವಾಗಿ ಕೆಲಸ ಮಾಡಬೇಕು. ಇದಕ್ಕೆ ಬೇಕಾದಷ್ಟು ಹಣವಿದೆ. ಆದರೆ ಖರ್ಚಾಗುತ್ತಿಲ್ಲ, ಕಾರ್ಯಗತ ಮಾಡುವುದು ನಿಧಾನವಾಗುತ್ತಿದೆ. ಅದುದರಿಂದ ಹೆಚ್ಚು ಸಿಬ್ಬಂದಿಯನ್ನು ನೇಮಿಸಿ ಕೆಲಸ ತ್ವರಿತವಾಗಿ ಮಾಡಬೇಕೆಂದು ಹೇಳುತ್ತೇನೆ.

ನನ್ನ ತಾಲ್ಲೂಕಿನ ವಿಚಾರ ಹೇಳುವುದಾದರೆ ಅಲ್ಲಿ ವಿದ್ಯುಚ್ಛಕ್ತಿ ಮತ್ತು ಪಂಪುಸೆಟ್ಟುಗಳು ಬೇಕಾಗಿವೆ. ಅಭಾವ ಪರಿಸ್ಥಿತಿ ಇರುವುದರಿಂದ ನೀರಾವರಿ ಬಾವಿಗಳಿಗೆರ್ಾ ವಿದ್ಯುಚ್ಛಕ್ತಿ ಮತ್ತು ಪಂಪುಸೆಟ್ಟು ಒದಗಿಸಬೇಕು.

ನಮ್ಮ ತಾಲ್ಲೂಕಿನಲ್ಲಿ ರಾಗಿ ಬೆಳೆ ಪೂರ್ಣವಾಗಿ ಒಣಗಿಹೋಗಿದೆ, ಮುಂದೆ ಬಿತ್ತನೆಗೆ ಕೂಡ ರಾಗಿ ಒದಗುವಂತಿಲ್ಲ. ಈ ತಾಲ್ಲೂಕಿಗೆ ಕೊಡುವ 300 ಕ್ವಿಂಟಾರ್ ಮೈಲೋ ಸಾಲದು. ಆದುದರಿಂದ ಅಭಾವ ಪರಿಸ್ಥಿತಿಯಿರುವ ಎರ್ಾ ತಾಲ್ಲೂಕುಗಳಿಗೂ ಕೂಡ ಹೆಚ್ಚು ಆಹಾರ ಪದಾರ್ಥಗಳನ್ನು ಮತ್ತು ದನಗಳಿಗೆ ಮೇವನ್ನು ಒದಗಿಸಿ ಶಾಶ್ವತವಾದ ಪರಿಹಾರ ಕ್ರಮಗಳನ್ನು ಕೈಕೊಳ್ಳಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಕ್ತಾಯಮಾಡುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋರಾರ).—ಮಾನ್ಯ ಸಭಾಪತಿಯವರೇ, ಕಳೆದ 50–60 ವರ್ಷಗಳಿಂದ ಕಾಣದ ಒಂದು ಭೀಕರ ಕ್ಷಾಮ ಪರಿಸ್ಥಿತಿಯ ದವಡೆಯಲ್ಲಿ ರಾಜ್ಯದ ಜನರು ಸಿಕ್ಕಿರುವ ಸಂದರ್ಭದಲ್ಲಿ ನಾವು ಈ ದಿನ ಇಲ್ಲಿ ಸೇರಿದ್ದೇವೆ. ಈ ಪರಿಸ್ಥಿತಿಯು ದಿನದಿನಕ್ಕೆ ಮತ್ತೂ ತೀವ್ರವಾದ ಮತ್ತು ಭೀಕರವಾದ ಸ್ವರೂಪವನ್ನು ತಾಳುತ್ತಿದೆ. ಕ್ಷಾಮ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದಿಟ್ಟಿರುವ ಹೇಳಿಕೆ ಒಂದು ದಿಟ್ಟತನದ ಹೇಳಿಕೆಯಾಗಿದೆ. ಅವರು ರಾಜ್ಯದಲ್ಲಿರುವ ವಾಸ್ತವ ಪರಿಸ್ಥಿತಿಯನ್ನು ಮರೆಮಾಡದೆ ಈ ಸಭೆಯ ಮುಂದಿಟ್ಟಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಹೇಳಿಕೆ ನೀಡುವಾಗ ಕೇಂದ್ರ ಸರ್ಕಾರದ ಅಧ್ಯಯನ ತಂಡವು ಜೂನ್ 20-21 ರಲ್ಲಿ ರಾಜ್ಯಕ್ಕೆ ಭೇಟಿ ಕೊಟ್ಟಾಗ ರಾಜ್ಯ ಸರ್ಕಾರ ಸುಮಾರು 8.3 ಕೋಟಿ ರೂಪಾಯಿಗಳನ್ನು ಕೇಳಿತ್ತು, ಆದರೆ 2.5 ಕೋಟಿ ಮಾತ್ರ ಕೊಡಲು ಕೇಂದ್ರ ಸರ್ಕಾರ ಒಪ್ಪಿದೆ ಎಂದು ತಿಳಿಸಿದ್ದಾರೆ. ಇದು 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂದು ಹೇಳುವಂತಿದೆ. ಅದು ಎರಡು ವಾರಕ್ಕೆ ಕೂಡ ಸಾಕಾಗುವುದಿಲ್ಲ. ಅದುದರಿಂದ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಲ್ಲಿ ತೀವ್ರವಾಗಿ ಒತ್ತಾಯ ಮಾಡಿ ಹೆಚ್ಚು ಪಡೆಯಬೇಕು. ಕನಿಷ್ಠಪಕ್ಷ 25 ಕೋಟಿಯಾದರೂ ಕೇಂದ್ರ ಕೊಡದಿದ್ದರೆ ಮಂತ್ರಿಮಂಡಲ ರಾಜೀನಾಮೆ ಕೊಡುವುದೆಂದು ತಿಳಿಸಬೇಕು. ಈ ಬಗ್ಗೆ ಒತ್ತಾಯಿಸಬೇಕೆಂದು ನಾನು ಹೇಳುತ್ತೇನೆ. ಸದಸ್ಯರೂ ಕೂಡ ಅದರ ಜೊತೆಯಲ್ಲಿ ಒತ್ತಾಯಮಾಡಿ ಎಲ್ಲರೂ ಕೂಡ ರಾಜೀನಾಮೆ ಕೊಡಲು ತಯಾರಾಗಿದ್ದೇವೆಂದು ತಿಳಿಸುತ್ತೇವೆ. ಕೇಂದ್ರ ಸರ್ಕಾರದ ತಂಡ ರಾಜ್ಯಕ್ಕೆ ಭೇಟಿ ಕೊಟ್ಟು ಆಗಲೇ 3 ತಿಂಗಳಾಗಿದೆ, ಆಗಿನ ಪರಿಸ್ಥಿತಿಗೂ ಈಗಿರುವುದಕ್ಕೂ ಅಜಗಜಾಂತರ ವೈತ್ಯಾಸವಿದೆ. ಅವರು ಭೇಟಿಕೊಟ್ಟಾಗ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಮಳೆ ಬರಬಹುದು, ಪರಿಸ್ಥಿತಿ ಸುಧಾರಿಸಬಹುದು ಎಂಬ ಆಸೆ ಇತ್ತು. ಆದರೆ ಸೆಪ್ಟೆಂಬರ್ ತಿಂಗಳು ಬಂದರೂ ಕೂಡ ಮಳೆ ಸರಿಯಾಗಿ ಬರಲಿಲ್ಲ, ಬರುವ ಸೂಚನೆಯೂ ಕಾಣಲಿಲ್ಲ. ಆದುದರಿಂದ ಕೇಂದ್ರ ಸರ್ಕಾರಕ್ಕೆ ಈ ಕೂಡಲೆ ಅವಶ್ಯಕವಾದರೆ

(ಶ್ರೀ ಪಿ. ವೆಂಕಟಗಿರಿಯಪ್ಪ)

ಇನ್ನೊಂದು ನಿಯೋಗವನ್ನು ಕಳಿಸಿ ಈಗಿನ ಪರಿಸ್ಥಿತಿ ನೋಡಿ ಕನಿಷ್ಠಪಕ್ಷ 25 ಕೋಟಿ ರೂಪಾಯಿ ಗಳನ್ನಾದರೂ ಒದಗಿಸಬೇಕು, ಇಲ್ಲದಿದ್ದರೆ ನಾವು ರಾಜೀನಾಮೆ ಕೊಡುತ್ತೇವೆಂದು ಹೇಳಬೇಕು ಎಂದು ನಾನು ಒತ್ತಾಯಮಾಡುತ್ತೇನೆ.

4-00 P. M.

ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಕೃಷಿ ಕಾರ್ಮಿಕರು ಮತ್ತು ಸಣ್ಣ ಹಿಡುವಳಿ ದಾರರಲ್ಲಿ ಉದ್ಯೋಗಾವಕಾಶ ಬೇಕಾದವರ ಸಂಖ್ಯೆ 21.5 ಲಕ್ಷ ಎಂದು ಎರಡು ತಿಂಗಳ ಕೆಳಗೆ ಅಂದಾಜು ಮಾಡಿರುವುದಾಗಿ ತಿಳಿಸಿದ್ದಾರೆ. ಅವರೇ ಹೇಳುವ ರೀತಿಯಲ್ಲಿ 43 ಲಕ್ಷ ಜನ ಉದ್ಯೋಗಕ್ಕೆ ಹಾತೊರೆಯುತ್ತಿರುವ ಸಣ್ಣ ಹಿಡುವಳಿದಾರರು ಮತ್ತು ವ್ಯವಸಾಯ ಕೂಲಿಗಾರರಿದ್ದಾರೆ. ಸರ್ಕಾರದ ಲೆಕ್ಕದ ಪ್ರಕಾರವೇ 43 ಲಕ್ಷ ಜನರಿದ್ದರೆ ಈಗಿನ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚು ಇರಬಹುದು. ಕನಿಷ್ಠ ಪಕ್ಷ 50 ಲಕ್ಷ ಜನಗಳಿಗಾದರೂ ರಾಜ್ಯದಲ್ಲಿ ಉದ್ಯೋಗ ದೊರಕಿಸಿಕೊಡದೆ ವಿಧಿ ಇಲ್ಲವಾಗಿದೆ. ಹಳ್ಳಿ ಗಳಲ್ಲಿ ಮುಖ್ಯವಾಗಿ ವ್ಯವಸಾಯ ಕೂಲಿಗಾರರಾಗಿರುವರು ಹರಿಜನರು. ಅವರ ಪರಿಸ್ಥಿತಿ ತೀರ ಚಿಂತಾಜನಕವಾಗಿದೆ. ನಾನು ಶಾಸನ ಸಭೆಗೆ ಬರುವುದಕ್ಕೆ ಮೊದಲು ಕೆಲವು ಹಳ್ಳಿಗಳಿಗೆ ಹೋಗಿದ್ದೆ. ಹಳ್ಳಿಗಳಲ್ಲಿ ಏನೂ ಕೆಲಸವಿಲ್ಲದೆ, ಅನ್ನವಿಲ್ಲದೆ, ಮರಗಳ ಕೆಳಗೆ ಜನ ಕೂತಿರತಕ್ಕ ದೃಶ್ಯ ವನ್ನು ನೋಡಿದೆರೆ, ಈಗಲೇ ಪರಿಸ್ಥಿತಿ ಈ ಪ್ರಕಾರವಾದರೆ ಇನ್ನೂ ಒಂದೆರಡು ತಿಂಗಳಲ್ಲಿ ಎಂಥ ಪರಿಸ್ಥಿತಿಯನ್ನು ಹಳ್ಳಿಗಳಲ್ಲಿ ಕಾಣಬಹುದು ಎಂದು ಯೋಚನೆ ಮಾಡುವುದಕ್ಕೇ ಭಯವಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಪೂರ್ಣ ಒತ್ತಾಯ ಮಾಡಿ ಹೆಚ್ಚು ಹಣವನ್ನು ಪಡೆಯಬೇಕು.

ಕ್ಷಾಮ ಪರಿಹಾರಕ್ಕಾಗಿ, ಕ್ಷಾಮ ಬಂದಾಗ ಏನಾದರೂ ಒಂದು ಕಾರ್ಯಕ್ರಮ ಮಾಡುವುದು ಮತ್ತು ಮಳೆ ಬಂದರೆ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಅದನ್ನು ಹಿಂದಕ್ಕೆ ತಳ್ಳುವುದು ನಮ್ಮ ಸರ್ಕಾರದ ಪದ್ಧತಿಯಾಗಿದೆ. ಈಗ್ಗೆ ಮೂರು ವರ್ಷಗಳ ಹಿಂದೆ ಕಂದಾಯ ಮಂತ್ರಿಗಳಾಗಿದ್ದ ಮಾನ್ಯ ಕೃಷ್ಣಪ್ಪನವರು 280 ಕೋಟಿ ರೂಪಾಯಿಗಳ ಒಂದು ಬೃಹತ್ ಯೋಜನೆಯನ್ನು ಸರ್ಕಾರ ತಯಾರಿಸಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ; ಕೇಂದ್ರ ಸರ್ಕಾರದಿಂದ ಒಪ್ಪಿಗೆ ಬಂದರೆ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಕೈಗೊಂಡು ಇನ್ನು ಮುಂದೆ ಯಾವುದೇ ಭಾಗದ ಜನರು ಕ್ಷಾಮಕ್ಕೆ ತುತ್ತಾಗದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆಂದು ಈ ಸಭೆಗೆ ತಿಳಿಸಿದರು. ಅವರು ಈಗ ಮಂತ್ರಿ ಗಳಾಗಿಲ್ಲ. ಅವರು ಹೋದಮೇಲೆ ಈ ಯೋಜನೆ ಮಾಯುವಾಯಿತೋ ಅಥವಾ ಮೊದಲೇ ಮಾಯ ವಾಗಿತ್ತೋ ಗೊತ್ತಿಲ್ಲ. ಆ ಬೃಹತ್ ಯೋಜನೆ ಏನಾಗಿದೆ ಎಂದು ಇದುವರೆಗೂ ಯಾರಿಗೂಗೊತ್ತಿಲ್ಲ. ಮನೆಗೆ ಬೆಂಕಿ ಬಿದ್ದಾಗ ನೀರಿಗಾಗಿ ಬಾವಿ ತೋಡತಕ್ಕ ನೀತಿಯನ್ನು ಸರ್ಕಾರ ಕೈ ಬಿಡಬೇಕು. ಇಂಥ ಕ್ಷಾಮ ಪರಿಸ್ಥಿತಿ ಆಗಾಗ ಒದಗುತ್ತಿರುವುದರಿಂದ ರಾಜ್ಯದಲ್ಲಿ ಒಂದು ಕ್ಷಾಮ ಪರಿಹಾರ ಕಮಿಷನ್ ನೇಮಕ ಮಾಡಬೇಕು ಮತ್ತು ಅದಕ್ಕೆ ರಾಜ್ಯದ ಆದಾಯದಲ್ಲಿ ಕನಿಷ್ಠಪಕ್ಷ 5—10 ಪರ್ಸೆಂಟ್ ಹಣವನ್ನು ಪ್ರತಿ ವರ್ಷವೂ ವಿಂಸಲಾಗಿಡಬೇಕು. ಕೇಂದ್ರದಲ್ಲಿ ಕೂಡ ಈ ರೀತಿಯ ವ್ಯವಸ್ಥೆ ಇರಬೇಕು. ಇದರಿಂದ ದೇಶದಲ್ಲಿ ಕಷ್ಟ ಪರಿಸ್ಥಿತಿ ಬಂದಾಗ ಹಣಕ್ಕಾಗಿ ಬೇರೆಯವರನ್ನು ಕಾದು ಕುಳಿತಿರತಕ್ಕ ಅವಕಾಶವಿಲ್ಲದೆ ಇರುತ್ತದೆ.

ಕ್ಷಾಮಡಾಮಾರಗಳಿಗೆ ತುತ್ತಾಗತಕ್ಕುದನ್ನು ಹೋಗಲಾಡಿಸುವುದಕ್ಕೆ ಏನೂ ಮಾರ್ಗವಿಲ್ಲ. ಅದನ್ನು ಅನುಭವಿಸದೆ ವಿಧಿ ಇಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ದೇವರು ಮಳೆ ಕೊಡಬೇಕು, ಎಲ್ಲ ಸರಿಹೋಗಬೇಕು ಎಂದು ಮಂತ್ರಿಗಳು ಕೆಲವರು ಸಹಿತ ಹೇಳುತ್ತಾರೆ. ಈಗಿನ ಆಧುನಿಕ ಯುಗದಲ್ಲಿ, ವೈಜ್ಞಾನಿಕ ಪ್ರಪಂಚದಲ್ಲಿ ಆ ರೀತಿ ಹೇಳುವುದನ್ನು ಕೇಳಿ ಆಶ್ಚರ್ಯವಾಗುತ್ತದೆ. ಅಮೇರಿಕಾ ದೇಶದಲ್ಲಿ ಟೆಕ್ಸಾಸ್ ಪ್ರಾಂತದಲ್ಲಿ ವರ್ಷಕ್ಕೆ ಕೇವಲ 7 ಅಂಗುಲ ಮಳೆಯಾಗುತ್ತದೆ, ಅದು ಈಗ ಬಹಳ ಸಂಪದ್ಯುಕ್ತವಾದ ವ್ಯವಸಾಯದಲ್ಲಿ ಅಭಿವೃದ್ಧಿ ಪಡೆದಿರತಕ್ಕ ಒಂದು ರಾಜ್ಯವಾಗಿದೆ. ಇದಕ್ಕೆ ಕಾರಣವೇನು ಎಂದರೆ ಭೂಮಿಯಲ್ಲಿರತಕ್ಕ ಜಲವನ್ನು ಮೇಲಕ್ಕೆ ತರುವ ವ್ಯವಸ್ಥೆಮಾಡಿ, ಅಲ್ಲಿ ಈಗ ನೀರಿನ ಅಭಾವವಿಲ್ಲದೆ ಆ ರಾಜ್ಯ ಸಂಪದ್ಯುಕ್ತವಾಗಿ, ವ್ಯವಸಾಯದಲ್ಲಿ ಅಭಿವೃದ್ಧಿ ಆಗಿರತಕ್ಕ ಪ್ರದೇಶವಾಗಿದೆ. ಕ್ಷಾಮಡಾಮಾರಗಳಿಗೆ ಈಡಾಗಿರತಕ್ಕ, ಮುಖ್ಯವಾಗಿ ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು, ಬೆದರೆ ಮತ್ತು ಇನ್ನೂ ಕೆಲವು ಜಿಲ್ಲೆಗಳಲ್ಲಿ ಈಗ ಇರುವ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಬಹುತೇಕ ಪ್ರದೇಶಗಳಲ್ಲಿ ಭೂಮಿಯ ಒಳಗೆ ಇರುವ ನೀರನ್ನು ತೆಗೆದು ವ್ಯವಸಾಯ ಮಾಡುವ ವ್ಯವಸ್ಥೆಯನ್ನು ಮಾಡಿದರೆ ಖಂಡಿತ

ವಾಗಿಯೂ ಮಳೆ ಬಾರದೆ ಇದ್ದರೂ ಕೂಡ ಜನ ತೊಂದರೆ ಇಲ್ಲದೆ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಕೆಲವು ಕಡೆ ಬೋರ್‌ವೆಲ್ ಹಾಕಿ ಅದರಿಂದ ಯಥೇಚ್ಛ ವಾಗಿ ಕೆಲವಾರು ಬಾವಿಗಳಲ್ಲಿ ನೀರು ಬಂದಿದೆ. ಇದಕ್ಕಾಗಿ ಹೆಚ್ಚು ಬೋರ್ ಮಾಡುವ ಯಂತ್ರ ಗಳನ್ನು ತರಿಸಬೇಕು. ಬ್ಲಾಸ್ಟರ್ ಯಂತ್ರಗಳು ಮತ್ತು ಬೋರವೆಲ್ ಯಂತ್ರಗಳನ್ನು ತರಿಸುವುದಕ್ಕಾಗಿ 23 ಲಕ್ಷ ರೂಪಾಯಿಗಳನ್ನು ಒದಗಿಸಿರುವುದಾಗಿ ಹೇಳಿದ್ದಾರೆ. ಇದಕ್ಕಾಗಿ 50 ಲಕ್ಷ ರೂಪಾಯಿ ಖರ್ಚಾದರೂ ಪರವಾ ಇಲ್ಲ, ಆ ಯಂತ್ರಗಳನ್ನು ತರಿಸುವ ವ್ಯವಸ್ಥೆ ಮಾಡ ಬೇಕು. ನಂಬಂಧ ಪಟ್ಟಫೈಲ್ ರೆವೆನ್ಯೂ ಸೆಕ್ರೆಟೇರಿಯಟ್, ಹಣಕಾಸು ಇಲಾಖೆ ಇಲ್ಲೆಲ್ಲ ನುತ್ತಿಕೊಂಡು ಅದರ ಬಗ್ಗೆ ಒಂದು ಆಜ್ಞೆ ಹೊರಬೀಳಬೇಕಾದರೆ ಬಹಳ ನಿಧಾನವಾಗಬಹುದು. ಅದಕ್ಕೆ ಅವಕಾಶವಿಲ್ಲ ದಂತೆ ಯಂತ್ರಗಳನ್ನು ಬೇಗ ತರಿಸಿ, ಬಾವಿಗಳಲ್ಲಿ ಈಗಲೇ ನೀರಿಲ್ಲದೆ ಇರುವುದರಿಂದ ಬೋರ್‌ವೆಲ್ ಮುಖಾಂತರ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಸರ್ಕಾರ ಖರ್ಚು ಮಾಡುತ್ತಿರುವ ಹಣದಲ್ಲಿ ಕಾಲು ಭಾಗ ಸಹಿತ ಕಷ್ಟದಲ್ಲಿರುವ ರೈತರಿಗೆ ಸಿಕ್ಕುತ್ತಿಲ್ಲ. ಮುಕ್ಕಾಲು ಭಾಗದಷ್ಟು ಹಣ ದಳ್ಳಾಳಿಗಳಿಗೆ, ಮಧ್ಯವರ್ತಿ ಜನಗಳಿಗೆ ಸೇರುತ್ತಿದೆ. ಬಹುಕಾಲದಿಂದ ಕ್ಷಾಮ ಪರಿಹಾರ ಕಾರ್ಯಗಳು ರೆವೆನ್ಯೂ ಇಲಾಖೆಯಿಂದ ನಡೆಸಲ್ಪಡುತ್ತಿದ್ದುವು. ಈ ಸಲ ಅದನ್ನು ತಾಲ್ಲೂಕು ಬೋರ್ಡ್‌ಗಳಿಗೆ ಯಾವ ಕಾರಣದಿಂದ ಕೊಟ್ಟಿದ್ದಾರೆನ್ನುವುದು ಗೊತ್ತಾಗುವುದಿಲ್ಲ. ತಾಲ್ಲೂಕು ಬೋರ್ಡ್ ಚುನಾವಣೆಗಳು ಬಹಳ ಹತ್ತಿರ ಬಂದಿವೆ, ಇದಕ್ಕೆ ತಮ್ಮ ದಳ್ಳಾಳಿಗಳಿಗೆ, ಉಮೇದುವಾರರಿಗೆ ಹಣ ಸಂಪಾದನೆ ಮಾಡುವುದಕ್ಕೆ ಅವಕಾಶವಾಗಲಿ ಎಂದು ತಾಲ್ಲೂಕು ಬೋರ್ಡ್‌ಗಳಿಗೆ ಕೊಟ್ಟಿದ್ದಾರೆಂದು ನನಗಾದರೂ ಕಾಣಿಸುತ್ತದೆ. ರೆವೆನ್ಯೂ ಮಂತ್ರಿಗಳು ವೈಯಕ್ತಿಕವಾಗಿ ಬಹಳ ಒಳ್ಳೆಯವರು ಮತ್ತು ನಿಗರ್ವಿಗಳು ಅಗಿ ಕಾಣುತ್ತಾರೆ. ಆದರೆ ತಮ್ಮ ಇಲಾಖೆಯಲ್ಲಿದ್ದ ಕೆಲಸವನ್ನು ತಾಲ್ಲೂಕು ಬೋರ್ಡ್‌ಗಳಿಗೆ, ಅದೂ ಚುನಾವಣೆಗಳು ನಡೆಯಬೇಕಾದ ಸಮಯದಲ್ಲಿ, ಕೊಟ್ಟಿರುವುದರಿಂದ ರಾಜ್ಯಕ್ಕೆ ಅನ್ಯಾಯ ಮಾಡಿದ್ದಾರೆ ಎಂದು ಹೇಳದೆ ವಿಧಿ ಇಲ್ಲ.

ದೇಶದಲ್ಲಿ ಭೀಕರ ಕ್ಷಾಮ ಪರಿಸ್ಥಿತಿ ಇರುವುದರಿಂದ ತಾಲ್ಲೂಕು ಬೋರ್ಡ್ ಚುನಾವಣೆಗಳನ್ನು ಮುಂದೂಡಿ ಈಗಿರುವ ತಾಲ್ಲೂಕು ಬೋರ್ಡ್‌ಗಳನ್ನು ಮುಂದುವರಿಸಲು ಸರ್ಕಾರ ಯೋಚನೆ ಮಾಡುತ್ತಿದೆಯೆಂದು ತಿಳಿದು ಬಂದಿದೆ. ಚುನಾವಣೆಗಳನ್ನು ಮುಂದೆ ಹಾಕುವುದರಲ್ಲಿ ಅಭ್ಯಂತರ ವಿಲ್ಲ. ಆದರೆ ಯಾವುದೇ ಕಾರಣದಿಂದ, ನಾಲ್ಕು ವರ್ಷ ಅವಧಿ ಇದ್ದ ತಾಲ್ಲೂಕು ಬೋರ್ಡ್‌ಗಳಿಗೆ 8 ವರ್ಷಗಳವರೆಗೂ ಈಗಾಗಲೇ ಮುಂದುವರಿಸಿಕೊಂಡು ಬಂದಿರುವುದರಿಂದ, ಅವುಗಳನ್ನು ಇನ್ನು ಮುಂದುವರಿಸಬಾರದು. ಚುನಾವಣೆಗಳನ್ನು ಮುಂದೂಡಬೇಕು ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ ಈಗಿರುವ ತಾಲ್ಲೂಕು ಬೋರ್ಡ್‌ಗಳನ್ನು ರದ್ದುಮಾಡಿ ಅದರ ಸ್ಥಾನದಲ್ಲಿ ಅಡಳಿತಾಧಿಕಾರಿಗಳನ್ನು ನೇಮಕಮಾಡಿ ಅವರ ಮುಖಾಂತರ ತಾಲ್ಲೂಕು ಬೋರ್ಡ್ ಆಡಳಿತ ಮತ್ತು ಕೆಲಸಕಾರ್ಯಗಳನ್ನು ನಡೆಸಬಹುದು.

ಹಣವನ್ನು ಖರ್ಚು ಮಾಡುವಾಗ ಪ್ರಯೋಜನವಿಲ್ಲದ ಕೆಲಸಗಳಿಗೆ ಖರ್ಚು ಮಾಡಬಾರದು. ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿರುವ ಪ್ರಕಾರ ಒಂದೊಂದು ತಾಲ್ಲೂಕಿಗೆ 10—10 ಬಾವಿಗಳನ್ನು ತೋಡಿದರೆ ಸಾಲದು, ಇನ್ನೂ ಹೆಚ್ಚು ಬಾವಿಗಳ ಕೆಲಸವಾಗಬೇಕು. ಕೆರೆಗಳಲ್ಲಿ ಹೂಳು ತೆಗೆಸುವುದು, ಕಾಲುವೆಗಳನ್ನು ಅಗೆಸುವುದು ಇಂಥ ಕೆಲಸಗಳನ್ನು ಮಾಡುತ್ತೇವೆಂದು ಹೇಳುವುದು ಶುದ್ಧ ಮೋಸ. ಇರತಕ್ಕ ಕಾಲುವೆಗಳ ಮಣ್ಣನ್ನು ಆ ಕಡೆ, ಈ ಕಡೆ ಹಾಕಿ ಮಣ್ಣು ಕೆಲಸ ಮಾಡಿರುವುದಾಗಿ ಸಾವಿರಾರು ರೂಪಾಯಿ ಖರ್ಚು ತೋರಿಸುವುದಲ್ಲದೆ, ಇಂಥ ಇತರ ಕೆಲಸಗಳನ್ನು ಮಾಡಿರುವುದಾಗಿ ತೋರಿಸಿ ಸಾವಿರಾರು ರೂಪಾಯಿಗಳನ್ನು ಮಧ್ಯವರ್ತಿ ಜನರು ಸಂಪಾದನೆ ಮಾಡುತ್ತಿದ್ದಾರೆ. ಇಂಥ ಕೆಲಸಗಳು ಕೋಲಾರ ಜಿಲ್ಲೆಯಲ್ಲಿ ಲಂಗು ಲಗಾಮಿಲ್ಲದೆ ನಡೆಯುತ್ತಿವೆ. ನನಗೆ ಬಂದಿರುವ ಸಮಾಚಾರದ ಪ್ರಕಾರ ಕೋಲಾರ ಜಿಲ್ಲೆಯಿಂದ ಬಂದಿರುವ ರಾಜ್ಯ ಮಂತ್ರಿಗಳಾದ ಎಚ್. ಸಿ. ಲಿಂಗಾರೆಡ್ಡಿ ಅವರ ಪೂರ್ಣ ಬೆಂಬಲ ಕೂಡ ಇದಕ್ಕೆ ಇದೆ ಎಂದು ಗೊತ್ತಾಗಿದೆ. ಆದುದರಿಂದ ತಾಲ್ಲೂಕು ಬೋರ್ಡ್‌ಗಳನ್ನು ಯಾವ ಕಾರಣದಿಂದಲೂ ಮುಂದು ವರಿಸಬಾರದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನೀರಾವರಿ ಬಾವಿಗಳಿಗೆ ಕೊಡುವ ಹಣದಲ್ಲಿ ಮುಕ್ಕಾಲು ಭಾಗವನ್ನು ಸಾಲವಾಗಿಯೂ, ಕಾಲು ಭಾಗವನ್ನು ನಹಾಯ ಧನ ಎಂಬುದಾಗಿಯೂ ಪರಿಗಣಿಸಬೇಕು ಎಂಬುದಾಗಿ ಹೇಳಿದ್ದಾರೆ. ಇದು ಒಳ್ಳೆಯ ಉದ್ದೇಶ. ಆದರೆ ಯಾವ ಕಾರಣದಿಂದಲೂ ಬಾವಿಗಳಿಗಾಗಿ ಕೊಡುವ ಹಣವನ್ನು ಕಾಲುವೆಗಳ ಕೆಲಸಕ್ಕೆ, ಕೆರೆಗಳ ಹೂಳು ತೆಗೆಸುವುದಕ್ಕೆ ಅಥವಾ ಇಂಥ ಬೇರೆ ಕೆಲಸಗಳಿಗೆ ಖರ್ಚು ಮಾಡಬಾರದೆಂದು ತಿಳಿಸುತ್ತೇನೆ.

(ಶ್ರೀ ಪಿ. ವೆಂಕಟಗಿರಿಯಪ್ಪ)

ಭೂ ಅಡಮಾನ ಬ್ಯಾಂಕುಗಳಿಗೆ ಹಿಂದಿನ ವರ್ಷಗಳಲ್ಲಿ ಕೊಟ್ಟ ಹಣದಲ್ಲಿ ಕಾಲು ಭಾಗವನ್ನು ಕೂಡ ಈ ವರ್ಷ ಕೊಟ್ಟಿಲ್ಲ. ಈ ವರ್ಷ ಒಂದೊಂದು ತಾಲ್ಲೂಕಿಗೆ ನಾಲ್ಕೈದು ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದಾರೆ.

ಕ್ಷಾಮಪರಿಹಾರ ಕೆಲಸಗಳಿಗಾಗಿ ಖರ್ಚು ಮಾಡುವ ಹಣವನ್ನು ರಾಜಕೀಯಕ್ಕೆ ಉಪಯೋಗಿಸಿ ಕೊಳ್ಳಬೇಡಿ. ತಾಲ್ಲೂಕು ಬೋರ್ಡ್ ಮುಖಾಂತರ ಏನು ಹಣವನ್ನು ಖರ್ಚು ಮಾಡಬೇಕೆಂದಿದ್ದೀರೋ ಅದನ್ನು ತಾಲ್ಲೂಕು ಬೋರ್ಡ್‌ಗಳಿಗೆ ಕೊಡಬೇಡಿ. ಬಾವಿಗಳನ್ನು ತೋಡಿಸಲು ನಾಲ ಕೊಟ್ಟರೆ ಅದರಿಂದ ಅನುಕೂಲವಾಗುತ್ತದೆ. ಹಣವನ್ನು ವಿತರಣೆ ಮಾಡುವಾಗ ಒಂದೇ ಪ್ರದೇಶಕ್ಕೆ ಕೊಟ್ಟರೆ ಕ್ಷಾಮ ಪರಿಹಾರವಾಗುವುದಿಲ್ಲ. ಯಾವ ಪ್ರದೇಶದಲ್ಲಿ ಗಂಡಾಂತರ ಭೀಕರ ಕ್ಷಾಮ ಇದೆಯೋ ಆ ಪ್ರದೇಶಗಳಿಗೆಲ್ಲಾ ಒಂದೇ ಸಮನಾಗಿ ಹಂಚಿದರೆ ಒಳ್ಳೆಯದು. ರಾಜಕೀಯದ ದುರುದ್ದೇಶಕ್ಕೆ ಆಸ್ಪದ ಕೊಡಬೇಡಿ. ಈ ಹಣವನ್ನು ದುರುಪಯೋಗಪಡಿಸಬೇಡಿ, ಪೋಲು ಮಾಡಬೇಡಿ. ಎಲ್ಲಾ ಜಿಲ್ಲೆಗಳಿಗೂ ಬಾವಿ ತೋಡಿಸಲು ಈ ಹಣ ಕೊಟ್ಟರೆ ಒಂದು ಶಾಶ್ವತವಾದ ಪರಿಹಾರ ಆಗುವುದಲ್ಲದೆ ಜನಗಳಿಗೆ ವೃತ್ತಿಯೂ ಸಿಕ್ಕಿದಂತಾಗುತ್ತದೆ.

ಇನ್ನೊಂದು ವಿಚಾರವನ್ನು ತಮ್ಮ ಮುಖಾಂತರ ಮಂತ್ರಿಗಳಲ್ಲಿ ತಿಳಿಸಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಮಂತ್ರಿಗಳು ಪ್ರವಾಸ ಬಂದಾಗ ಅವರಿಗೆ ಹೂವಿನ ಹಾರ ಹಾಕುವುದು, ಟೀಪಾರ್ಟಿಗಳನ್ನು ಮಾಡುವುದು ಡಿನ್ನರ್ ಮುಂತಾದವನ್ನು ಮಾಡುತ್ತಾರೆ. ಕ್ಷಾಮ ಪರಿಸ್ಥಿತಿ ಇರುವ ತನಕ ಮಂತ್ರಿಗಳು ಇದನ್ನೆಲ್ಲಾ ಒಪ್ಪಬಾರದು. ಈರೀತಿ ನಡೆದರೆ ನಾನು ನನ್ನ ಸ್ನೇಹಿತರು ಹೋಗಿ ಬಾಗಿಲನ್ನಲ್ಲಿ ಮಲಗಿಕೊಂಡು ಮಂತ್ರಿಗಳಿಗೆ ಒಳಗೆ ಹೋಗಲು ಬಿಡುವುದಿಲ್ಲ. ಈ ಪರಿಸ್ಥಿತಿಗೆ ಅವಕಾಶ ಕೊಡಬೇಡಿ. ಈ ಬಗ್ಗೆ ಮುಖ್ಯ ಮಂತ್ರಿಗಳೂ ಕೂಡ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಜನಗಳಿಗೆ ಈಗ ತಿನ್ನಲಿಕ್ಕೆ ಇಲ್ಲದೆ, ಜೀವನ ಮಾಡಲಕ್ಕೆ ಕಷ್ಟಪರಿಸ್ಥಿತಿ ಇರುವಾಗ ಮಂತ್ರಿಗಳಿಗೆ ಹೂವಿನ ಹಾರ ಹಾಕುವುದು, ಟೀಪಾರ್ಟಿ, ಡಿನ್ನರ್, ಭಕ್ಷ್ಯಭೋಜನ ಇತ್ಯಾದಿಗಳಿಗೆ ಖರ್ಚು ಮಾಡತಕ್ಕಂಥ ಹಣವನ್ನು ಉಳಿಸಿ. ಇದರಿಂದ ಉಳಿದ ಹಣವನ್ನು ಕ್ಷಾಮಪರಿಹಾರ ನಿವಾರಣೆಗೆ ಉಪಯೋಗಿಸಬೇಕು ಎಂದು ಹೇಳಿ ನನಗೆ ಮಾತನಾಡಲು ಕಾರಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮಾನ್ಯ ಸಭಾಪತಿಗಳೇ, ಮುಖ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಕ್ಷಾಮಪರಿಹಾರ ಪರಿಸ್ಥಿತಿ ವಿಚಾರದ ಹೇಳಿಕೆಯನ್ನು ಓದಿದ್ದೇನೆ. ಕೇಂದ್ರ ಸರ್ಕಾರದಿಂದ ಇಲ್ಲಿಗೆ ಬಂದಂಥ ಒಂದು ಟೀಂ ಮುಂದೆ ಸರ್ಕಾರದ ವತಿಯಿಂದ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ನಮ್ಮ ರಾಜ್ಯದಲ್ಲಿರತಕ್ಕಂಥ ಕ್ಷಾಮದ ಪರಿಸ್ಥಿತಿಯ ವಿವರಗಳು, ಸರ್ಕಾರ ಕೈಗೊಂಡಿರತಕ್ಕಂಥ ಕೆಲಸಕಾರ್ಯಗಳು, ಇನ್ನೂ ಹಣ ಹಾಕಿ ಮಾಡಬೇಕಾದಂಥ ಕೆಲಸಕಾರ್ಯಗಳು, ಕೇಂದ್ರ ಸರ್ಕಾರದಿಂದ ಬಂದಂಥ ಹಣ ಸಹಾಯದಲ್ಲಿ ಯಾವ ಪ್ರಮಾಣದಲ್ಲಿ ಯಾವ ಯಾವುದಕ್ಕೆ ಒದಗಿಸಬೇಕು ಎನ್ನುವ ಒಂದು ಚಿತ್ರ ಕೊಟ್ಟಿದ್ದಾರೆ. ಸರ್ಕಾರದವರು ತಮ್ಮ ಕೈಯಲ್ಲಾದಷ್ಟು ಪ್ರಯತ್ನ ಮಾಡುತ್ತಾ ಇದ್ದಾರೆ. ಕ್ಷಾಮ ನಿವಾರಣೆ ಮಾಡುವುದಕ್ಕೆ, ಜನರ ಕಷ್ಟ ಪರಿಹಾರ ಮಾಡುವುದಕ್ಕೆ ಏನು ಕೆಲಸಗಳನ್ನು ಕೈಗೊಳ್ಳಬೇಕೋ ಅವೆಲ್ಲವನ್ನೂ ಮಾಡಿದ್ದಾರೆ. ಇದಕ್ಕಿಂತಲೂ ಹೆಚ್ಚು ಮಾಡಲು ಸಾಧ್ಯವಿಲ್ಲ. ಹೆಚ್ಚು ಪರಿಣಾಮಕಾರಿಯಾಗುವ ರೀತಿಯಲ್ಲಿ ಹೆಚ್ಚು ಹಣ ಖರ್ಚು ಮಾಡಲಕ್ಕೆ ನಾವೂ ಪ್ರಯತ್ನ ಮಾಡಬೇಕಾದ್ದು ಅಗತ್ಯ ಇದೆ. ಇನ್ನೂ ಹೆಚ್ಚು ಹಣ ಖರ್ಚು ಮಾಡಬೇಕು ಎಂದರೆ ನಮ್ಮ ಸರ್ಕಾರದಲ್ಲಿ ಈಗ ಸಾಕಷ್ಟು ಹಣ ಇಲ್ಲ. ಕೇಂದ್ರ ಸರ್ಕಾರವನ್ನು ಹಣ ಬೇಕು ಎಂದು ಕೇಳುತ್ತಾ ಇದ್ದೇವೆ. ಹಿಂದೆ ಇದ್ದ ಮುಖ್ಯ ಮಂತ್ರಿಗಳು 10 ಕೋಟಿ ರೂಪಾಯಿಗಳು ಬೇಕು ಎಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದರು. ನಮಗೆ 10 ಕೋಟಿ ರೂಪಾಯಿ ಬರಲಿಲ್ಲ 2-3 ಕೋಟಿ ರೂಪಾಯಿ ಒಳಪಟ್ಟು ಬಂತು. ಈ ವರ್ಷ ಸಾಥಿ ಕಮೀಷನ್ ಮುಂದೆ ವರದಿ ಒಪ್ಪಿಸಿದ್ದಾರೆ. ಈಗ ನಮ್ಮ ದೇಶಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥ 8½ ಕೋಟಿ ರೂಪಾಯಿಯಷ್ಟು ಅಂದಾಜು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಅದರಲ್ಲಿ 2½ ಕೋಟಿ ರೂಪಾಯಿಯಷ್ಟು ಕೊಟ್ಟಿದ್ದಾರೆ ಎಂದು ಮುಖ್ಯ ಮಂತ್ರಿಗಳ ಹೇಳಿಕೆಯಲ್ಲಿ ತಿಳಿಸಿದ್ದಾರೆ. ನಾವು ಹೆಚ್ಚು ಹಣವನ್ನು ಕೇಂದ್ರ ಸರ್ಕಾರವನ್ನು ಕೇಳುತ್ತಾ ಇದ್ದೇವೆ. ಕೇಳುವುದರ ಜೊತೆಗೆ ನಮ್ಮ ರಾಜ್ಯದ ಬಡ್ಜೆಟ್ಟಿನಲ್ಲಿ ಇರತಕ್ಕಂಥ ಹಣವನ್ನು ಕೂಡ ನಾವು ಇಂತಿಂತಹ ಕೆಲಸಗಳಿಗೆ ತೀವ್ರವಾಗಿ ಖರ್ಚು ಮಾಡಬೇಕೆಂದು ಹೇಳಿದ್ದೇವೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಅದೇನೆಂದರೆ ಖರ್ಚುಮಾಡುವುದಕ್ಕೆ ಏನು ಒಂದು ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರೋ ಅದು ನ್ಯಾಯವಾದುದು. ಆದರೆ ಖರ್ಚು ಮಾಡುವಾಗ ಎಲ್ಲಿ ಮಿತವ್ಯಯ ಮಾಡುವುದಕ್ಕೆ ಸಾಧ್ಯ ಇದೆ, ಇಪ್ಪೊತ್ತು ಯಾವ ಕೆಲಸ ಮಾಡಿದರೆ ಕ್ಷಾಮ ನಿವಾರಣೆಗೆ ಸಹಾಯಕವಾಗುತ್ತದೆ, ಯಾವ ಕೆಲಸವು ಕ್ಷಾಮ ಪರಿಹಾರಕ್ಕೆ ಅಗತ್ಯ ಇಲ್ಲ ಅಂಥಾದ್ದನ್ನೆಲ್ಲಾ ಪುನರ್ವಿಮರ್ಶೆ ಮಾಡಿ ಕೆಲಸಕಾರ್ಯಗಳನ್ನು ಮಾಡತಕ್ಕಂಥಾದು ಅಗತ್ಯ ಎಂದು ನನ್ನ ಭಾವನೆ.

[Mr. CHAIRMAN (Sri G. RAMEGOWDA) in the Chair]

ಯಾವುದು ಕ್ಷಾಮಪರಿಹಾರಕ್ಕೆ ಸಹಾಯಕವಾಗದೇ ಇರತಕ್ಕದ್ದು ಎಂದರೆ ಉದಾಹರಣೆಗೆ ಕಟ್ಟಡಗಳನ್ನು ಕಟ್ಟುವುದು, ಸ್ಮಾರ್ ಬಿಲ್ಡಿಂಗ್ ಕಟ್ಟುವುದು ಆಗಲಿ, ಅನ್ಸತ್ರೆ ಕಟ್ಟುವುದಾಗಲಿ, ಯಾವುದೇ ರಸ್ತೆ ಕೆಲಸವಾಗಲಿ, ಮಂತ್ರಿಗಳಿಗೆ ಮನೆ ಕಟ್ಟುವುದಾಗಲಿ, ಮನೆ ರಿಪೇರಿಯಾಗಲಿ, ನಿಜವಾಗಿಯೂ ರಿಪೇರಿ ಬೇಕಾಗಿದ್ದ ಪಕ್ಷದಲ್ಲಿ ಎಂದರೆ ಅಪಾಯ ಸ್ಥಿತಿಯಲ್ಲಿದ್ದರೆ ಅದನ್ನು ಮಾಡಬೇಕೇ ಹೊರತು ಬಾಕಿಯವಕ್ಕೆಲ್ಲಾ ಖರ್ಚು ಆಗತಕ್ಕಂಥ ಹಣವನ್ನು ಸಂಪೂರ್ಣವಾಗಿ ತಾತ್ಕಾಲಿಕವಾಗಿ ನಿಲ್ಲಿಸಿ. ಅದೇ ರೀತಿ ಅನೇಕ ಬಾಬುಗಳು ಇವೆ. ಅವೆಲ್ಲಾ ನಿಲ್ಲಿಸಿ. ಈ ಹಣವನ್ನೆಲ್ಲಾ ನೇರವಾಗಿ ಕ್ಷಾಮ ನಿವಾರಣೆ ಕೆಲಸಕ್ಕೆ ಉಪಯೋಗ ಮಾಡಬೇಕು ಎಂದು ನನ್ನ ಸಲಹೆ. ಇನ್ನೂ ಕೇಂದ್ರದಿಂದ ಹಣ ಕೇಳುತ್ತಾ ಇದ್ದಾರೆ. ಅವರು ಎಷ್ಟೋ ಕೊಟ್ಟಿದ್ದಾರೆ, ಮುಂದೆ ಇಷ್ಟು ಕೊಡುತ್ತೇವೆಂದು ಹೇಳುತ್ತಾರೆ. ಹಣ ಕೇಳಬೇಕಾದರೆ ಇನ್ನೂ ಹೆಚ್ಚು ಹಣವನ್ನು ಕೇಳಿ. ಮಾನ್ಯ ಸದಸ್ಯರು ಅದರಲ್ಲೂ ವಿರೋಧಪಕ್ಷದ ನಾಯಕರು ಹೇಳಿದರು ಕೇಂದ್ರದವರನ್ನು ಕೇಳಬೇಕಾದರೆ 20-30 ಕೋಟಿ ರೂಪಾಯಿಯಲ್ಲ 60 ಕೋಟಿ ರೂಪಾಯಿ ಕೊಡಿ ಎಂದು ಕೇಳಬೇಕಾಗಿತ್ತು ಎಂದು. ಆದರೆ ಕೇಳಬೇಕಾದುದು ನ್ಯಾಯ. ಹೀಗೆ ಅನೇಕ ರಾಜ್ಯದವರು ಕೇಳುತ್ತಾರೆ. ಇದನ್ನೆಲ್ಲಾ ಕೊಡಬೇಕಾದರೆ ಕೇಂದ್ರ ಸರ್ಕಾರದವರ ಒಂದು ಕಮಿಷನ್ ಬರುತ್ತದೆ, ಯಾವ ಒಂದು ಕಮೀಷನ್ನೇ ಬರಲಿ, ಬಂದು ನೋಡಲಿ. ಆದರೆ ಒಂದು ಸಲ ಬಂದು ನೋಡಿಕೊಂಡು ಹೋದ ಮೇಲೆ ಮತ್ತೆ ಮತ್ತೆ ಒಂದು ಟೀಮನ್ನು ಕಳುಹಿಸಬೇಕಾದ ಅಗತ್ಯ ಏನು ಇದೆ ? ನಾವು ಕಳುಹಿಸಿಕೊಟ್ಟಿರುವ ವರದಿಯೂ ಅವರ ಮುಂದೆ ಇದೆ. ಆ ವರದಿ ಪ್ರಕಾರ ಸರ್ಕಾರದವರು ನಮ್ಮ ದೇಶದಲ್ಲಿರತಕ್ಕಂಥ 175 ತಾಲ್ಲೂಕುಗಳಲ್ಲಿ 100 ತಾಲ್ಲೂಕುಗಳು ಸುಮಾರು 13 ಸಾವಿರ ಹಳ್ಳಿಗಳು ಕ್ಷಾಮಬಾಧೆಗೆ ತುತ್ತಾಗಿವೆ ಎಂದು ವರದಿಯಲ್ಲಿ ಹೇಳಿದ್ದಾರೆ. ಅಲ್ಲಿಗೆ ಅರ್ಧಕ್ಕಿಂತಲೂ ಹೆಚ್ಚಿಗೆ ಹಳ್ಳಿಗಳು ಕ್ಷಾವ ದ ಬಾಧೆಗೆ ಈಡಾಗಿವೆ.

ಇನ್ನೊಂದು ಸಂಗತಿ ಏನೆಂದರೆ ನಮ್ಮ ಮಲೆನಾಡು ಪ್ರದೇಶವನ್ನು ಮೂರು ಪ್ರದೇಶವಾಗಿ ವಿಂಗಡಿಸಬಹುದು. (1) ಮಲೆನಾಡು ಪ್ರದೇಶ (2) ಸೆಮಿ ಮಲೆನಾಡು (3) ಮಲೆನಾಡು ಮತ್ತು ಮೈದಾನ ಪ್ರದೇಶ ಎಂದು. ಅಲ್ಲೂ ಕೂಡ 3 ವರ್ಷದಿಂದಲೂ ಅಭಾವ ಉಂಟಾಗಿ ಜನಗಳು ತೊಂದರೆಗೆ ಒಳಗಾಗಿದ್ದಾರೆ. ಮಲೆನಾಡಿನ ಪಶ್ಚಿಮ ಭಾಗದ ಪ್ರದೇಶದಲ್ಲಿ ಅಂದರೆ ಸೌತ್ ಕೆನರಾ ಮತ್ತು ನಾರ್ತ್ ಕೆನರಾ ಭಾಗದ ಕೆಲವು ಕಡೆ 1-2 ತಿಂಗಳ ಹಿಂದೆ ಹೆಚ್ಚು ಮಳೆಯಾಗಿ ಕೆಲವು ಜಮೀನುಗಳಲ್ಲಿ ಬೆಳೆಗಳು ನಾಶವಾಗಿ ಕ್ಷಾಮ ಪರಿಸ್ಥಿತಿಗೆ ಒಳಗಾಗಿವೆ. ಇನ್ನು ಕೆಲವು ಕಡೆ 15-20 ದಿವಸದಿಂದಲೂ ಮಳೆ ಬಾರದೆ ಅಲ್ಲಿ ನಾಟಿ ಹಾಕಿದ ಗದ್ದೆಗಳಿಗೆ ನೀರು ಇಲ್ಲದೆ ತೊಂದರೆಯಾಗಿದೆ. ಇನ್ನು ಕೆಲವು ಪ್ರದೇಶಗಳು ಮಲೆನಾಡೂ ಅಲ್ಲ, ಮೈದಾನವೂ ಅಲ್ಲ. ಈರೀತಿ ಮೈದಾನಕ್ಕೂ ಮಲೆನಾಡಿಗೂ ಮಧ್ಯೆ ಸಿಕ್ಕಿಕೊಂಡಿದೆ. ಅಂಥ ಪ್ರದೇಶಕ್ಕೆ ಸೆಮಿ ಮಲೆನಾಡು ಎಂದು ಹೇಳುತ್ತೇನೆ. ಆ ಭಾಗ ಏನಿದೆ, ಅದು ಪೂರ್ತಿ ಮಲೆನಾಡೂ ಅಲ್ಲ, ಪೂರ್ತಿ ಮೈದಾನವೂ ಅಲ್ಲ. ಅಲ್ಲಿ ಹೇರಳವಾದ ಮಳೆ ಬರುವುದಿಲ್ಲ. ಅದು ಕೂಡ ಬಿಕ್ಕಟ್ಟಿನಲ್ಲಿ ಸೇರಿಕೊಂಡಿದೆ. ಅಲ್ಲಿ ಸ್ವಲ್ಪ ಮಳೆ ಬಂದಿದೆ ಆದರೂ ಸಂಪೂರ್ಣವಾಗಿ ಬೆಳೆ ಕೊಯ್ಯಲಿಲ್ಲ. ಆಗಸ್ಟ್ ತಿಂಗಳಲ್ಲಿ ಬರಬೇಕಾದ ಮಳೆ ಬರಲೇ ಇಲ್ಲ. ಇದರಿಂದಾಗಿ ಬೆಳೆಗಳು ಅರ್ಧಂಬರ್ಧವಾಗಿದೆ. ಕೆರೆಕಟ್ಟೆಗಳಲ್ಲಿಯೂ ನೀರೇ ಇಲ್ಲ. ಸಂಪೂರ್ಣವಾಗಿ ಮಲೆನಾಡು ಪ್ರದೇಶಗಳಲ್ಲಿರುವ ಕೆರೆಕಟ್ಟೆಗಳಲ್ಲಿ ನೀರೇ ಇಲ್ಲ. ಈಗ ನಮ್ಮ ಸರ್ಕಾರದವರು ಸಾಥೆ ಸಮಿತಿಯವರ ಮುಂದೆ ತಾತ್ಕಾಲಿಕವಾಗಿ ವರದಿ ಇಟ್ಟಿದ್ದಾರೆ. ಇವರು ಎಂಟು ಕೋಟಿ ರೂಪಾಯಿ ಕೊಡಬೇಕೆಂದು ಏನು ಕೇಳುತ್ತಿದ್ದಾರೆ, ಆ ಹಣವನ್ನಾದರೂ ಕೂಡಲೇ ನಮ್ಮ ಸಂಸ್ಥಾನಕ್ಕೆ ಒದಗಿಸಿಕೊಡಬೇಕೆಂದು ನಾವು ಒತ್ತಾಯ ಪಡಿಸಬೇಕು, ಮತ್ತು ಅವರು ಒಪ್ಪುತ್ತಾರೆಂದು ನನ್ನ ಭಾವನೆ. ಈ ಫ್ಯಾಮಿನ್ ಕೆಲಸ

(ಶ್ರೀ ಡಿ. ದೇವರಾಜ ಅರಸ್)

ಗಳನ್ನು ತೆಗೆದುಕೊಳ್ಳುವುದಕ್ಕೆ ಫ್ಯಾಮಿನ್ ಕಮಿಷನರ್ ಹುದ್ದೆಯನ್ನು ಏನು ಮಾಡಬೇಕೆಂದು ಹೇಳುತ್ತಿದ್ದಾರೆ ಇದು ಒಂದು ಹಳೆಯ ಕಾಲದ ಮಾತಾಯಿತು. ಈಗ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಇಷ್ಟೊಂದು ಅಧಿಕಾರಿಗಳನ್ನು ಕಟ್ಟಿಕೊಂಡು ಕೆಲಸ ಏನು ಮಾಡುತ್ತಿದ್ದೀವೆ? ಪುನಃ ನಾವು ಮತ್ತೆ, ಮತ್ತೆ ಹೊಸ ಹೊಸ ಹುದ್ದೆಗಳನ್ನು ಮಾಡಿ ಅವರಿಗೆ ಬೆಂಗಳೂರಿನಲ್ಲಿ ಒಂದು ಹೆಡ್ ಆಫೀಸು, ಜಿಲ್ಲಾ ಮಟ್ಟದಲ್ಲಿ ಒಂದು, ಮತ್ತು ತಾಲ್ಲೂಕು ಮಟ್ಟದಲ್ಲಿ ಒಂದು, ಹೀಗೆ ಮಾಡುತ್ತಾ ಹೋದರೆ, ಅದು ಬರೇ ಹಣವನ್ನು ಖರ್ಚು ಮಾಡುವುದಕ್ಕೆ ಒಂದು ದಾರಿಯಾಗುತ್ತದೆ. ಅದು ಅನಗತ್ಯವೆಂದು ಹೇಳಬೇಕಾಗಿದೆ. ಈಗ ಏನು ಅಧಿಕಾರಿಗಳಿದ್ದಾರೆ, ಅವರಿಂದ ಸಂಪೂರ್ಣವಾಗಿ ಕೆಲಸಗಳನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ತಾಲ್ಲೂಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡುವುದು ಉತ್ತಮವೆಂದು ನನ್ನ ಭಾವನೆ. ಮತ್ತು ಹಣ ಖರ್ಚು ಮಾಡತಕ್ಕ ವಿಚಾರದಲ್ಲಿ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರು ಒಂದು ಪ್ರಬಲವಾದ ವಿಚಾರ ಹೇಳಿದರು. ಅದೇನೆಂದರೆ, ತಾಲ್ಲೂಕು ಬೋರ್ಡುಗಳು ಕೆಲಸ ಮಾಡತಕ್ಕಂತದ್ದು ಅವರ ಮನಸ್ಸಿಗೆ ಸಮಾಧಾನಕರವಾಗಿಲ್ಲವೆಂದೂ, ಮತ್ತು ಕಾಂಗ್ರೆಸ್ ಪಕ್ಷದಿಂದ ತಾಲ್ಲೂಕು ಬೋರ್ಡಿಗೆ ಹಣ ಕೊಟ್ಟು ಅವರು ಮುಂದೆ ಬರತಕ್ಕ ಚುನಾವಣೆಯಲ್ಲಿ ಬೆಂಬಲ ಮಾಡುವಂತೆ ಅವಕಾಶ ಮಾಡಿ ಕೊಟ್ಟಿದ್ದಾರೆಂದೂ, ಮತ್ತು ಅದನ್ನು ರದ್ದು ಮಾಡೋಣ ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ. ತಾಲ್ಲೂಕು ಬೋರ್ಡುಗಳಲ್ಲಿ ಎಲ್ಲಾ ಕಡೆಯೂ ಕಾಂಗ್ರೆಸ್ ಪಕ್ಷದ ಸದಸ್ಯರೇ ಇರುತ್ತಾರೆ, ಮತ್ತು ಅಧ್ಯಕ್ಷರೇ ಇರುತ್ತಾರೆ ಎಂದು ಏನೂ ಇಲ್ಲ. ತಾಲ್ಲೂಕು ಬೋರ್ಡು ಕೆಲವು ಕಡೆ ಖರ್ಚು ಮಾಡುತ್ತಾ ಇರುವುದು. ಇದಕ್ಕೆ ಕಾರಣ ತಾಲ್ಲೂಕು ಬೋರ್ಡು ಇರಬಹುದು, ಅಧಿಕಾರಿಗಳು ಇರಬಹುದು. ಒಟ್ಟಿಗೆ 175 ತಾಲ್ಲೂಕು ಬೋರ್ಡುಗಳಿದ್ದರೆ, ಎಲ್ಲವೂ ಕೆಲಸ ಸರಿಯಾಗಿ ಮಾಡುವುದಿಲ್ಲವೆಂದು ಹೇಳುವುದು ಸರಿಯಿಲ್ಲ. ಅನೇಕ ತಾಲ್ಲೂಕು ಬೋರ್ಡುಗಳು ಸರ್ಕಾರ ಒದಗಿಸಿದ್ದಕ್ಕಿಂತ ಹೆಚ್ಚಾಗಿ ಖರ್ಚು ಮಾಡಿವೆ. ಆ ಹಣ ಇನ್ನೂ ಕೊಡುವುದಕ್ಕಾಗಿಲ್ಲ. ಮತ್ತು ಮಾನ್ಯ ಮುಖ್ಯ ಮಂತ್ರಿಯವರು ಒಂದು ಮಾತನ್ನು ಇಲ್ಲಿ ಹೇಳಿದ್ದಾರೆ :

> "It may surprise the House to learn that out of a total allotment of about Rs. 1·90 lakhs made available for scarcity relief works and soil conservation, the total expenditure is hardly Rs. 1·10 lahks".

ಇದನ್ನು ತಾಲ್ಲೂಕು ಬೋರ್ಡು ನೇರವಾಗಿ ಮಾಡುತ್ತಿಲ್ಲ, ಇದರಲ್ಲಿ ಸಾಯಿರ್ ಕನ್‌ಸರ್ವೇಶನ್ ಕೂಡ ಸೇರಿದೆ, ತಾಲ್ಲೂಕು ಬೋರ್ಡು ರಿಲೀಫ್ ವರ್ಕ್ಸ್ ಸೇರಿದೆ. ಸಾಯಿರ್ ಕನ್‌ಸರ್ವೇಶನ್ ಮಾಡುವುದರಲ್ಲೂ ಕಷ್ಟ ಇದೆ. ಮೈದಾನ ಪ್ರದೇಶವಲ್ಲ, ಹತ್ತಿ ಬೆಳೆಯತಕ್ಕ ಪ್ರದೇಶದಲ್ಲಿ ಸಾಯಿರ್ ಕನ್‌ಸರ್ವೇಶನ್ ಮಾಡುವುದು ಸುಲಭ. ಅದರ ಕೆಂಪು ಮಣ್ಣು ಇರತಕ್ಕ ಕಡೆ ಮಳೆ ಇಲ್ಲದಿದ್ದಾಗ ಸಾಯಿರ್ ಕನ್‌ಸರ್ವೇಶನ್ ಮಾಡುವುದು ಕಷ್ಟ. ಇದರ ಜೊತೆಗೆ ರಿಲೀಫ್ ವರ್ಕ್ಸ್ ತ್ವರಿತವಾಗಿ ಆಗದಿರಲು, ಅಧಿಕಾರವನ್ನು ಕೇಂದ್ರೀಕೃತ ಮಾಡಿಕೊಂಡಿರುವುದು ಕಾರಣ, ಮತ್ತು ಅದರೊಂದಿಗೆ ಕೇಂದ್ರೀಕೃತವಾದುದನ್ನು ವಿಕೇಂದ್ರೀಕೃತಮಾಡಿದ್ದು ಇದೂ ಒಂದು ಕಾರಣ, ಇದರಿಂದಾಗಿ ಕೆಲಸ ಕಾರ್ಯಗಳು ತ್ವರಿತವಾಗಿ ನಡೆಸುವುದಕ್ಕಾಗುವುದಿಲ್ಲವೆಂದು ಕೆಲವರು ಹೇಳಿದರು. ಈಗ ಪಿ.ಡಬ್ಲ್ಯು.ಡಿ. ಯಲ್ಲಿ ಯಾವ ಒಂದು ಕೆಲಸವಾದರೂ ಸಾಂಕ್ಷನ್ ಆಗಬೇಕಾದರೆ, ಅದು ಮಿನಿಸ್ಟರ್ ಹತ್ತಿರ ಅಥವಾ ಸೆಕ್ರಟೇರಿಯೇಟ್ ಲೆವೆಲ್‌ಗೆ ಬರಬೇಕಾಗಿರುವುದರಿಂದ ಬಹಳ ನಿಧಾನವಾಗುತ್ತದೆ. ಅದು ಏಕೆ ಮಾಡಿದ್ದಾರೆಂದರೆ, ಅವರು ಸಿಕ್ಕಾಪಟ್ಟೆ ಖರ್ಚುಮಾಡಿಯಾರು, ಅಥವಾ ಯಾರದ್ದಾದರೂ ದಾಕ್ಷಿಣ್ಯಕ್ಕೆ ಒಳಗಾಗಿ, ಕಂಟ್ರಾಕ್ಟರು ಹಣ ಕೊಟ್ಟು ಏನಾದರೂ ಮಾಡಿಯಾರು ಎಂದು. ಆ ರೀತಿ ಮಾಡಿದರೆ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವ ಬದಲು ಅಂಥ ಅಧಿಕಾರಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡಿದರೆ ಅದರ ಪರಿಣಾಮವಾದರೂ ಏನಾಗುತ್ತದೆ? ಈಗ ಚೀಫ್ ಇಂಜಿನಿಯರ್ ಮಟ್ಟದಿಂದ, ಸರ್ಕಾರಿ ಮಟ್ಟಕ್ಕೆ ಬರಬೇಕಾಗುತ್ತದೆ ಇತ್ತೀಚೆಗೆ ವಿಕೇಂದ್ರೀಕರಣದಿಂದ ಚೀಫ್ ಇಂಜಿನಿಯರಿಗೆ ಅಧಿಕಾರ ಕೊಟ್ಟಿದ್ದಾರೆಂದು ಬರೆದಿದ್ದಾರೆ. ನಾನು ಹೇಳುವುದಾದರೆ, ಕೇವಲ ಚೀಫ್ ಇಂಜಿನಿಯರಿಗೆ ಕೊಡುವುದಲ್ಲ. ಕನಿಷ್ಠ ಪಕ್ಷ ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಕೂಡ ಅಧಿಕಾರ ಕೊಟ್ಟರೆ, ಆಗ ಕೆಲಸ ತ್ವರಿತವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಕೆಲವರು ತಾಲ್ಲೂಕು ಬೋರ್ಡಿನಲ್ಲಿ ದುರುಪಯೋಗವಾಗುತ್ತದೆಂದು ಹೇಳಿದರು, ಅದಕ್ಕೆ ನಾನು ಹೇಳತಕ್ಕದ್ದು ಇಷ್ಟೆ —

ನಮ್ಮ ಇಲ್ಲಿಯ ಸದಸ್ಯರು ಮತ್ತು ಮೇಲ್ಮನೆಯ ಸದಸ್ಯರು ಅಲ್ಲ ಎಕ್ಸ್ ಅಫೀಷಿಯೋ ಮೆಂಬರ್ಸ್ ಆಗಿ ಇದ್ದಾರೆ. ಮಾನ್ಯ ವೆಂಕಟಗಿರಿಯಪ್ಪನವರು ಈ ವಿಚಾರದಲ್ಲಿ ಮಾತನಾಡಿದರು. ಅವರೂ ಅಲ್ಲ ಸದಸ್ಯರಾಗಿದ್ದಾರೆ. ಅವರೂ ಅಲ್ಲಿಗೆ ಹೋಗಿಲ್ಲ, ಮತ್ತು ಕೇಳಿಲ್ಲ.

ಶ್ರೀ ಬಿ. ದೊಡ್ಡಬೋರೆಗೌಡ.—ಅಲ್ಲ 19 ಜನ ಅವರ ಪಾರ್ಟಿಯವರು ಇದ್ದಾರೆ. ಎರಡ್ಮೂ ಇವರು ಕೈಯತ್ತಿಸಿಕೊಳ್ಳುವವರು. ಇಲ್ಲಿ 85 ಜನ ಇದ್ದರೂ ನಾವು ಹೇಳಿದ್ದನ್ನು ಕೇಳುತ್ತಾ ಇಲ್ಲ, ಇನ್ನು ಅಲ್ಲಿ ಅಷ್ಟು ಜನವಿದ್ದರೆ ಏನು ಪ್ರಯೋಜನವಾಗುತ್ತದೆ ?

ಶ್ರೀ ಡಿ. ದೇವರಾಜ ಅರಸ್.—ತಾಲ್ಲೂಕು ಬೋರ್ಡನ್ನು ಈ ಕಾರಣದಿಂದ ರದ್ದುಮಾಡಿ ಎಂದು ಹೇಳುವುದು ಸರಿಯಾದುದಲ್ಲ. ಚುನಾವಣೆಗಳು ಬರುತ್ತವೆ. ಹೊಸದಾಗಿ ತಾಲ್ಲೂಕು ಬೋರ್ಡುಗಳು ಆಗಬೇಕಾಗಿವೆ. ಅದನ್ನು ನಾವು ಒಪ್ಪಿಕೊಳ್ಳೋಣ. ಒಟ್ಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಬೋರ್ಡ್ ಒಂದು ಖಾಸಗಿ ಸಂಸ್ಥೆಯಾಗಿದೆ. ಅಧಿಕಾರಿಗಳು, ಮತ್ತು ಮಧ್ಯವರ್ತಿ ಜನಗಳು ಹಣ ದುರುಪಯೋಗ ಮಾಡಿದ್ದಾರೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಲಿನ ಅಧಿಕಾರಿಗಳು ಕ್ವಶ್ಚನಬಲ್ ಇಂಟಿಗ್ರಿಟಿ ಇರುವವರು, ಅವರಿಂದ ಕೆಲಸ ಮಾಡಿಸಿದರೆ ಹಣ ದುರುಪಯೋಗವಾಗಿ ಲಂಚಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತಾರೆ. ಆದರೆ ತಾಲ್ಲೂಕು ಬೋರ್ಡುಗಳಿಗೆ ಕೊಟ್ಟರೆ, ವಿರೋಧಪಕ್ಷದ ಸದಸ್ಯರು ನಮ್ಮ ಊರಿಗೆ ಹೆಚ್ಚಿನ ಸಾಲಭ್ಯ ಸಿಗಲಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಅವರಿಗೆ ಕೊಟ್ಟರೂ ಕಷ್ಟ, ಇವರಿಗೆ ಕೊಟ್ಟರೂ ಕಷ್ಟ. ಅಲ್ಲಿಗೆ ಇನ್ನು ಯಾರನ್ನು ತರಬೇಕೋ ಗೊತ್ತಿಲ್ಲ. ಈ ರೀತಿ ಮಾಡುತ್ತಿದ್ದರೆ ಇದಕ್ಕೆ ಔಷಧಿಯೇ ಇಲ್ಲ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ನಾವೆಲ್ಲರೂ ಒಟ್ಟಿಗೆ ಸೇರಿ ತಾಲ್ಲೂಕುಮಟ್ಟದಲ್ಲಿರತಕ್ಕ ಮುಖಂಡರನ್ನೆಲ್ಲಾ ಬರಮಾಡಿಕೊಂಡು ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಚರ್ಚೆ ಮಾಡಿ ಕ್ಷಾಮ ನಿವಾರಣೆಗೋಸ್ಕರ ಒಂದು ತೀರ್ಮಾನವನ್ನು ಕೈಗೊಳ್ಳಬೇಕು. ಏಕೆಂದರೆ ಇದು ಯಾವ ಪಕ್ಷದ ಪ್ರಶ್ನೆಯಲ್ಲ. ಒಂದು ಊರಿನಲ್ಲಿ ಕ್ಷಾಮ ಇದೆಯೆಂದು ಹೇಳಿ ಅದೇ ಒಂದು ನೆಪ ಮಾಡಿಕೊಂಡು ಅಲ್ಲಿಗೆ ಹೋಗಿ ನಿಮ್ಮನ್ನು ನಾವು ದೂಷಣೆ ಮಾಡುವುದು ನಮ್ಮನ್ನು ನೀವು ದೂಷಣೆ ಮಾಡುವುದರಿಂದ ದೇಶಕ್ಕೆ ಯಾವ ಪ್ರಯೋಜನವೂ ಆಗಲಾರದೆಂದು ನಾನು ಹೇಳುತ್ತೇನೆ.

4-30 P.M.

ಇನ್ನು ಕ್ಷಾಮನಿವಾರಣೆ ಕೆಲಸದಲ್ಲಿ ನಮ್ಮಲ್ಲಿರುವ ಕೆಲಸ ಯಾವುದು ಮಾಡಬೇಕೆಂದರೆ ಇವತ್ತಿನ ಪರಿಸ್ಥಿತಿಯಲ್ಲಿ ಮೊದಲು ಕುಡಿಯುವ ನೀರಿನ ಅಭಾವ ನೀಗುವುದಕ್ಕೆ ಪ್ರಯತ್ನ ಮಾಡಬೇಕು. ಅದು ಮೊಟ್ಟಮೊದಲನೆಯ ಕೆಲಸ. ಇದಕ್ಕಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಕುಡಿಯುವ ನೀರಿನ ಅಭಾವ ಹೋಗಲಾಡಿಸುವುದಕ್ಕಾಗಿ ಹೆಚ್ಚು ಬಾವಿಗಳನ್ನು ತೆಗೆಯಲು ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಈಗ ಮೊದಲು ಬರುವ ತೊಂದರೆ ದನಗಳಿಗೆ, ಎರಡನೆಯ ತೊಂದರೆ ಜನಗಳಿಗೆ. ದನಗಳಿಗೆ ಮೇವು ಇಲ್ಲದೇ ಇರುವುದು ಬಹಳ ದೊಡ್ಡ ತೊಂದರೆಯಾಗಿದೆ. ಈಗ ಈ ಮೇವಿನ ಅಭಾವವನ್ನು ನೀಗಬೇಕಾದರೆ, ಅವರ ಭಾಷಣದಲ್ಲಿ ಅದಕ್ಕಾಗಿ ಕೆಲವು ಏರ್ಪಾಡುಗಳನ್ನು ಮಾಡಿದ್ದೇವೆ. ಫಾರಸ್ಟ್ ಇಲಾಖೆಯವರಿಗೆ ಹೇಳಿದ್ದೇವೆ, ಹುಲ್ಲನ್ನು ಬೇಕಾದಷ್ಟು ಕೊಯ್ದುಕೊಂಡು ಬರಬಹುದು ಎಂದು ಹೇಳಿದ್ದಾರೆ. ಕ್ಷಾಮ ನಮ್ಮ ದೇಶದಲ್ಲಿ ಹೊಸದೇನೂ ಅಲ್ಲ. ಮೂರು ವರ್ಷಗಳಿಂದ ಒಂದೇ ನಮಗೆ ಇದು ಬರುತ್ತಿದೆ. ಹಿಂದೆ 10 ವರ್ಷಗಳಿಗೋ ಅಥವಾ 50 ವರ್ಷಗಳಿಗೋ ಒಂದು ಸಾರಿ ಕ್ಷಾಮ ಬರುತ್ತಿತ್ತು. ಆದರೆ ಈಗ ದೇಶದ ಅರ್ಧ ಮುಕ್ಕಾಲು ಭಾಗ ಕ್ಷಾಮಕ್ಕೆ ತುತ್ತಾಗಿದೆ. 'ಯುದ್ಧಕಾರೇ ಶಸ್ತ್ರಾಭ್ಯಾಸ' ಎನ್ನುವ ಹಾಗೆ ಇದನ್ನು ಮಾಡಬಾರದು. ಇವತ್ತಿನವರೆಗೂ ಫಾಡರ್ ಡಿಫಿಕಲ್ಟಿ ಇದ್ದೇ ಇದೆ. ನುಮ್ಮನೆ ಹುಲ್ಲು ಕೊಯ್ದುಕೊಂಡು ಬನ್ನಿ ಅಂದರೆ ಈ ಕೆಲಸವಾಗುವುದಿಲ್ಲ. ರಾರಿ ಚಾರ್ಜು ದಿನೇ ದಿನೇ ಜಾಸ್ತಿಯಾಗುತ್ತಿದೆ. ಹುಲ್ಲು ಕೊಯ್ಯುವುದಕ್ಕೆ ಆಳು ಇಲ್ಲ, ಹುಲ್ಲು ತರುವುದಕ್ಕೆ ಸಾಕಷ್ಟು ರಾರಿಗಳಿಲ್ಲ. ಈಗಿನ ಕ್ಷಾಮ ಈ ದೇಶದ ಒಂದಲ್ಲ, ಒಂದು ಕಡೆಯಿಂದ ಎರಡ್ಮೂ ಕಡೆಗಳಲ್ಲಿಯೂ ಜಾಸ್ತಿಯಾಗುತ್ತಲೇ ಇದೆ. ದುರ್ಭೀಕ್ಷವಿದ್ದಾಗ ಹೊತ್ತಿಗೆ ಸರಿಯಾಗಿ ಮಳೆಯಾಗಲಿಲ್ಲ. ಕೆಲವು ಕಡೆಗಳಲ್ಲಿ ಜೋಳದ ಕಡ್ಡಿಯನ್ನು ದನಗಳ ಮೇವಿಗಾಗಿ ಉಪಯೋಗಿಸುತ್ತಾರೆ. ಕೆಲವು ಭಾಗಗಳಲ್ಲಿ ಸುಟ್ಟು ಹಾಕುತ್ತಾರೆ. ಅಂತಹ ಕಡೆಗಳಲ್ಲಿಯೂ ಮೇವಿನ ಅಭಾವವಿದೆಯೋ ಏನೋ ನನಗೆ ಗೊತ್ತಿಲ್ಲ. ಇದಕ್ಕಾಗಿ ಸರ್ಕಾರ ಒಂದು ಪಾಲಿಸಿಯನ್ನು ಮಾಡಬೇಕಾಗಿದೆ. ಅರಣ್ಯದಲ್ಲಿ ಬೆಳೆಯತಕ್ಕ ಹುಲ್ಲನ್ನು ವರ್ಷೇ ವರ್ಷೇ ಕೊಯ್ಯುವುದಕ್ಕೆ ಏರ್ಪಾಡು ಮಾಡಬೇಕು. ಅದನ್ನು ಪ್ರೆಸ್ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಕ್ಷಾಮ ಎಲ್ಲಿ ಬರುತ್ತದೆಂದು ನಿರೀಕ್ಷಣೆ ಮಾಡುತ್ತಾರೆಯೋ ಅಂತಹ ಕಡೆಗಳಲ್ಲಿ ಹುಲ್ಲನ್ನು ಒಂದು

(ಶ್ರೀ ಡಿ. ದೇವರಾಜ ಅರಸ್)

ಮೆದೆಯಾಗಿಟ್ಟು ಅದನ್ನು ಚೆನ್ನಾಗಿ ಪ್ರಿಸರ್ವ್ ಮಾಡಿ ಎಂಬುದಾಗಿ ಹೇಳುತ್ತೇನೆ. ಆದರೆ ಜೋಳದ ಕಡ್ಡಿ ಅಥವಾ ಹೈಬ್ರಿಡ್ ಜೋಳದ ಕಡ್ಡಿಗಳನ್ನು ದನಗಳು ತಿನ್ನುವುದಕ್ಕೆ ಉಪಯೋಗಿಸುತ್ತಿಲ್ಲ. ನನಗೆ ತಿಳಿದಿರುವ ಹಾಗೆ, ಪೆರಿಯಾಪಟ್ಟಣ, ಹುಣಸೂರು ತಾಲ್ಲೂಕುಗಳಲ್ಲಿ ಬೇಕಾದಷ್ಟು ಜೋಳದ ಕಡ್ಡಿ ಬೆಳೆದು ರೈತರು ಅದನ್ನು ಏನು ಮಾಡೋಣವೆಂದು ಕೇಳುತ್ತಿದ್ದಾರೆ. ಒಂದು ಕಡೆ ಬೇಕಾದಷ್ಟು ಜೋಳದ ಕಡ್ಡಿ ಬೆಳೆದು ಅದು ಜಾಸ್ತಿಯಾಗಿ ರೈತರ ದನಗಳು ಮೇಯುವುದಕ್ಕೆ ಅವಕಾಶ ವಿಲ್ಲದೆ ಅದನ್ನು ಅಲ್ಲಲ್ಲೇ ಸುಟ್ಟು ಹಾಕಿದ್ದಾರೆ. ಅದನ್ನು ಪ್ರಿಜರ್ವ್ ಮಾಡುವ ವಿಧಾನ ಸಾಲದು. ಇತ್ತೀಚೆಗೆ ಅನೇಕ ಯಂತ್ರಗಳು ಬರುತ್ತಾ ಇವೆ. ಆ ಯಂತ್ರಗಳಿಂದ ಬಹು ಜಾಗ್ರತೆಯಾಗಿ ಅವನ್ನು ಕತ್ತರಿಸಿ ಪ್ರಿಜರ್ವ್ ಮಾಡಿ ಇಡುವುದಕ್ಕೆ ಆಗುತ್ತದೆ. ಆರು ತಿಂಗಳಾಗಳಾದರೂ ಆ ರೀತಿಯಾಗಿ ಇಡುವುದಕ್ಕೆ ಸಾಧ್ಯವಿದೆ. ಕ್ಷಾಮ ಬಂದಾಗ್ಗೆ ಹುಲ್ಲು ಕೊಡಿಸುತ್ತೇವೆಂದು ಹೇಳುವುದು ಅಷ್ಟು ಜಾಣತನವಲ್ಲ. ಕ್ಷಾಮ ಒಂದು ಜಿಲ್ಲೆಯಲ್ಲಲ್ಲಾಪಿದ್ದರೂ ಮತ್ತೊಂದು ಜಿಲ್ಲೆಯಲ್ಲಿ ಇದ್ದೇ ಇರುತ್ತದೆ. ಆದ್ದರಿಂದ ಶಾಶ್ವತವಾಗಿ ದನಗಳ ಮೇವನ್ನು ಅಂದರೆ ಹುಲ್ಲಿನ ಅಭಾವವನ್ನು ನೀಗಿಸುವುದಕ್ಕೆ ತಕ್ಕ ಪ್ರಯತ್ನಗಳನ್ನು ಸರ್ಕಾರದವರು ಕೂಡಲೇ ಮಾಡಬೇಕಾದುದು ಅಗತ್ಯ.

ಇನ್ನು ಕುಡಿಯುವ ನೀರಿನ ಅಭಾವವನ್ನು ನೀಗಬೇಕಾದರೆ ಸರ್ಕಾರದವರು ಕೊಟ್ಟ ಹೇಳಿಕೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ: We have also under consideration a proposal to purchase air-compressors, blasting equipment and trucks for the purpose of quick deepening of wells. ಇತ್ತೀಚೆಗೆ ಬಂದಿರತಕ್ಕ ರಷ್ಯನ್ ರಿಗ್ಸ್ ಒಂದು ಗಂಟೆಗೆ ಒಂದೊಂದು ಬೋರ್‌ವೆಲ್ಲನ್ನು 100 ಅಡಿಯಿಂದ 120 ಅಡಿಯವರೆಗೂ ತೆಗೆಯುತ್ತವೆ. ಈ ಯಂತ್ರಗಳನ್ನು ಒದಗಿಸುವ ವಿಚಾರವನ್ನು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಮತ್ತು ರಷ್ಯಾ ಸರ್ಕಾರಕ್ಕೆ ಕೇಂದ್ರದವರು ಬರೆದು ತರಿಸುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅವು ಬರುವವರೆಗೆ ಯೋಚನೆ ಮಾಡುತ್ತಾ ಕೂತುಕೊಳ್ಳಲು ಸಾಧ್ಯವಿಲ್ಲ. ನೀರಿನ ಬಾವಿಗಳನ್ನು ತೋಡುವುದಕ್ಕೆ ಕೇಂದ್ರ ಸರ್ಕಾರದವರು ಕೂಡಲೇ ಸಹಾಯ ಮಾಡಬೇಕು. ಸುಮಾರು 100 ರಿಗ್ಸನ್ನು ಯುದ್ಧ ನಡೆಯುವಾಗ ಯಾವ ರೀತಿ ವಿಮಾನಗಳನ್ನು ತರಿಸುತ್ತಾರೋ, ಅದೇ ರೀತಿ ನಮಗೆ ಕಳುಹಿಸಲಿ. ಅದಕ್ಕಾಗಿ ನಮ್ಮ ಸರ್ಕಾರದವರು ಒಬ್ಬ ಮಂತ್ರಿಗಳನ್ನು ಡೆಪ್ಯೂಟ್ ಮಾಡಲಿ. ಕೇಂದ್ರ ಸರ್ಕಾರದಲ್ಲಿ ರಷ್ಯನ್ ಡೀಲರ್ಸ್ ಜೊತೆಯಲ್ಲಿ ವ್ಯವಹರಿಸಿ ಅಲ್ಲಿಂದ ಅಂತಹ 20ರಿಂದ 50ರವರೆಗೆ ಯಂತ್ರೋಪಕರಣಗಳನ್ನು ತೀವ್ರವಾಗಿ ತರಿಸಿ ಬಾವಿಗಳನ್ನು ತೋಡಿದರೆ ಒಂದು ಅಥವಾ 2 ತಿಂಗಳೊಳಗಾಗಿ ಈಗಿರತಕ್ಕ ಕುಡಿಯುವ ನೀರಿನ ಅಭಾವವನ್ನು ನೀಗಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆ. ಹಾಗಿಲ್ಲದೆ ನಾವು ಏನೇನೋ ಯೋಚನೆ ಮಾಡುತ್ತಿದ್ದೇವೆ, ಅಲ್ಲಂದ ತರಿಸಿಕೊಡುತ್ತೇವೆಂದು ನಿಧಾನ ಮಾಡಿದರೆ, ಈಗಿನ ಪರಿಸ್ಥಿತಿಯನ್ನು ತೀವ್ರವಾಗಿ ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಕೊನೆಯದಾಗಿ ಒಂದು ವಿಚಾರವನ್ನು ನಾನು ಸರ್ಕಾರಕ್ಕೆ ತಿಳಿಸುವುದೇನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣ ಅಥವಾ ಹೇಳಿಕೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ನಾವೆಲ್ಲರೂ ಗಮನಿಸಬೇಕಾದುದು ಅಗತ್ಯ. ಅದು ಈ ರೀತಿ ಇದೆ: Government will award exemplary punishment to officers or others guilty of selfseeking in this hour of trial. ಆದ್ದರಿಂದ ಸರ್ಕಾರದ ವತಿಯಿಂದ ಚೆನ್ನಾಗಿ ಕೆಲಸವಾಗುವ ವಿಚಾರದಲ್ಲಿ ತೀವ್ರವಾಗಿ ಗಮನ ಕೊಡಬೇಕಾಗಿ ಬರುತ್ತದೆ. ಆಡಳಿತದಲ್ಲಿ ಬರುಬರುತ್ತಾ ರೆಡ್‌ಟೇಪಿಜಂ ಬಹಳ ಇದೆ, ಅದನ್ನು ನೀಗಿಸಬೇಕೆಂದು ಹೇಳಿದ್ದಾರೆ. ಅದರ ಜೊತೆಗೆ ಅಧಿಕಾರಿಗಳು ಮತ್ತು ಮಧ್ಯವರ್ತಿ ಜನಗಳು ಅನೇಕ ಕಡೆ ಕೊಟ್ಟಂಥ ಹಣವನ್ನು ದುರುಪಯೋಗ ಮಾಡಿದ್ದಾರೆಂದು ಹೇಳಿದ್ದಾರೆ. ಅವರು ಹೇಳತಕ್ಕದ್ದು ಒಪ್ಪತಕ್ಕ ಮಾತು. ತಪ್ಪು ಮಾಡತಕ್ಕವರಿಗೆ ಶಿಕ್ಷೆಯನ್ನು ವಿಧಿಸುತ್ತೇವೆಂದು ಹೇಳಿದ್ದಾರೆ. ಈ ಕೆಲಸಕ್ಕೆ ನಾವು ಸಹಕಾರ ಕೊಡೋಣ. ಸಹಕಾರ ಕೊಡುತ್ತಾರೋ ಇಲ್ಲವೋ ಎನ್ನುವ ಒಂದು ಅನುಮಾನ ಇದೆ. ಏಕೆಂದರೆ ಶಿಕ್ಷೆಯನ್ನು ಕೊಡುವುದು ಅಷ್ಟು ಸುಲಭವಲ್ಲ. ಕರಪ್ಷನ್ ಎನ್ನುವುದು ದುಡ್ಡು ತೆಗೆದುಕೊಳ್ಳುವುದೇ ಕರಪ್ಷನ್ ಅಲ್ಲ. ನಮ್ಮ ದೇಶದಲ್ಲಿ ಕರಪ್ಷನ್ ನಾನಾ ತರಹ ಇದೆ. ಈಗ ಯಾರಾದರೂ ಒಬ್ಬರೂ ಚುನಾವಣೆಗೆ ನಿಂತಿರುತ್ತಾರೆ. ಆಗ ನಮ್ಮ ಅಧಿಕಾರಿಗಳು, ಮತ್ತು ನಮ್ಮ ದೇಶದಲ್ಲಿರತಕ್ಕ ಅನೇಕ ದೊಡ್ಡ ಮನುಷ್ಯರು ಆ ಅಭ್ಯರ್ಥಿಗೆ ಸಹಾಯ ಮಾಡುತ್ತಾರೆ. ಮತ್ತು ಚುನಾವಣೆಯಲ್ಲಿ ಅಭ್ಯರ್ಥಿಯ ಪರವಾಗಿ ಮಧ್ಯವರ್ತಿಯಾಗಿ ಅವರು ಕೆಲಸ ಮಾಡುತ್ತಾರೆ. ಕಂಟ್ರಾಕ್ಟರುಗಳು ಇನ್ನೊಂದು ರೀತಿಯಲ್ಲಿ

ಆ ಅಭ್ಯರ್ಥಿಗೆ ಸಹಾಯ ಮಾಡುತ್ತಾರೆ. ಈ ರೀತಿ ಲಂಚ ಎನ್ನುವುದು ನಾನಾ ತರಹ ಇದೆ. ಹೀಗೆ ಅಧಿಕಾರಿ ಚುನಾವಣೆಯ ಸಮಯದಲ್ಲಿ ಅಭ್ಯರ್ಥಿಯ ಪರವಾಗಿ ಕೆಲಸ ಮಾಡಿ ಭ್ರಷ್ಟಾಚಾರ ನಡೆಸಿದರೂ ಅವನನ್ನು ಹತ್ತಿಕ್ಕುವುದಕ್ಕೆ ದಾರಿಯಿಲ್ಲ. ಇನ್ನೊಂದು ವಿಚಾರ. ಈಗ ಯಾರೋ ಒಬ್ಬ ಅಧಿಕಾರಿ ಲಂಚ ತೆಗೆದುಕೊಂಡೋ ಅಥವಾ ಇನ್ನು ಯಾವುದೋ ಒಂದು ತಪ್ಪು ಮಾಡುತ್ತಾನೆ ಸಿಕ್ಕಿಹಾಕಿಕೊಳ್ಳುತ್ತಾನೆ. ಆಗ ಅವನು ಏನು ಮಾಡುತ್ತಾನೆ ಎಂದರೆ 10 ಜನರನ್ನು ಕಟ್ಟಿಕೊಂಡು ಯಾರೋ ತಮಗೆ ಬೇಕಾದ ಒಬ್ಬರು ಎಂ. ಎಲ್. ಎ. ಹತ್ತಿರ ಬಂದು ಅವನನ್ನು ಬಿಡಿಸಬೇಕು ಎಂದು ಕೇಳಿದಾಗ ಅವನನ್ನು ಬಿಡಿಸುವುದಕ್ಕಾಗುವುದಿಲ್ಲ ಎಂದು ಹೇಳಿದರೆ ನಾಳೆ ಚುನಾವಣೆಗೆ ಸೊನ್ನೆ ಬೀಳುತ್ತದೆ. ಈಗ ನಾನು ಹೇಳಿದ್ದು ಎಲ್ಲರಿಗೂ ಅನ್ವಯಿಸುತ್ತದೆ. ಇಂಥಾ ಜನರು ಮಧ್ಯವರ್ತಿಗಳಾಗಿದ್ದಾರೆ. ಕರಪ್ಟ್ ಜನಗಳಾಗಿದ್ದಾರೆ. ಇಂಥಾದ್ದರಲ್ಲಿ ಜಾತೀಯತೆಯನ್ನೂ ಉಪಯೋಗಿಸಿಕೊಳ್ಳುತ್ತಾರೆ. ಆಯಾ ಜಾತಿಯವರು ಆಯಾ ಜಾತಿಯ ಎಂ.ಎಲ್.ಎ.ಗಳ ಹಾಗೂ ಮಂತ್ರಿಗಳ ಹತ್ತಿರ ಹೋಗಿ ತಾವು ಮಾಡಿರುವ ತಪ್ಪನ್ನು ಮನ್ನಾ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ನನ್ನ ಜಾತಿಯ ವೋಟು ಇಲ್ಲದೆ ನೀನು ಹೇಗೆ ಮಾಡುತ್ತೀಯಾ ಎಂದರೆ ಆ ತಪ್ಪನ್ನು ಮನ್ನಾ ಮಾಡದೆ ಇರುವುದಕ್ಕೆ ಯಾವ ಮಂತ್ರಿಗಳಿಗೆ ಧೈರ್ಯ ಬರುತ್ತದೆ? ಒಬ್ಬ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಹೋಗಿದ್ದರು. ಅವರು ಅಲ್ಲಿಗೆ ಹೋಗುವುದಕ್ಕೆ ನನ್ನ ಅಡ್ಡಿ ಏನೂ ಇಲ್ಲ. ಅವರು ಅಲ್ಲಿಗೆ ಪ್ರವಾಸ ಹೋದಾಗ ಒಂದು ಮರ ಕೊಯ್ಯುವ ಸಾಮಿಲ್ಲಿನ ಮಾಲೀಕರಿಂದ ಟೀ ಪಾರ್ಟಿಗೆ ಆಮಂತ್ರಣ ಬಂತು. ಮಂತ್ರಿಗಳು ಹೊಸಬರು ಪಾಪ ಅವರಿಗೆ ಅಲ್ಲಿನ ವಿಚಾರ ಏನು ಎನ್ನುವುದು ಗೊತ್ತಿಲ್ಲ. ಮಂತ್ರಿಗಳು ಟೀಪಾರ್ಟಿಗೆ ಒಪ್ಪಿಕೊಂಡು ಅಲ್ಲಿಗೆ ಹೋದರು. ಆ ಸಾಮಿಲ್ಲಿನ ಮಾಲೀಕ ಪುಣ್ಯಾತ್ಮ, ದೊಡ್ಡ ಮನುಷ್ಯ. ಎಂದರೆ ಹರಿಜನಗಳಿಗೆ ಮನೆಗಳನ್ನು ಕಟ್ಟಲು ಸರ್ಕಾರದವರು ಕೊಟ್ಟಂತಹ ಮರಗಳನ್ನು ಫಾರೆಸ್ಟ್ ಇಲಾಖೆಯ ಅಧಿಕಾರಿಗಳ ಸಂಚಿನಿಂದ ಅಕ್ರಮವಾಗಿ ಕಾರ್ಖಾನೆಗೆ ಸಾಗಿಸಿಕೊಂಡು ಅದನ್ನು ಕೆಲವರು ಸೇರಿಕೊಂಡು ಮಾರಾಟ ಮಾಡಿ ದುಡ್ಡು ಸಂಪಾದನೆ ಮಾಡಿಕೊಳ್ಳುತ್ತಿದ್ದರು. ತೇಗ, ಹೊನ್ನೆ, ಮತ್ತಿ ಸಾವಿರಾರು ರೂಪಾಯಿಗಳ ಬೆಲೆ ಬಾಳತಕ್ಕದ್ದು ಇಂಥಾ ಮರಗಳನ್ನು ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಕೊಟ್ಟರೆ, ಅವರು ಅದನ್ನು ಕೆಲವರು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಿಲ್ಲ. ಹರಿಜನರ ಪೈಕಿ ಕೆಲವರು ಸಾವಿರ ರೂಪಾಯಿಗಳು ಬರುವ ಕಡೆ 100 ರೂಪಾಯಿಗಳು ಬಂದರೂ ಸಾಕು ಎಂದು ಹೇಳುವವರು ಇದ್ದಾರೆ. ಇದಕ್ಕೆ ಅನುಕೂಲವಾಗಿ ಮಧ್ಯವರ್ತಿ ದಳ್ಳಾಳಿಗಳು ಇರುತ್ತಾರೆ. ಆ ಮಿಲ್ಲಿನ ಮಾಲೀಕರು ಮೊದಲು ಸಾಧಾರಣವಾಗಿದ್ದರು. ಈಗ ಒಳ್ಳೆಯ ಕಾರು ಇಟ್ಟುಕೊಂಡು ಅನಕೂಲಸ್ಥರಾಗಿದ್ದಾರೆ. ಆ ಮಿಲ್ಲಿಗೆ ಮಂತ್ರಿಗಳು ಹೋಗಿ ಟೀ ಪಾರ್ಟಿ ಮಾಡಿಕೊಂಡು ಬಂದಮೇಲೆ, ನಚಿವರು ಹೋದ ಕಾರ್ಖಾನೆಯಲ್ಲಿ ಅಕ್ರಮ ನಡೆಯುತ್ತಿದ್ದರೆ ಅಕ್ರಮ ವ್ಯವಹಾರದ ವಿರುದ್ಧ ಕ್ರಮಕ್ಕೆಗೊಳ್ಳಲು ಅಧಿಕಾರಿಗಳಿಗೆ ಧೈರ್ಯವಿರುತ್ತದೆಯೇ? ಇದೂ ಒಂದು ರೀತಿಯ ಭ್ರಷ್ಟಾಚಾರ. ಮಂತ್ರಿಗಳು ಪ್ರವಾಸ ಹೋದಾಗ ಅವರನ್ನು ಕೆಲವರು ಕಾಫಿಗೆ ಕರೆದುಕೊಂಡು ಹೋಗಿ ಹಾರ ತುರಾಯಿ ಹಾಕುವುದಕ್ಕೆ ಬರುತ್ತಾರೆ. ಅಂಥಾ ಕಡೆ ಹೋಗಬೇಕಾದರೆ ಅಂಥಾ ದೊಡ್ಡ ಮನುಷ್ಯರು ಅವರು ಯಾರು ಹೇಗೆ ಎಂಬುದನ್ನು ಸ್ವಲ್ಪ ಹುಡುಕಿ ವಿಚಾರ ಮಾಡಿ ನೋಡಬೇಕು. ಏತಕ್ಕೆಂದರೆ ಅಕ್ರಮ ವ್ಯವಹಾರಗಳು ನಡೆಯುವ ಸಂಘ ಸಂಸ್ಥೆಗಳಿಗೆ, ಕಾರ್ಖಾನೆಗಳಿಗೆ ಕಂಪೆನಿಗಳಿಗೆ ಮಂತ್ರಿಗಳನ್ನು ಕರೆದುಕೊಂಡು ಹೋಗಿ ಅತಿ ವಿನಯದಿಂದ ಸತ್ಕಾರ ಮಾಡಿ ಹಾರ ತುರಾಯಿ ಹಾಕಿ ಹೊಗಳಿ ಕಳುಹಿಸುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ):—ತಾವು ಮಂತ್ರಿಗಳಾಗಿದ್ದಾಗ ಬೆಂಗಳೂರು ಹಾಲಿನ ಡೈರಿಯಲ್ಲಿ ಅಕ್ರಮ ನಡೆದಿದೆ, ಕರಪ್ಷನ್ ನಡೆದಿದೆ ಎಂದು ಪತ್ರಿಕೆಯಲ್ಲಿ ಬಂದಿತ್ತು. ಆಗ ತಾವು ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿರಿ?

ಶ್ರೀ ಡಿ. ದೇವರಾಜ ಅರಸ್.—ಪತ್ರಿಕೆಯಲ್ಲಿ ಬಂದದ್ದು ಪೂರ್ವ ಆದಮೇಲೆ ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಅಧಿಕಾರದಲ್ಲಿರುವವರು ತಾತ್ಪಿಕವಾಗಿ ನಡೆಯಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಾನು ಅಧಿಕಾರದಲ್ಲಿದ್ದಾಗ ತಪ್ಪು ಮಾಡಿದ್ದರೆ ನನ್ನದು ತಪ್ಪಿಲ್ಲ ಎಂದು ನಾನು ಹೇಳುತ್ತಿಲ್ಲ. ನಾನು ಕರಪ್ಟ್ ಆಫೀಸರನ್ನು ಕ್ರಮ ತೆಗೆದುಕೊಳ್ಳದೆ ಬಿಟ್ಟಿದ್ದರೆ ಅದನ್ನು ತೋರಿಸಿ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಬಿಟ್ಟಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಬಿಟ್ಟಿದ್ದರೆ ತೋರಿಸಿ, ಒಪ್ಪಿಕೊಳ್ಳುತ್ತೇನೆ. ಈ ವಿಷಯ ಗಳನ್ನು ತ್ವರಿತವಾಗಿ ತೀವ್ರತೆಯಿಂದ ನೋಡಬೇಕಾದ್ದು ಅಗತ್ಯ. ದೇಶದಲ್ಲಿ ಅನೀತಿ ನಡೆಯುತ್ತಿದೆ. ಇದಕ್ಕೆ ಕಾರಣರು ಮಧ್ಯವರ್ತಿ ಜನಗಳೂ ಇದ್ದಾರೆ, ಮಂತ್ರಿಗಳು ಹೆದರದೆ, ದಾಕ್ಷಿಣ್ಯಕ್ಕೆ ಒಳಗಾಗದೆ ಕೆಲಸ ಮಾಡುವುದಾದರೆ ಲಂಚವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂದು ಸರ್ಕಾರಕ್ಕೆ ಮನವಿ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಹ್ಯಾಲನಯ್ಯ (ಹಾಸನ).—ನನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ದೇಶದಲ್ಲಿರುವಂಥಾ ಅಭಾವ ಪರಿಸ್ಥಿತಿಯ ಬಗ್ಗೆ ಈ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿದ್ದಾರೆ. ಭಾರತದಲ್ಲಿ ಇರುವಂತಹ ರಾಜ್ಯಗಳಲ್ಲಿ ರಾಜಾಸ್ಥಾನವನ್ನು ಬಿಟ್ಟರೆ ಮೈಸೂರು ರಾಜ್ಯವೇ ಕನಿಷ್ಟ ರಾಜ್ಯ, ಬಡದೇಶ. ಈಗ ದೇಶದಲ್ಲಿರತಕ್ಕ ಅಭಾವ ಪರಿಸ್ಥಿತಿ ಕೇವಲ ಆಕಸ್ಮಿಕ ವೇನೂ ಅಲ್ಲ. 1950ನೇ ಇಸವಿಯಿಂದಲೂ ಇಲ್ಲಿಯವರೆಗೂ ಪ್ರಕೃತಿ ನಮ್ಮ ಮೇಲೆ ಮುನಿದಿರುವುದನ್ನು ನೋಡಿದರೆ ಈಗ ನಾವೇನೂ ಆಶ್ಚರ್ಯ ಪಡಬೇಕಾದ್ದಿಲ್ಲ. ಒಂದಲ್ಲ ಒಂದು ಭಾಗದಲ್ಲಿ ಅಭಾವ ಪರಿಸ್ಥಿತಿ ಇದ್ದೇ ಇದೆ. ಪ್ರಕೃತಿ ಮುನಿದುಕೊಂಡರೆ ಮಾನವ ತನ್ನ ಬುದ್ಧಿ ಬಲವಿಂದ ಅದನ್ನು ಪಡೆದುಕೊಳ್ಳುವ ಯೋಚನೆಯನ್ನು ಮಾಡಬೇಕಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ ಇಸ್ರೇಲ್ ಮರಳುಗಾಡು. ಅಲ್ಲಿನ ಜನಗಳು ತಮ್ಮ ಬುದ್ಧಿ ಬಲದಿಂದ, ಸಾಧನೆ ಮತ್ತು ಶ್ರಮದ ಬಲದಿಂದ ತಮ್ಮ ರಾಜ್ಯವನ್ನು ನಂದನ ವನವನ್ನಾಗಿ ಮಾಡಿಕೊಂಡಿದ್ದಾರೆ. ಅಮೇರಿಕಾದಲ್ಲಿ ಅನೇಕ ಕಡೆ ಮಳೆ ಬಹಳ ಕಡಿಮೆ ಬಿದ್ದರೂ ಕೂಡ ಅಲ್ಲಿನ ಜನಗಳು ತಮ್ಮ ಬುದ್ಧಿ ಬಲವಿಂದ ಅವರು ಒಂದು ಸಮೃದ್ಧಿಯಾದ ರಾಷ್ಟ್ರವನ್ನು ಕಟ್ಟಿದ್ದಾರೆ. 1950ನೇ ಇಸವಿಯಿಂದ ಇಲ್ಲಿಯವರೆಗೂ ಕೂಡ ಜನತೆ ನಾನಾ ರೂಪದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ಸಹಾಯ ಮಾಡಿದರೂ ಕೂಡ ಈ ಅಭಾವ ಪರಿಸ್ಥಿತಿಗೆ ಪರಿಹಾರವನ್ನು ಹುಡುಕದೇ ಇರುವುದಕ್ಕೆ ಕಾಂಗ್ರೆಸ್ ಸರ್ಕಾರವೇ ಜವಾಬ್ದಾರರು ಎಂದು ಹೇಳಬೇಕಾಗುತ್ತದೆ. ಇದಕ್ಕೆ ಶಾಶ್ವತ ಪರಿಹಾರವನ್ನು ಸರ್ಕಾರದವರು ಯೋಚನೆ ಮಾಡದೆ " ಸಂಕಟ ಬಂದಾಗ ವೆಂಕಟರಮಣ " ಎನ್ನುವ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇವರು ಯೋಜನೆಗಳನ್ನು ಕಾರ್ಯ ರೂಪಕ್ಕೆ ತರುವುದರಲ್ಲಿ ಅನುಸರಿಸತಕ್ಕ ನೀತಿಯೂ ಒಂದು ಅಭಾವಕ್ಕೆ ಕಾರಣವಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ ಘಟಪ್ರಭಾ ಯೋಜನೆಯಲ್ಲಿ ಸುಮಾರು 71 ಮೈಲಿ ಉದ್ದದ ಕಾಲುವೆಯನ್ನು ತೆಗೆಯುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೂ ಆ ಪ್ರದೇಶದಲ್ಲಿರತಕ್ಕ ಜಮೀನಿಗೆ ನೀರು ಕೊಟ್ಟಿಲ್ಲ. ಇದೇ ರೀತಿ ತುಂಗಭದ್ರಾ ಯೋಜನೆ ದೊಡ್ಡ ಯೋಜನೆ. ಅಡವನ್ನು ಕಟ್ಟುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೂ ಸಹ ಆ ಪ್ರದೇಶದಲ್ಲಿರತಕ್ಕ ಎಲ್ಲಾ ಜಮೀನುಗಳಿಗೂ ನೀರನ್ನು ಒದಗಿಸಿಕೊಟ್ಟಿಲ್ಲ. ಟೈರ್ ಎಂಡಿನಲ್ಲಿರತಕ್ಕ ಜಮೀನುಗಳಿಗೆ ನೀರನ್ನು ಒದಗಿಸಿ ಕೊಟ್ಟಿಲ್ಲ. ಹೇಮಾವತಿ ಯೋಜನೆಯನ್ನು ತೆಗೆದುಕೊಂಡು ಅದನ್ನು ಕಾರ್ಯಗತ ಮಾಡಿಲ್ಲ. ಕಾವೇರಿ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ನಮಗೂ ಮದ್ರಾಸಿನವರಿಗೂ ತೀವ್ರ ಪೈಪೋಟಿ ಇದೆ. 1974ನೇ ಇಸವಿಯ ಒಳಗಾಗಿ ನಾವು ನಮ್ಮ ಭಾಗದ ನೀರನ್ನು ಉಪಯೋಗಿಸಿಕೊಳ್ಳದೇ ಹೋದರೆ ನಮ್ಮ ಹಕ್ಕು ಹೊರಟುಹೋಗುತ್ತದೆ ಎಂದು ಸರ್ಕಾರದವರು ತಿಳಿದಿದ್ದರೂ ಕೂಡ ಈ ಹೇಮಾವತಿ ಯೋಜನೆಯನ್ನು ಕಾರ್ಯಗತ ಮಾಡಿಲ್ಲ. ಈ ಯೋಜನೆ 30–40 ಕೋಟಿ ರೂಪಾಯಿಗಳ ದೊಡ್ಡ ಯೋಜನೆ. ಈ ಯೋಜನೆಯನ್ನು ಪಾರಂಭ ಮಾಡಿ 3–4 ವರ್ಷಗಳಾದುವು. 30-40 ಕೋಟಿ ರೂಪಾಯಿಗಳ ದೊಡ್ಡ ಯೋಜನೆಗೆ ಕೇವಲ 17 ಲಕ್ಷ ರೂಪಾಯಿಗಳನ್ನು ಖರೀ ಸಿಬ್ಬಂದಿ ವರ್ಗದವರಿಗೆ ಮಾತ್ರ ಖರ್ಚು ಮಾಡಿದ್ದಾರೆ. ಸರ್ಕಾರದವರು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಯಾವರೀತಿ ಪ್ರಯತ್ನ ಮಾಡಿದ್ದಾರೆ ಎಂಬುದು ಇದರಿಂದಲೇ ಅರ್ಥವಾಗುತ್ತದೆ. ಇದರ ಜೊತೆಗೆ ಹಾರಂಗಿ ಯೋಜನೆಯನ್ನು ಮಾಡಿದ್ದರೆ ಸುಮಾರು ಎಂಬತ್ತು ಸಾವಿರ ಎಕರೆಗಳಷ್ಟು ಭೂಮಿಗೆ ಅನುಕೂಲ ಸಿಗುತ್ತಿತ್ತು. ಕೇಂದ್ರದಿಂದ ಕೇವಲ 2.5 ಕೋಟಿಯಷ್ಟು ಹಣ ಮಾತ್ರ ಪರಿಹಾರಕಾರ್ಯಗಳಿಗಾಗಿ ಕೊಟ್ಟಿದ್ದಾರೆ. ಕಳೆದ ಸಾಲಿನಲ್ಲಿ ಸುಮಾರು ಐದು ಕೋಟಿಯಷ್ಟು ಸಹಾಯ ಮಾಡಿದ್ದರು ಅಲ್ಲವೆ ನಮ್ಮ ರಾಜ್ಯಕ್ಕೆ ಎಷ್ಟು ಅಭಾದ ಸ್ಥಿತಿ ಇದೆ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಲು ಸಹ ಜೂನ್ ತಿಂಗಳಲ್ಲಿ ಒಂದು ಸ್ವಡೀ ಟೀಂ ಇಲ್ಲಿಗೆ ಬಂದಿತ್ತು. ನಮ್ಮ ರಾಜ್ಯಕ್ಕೆ ಹೊರಗಿನವರು ಬಂದು ನೋಡುವುದಾದರೂ ಏನಿದೆ ! ನಮ್ಮ ರಾಜ್ಯದಲ್ಲಿ ಕ್ಷಾಮದ ಪರಿಸ್ಥಿತಿ ಇದೆ ಎಂದು ಇವರು ಸಮರ್ಥಿಸುವುದಕ್ಕಾಗಿ ಬಂದಿದ್ದರು ಎಂದು ಹೇಳಬಹುದು. ಆದರೆ ಈ ಸ್ವಡೀ ಟೀಂ ನವರಿಗೆ ನಮ್ಮ ರಾಜ್ಯದವರೇ ಎಲ್ಲ ಅಂಕ ಅಂಶಗಳನ್ನೂ ಕೊಡುವಾಗ ಇವರು ಹೊಸದಾಗಿ ಬಂದು ಇಲ್ಲ ಮಾಡುವುದೇನೂ ಇರಲಿಲ್ಲ. ನಮ್ಮ ರಾಜ್ಯದವರು ಏನು ವಿವರಗಳನ್ನು

ಕೊಡುತ್ತಾರೋ ಅದನ್ನೇ ತೆಗೆದುಕೊಂಡು ಅದರ ಬಗ್ಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹೊರಗಿನವರು ಇಲ್ಲಿಗೆ ಬರುವುದು ಅಪ್ರಕೃತ. ನಾವು ಕೇಂದ್ರದವರನ್ನು ಸುಮಾರು 8.3 ಕೋಟಿ ಗಳಷ್ಟು ಪರಿಹಾರಕಾರ್ಯಗಳಿಗಾಗಿ ಸಹಾಯ ಬೇಕು ಎಂದು ಕೇಳಿದರೂ ಅವರು ಮಂಜೂರು ಮಾಡಿರುವುದು ಕೇವಲ 2.5 ಕೋಟಿಯಷ್ಟು ಮಾತ್ರ. ಉಳಿದ ಹಣವನ್ನು ನಮ್ಮ ಸ್ವೇಟು ಪ್ಲಾನುಗಳಲ್ಲಿ ಮಾಡಿರುವುದರಲ್ಲಿ ಇದಕ್ಕೆ ತಕ್ಕಂತೆ ಅಳವಡಿಸಿಕೊಳ್ಳಬೇಕೆಂದು ಸೂಚನೆಗಳನ್ನು ಕಳುಹಿಸಿದ್ದಾರೆ. ಹೀಗೆ ಕೇಂದ್ರದವರು ಸ್ವೇಟು ಪ್ಲಾನಿನೊಳಗೆ ಇದನ್ನೆಲ್ಲಾ ಒದಗಿಸಿಕೊಳ್ಳಬೇಕು ಎಂದು ಹೇಳುವುದು ಸಾಧುವಾದ ವಾದವಲ್ಲ. ಸರಕಾರ ಈ ಪರಿಸ್ಥಿತಿಯನ್ನು ಸರಿಯಾಗಿ ಎದುರಿಸದೇ ಹೋದರೆ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ರೀತಿಯ ಅಲ್ಲಕಲ್ಲೋಲವಾಗಬಹುದು ಎಂದು ಹೇಳುವುದು ಸರಿಯಲ್ಲ. ಇದರ ಪರಿಣಾಮ ಇಡೀ ದೇಶದಮೇಲೆ ಬೀಳುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಹೇಳುವಾಗ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಉಪಯೋಗವಾಗುವಂತೆ ಸುಮಾರು ಹತ್ತು ಸಾವಿರ ರೂಪಾಯಿ ಬೆಲೆಯ ಜೋಳವನ್ನು ಕೂಲಿ ಮಾಡುವ ಜನಕ್ಕೆ ಕಡಿಮೆ ಬೆಲೆಯಲ್ಲಿ ಒದಗಿಸಬೇಕೆಂದಿದ್ದೇವೆ ಎಂದು ಹೇಳಿದರು. ಇದರ ಲೆಕ್ಕ ನೋಡಿದರೆ ಒಬ್ಬರಿಗೆ ಕೇವಲ ಎರಡು ಕೆ.ಜಿ. ಯಷ್ಟು ಸಿಗಬಹುದು ಎಂದು ಇಟ್ಟುಕೊಂಡರೂ ಇದಕ್ಕಾಗಿ ಸುಮಾರು 30—40 ಸಾವಿರ ಟನ್ನುಗಳಷ್ಟು ಧಾನ್ಯ ಹೆಚ್ಚಾಗಿ ಬೇಕಾಗುತ್ತದೆ ಇಷ್ಟನ್ನೂ ಒದಗಿಸಿಕೊಡುವ ಜವಾಬುದಾರಿ ಸರಕಾರದ ಮೇಲಿದೆ. ಆ ಜವಾಬುದಾರಿ ಸರಕಾರದ ಮೇಲಲ್ಲ ಎಂದು ಅವರು ಪೂರ್ತಿಯಾಗಿ ಹೇಳಲು ಸಿದ್ಧವಿಲ್ಲ. ಇಂದು ಕೋಟ್ಯಂತರ ಬಡ ಜನರು ಈ ಕ್ಷಾಮದ ಪರಿಸ್ಥಿತಿಯಿಂದ ಮತ್ತು ದಿನನಿತ್ಯ ಜನತೆಗೆ ಬೇಕಾಗುವ ಪದಾರ್ಥಗಳ ಬೆಲೆಗಳು ವಿಪರೀತವಾಗಿ ಏರುತ್ತ ಹೋಗುತ್ತಿರುವುದರಿಂದ ಇದನ್ನು ಸರಕಾರ ತಡೆಗಟ್ಟುವುದಕ್ಕಾಗುತ್ತಿಲ್ಲ. ಹಿಂದೆ ಈ ಬೆಂಗಳೂರು ನಗರದಲ್ಲಿ ಎಣ್ಣೆ ಬೆಲೆ ಬಹಳ ಏರಿದೆ ಎಂದು ಹೇಳಿದಾಗ ಅದನ್ನು ತೆಗ್ಗಿಸಲು ತಕ್ಕ ಕ್ರಮ ಕೈಗೊಂಡಿದ್ದರು. ಆದರೆ ಇಂದು ಕಡ್ಲೆಕಾಯಿ ಎಣ್ಣೆ ಬೆಲೆ ನೋಡಿದರೆ ಒಂದು ಕೆ ಜಿ ಗೆ ಸುಮಾರು ಐದು ರೂಪಾಯಿಗೆ ಮೇಲ್ಪಟ್ಟು ಮಾರುತ್ತಿದ್ದಾರೆ. ಇಂತಹ ಸಣ್ಣ ಸಣ್ಣ ಪದಾರ್ಥಗಳ ಬೆಲೆ ಏರುತ್ತಿರುವುದನ್ನು ತಡೆಗಟ್ಟುವುದಕ್ಕೆ ಆಗುತ್ತಿಲ್ಲ. ಸರಕಾರ ಇದರ ಗಮನ ಕೊಡಬೇಕಾಗಿದೆ. ಇಂತಹ ಸಣ್ಣ ವಿಚಾರಗಳನ್ನೇ ಎದುರಿಸುವುದಕ್ಕಾಗದೇ ಇರುವಾಗ ಈ ಸರಕಾರದವರು ಕ್ಷಾಮದ ಪರಿಸ್ಥಿತಿಯನ್ನು ಹೇಗೆತಾನೇ ಎದುರಿಸುತ್ತಾರೆ? ಕ್ಷಾಮ ಈ ದೇಶದಲ್ಲಿ ಬಂದಿದೆ ಎಂದು ನಮ್ಮ ಮುಂದೆ ಒಂದು ಪಟ್ಟಿಯನ್ನೂ ಇಟ್ಟಿದ್ದಾರೆ. ಹಿಂದೆ ಧಾತು ಈಶ್ವರ ಸಂವತ್ಸರದಲ್ಲಿ ಒಂದು ರೀತಿಯಾಗಿ ಘೋರ ಕ್ಷಾಮ ಬಂತು. ಆಗ ಎಷ್ಟೋ ಜನ ಗೆಡ್ಡೆ ಗೆಣಸುಗಳನ್ನು ತಿಂದು ಎಷ್ಟೋ ಜನರು ಸತ್ತರು ಎಂದು ನಾವು ಚರಿತ್ರೆಗಳನ್ನು ಓದುವುದರಿಂದ ತಿಳಿದುಕೊಂಡಿದ್ದೇವೆ. ಆದೇ ರೀತಿ ಇಂದು ಬಂದಿರುವ ಕ್ಷಾಮದ ಪರಿಸ್ಥಿತಿಯಿಂದಲೂ ಅನೇಕ ಕಡೆ ಹಳ್ಳಿಗಳಲ್ಲಿನ ಜನರು ಗೆಡ್ಡೆ ಗೆಣಸುಗಳನ್ನು ತಿಂದು ನಡೆಸುತ್ತಿದ್ದಾರೆ. ಇದರ ವಿಚಾರಗಳನ್ನು ನಮಗೆ ತಿಳಿಸದೇ ಸರಕಾರದವರು ಮುಚ್ಚಿಡುತ್ತಿದ್ದಾರೆ. ಕ್ಷಾಮ ಬಂದಿರುವ ಈ ಸಮಯದಲ್ಲಿ ಯಾವ ರೀತಿಯ ಸಂಶಯವೂ ನಮಗೆ ಬೇಡ. ಹಿಂದೆ ಬಂದಿರುವ ನಮ್ಮ ಅನುಭವದ ಪ್ರಕಾರ ನೋಡಿದರೆ ಯಾವ ರೀತಿಯಾಗಿ ಮಳೆ ಗಾಗಿಯೇ ನಂಬಿಕೊಂಡು ಬೀಜವನ್ನು ಬಿತ್ತಿ ಉತ್ತು ಬೆಳೆಯುತ್ತಿದ್ದರು ಎನ್ನುವುದು ಸುಮಾರು ಇಪ್ಪತ್ತು ವರ್ಷಗಳ ಸ್ಟೈಕರ್ ನಮ್ಮ ಮುಂದೆ ಸಿಗುತ್ತದೆ. ಆ ರೀತಿಯಾಗಿ ಮಳೆ ಬರುತ್ತದೋ ಇಲ್ಲವೋ ಎನ್ನುವುದನ್ನು ನೋಡಿಕೊಂಡು ಶಾಶ್ವತವಾದ ಪರಿಹಾರ ಕ್ರಮಗಳನ್ನು ಯಾವ ರೀತಿಯಾಗಿ ಮಾಡಬೇಕು ಎನ್ನುವುದನ್ನು ಕಂಡುಹಿಡಿಯಲು ಪ್ರಯತ್ನ ಮಾಡಬೇಕು. ಮತ್ತು ಇದರ ಬಗ್ಗೆ ಒಂದು ಧೈರ್ಯವಾದ ಹೆಜ್ಜೆಯನ್ನು ಇಟ್ಟು ಸರಕಾರ ಮುಂದುವರಿಯಬೇಕು ಎಂದು ಸರಕಾರವನ್ನು ಕೇಳಿಕೊಳ್ಳಬೇಕಾಗಿದೆ. ಅಲ್ಲದೆ ಇದರಲ್ಲಿ ಹೇಳಿರುವಂತೆ ಕ್ಷಾಮದ ಪರಿಸ್ಥಿತಿಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳು ಸರಕಾರದ ಆಜ್ಞೆಗೆ ಸರಿಯಾದ ಮನ್ನಣೆ ಕೊಡುತ್ತಿಲ್ಲ. ಇಂಥ ಅಧಿಕಾರಿಗಳ ವರ್ತನೆ ಸರಿಯಾದ್ದಲ್ಲ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು.

ಇನ್ನು ಬಾವಿಗಳಿಗಾಗಿ ಸಾಲಗಳನ್ನು ಕೊಡುತ್ತಿದ್ದಾರೆ. ಇವರು ಮಾಡುವ ಕೆಲಸಗಳು ಹೇಗಾಗಿದೆ ಎಂದರೆ ನೆಲ ಹರಿದೇ ಇರುವ ಜಾಗದಲ್ಲಿ ಮಣ್ಣಿನ ಕೆಲಸ ಮಾಡುವುದು ನೀರು ಬಾರದೇ ಇರುವ ಜಾಗದಲ್ಲಿ ಬಾವಿಗಳನ್ನು ತೆಗೆಸುವುದು ಇತ್ಯಾದಿ ಕೆಲಸಗಳಿಗಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಹೀಗೆ ಅವಶ್ಯಕತೆ ಇಲ್ಲದೇ ಇರುವ ಕೆಲಸಗಳಿಗಾಗಿ ಖರ್ಚು ಮಾಡುವುದಕ್ಕೆ ಹೋದರೆ ಅದರಿಂದೇನೂ ಅನುಕೂಲವಾಗುವುದಿಲ್ಲ ಎಂದು ಸ್ಪಷ್ಟವಾಗಿ ಇಲ್ಲಿ ನಾನು ಹೇಳುತ್ತೇನೆ. ತಾತ್ಕಾಲಿಕವಾಗಿ ಇಲ್ಲಿ ಒಂದು ಪಟ್ಟಿ ಕೊಟ್ಟು ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಅಂಕಿ ಅಂಶಗಳನ್ನು ಹೇಳಿದ್ದಾರೆ. ಇದರ ಬಗ್ಗೆ ಅನೇಕರು ಮಾತನಾಡಿದ್ದಾರೆ. ಈಗೇನೋ ಅಲ್ಪಾವಧಿ, ಸಾಲ ಕೊಟ್ಟು ಪಂಪು ಸೆಟ್ಟುಗಳನ್ನು ಹಾಕಿಸಿ ಹೆಚ್ಚು ಉತ್ಪನ್ನ

(ಶ್ರೀ ಎಚ್. ಬಿ. ಜ್ವಾಲನಯ್ಯ)

ಮಾಡಲು ಸಹಾಯ ಮಾಡಬೇಕೆಂದು ಮಾಡುತ್ತಿದ್ದಾರೆ. ಆದರೆ ಇಂದು ರೈತ ಅಷ್ಟು ಹಣ ಕೊಟ್ಟು ಅದನ್ನು ತೆಗೆದುಕೊಳ್ಳಲು ಶಕ್ತಿ ಇಲ್ಲ. ಇದಕ್ಕಾಗಿ ಸರಕಾರದವರೇ ಹಳ್ಳಿಗಾಡಿನ ರೈತರಿಗೆ ಅನುಕೂಲವಾಗುವಂತೆ ಪವರು ಲೈನನ್ನು ಎಲ್ಲೆಲ್ಲಿ ಎಳೆಯಲು ಸಾಧ್ಯವೋ ಅಲ್ಲೆಲ್ಲಾ ಎಳೆದು ಎಲ್ಲ ಸಾಧ್ಯವೋ ಅಂತಹ ಕಡೆಗಳಲ್ಲಿ ಪಂಪುಸೆಟ್ಟುಗಳನ್ನು ನೀವೇ ಹಾಕಿಸಿಕೊಡಬೇಕು. ಈಗೇನೋ ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕು ಎಂದು ಮಾಡಿ ಅದರ ಮೂಲಕ ರೈತ ತೆಗೆದುಕೊಳ್ಳಬೇಕು ಎಂದು ಮಾಡಿದ್ದಾರೆ. ಆದರೆ ನಮ್ಮ ರಾಜ್ಯದ ರೈತರು, ತಿಳುವಳಿಕೆ ಇಲ್ಲದುದರಿಂದ, ಸಾಲಕ್ಕಾಗಿ ಸುತ್ತಿ ಸುತ್ತಿ ಬಹಳ ಕಷ್ಟಪಡುತ್ತಿದ್ದಾರೆ. ಇದನ್ನು ತಪ್ಪಿಸಿ ಅವರಿಗೆ ಸಹಾಯ ಒದಗುವ ವ್ಯವಸ್ಥೆ ಮಾಡಬೇಕು.

ಇನ್ನು ಬರಗಾಲಕ್ಕೆ ಅನುಕೂಲವಾಗುವಂತೆ ನಮ್ಮಲ್ಲಿರುವ ಸಣ್ಣ ಹಾಗೂ ದೊಡ್ಡ ನದಿಗಳಿಗೆ ಪ್ರವಾಹ ಕಾಲದಲ್ಲಿ ಹೆಚ್ಚು ನೀರು ಬಂದು ಅವು ಸಣ್ಣ ಕರೆಗಳಿಗೆ ಹರಿದು ಹೋಗುತ್ತವೆ ಮತ್ತು ಕೆಲವು ಕಡೆ ಇರುವ ಕರೆಯು ಅಂಗಳದಲ್ಲಿ ನೀರು ನಿಲ್ಲದೆ ನಾಶವಾಗಿ ಹೋಗುತ್ತದೆ. ಇಂತಹ ಸಣ್ಣ ಕೆರೆಗಳ ತೂಬುಗಳನ್ನು ಹಾಳಾಗಿ ಒಡೆದು ಹೋಗಿರುವ ಕೆರೆಗಳನ್ನು ರಿಪೇರಿ ಮಾಡಬೇಕು. ಇದರ ಬಗ್ಗೆ ಮೊದಲು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈಗ ಸರಕಾರ ಕೆಲಸಗಳನ್ನು ಹೇಗೆ ಮಾಡುತ್ತಿದೆ ಎಂದರೆ ಎಲ್ಲ ಕಡೆಗಳಲ್ಲೂ ಕೆಲಸಗಳನ್ನು ಬೇಗನೆ ಮಾಡಬೇಕೆಂದು ಕೆಲಸಗಳನ್ನು ಆರಂಭ ಮಾಡುತ್ತಾರೆ. ಆದರೆ ಯಾವ ಕೆಲಸವನ್ನೂ ಪೂರ್ತಿಯಾಗಿ ಮಾಡಿ ಮುಗಿಸುವುದಿಲ್ಲ. ಎಲ್ಲವನ್ನೂ ತಿರುಪತಿ ಕ್ಷೌರ ಮಾಡುವಂತೆ ಮಾಡುತ್ತಿದ್ದಾರೆ. ಹೀಗೆ ನೋಡಿದರೆ ಯಾವ ಯಾವ ಕೆಲಸಗಳನ್ನು ಪೂರ್ತಿಯಾಗಿ ಮಾಡಬೇಕು ಎನ್ನುವುದರ ಟಾರ್ಜೆಟ್ ಒಂದನ್ನೂ ಸರಿಯಾಗಿ ಇಟ್ಟುಕೊಂಡಿಲ್ಲ. ಯಾವ ಕೆಲಸಗಳನ್ನು ಆರಂಭ ಮಾಡಿದ್ದೀರೋ ಅವನ್ನು ಮೊದಲು ಮಾಡಿ ಮುಗಿಸಿದೇ ಇದ್ದರೆ ಅದು ಹೆಣದ ಮೇಲೆ ಹಾಕಿದಂತಾಗುತ್ತದೆ ಎಂದು ನಾನು ಹೇಳುತ್ತೇನೆ. ರಾಜ್ಯದಲ್ಲಿ ಭೂಗರ್ಭದಲ್ಲಿ ಎಷ್ಟು ನೀರಿನ ಅಂಶ ಸಿಗುತ್ತದೆ ಎನ್ನುವುದರ ಅಂಕೆ ಅಂಶಗಳನ್ನು ಪರಿಶೀಲಿಸಿ ಆ ನೀರನ್ನು ಉಪಯೋಗ ಮಾಡಬೇಕು ಎಂದರೆ ಅದಕ್ಕೆ ಹಣವಿಲ್ಲ ಎಂದು ಹೇಳುವುದು ಸರಿಯಲ್ಲ. ಅಲ್ಲದೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಸರಕಾರದವರು ಒಂದು ರಸ್ತೆಯನ್ನೂ ಸರಿಯಾಗಿ ಮಾಡುತ್ತಿಲ್ಲ. ಹಾಸನ ಮತ್ತು ಮಂಗಳೂರು ರಸ್ತೆಯನ್ನು "ಓರ್ ಕ್ಯಾರೀಯಿಂಗ್ ರೋಡು" ಎಂದು ಮತ್ತು ಇದಕ್ಕೆ ಮೈನ್ ಓನರುಗಳೇ ಒತ್ತಾಯ ತಂದುದರಿಂದ ಮೈನರಲ್ ಡೆವಲಪ್‌ಮೆಂಟು ಬೋರ್ಡಿನವರು ಸುಮಾಸು 4.92 ಲಕ್ಷದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಹಾಗೇ ಸರಕಾರ ಬಸ್ಸು ರಾಷ್ಟ್ರೀಕರಣ ಮಾಡಬೇಕೆಂದು ದಕ್ಷಿಣ ಕನ್ನಡ ಮಂಗಳೂರು ಹಾಗೂ ಶಿವಮೊಗ್ಗ ಇಲ್ಲ ಬಸ್ಸುಗಳ ರಾಷ್ಟ್ರೀಕರಣ ಮಾಡಲು ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಹೀಗೆ ಹೊಸ ಹೊಸದಾದ ಉದ್ಯಮಗಳನ್ನು ಈ ಮಂತ್ರಿಮಂಡಲದವರು ಮಾಡುವುದರ ಅವಶ್ಯಕತೆಯಾದರೂ ಏನಿತ್ತು? ನುಮ್ಮನೆ ಬಡ ಜನತೆಗೆ ಅನುಕೂಲವಾಗದಂತಹ ಕೆಲಸಗಳನ್ನು ಮಾಡುವುದು ಬಿಡಬೇಕು. ಮುಂದಿನ ಡಿಸೆಂಬರು ತಿಂಗಳಲ್ಲಿ ಎಲ್ಲ ತಾಲ್ಲೂಕು ಬೋರ್ಡುಗಳಲ್ಲೂ ಚುನಾವಣೆಗಳು ನಡೆಸಬೇಕು ಎಂದು ಇದಕ್ಕಾಗಿ ಹೆಚ್ಚು ಹಣ ವೆಚ್ಚಮಾಡಬೇಕು ಎನ್ನುವ ಭಾವನೆ ಈ ಸರಕಾರಕ್ಕಿದೆ ಎಂದು ಜನತೆ ಅಲ್ಲಲ್ಲಿ ಹೇಳುತ್ತಾ ಬರುತ್ತಿದ್ದಾರೆ. ಇದನ್ನು ಮಾಡುವುದಕ್ಕಾಗಿ ರೆವೆನ್ಯೂ ಡಿಪಾರ್ಟ್‌ಮೆಂಟಿಗೆ ಇಷ್ಟೊಂದು ಭಾರಿ ಕೆಲಸಗಳನ್ನು ಮಾಡಬೇಕೆಂದು ಹಣ ಒದಗಿಸಿ ಆ ಹಣವನ್ನು ತಾಲ್ಲೂಕು ಬೋರ್ಡುಗಳ ಚುನಾವಣೆಗೆ ಉಪಯೋಗಿಸಬೇಕೆಂದು ಮಾಡಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದರ ಜೊತೆಗೆ ಮಂತ್ರಿಮಂಡಲದವರು ಒಂದು ತೀರ್ಮಾನ ಕೈಗೊಂಡಿದ್ದಾರೆ. ಪ್ರತಿಯೊಂದು ಜಿಲ್ಲೆಯನ್ನೂ ಒಬ್ಬೊಬ್ಬ ಮಂತ್ರಿಗಳ ನೇತೃತ್ವದಲ್ಲಿ ಕೆಲಸ ಮಾಡಲು ಅವರಿಗೆ ಅಧಿಕಾರ ವಹಿಸಬೇಕೆಂದು ಹೇಳುತ್ತಿದ್ದಾರೆ. ಈ ರೀತಿ ಮಾಡಲು ಅವರುಗಳು ಪ್ರವಾಸ ಹೋಗಬೇಕಾಗುತ್ತದೆ. ಇಂತಹ ಪ್ರವಾಸಗಳನ್ನು ಮಾಡುವುದು ಬಿಟ್ಟು ಇದರಿಂದ ಉಳಿಯುವ ದುಡ್ಡನ್ನು ಅಲ್ಲಲ್ಲಿ ಗಂಜೀ ಕೇಂದ್ರಗಳನ್ನು ತೆರೆಯಲು ಸಹಾಯ ಮಾಡಿ ಅಲ್ಲಿನ ಬಡ ಜನರಿಗಾಗಿ ಖರ್ಚು ಮಾಡುವುದು ಸೂಕ್ತವಾಗಿರುತ್ತದೆ. ಇಂತಹ ಅಭಾವದ ಪರಿಸ್ಥಿತಿಗೆ ನಮ್ಮ ರಾಜ್ಯದಲ್ಲಿರುವ ಮಂತ್ರಿಮಂಡಲದ ನೀತಿಯೇ ಕಾರಣ ಎಂದು ನಾನು ಸರಕಾರದ ಮೇಲೆ ಹಾರ್ಜು ಮಾಡುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ).—ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿರುವ ಅಭಾವ ಪರಿಸ್ಥಿತಿಯನ್ನು ಕುರಿತು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಠರಾವು ತಂದು ಇದರ ಬಗ್ಗೆ ಪುಸ್ತಾಪ ಮಾಡಿದ್ದಾರೆ. ಈ ರಾಜ್ಯದಲ್ಲಿ ಬರಗಾಲ ಎನ್ನುವುದು ಮೊದಲನಿಂದಲೂ

ಅಂದರೆ ಬ್ರಿಟಿಷರ ಕಾಲದಿಂದ ಹಿಡಿದು ಇಲ್ಲಿಯವರೆಗೂ ಒಂದಲ್ಲ ಒಂದು ಭಾಗದಲ್ಲಿ ಬರುತ್ತಲೇ ಇದೆ. ದೇಶದಲ್ಲಿ ನಾವು ಕೈಕೊಂಡ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಮಾಡಿದ್ದರೆ ಇಂದು ಈ ಕ್ಷಾಮದ ಪರಿಸ್ಥಿತಿ ಹೋಗಬಹುದಾಗಿತ್ತು. ಈಗಿರುವ ಜನರಲ್ಲಿ ಬಡತನ ಬಹುಮಟ್ಟಿಗೆ ಕಡಿಮೆ ಯಾಗುತ್ತಿತ್ತು. ಈ ಯೋಜನೆಗಳ ಉದ್ದೇಶ ಬಡತನ ಹೋಗಬೇಕೆಂದು ಇದ್ದರೂ ಅದು ಕಾರ್ಯ ಗತವಾಗದೇ ಕಾರಣಾಂತರದಿಂದ ಇಲ್ಲಿಯವರೆಗೆ ಸಾಧ್ಯವಾಗಿಲ್ಲ. ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಈ ದೇಶ ಇಟ್ಟುಕೊಂಡಿದ್ದರೂ ಬರಗಾಲ ಎನ್ನುವುದು ನಮ್ಮ ದೇಶದಲ್ಲಿ ಬೆಳೆದಿದೆ. ಬೆಳೆಯುತ್ತಿದೆ. ಕೇಂದ್ರ ಸರ್ಕಾರದವರೂ ಅಭಿವೃದ್ಧಿ ಕಾರ್ಯಗಳಿಗೆ ಸಾಲ ಎತ್ತಿ ಅದರ ಗಾತ್ರ ದಿನೇ ದಿನೇ ಬೆಳೆಯುತ್ತಿದೆ. ಆದರೆ ಯೋಜನೆಗಳಿಂದ, ಯಾರಿಗೆ ಅನುಕೂಲವಾಗಿದೆ, ದವಸಧಾನ್ಯಗಳಿಗೆ ಮೇಲಿನ, ನೀರಿನ ದಾಹ, ಜನಗಳಿಗೆ ಅನ್ನದ, ನೀರಿನ ದಾಹ ಇತ್ಯಾದಿಗಳು ಇನ್ನೂ ದೊರೆಯದೇ ಇರುವುದು ಬಹಳ ದುಃಖಕರವಾದ ಅಂಶ. ಇಂದಿನ ಈ ಅಭಾವದ ಪರಿಸ್ಥಿತಿ ಹೋದ ವರ್ಷಕ್ಕಿಂತ ಇಂದು ಪರಿಣಾಮಕಾರಿಯಾಗಿ ಬರುತ್ತಿದೆ ಎಂದು ಹೋದ ಸಾರಿ ಕೂಡ ಇಲ್ಲಿ ಚರ್ಚೆ ಮಾಡಿದೆವು, ಪುನಃ ಪುನಃ ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ಬಂದಿದೆ ಮತ್ತು ಇದಕ್ಕೆ ತಕ್ಕ ಏರ್ಪಾಡೂ ಉಂಟಾಗಬೇಕು.

ನಮ್ಮ ರಾಜ್ಯದಲ್ಲಿ ಸಾಕಷ್ಟು ನದಿಗಳಿವೆ, ಅಣೆಕಟ್ಟುಗಳನ್ನು ಕೆರೆ ಬಾವಿಗಳನ್ನು ಕಟ್ಟಿಸಿದರೆ ನಮ್ಮಲ್ಲಿ ನೀರಿನ ಅಭಾವವಾಗಲಿ ಕೊರತೆಯಾಗಲಿ ಇದೆಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ನಾವು ಅವುಗಳನ್ನು ಹೇಗೆ ಉಪಯೋಗ ಮಾಡಬೇಕು ಎಂಬ ರೀತಿ ನೀತಿಗಳನ್ನು ಮಾತ್ರ ಮರೆತಿದ್ದೇವೆ. ನಮ್ಮ ರಾಜ್ಯದಲ್ಲಿ ಎಷ್ಟೋ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಳ್ಳ ರಾಗಿದೆ. ಆದಾಗ್ಯೂ ನಾವು ವರ್ಷಂ ಪ್ರತಿ ಬರಗಾಲದ ಬಗ್ಗೆ ಎರಡು—ಮೂರು ಕೋಟಿ ರೂಪಾಯಿ ಗಳನ್ನು ಖರ್ಚುಮಾಡುವುದು ಮಾತ್ರ ತಪ್ಪಲಿಲ್ಲ. ಮೇಲಾಗಿ ನಾವು ಪ್ರತಿ ವರ್ಷವೂ ನಮ್ಮ ರಾಷ್ಟ್ರ ಸಂಪತ್ತೂ ಮತ್ತು ರಾಜ್ಯಗಳ ಸಂಪತ್ತೂ ಹೆಚ್ಚುತ್ತಾ ಇದೆ ಎಂದು ಅಂಕೆ ಸಂಖೆಗಳನ್ನೂ ಕೊಡುತ್ತಿದ್ದೇವೆ. ಆದರೇನು ಬಡವ ಮತ್ತಷ್ಟು ಬಡವನಾಗುತ್ತಿದ್ದಾನೆ; ಮಧ್ಯಮ ವರ್ಗದ ಜನ ಕೂಲಿ ಗಾರರಾಗುತ್ತಿದ್ದಾರೆ. ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ. ಅಂಥ ಪರಿಸ್ಥಿತಿ ಯುಂಟಾಗಿದೆ. ಈ ದಿವನ ಯಾವ ಗ್ರಾಮಕ್ಕೇ ಹೋಗಲಿ ಸಾಲವಿಲ್ಲದ ವ್ಯಕ್ತಿಯಿಲ್ಲ. ಪ್ರತಿಯೊಬ್ಬ ದೊಡ್ಡ ದೊಡ್ಡ ಜಮೀನ್ದಾರನೂ ತನ್ನ ಆಸ್ತಿಯನ್ನು ಯಾವುದಾದರೊಂದು ಬ್ಯಾಂಕಿಗೋ ಅಥವಾ ಸೊಸೈಟಿಗೋ ಆಧಾರ ಮಾಡಿರುತ್ತಾನೆ. ಆತನಲ್ಲಿ ಸಾಲಕ್ಕೆ ಸಿಗದೆ ಭೂಮಿ ಒಂದು ಅಂಗುಲ ಸಹಾ ಉಳಿದಿಲ್ಲ. ಇದು ಏನನ್ನು ಸೂಚಿಸುತ್ತಿದೆ ಎಂದರೆ ರಾಜ್ಯದಲ್ಲಿ ಬಡತನ ಹೆಚ್ಚುತ್ತಿದೆ ಎಂಬು ದನ್ನು ತೋರಿಸುತ್ತದೆ. ನಾವು ಇಂಥ ಪರಿಸ್ಥಿತಿಯಲ್ಲಿ ಜನತೆಗೆ ನಿಜವಾಗಿಯೂ ಒಂದು ಕಲ್ಯಾಣ ವನ್ನು ಉಂಟು ಮಾಡಬೇಕಾಗಿದ್ದರೆ ನಾವು ಅಭಾವ ಎಂಬ ಶಬ್ದವನ್ನು ತೆಗೆದು ಮೊದಲು ರಾಜ್ಯ ಕ್ಷಾಮ ಪೀಡಿತ ರಾಜ್ಯ ಎಂಬುದಾಗಿ ಡಿಕ್ಲೇರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹಿಂದೆ ಚೈನಾ ಪಾಕೀಸ್ತಾನಗಳು ಧಾಳಿ ನಡೆಸಿದ್ದ ಕಾಲಕ್ಕೆ ದೇಶದಲ್ಲಿ ತುರ್ತು ಪರಿಸ್ಥಿಯೆಂದು ಡಿಕ್ಲೇರ್ ಮಾಡಲಾಗಿತ್ತೋ ಅದೇ ತುರ್ತುಪರಿಸ್ಥಿತಿಯನ್ನು ಇಂದೂ ಕೂಡ ಡಿಕ್ಲೇರ್ ಮಾಡಬೇಕು. ರಾಜ್ಯ ದಲ್ಲರತಕ್ಕ ರೈತನ ಪರಿಸ್ಥಿತಿ ಉತ್ತಮವಾಗುವವರೆಗೂ ತುರ್ತುಪರಿಸ್ಥಿತಿಯನ್ನು ಮುಂದು ವರಿಸಬೇಕು.

5-00 P.M.

ನಮಗೆ ಈಗ ಒದಗಿರತಕ್ಕ ಕ್ಷಾಮದ ದವಡೆಯಿಂದ ಪಾರಾಗಬೇಕಾಗಿದ್ದರೆ ಇನ್ನೂ ಬಹಳ ಕಾಲಬೇಕು. ಆಹಾರದ ವಿಷಯದಲ್ಲಿ ನಾವು ಸ್ವಾವಲಂಬಿಗಳಾಗುವತನಕ ರಾಜ್ಯದಲ್ಲಿ ಈ ಎಮರ್ಜೆನ್ಸಿ ಇರುತ್ತದೆಂದು ಸಾರಬೇಕು. ಬರಗಾಲ ಬಂದಾಗಲೆಲ್ಲಾ ಪರಿಹಾರಕಾರ್ಯಗಳಿಗಾಗಿ ಹೀಗೆ ಖರ್ಚು ಮಾಡುವ ಬದಲು ನಾವು ಮೊದಲಿಂದಲೂ ಒಂದು ಶಾಶ್ವತವಾದ ಪರಿಹಾರ ಮಾರ್ಗಕ್ಕೆ ಕೈಹಾಕಿದ್ದರೆ ಹೀಗಾಗುತ್ತಿರಲಿಲ್ಲ. ನಾವು ಈ ದಿವನ ಅಪ್ಪರ್ ಕೃಷ್ಣಾ ಯೋಜನೆಯನ್ನು ಕೈಗೊಂಡಿದ್ದೇವೆ ಎಂದು ಹೇಳುತ್ತಿದ್ದೇವೆ. ಅಲ್ಲಿ ಎರಡು ಮೂರು ಕೋಟಿ ರೂಪಾಯಿಗಳನ್ನು ಖರ್ಚೂ ಮಾಡರಾಗಿದೆ. ಆದರೆ ಆ ಹಣವನ್ನು ಕಾಲ್ವೆ, ನಾಲೆಗಳಿಗೆ ಉಪಯೋಗ ಮಾಡದೆ ಅಧಿಕಾರಿಗಳ ಹಾಗೂ ನೌಕರರ ವಸತಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ವೆಚ್ಚ ಮಾಡಿದ್ದಾರೆ. ಈ ದಿವನ ಎಷ್ಟು ಜನ ಬಡವರು ಗುಡಿಸಲುಗಳಲ್ಲಿ ಇಲ್ಲಾ? ಅಧೀನರು ಎಂದು ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ, ನೀರಿಗೆ, ರೈತಿಗೆ ಹಣವನ್ನು ವೆಚ್ಚ ಮಾಡತಕ್ಕದ್ದು ಅನುಚಿತ. ಹೀಗಾದರೆ ಕೆಲಸ ಗಳು ಎಷ್ಟು ವರ್ಷಗಳಾದರೂ ಮುಗಿಯುವುದಿಲ್ಲ. ಈ ಕಾರ್ಯಗಳನ್ನು ಒಂದು ವಾರ್ ಫುಟಿಂಗ್ ಮೇಲೆ ನಡೆಸಬೇಕು. ಹಾಗೆ ಮಾಡದಿದ್ದರೆ ರಾಜ್ಯಕ್ಕೆ ಕ್ಷೇಮವಿಲ್ಲ. ಆಗಲೇ ಶ್ರೀಮಾನ್ ದೇವರಾಜ್

(ಶ್ರೀ ಎಸ್. ಎಂ. ಗುರಡ್ಡಿ)

ಆರನ್ ಅವರು ಹೇಳಿದಂತೆ ರೈತನ ಸಂಪತ್ತು ಎಂದರೆ ಅದು ದನಕರುಗಳೇ ಅವನ ಸಂಪತ್ತು—ಗೋಸಂಪತ್ತು. ಅಂಥ ಗೋಸಂಪತ್ತಿನ ಕಡೆಗೆ ಈ ದಿವಸ ಸರ್ಕಾರದವರು ಲಕ್ಷ್ಯಕೊಟ್ಟಿಲ್ಲ. ಇವತ್ತು ಈ ದನಗಳ ರೋಗ ನಿವಾರಣೆಗೆ ಏನು ಕ್ರಮ ಕೈಗೊಂಡಿದ್ದಾರೆ? ಅವುಗಳಿಗೆ ಹೊಟ್ಟಿಗೆ ನರಿಯಾಗಿ ಮೇವೇ ಇಲ್ಲ. ರಾಜ್ಯದ ಮೂರೆ ಮೂರೆಯಲ್ಲೂ ಬರಗಾಲದ ಸುದ್ದಿಗಳು ಬರುತ್ತಿವೆ. ಹೀಗಾದಾಗ ನಮ್ಮ ಸರ್ಕಾರದವರು ಅಲ್ಲಲ್ಲೇ ಕೈಗೊಂಡಿರತಕ್ಕ ಯೋಜನೆಗಳಿಂದ ರಾಜ್ಯಕ್ಕೆ ಬರತಕ್ಕ ಪ್ರತಿಫಲವೇನು ಎಂಬುದನ್ನು ನಾವೀಗ ವಿಚಾರ ಮಾಡಬೇಕಾಗಿದೆ. ಸರ್ಕಾರದವರು ಒಂದು ಕಡೆ ರಾಜ್ಯದಲ್ಲಿರತಕ್ಕ ಅಭಾವ ಪರಿಸ್ಥಿತಿಯನ್ನು ನೀಗಲಕ್ಕೆ ಕೇಂದ್ರ ಸರ್ಕಾರದವರು ಸರಿಯಾಗಿ ಸಾಕಷ್ಟು ರೊಕ್ಕವನ್ನು ಕೊಡುತ್ತಿಲ್ಲ ಎಂದು ಹೇಳುತ್ತಿದ್ದು, ಇನ್ನೊಂದು ಕಡೆ ಪರಿಹಾರ ಕಾಮಗಾರಿಗಳಿಗಾಗಿ ಕೊಟ್ಟ ಹಣವನ್ನು ಖರ್ಚುಮಾಡದೆ ಹಾಗೆ ಉಳಿದಿರತಕ್ಕ ಸಂದರ್ಭಗಳೂ ಇವೆ. ಇದನ್ನೆಲ್ಲಾ ಆಲೋಚಿಸಿದರೆ ಇದರಲ್ಲಿ ಎಲ್ಲಿಯೋ ನಾವು ತಪ್ಪನ್ನು ಮಾಡುತ್ತಿದ್ದೇವೆಂಬುದಾಗಿ ನನಗೆ ಅನಿಸುತ್ತಿದೆ. ಅಧಿಕಾರಿಗಳ ಆಲಸ್ಯ ಮನೋಭಾವದಿಂದ ನಡೆಸಬೇಕಾಗಿದ್ದ ಕೆಲಸಗಳು ನಡೆಯದೆ ಇದ್ದ ಪ್ರಯುಕ್ತ ಅಲ್ಲಿ ಖರ್ಚಾಗಬೇಕಾಗಿದ್ದ ರೊಕ್ಕ ಖರ್ಚಾಗದೆ ಹಾಗೇ ಉಳಿತಾಯವಾಯಿತು. ನಮ್ಮ ಸರ್ಕಾರದವರು ಹೀಗೆ ಒಂದು ಕಡೆ ಉಳಿತಾಯವನ್ನೂ ತೋರಿಸುತ್ತಾ ಇನ್ನೊಂದು ಕಡೆ ನಮ್ಮಲ್ಲಿ ಹಣವಿಲ್ಲ, ನಾವು ಕೇಂದ್ರ ಸರ್ಕಾರದವರನ್ನು ಕೇಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದವರು ನಮಗೆ ಮೂರು—ನಾಲ್ಕು ಕೋಟಿ ಕೊಟ್ಟಾಗ ನಾವಿಲ್ಲ ಐದು—ಆರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೆ ತಾನೆ ಅವರು ಹೆಚ್ಚು ಕೊಡತಕ್ಕ ಅಗತ್ಯ ಉಂಟಾಗುವುದು! ನಾವು ಈ ದಿವಸ ನಮ್ಮ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಬಗ್ಗೆ ಹೆಚ್ಚು ಹಣವನ್ನು ಖರ್ಚುಮಾಡುವುದಕ್ಕೆ ನಮಗೆ ಸಾಮರ್ಥ್ಯವಿಲ್ಲದೆ ಇರುವಾಗ ನಾವು ಇವುಗಳಿಗೆ ಹೆಚ್ಚು ಹಣಬೇಕು ಎಂದರೆ ಯಾರೇ ಆಗಲಿ ಹೇಗೆ ಕೊಡುತ್ತಾರೆ; ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸದೆ!

ಇನ್ನು ಕುಡಿಯುವ ನೀರಿನ ವಿಚಾರಕ್ಕೆ ಬಂದರೆ ಈಗಾಗಲೇ ಶ್ರೀಮಾನ್ ಡಿ. ದೇವರಾಜ ಅರಸರು ಹೇಳಿದ ಹಾಗೆ ನಾವು ಜನರಿಗೆ ಸ್ವಾತಂತ್ರ್ಯ ಬಂದು 20 ವರ್ಷಗಳ ಮೇಲಾದಾಗ್ಯೂ ಕುಡಿಯುವುದಕ್ಕೆ ನೀರನ್ನು ಕೂಡ ಒದಗಿಸುವುದಕ್ಕಾಗಲಿಲ್ಲಾ ಎಂದಾಗ ನಾವು ರಾಷ್ಟ್ರದ ಸ್ವಾತಂತ್ರ್ಯ ಗಳಿಸಿದ್ದರೂ ಗಳಿಸದ ಹಾಗೆ; ಎಂದು ಹೇಳಿದ್ದು ಸರಿ. ಪರಿಸ್ಥಿತಿ ಹೀಗೇ ಮುಂದುವರಿದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಗ್ರಾಮೀಣ ಜನರು ಸ್ವರಾಜ್ಯ ಎಂಬುದಕ್ಕೆ ಯಾವ ಮನ್ನಣೆಯನ್ನೂ ಕೊಡುವುದಿಲ್ಲ; ಗೌರವವೂ ಸಹಾ ಇರುವುದಿಲ್ಲ. ಆದ್ದರಿಂದ 1972 ರೊಳಗಾಗಿ ಆದರೂ ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರಿನ ಬಾವಿಯನ್ನು ಒದಗಿಸಲೇಬೇಕು ಎಂದು ಹೇಳುತ್ತೇನೆ. ಈ ಬಾವಿಗಳನ್ನು ತೆಗೆಸತಕ್ಕ ಬಗ್ಗೆ ಗ್ರಾಮೀಣ ಜನಕ್ಕೆ ಕಾಂಟ್ರಿಬ್ಯೂಷನ್ ಕೊಡಲು ಸಾಧ್ಯವಿಲ್ಲ. ಹಾಗೇ ಈ ದಿವಸ ಸಣ್ಣ ನೀರಾವರಿ ಕಾಮಗಾರಿಗಳನ್ನು ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ನಡೆಸಬೇಕೆಂದಿವೆ. ಆದರೆ ಅವರಲ್ಲಿ ಸಾಕಷ್ಟು ಹಣವಿಲ್ಲ—ಆ ಕೆಲಸಗಳು ನಡೆಯುವಂತಿಲ್ಲ. ಪರಿಸ್ಥಿತಿ ಹೀಗಿರುವುದರಿಂದ ಸರ್ಕಾರದವರೇ ಇವುಗಳ ಜವಾಬ್ದಾರಿಯನ್ನೆಲ್ಲಾ ವಹಿಸಿಕೊಂಡು ಈ ಕಾರ್ಯಗಳನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಈ ದಿವಸ ತಾಲ್ಲೂಕ್ ಬೋರ್ಡುಗಳಿಗೆ ಸಣ್ಣ ನೀರಾವರಿ ಕಾಮಗಾರಿಗಳನ್ನು ಒಪ್ಪಿಸಬೇಕೆಂದಿದ್ದಾರೆ ಅಂದರೆ ಈ ಪರಿಹಾರ ಕಾರ್ಯಕ್ರಮವನ್ನು ಅವರಿಗೆ ವಹಿಸಿ ಕೊಡಬೇಕೆಂದಿದ್ದಾರೆ. ಆದರೆ ಈ ದಿವಸ ನಮ್ಮಲ್ಲಿ ದೊಡ್ಡ ದೊಡ್ಡ ಕೆರೆಗಳಲ್ಲಯೇ ಆಗಲಿ ಬಾವಿಗಳಲ್ಲೇ ಆಗಲಿ ನೀರಿಲ್ಲ ಎನ್ನುವಾಗ ಸಣ್ಣ ಕೆರೆಗಳ ದುರಸ್ತಿಯಿಂದ ಆಗತಕ್ಕ ಪ್ರಯೋಜನವಾದರೂ ಏನು! ಆದ್ದರಿಂದ ನಾವು ಕೃಷ್ಣ, ಮಲಪ್ರಭ, ಘಟಪ್ರಭ ಮೊದಲಾದ ಯೋಜನೆಗಳನ್ನು ತೀವ್ರಗತಿಯಿಂದ ಮುಗಿಸಬೇಕಾದ್ದು ಅವಶ್ಯಕ. ನಮಗೆ ನಮ್ಮ ಕೇಂದ್ರ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಧನ ಸಹಾಯವನ್ನು ನೀಡಲೇಬೇಕಾಗಿದೆ. ನಮ್ಮ ಆರ್ಥಿಕ ಮಂತ್ರಿಗಳು ಕೇಂದ್ರ ಆಯೋಜನ ಉಪಾಧ್ಯಕ್ಷರಾದ ಶ್ರೀ ಗಾಡ್ಗಿಲ್‌ರ ಸಂಗಡ ಮಾತನಾಡಿ ನಮ್ಮಲ್ಲಿ ನಡೆಯಬೇಕಾಗಿರತಕ್ಕ ನೀರಾವರಿ ಯೋಜನೆಗಳ ಬಗ್ಗೆ ಕೊಟ್ಟರತಕ್ಕ ಹಣ ಬಹಳ ಕಡಮೆ ಆಗಿದೆ, ನಮಗೆ ಪ್ರತಿ ವರ್ಷವೂ ಹೀಗೇ ಆಗುತ್ತಿರುವುದರಿಂದ ನಾವು ಇನ್ನುಳಿದ ರಾಜ್ಯಗಳಿಗೆಲ್ಲಾ ನೀರಾವರಿಯಲ್ಲಿ ಹಿಂದೆ ಬೀಳುವುದಕ್ಕೆ ಇದೇ ಕಾರಣವಾಗಿದೆ ಎಂಬುದಾಗಿ ತಿಳಿಸಿದ್ದರೆ ಅವರ ಪ್ರಯತ್ನದಿಂದ ನಮಗೆ ಹೆಚ್ಚು ಸಹಾಯ ದೊರೆಯಲೇಬೇಕು. ಆಂಧ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ ನೀರಾವರಿ ಆಗತಕ್ಕ ಭೂಮಿಯ ಪ್ರಮಾಣ ಶೇಕಡ 35-40ಕ್ಕೆ ಹೋಗಿದ್ದರೆ ನಮ್ಮಲ್ಲಿ ಅದು ಸೇಕಡ ಎಂಟರಷ್ಟು ಮಾತ್ರ ಇದೆ. ನೋಡಿದರೆ ಮದರಾಸಿನಲ್ಲಿ ನದಿಗಳ ಪ್ರಮಾಣ ಕಡಿಮೆ ನಮ್ಮಲ್ಲಿ ಅದಕ್ಕಿಂತ ಸ್ವಲ್ಪ ಉತ್ತಮ ಪರಿಸ್ಥಿತಿ ಇದ್ದೂ ಇಲ್ಲಿ ಇಷ್ಟು ಕಡಿಮೆ ಪ್ರಮಾಣದಲ್ಲಿರುವುದು ಬಹಳ ದುಃಖದಾಯಕ, ಅಕ್ಷಮ್ಯ. ಅದರಿಂದಲೇ ನಮ್ಮ ರಾಜ್ಯದಲ್ಲಿ ಪದೇ ಪದೇ ಇಂಥ ಕ್ಷಾಮ ಬರಲಕ್ಕೆ

ಹಶ್ತಿದೆ. ಶ್ರೀ ದೇವರಾಜ ಅರಸರು ಹೇಳಿದಂತೆ ಬಾವಿಗಳ ಕೆಲಸ ತೀವ್ರ ಗತಿಯಲ್ಲಿ ನಡೆಯಬೇಕು. ನಾವು ಐದು ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದರೆ ಒಂದು ದಿನದಲ್ಲಿ ಒಂದು ಬಾವಿಯನ್ನು ತೋಡತಕ್ಕ ಯಂತ್ರಗಳು ಬಂದಿವೆ ಎಂದು ಹೇಳುತ್ತಾರೆ, ಆ ವಿಧಾನವನ್ನು ಸರ್ಕಾರದವರು ಕೈಗೊಂಡು ಈ ಕಾರ್ಯವನ್ನು ನೆರವೇರಿಸುವಂತೆ ಇಲ್ಲಿ ನಾವು ಈ ದಿನ ಒಂದು ನಿರ್ಣಯ ಮಾಡಬೇಕಾಗಿದೆ.

ಇನ್ನು ರಾಜ್ಯದಲ್ಲಿ ನಾವು ಅಧಿಕಾರ ವಿಕೇಂದ್ರೀಕರಣವಾಗಬೇಕು ಎಂದು ಒಂದು ಕಡೆ ಹೇಳುತ್ತಿದ್ದರೆ, ಅದೇ ಕಾಲದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ತಾಲ್ಲೂಕ್ ಬೋರ್ಡ್‌ಗಳಿಗೆ ಪರಿಹಾರ ಕಾಮಗಾರಿಗಳನ್ನು ಕೊಡುವುದು ಬೇಡ ಎಂದು ಹೇಳುತ್ತಿದ್ದಾರೆ. ಅಲ್ಲಿ ಹಣ ದುರುಪಯೋಗವಾಗುತ್ತದೆ ಎನ್ನುತ್ತಾರೆ. ತಾಲ್ಲೂಕ್ ಬೋರ್ಡಿನಲ್ಲರತಕ್ಕ ಸದಸ್ಯರೂ ಕೂಡ ಯಾರು ? ಅವರನ್ನು ಅಲ್ಲಿಗೆ ಕೆಲಸ ಮಾಡಲು ಆರಿಸಿ ಕಳುಹಿಸಿದವರು ಜನರಲ್ಲವೇ ? ಇವರನ್ನೇ ನಾವು ಅನುಮಾನ ಮಾಡುತ್ತಾ ಹೋದರೆ ಕೆಲಸಗಳಾಗುವುದಾದರೂ ಹೇಗೆ ? ನಮ್ಮ ಸದಸ್ಯರುಗಳನ್ನೇ ನಂಬದ ನಾವು ಇನ್ನು ಅಧಿಕಾರಿಗಳನ್ನು ಹೇಗೆ ನಂಬುತ್ತೇವೆ ? ಹೀಗೆಲ್ಲಾ ಪಾದ ಮಾಡುವುದು ಸರಿಯಲ್ಲ. ನಮ್ಮ ಕೆಲಸಗಳಾಗಬೇಕಾದರೆ ನಾವು ಆ ಕಾರ್ಯಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಲೇ ಬೇಕು. ಅಲ್ಲ ಅವರಿಗೆ ಹಣದ ಅಭಾವ ಉಂಟಾದಾಗ 40-50 ಸಾವಿರ ರೂಪಾಯಿಗಳನ್ನು ಅವರ ಕಾಲದಲ್ಲಿ ಕೊಟ್ಟು ಕೆಲಸಗಳನ್ನು ನಿರ್ವಹಿಸಲು ತಿಳಿಸಬೇಕು ಹಣವಿಲ್ಲದ್ದರಿಂದ ಎಷ್ಟೋ ತಾಲ್ಲೂಕು ಬೋರ್ಡಿನವರು ಕೆಲಸಗಳನ್ನು ತೆಗೆದುಕೊಳ್ಳಲು ಹಿಂದೆ ಮುಂದೆ ನೋಡುತ್ತಿದ್ದಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಎಲ್ಲ ಕಡೆಗಳಲ್ಲೂ ತಾಲ್ಲೂಕ್ ಬೋರ್ಡುಗಳು ಸತ್ತು ಎಷ್ಟೋ ದಿನಗಳಾಯಿತಲ್ಲವೇ !

ಶ್ರೀ ಎಸ್. ಎಂ. ಗುರೆಡ್ಡಿ.—ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ಇವತ್ತು ಜನರು ಆರಿಸಿ ಕಳುಹಿಸಿದಂತಹ ಆ ಜನರ ಮೇಲೆ ಸಂಶಯಪಟ್ಟುಕೊಂಡರೆ ಈ ಸಭೆಯ ಸದಸ್ಯರ ಮೇಲೂ ಕೂಡ ಏಕೆ ಸಂಶಯಪಟ್ಟುಕೊಳ್ಳಬಾರದು ? ಆದ್ದರಿಂದ ವ್ಯಕ್ತಿಗತವಾಗಿ ವಿಚಾರ ಮಾಡುವುದು ಒಳ್ಳೆಯದಲ್ಲ ನಿಜವಾಗಿಯೂ ಯಾವುದೇ ಕಾರ್ಯವಾಗಬೇಕಾದರೆ, ಹಳ್ಳಿಗಳ ಉದ್ಧಾರವಾಗಬೇಕಾದರೆ ತಾಲ್ಲೂಕು ಬೋರ್ಡುಗಳ ಮುಖಾಂತರವೇ ಏನಾ ಮತ್ತೆಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳಿ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಪ್ಪ (ಟೀರೂರು).—ಸನ್‌ಮಾನ್ಯ ಅಧ್ಯಕ್ಷರೇ, ಈಗ ನಮ್ಮ ರಾಜ್ಯದ 19 ಜಿಲ್ಲೆಗಳಲ್ಲಿ ಸುಮಾರು 15 ಜಿಲ್ಲೆಗಳಲ್ಲಿ ಈ ಕ್ಷಾಮದ ಪರಿಸ್ಥಿತಿ ಉಂಟಾಗಿದೆ. ದೇಶದಲ್ಲಿ ಮಳೆಬೆಳೆಗಳು ಇಲ್ಲದೆ ರೈತರು ಈಗ ದುಸ್ಥಿತಿಯಲ್ಲದ್ದಾರೆ. ಈಗ ರಾಜ್ಯದಲ್ಲರುವ ಪರಿಸ್ಥಿತಿಯನ್ನು ಅವರೋಕನ ಮಾಡಿದರೆ ಆಹಾರದ ಅಭಾವ, ರೈತನ ದುಸ್ಥಿತಿ ಹಾಗೂ ಕೆಲಸ ಮಾಡುವವರಿಗೆ ಕೆಲಸ ಇಲ್ಲದೇ ತೊಂದರೆಯಾಗಿರತಕ್ಕ ಸಂಗತಿಗಳು ಎಲ್ಲೆಲ್ಲೂ ಎದ್ದು ಕಾಣುತ್ತಾ ಇವೆ. ಈ ಪರಿಸ್ಥಿತಿಯನ್ನು ಅರಿತು ಸರ್ಕಾರದವರು ಎಲ್ಲಾ ಕಡೆಗೂ ಕೂಡ ಕ್ಷಾಮ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಲಿಕ್ಕೆ ಹಣವನ್ನು ಒದಗಿಸಿದ್ದಾರ್ಯೂ ಕೂಡ ಕೆಲವು ಕಡೆ ಆ ಹಣ ಸಾಕಾದಷ್ಟು ಇಲ್ಲದೇ ತೊಂದರೆಯಾಗುವ ಪರಿಸ್ಥಿತಿ ಒದಗಿದೆ. ಇನ್ನು ಕೆಲವು ಕಡೆ ಈ ಹಣವನ್ನು ಖರ್ಚುಮಾಡುವುದಕ್ಕೆ ಸರ್ಕಾರದವರು ಏರ್ಪಡಿಸಿರುವ ಈ ನಿಯಮಾವಳಿಗಳು ಸರಿಯಾಗಿಲ್ಲದೇ ಇದ್ದು ಒಂದೊಂದು ಕಡೆ ಒಂದೊಂದು ರೀತಿಯಲ್ಲ ಅಧಿಕಾರಿಗಳು ಆದನ್ನು ಇಂಟರ್‌ಪ್ರಿಟ್ ಮಾಡಿ ಹಣವನ್ನು ಖರ್ಚು ಮಾಡದೇ ಇರತಕ್ಕ ಪರಿಸ್ಥಿತಿ ಇವತ್ತು ಒದಗಿದೆ. ಈ ಬಗ್ಗೆ ಕೆಲವು ಅಂಶಗಳನ್ನು ಸರ್ಕಾರದವರ ಗಮನಕ್ಕೆ ಈ ಸಂದರ್ಭದಲ್ಲ ತರಬಯಸುತ್ತೇನೆ. ಮೊದಲನೆಯದಾಗಿ ಈ ಫ್ಯಾಮಿನ್ 64 ಬಗ್ಗೆ ಕೊಟ್ಟಿರತಕ್ಕ ಹಣವನ್ನು ಖರ್ಚು ಮಾಡುವುದಕ್ಕೆ ಒಂದು ರೂಲ್‌ನ್ನು ಹಾಕಿದ್ದಾರೆ, ಅದರಲ್ಲ ಪಿ ಡಬ್ಲ್ಯು ಡಿ ರೇಟ್‌ಗನುಗುಣವಾಗಿ ಕೊಡತಕ್ಕ ರೇಟು ಅದರಲ್ಲಿ ಇಲ್ಲ, ನಾಮಿನರ್‌ರೋರ್ ಮೇಲೆ ಜನ ಕೆಲಸ ಮಾಡಬೇಕು ಮತ್ತು ಕೆಲಸಕ್ಕೆ ಕೊಡತಕ್ಕ ಕೂಲಿ ಕೂಡ ಪಿ ಡಬ್ಲ್ಯು ಡಿ ಅವರು ಒಂದು ಗಂಡಾಳು ಅಥವಾ ಹೆಣ್ಣಾಳಿಗೆ ಕೊಡತಕ್ಕ ಕೂಲಿಗಿಂತ ಕಡಿಮೆಯಾಗಿದೆ. ಇಂತಹ ಒಂದು ನೀತಿಯನ್ನು ರೂಪಿಸಿದ್ದಾರೆ. ಏನಾದರೂ ಸ್ವಲ್ಪ ಹಣವನ್ನು ಕೊಟ್ಟಂತೆ ಮಾಡಿ ಹಣವನ್ನು ಖರ್ಚುಮಾಡಿದಂತೆ ಮಾಡಲಕ್ಕೆ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದಾರೆಯೇ ಹೊರತು ಅನುಕೂಲವಾಗ ತಕ್ಕ ರೀತಿಯಲ್ಲ ಇಲ್ಲ. ನಮ್ಮ ಜಿಲ್ಲೆಯ ಎರಡು ತಾಲ್ಲೂಕುಗಳು ಈ ಪರಿಸ್ಥಿತಿಗೆ ಒಳಗಾಗಿವೆ. ನವುಗೆ ಕೊಟ್ಟಿರತಕ್ಕ ಎರಡು ಲಕ್ಷ ರೂಪಾಯಿಗಳಲ್ಲಿ ಹತ್ತು ಸಾವಿರ ರೂಪಾಯಿಗಳೂಕೂಡ ಇವತ್ತಿನ ದಿವಸ ಖರ್ಚಾಗಿಲ್ಲ. ಅಧಿಕಾರಿಗಳಿಗೆ ಕೇಳಿದರೆ ನಮಗೆ ಸರ್ಕಾರದವರು ಹಾಕಿರತಕ್ಕ

(ಶ್ರೀ ಎಂ. ಮಲ್ಲಪ್ಪ)

ನಿಬಂಧನೆಗಳಿಗನುಗುಣವಾಗಿ ಕೆಲಸ ಮಾಡಬೇಕೆಂದರೆ — ಪಿ ಡಬ್ಲ್ಯು ಡಿ ರೇಟ್ ಕೊಡಲಕ್ಕೆ — ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದಾರೆ. ಈ ಪರಿಸ್ಥಿತಿಯನ್ನು ಹೋಗರಾಡಿಸಬೇಕು. ಏಕೆಂದರೆ ದೇಶಕ್ಕೆ ಕಷ್ಟ ಬಂದಿದೆ, ಜನಗಳಿಗೆ ಕೆಲಸ ಇಲ್ಲ. ದಿ ರೇಬರರ್ ಷುಡ್ ನಾಟ್ ಬಿ ಎಕ್ಸ್‌ಪ್ಲಾಯಿಟೆಟ್ ಬೈ ದಿ ಗವರ್ನಮೆಂಟ್. ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಒಬ್ಬ ಗಂಡಾಳಿಗೆ ಎಷ್ಟು ಕೂಲಿ ಕೊಟ್ಟರೆ ಎರಡು ಹೊತ್ತು ಊಟ ಅಥವಾ ಸಾಮಾನ್ಯ ಜೀವನ ನಡೆಸಬಹುದೋ ಅದಕ್ಕಿಂತ ಕಡಿಮೆ ಕೊಡುವುದು ನ್ಯಾಯವಲ್ಲ. ಸರ್ಕಾರದವರು ಅದಕ್ಕೆ ಪ್ರೋತ್ಸಾಹ ಕೊಡಕೂಡದು ಎಂಬ ಉದ್ದೇಶದಿಂದ ಈ ಒಂದು ಸಲಹೆಯನ್ನು ಮಾಡುತ್ತಾ ಇದ್ದೇನೆ. ರೋಕೋಪಯೋಗಿ ಇಲಾಖೆಯವರ ಷೆಡ್ಯೂಲ್ ಪ್ರಕಾರ ಯಾವ ರೇಟ್ ಇದೆ ಅದಕ್ಕನುಗುಣವಾಗಿ ಫ್ಯಾಮಿನ್ ರಿಲೀಫ್ ವರ್ಕ್ಸ್‌ಗೂ ಕೂಡ ಗಂಡು ಮತ್ತು ಹೆಣ್ಣಾಳುಗಳಿಗೆ ಕೂಲಿಯನ್ನು ಕೊಡಬೇಕು. ಆ ರೀತಿ ಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಖಂಡಿತವಾಗಿಯೂ ಅನುಕೂಲವಾಗಲಕ್ಕಿಲ್ಲ ಎಂಬುದನ್ನು ಒತ್ತಿ ಹೇಳಬಯಸುತ್ತೇನೆ. ಎರಡನೆಯದಾಗಿ ಪಿ ಡಬ್ಲ್ಯು ಡಿ ರೂಲ್ಸ್‌ಗನುಸಾರವಾಗಿ ಅಂದಾಜುಗಳನ್ನು ತಯಾರು ಮಾಡಿಸಿ ಅವುಗಳನ್ನು ಕಂಟ್ರಾಕ್ಟ್‌ದಾರರುಗಳ ಮುಖಾಲಕ ಮಾಡಿಸಿದರೆ ಮಾತ್ರ ಈ ಕೆಲಸಗಳು ಆಗುವುದಕ್ಕೆ ಸಾಧ್ಯವಾಗುತ್ತದೆ, ಹಾಗಲ್ಲದೇ ಆ ಪ್ರದೇಶದಲ್ಲಿರತಕ್ಕ ಜನರಿಗೆ ನಾಮಿನಲ್ ರೋರ್ ಪ್ರಕಾರ ಕೂಲಿ ಕೊಟ್ಟು ಕೆಲಸ ಮಾಡಿಸುತ್ತೇವೆ ಅಂತ ಹೇಳುವುದಾದರೆ ಭ್ರಷ್ಟಾಚಾರ ತಲೆದೋರಿ, ಹಣ ದುರುಪಯೋಗವಾಗಿ ತಾಲ್ಲೂಕು ಬೋರ್ಡಿನವರಾಗಲಿ ಅಥವಾ ಬೇರೆ ಯಾರು ಮುಂದೆ ಬಂದು ಕೆಲಸ ಮಾಡಿಸುತ್ತೇವೆ ಎಂದು ಹೇಳುತ್ತಾರೋ ಅವರಿಗೆ ಕೆಟ್ಟ ಹೆಸರು ಬರುತ್ತದೆ. ಅಧಿಕಾರಿಗಳಿಗೂ ಕೂಡ ಕೆಟ್ಟ ಹೆಸರು ಬರಬಹುದು. ಆದ್ದರಿಂದ ಈ ನಿಯಮಾವಳಿಗಳನ್ನು ಬದಲಾವಣೆ ಮಾಡಿ ಹಣ ಖರ್ಚಾಗಲಕ್ಕೆ ಮತ್ತು ಕೆಲಸಕಾರ್ಯಗಳು ಜಾಗ್ರತೆ ಕಾರ್ಯರೂಪಕ್ಕೆ ಬರುವಂತೆ ಮಾಡಲು ನೂಕ್ತ ಕಾರ್ಯ ಕ್ರಮಗಳನ್ನು ತಗೆದುಕೊಳ್ಳಬೇಕೆಂದು ಮತ್ತೊಂದು ಸಲಹೆಯನ್ನು ನೀಡಬಯಸುತ್ತೇನೆ. ಈಗಿನ ನಿಯಮದ ಪ್ರಕಾರ ಒಂದು ನಿಗದಿಯಾವ ವೇಳೆಗಿಂತ ಹಾಸ್ತಿ ಕೆಲಸ ಮಾಡಿದರೂ ಕೂಡ ಒಂದು ರೂಪಾಯಿ 25 ಪೈಸೆಗಿಂತ ಹೆಚ್ಚಾಗಿ ಕೊಡುವ ಹಾಗೆ ಇಲ್ಲ, ಇದು ಒಂದು ಎಕ್ಸ್‌ಪ್ಲಾಯಿಟೇಷನ್ ಆಫ್ ರೇಬರ್, ಇಂತಹ ಒಂದು ನಿಯಮವನ್ನು ಸರ್ಕಾರದವರು ಅನುಸರಿಸಬಾರದು ಎಂದು ಒತ್ತಾಯಪಡಿಸುತ್ತೇನೆ ಮತ್ತು ಹೆಚ್ಚು ಕೆಲಸ ಮಾಡಿದರೆ ಅದಕ್ಕೆ ಸಾಕಾದಷ್ಟು ಕೂಲಿ ದೊರಕುವಂತೆ ನಿಯಮಾವಳಿಗಳನ್ನು ಬದಲಾಯಿಸಬೇಕು. ಇವತ್ತಿನ ದಿವಸ ಎಲ್ಲಾ ವಿಚಾರದಲ್ಲೂ ರೈತರಿಗೆ ಅನುಕೂಲವಾಗತಕ್ಕ ಕೆಲಸ ಎಂದರೆ ಸಾಯಿಲ್ ಕನ್‌ಸರ್ವೇಷನ್ ವರ್ಕ್. ಇದಾಖೆಯಿಂದ ಆ ಕೆಲಸವನ್ನು ಮಾಡಿಸಿಕೊಡುತ್ತಾ ಇದ್ದೀರಿ, ಅಲ್ಲೂ ಕೂಡ ಪಿ ಡಬ್ಲ್ಯು ಡಿ ಷೆಡ್ಯೂಲ್‌ನಂತೆ ಕೂಲಿಯನ್ನು ಕೊಡುವುದಕ್ಕೆ ನಿಯಮಾವಳಿಗಳನ್ನು ನಡಿಲಗೊಳಿಸಬೇಕೆಂದು ಈ ಸಮಯದಲ್ಲಿ ಒತ್ತಿ ಹೇಳುತ್ತೇನೆ.

ಇವತ್ತಿನ ದಿವಸ ನೀರಾವರಿ ಬಾವಿಗಳಿಗೆ 5,000, ರೂಪಾಯಿಗಳಿಗೆ ಏರದಂತೆ ಹಣವನ್ನು ಒಬ್ಬರೈತನಿಗೆ ಕೊಡಲಕ್ಕೆ ಅವಕಾಶವಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣ ದಲ್ಲಿ ಹೇಳಿದ್ದಾರೆ. ಮತ್ತು ಆ ಬಗ್ಗೆ ನೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಯಾರಾದರೂ ರೈತರು ಮುಂದೆ ಬಂದರೆ, ಎಸ್ಟಿಮೇಟ್ ಆಗಬೇಕು, ಚೆಕ್ಕಿಕರ್ ಸಿಜೆನ್ಸಿಗೆ ಕೊಡಬೇಕು ಹಾಗೆ ಹೀಗೆ ಅಂತ ಹೇಳಿ ರೈತರನ್ನು ಡಿಸ್ಕರೇಜ್ ಮಾಡತಕ್ಕ ಪಾಲಿಸಿ ಅಧಿಕಾರಿಗಳಲ್ಲಿ ಇದೆ. ನಮಗೆ ಇದು ಒಂದು ಸಮಸ್ಯೆಯಾಗಿದೆ. ನಿಜವಾಗಿಯೂ ಹಣ ಕೊಡುತ್ತಾರೋ ಇಲ್ಲವೊ ಅಂತ ಹೇಳಿ ಅನುಮಾನಕ್ಕೂ ಕೂಡ ಆಸ್ಪದವಾಗಿದೆ. ಸಾರ್ವಜನಿಕ ಮುಖಂಡರು ಬಂದು ಹೇಳಿದರೂ ಕೂಡ ಆಗರಾರದಂತಹ ಒಂದು ಕಷ್ಟಪರಿಸ್ಥಿತಿ ಇದೆ. ಬೇಕಾದಷ್ಟು ಹಣವನ್ನು ಬಳಸಲಕ್ಕೆ ಸಿದ್ಧವಾಗಿದ್ದೇವೆ. ಎಷ್ಟು ಹಣವನ್ನು ಬೇಕಾದರೂ ಖರ್ಚು ಮಾಡಿ ಎಂದು ಒಂದು ಕಡೆ ಹೇಳುತ್ತೀರಿ. ಆದರೆ ತಾವು ಹಾಕಿರತಕ್ಕ ನಿಯಮಾವಳಿಗಳನ್ನು ರೈತರ ಕೆಲಸಕ್ಕೆ ವಿರುದ್ಧವಾಗಿ, ಅಭಿವೃದ್ಧಿಕಾರ್ಯಗಳಿಗೆ ವಿರುದ್ಧವಾಗಿ ಅಧಿಕಾರಿಗಳು ಇಂಟರ್‌ಪ್ರಿಟ್ ಮಾಡುತ್ತಾ ಇರುವುದನ್ನು ನೋಡಿದರೆ ಸಂಶಯ ಬರುತ್ತಾ ಇದೆ. ಆದ್ದರಿಂದ ನಿಜವಾಗಿಯೂ ದೇಶಕ್ಕೆ ಒದಗಿರತಕ್ಕ ಕಷ್ಟ ಕಾಲದಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಹಣವನ್ನು ಸರಿಯಾಗಿ ವಿನಿಯೋಗ ಮಾಡುತ್ತಾರೆಯೇ ಇಲ್ಲವೇ ಎಂಬುದನ್ನು ತಾವು ಕಣ್ಣು ತೆರೆದು ನೋಡಿ, ಅಕಸ್ಮಾತ್ತಾಗಿ ಎಲ್ಲಾದರೂ ದುರುಪಯೋಗ ಮಾಡಿದ್ದರೆ ಮಧ್ಯವರ್ತಿ ಜನರಾಗಲಿ, ಸರ್ಕಾರದ ಅಧಿಕಾರಿಗಳಾಗಲಿ ಅವರ ಮೇಲ್ಯಚಾರಣೆಯಲ್ಲಿ ಏನಾದರೂ ಸಂಶಯಕಂಡು ಬಂದು ಹಣ ದುರುಪಯೋಗವಾಗುವುದು ಇದ್ದರೆ ಅಂಥವರ ಮೇರೆ ಕ್ರಮ ಕೈಕೊಂಡು ಅವರನ್ನು ಉಗ್ರ ಶಿಕ್ಷೆಗೆ ಗುರಿಪಾಡಬೇಕು ಎಂದು ಹೇಳುತ್ತೇನೆ. ಇವತ್ತಿನದಿವಸ

ಬಡ ರೈತ, ಕೂಲಿಗಾರ ಹೊಟ್ಟೆಗೆ ಇಲ್ಲದೆ, ಕ್ಷಾಮದಿಂದ ಬಡತನದಿಂದ ಕಷ್ಟಪಡುತ್ತಾ ಇರಬೇಕಾದರೆ ಅವನ ಕಷ್ಟಕಾರ್ಪಣ್ಯಗಳನ್ನು ನೀಗಲು ನಿಜವಾಗಿಯೂ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀಮತಿ ನಾಗಮ್ಮ (ಕಲಮಾಲ).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲರುವ ಬರಗಾಲ ಪರಿಸ್ಥಿತಿ ಹೇಗಿದೆ ಎಂಬುದನ್ನು ಹೇಳಲು ಬಹಳ ನೋವಾಗುತ್ತದೆ. ಏಕೆಂದರೆ ಮೂರು ವರ್ಷಗಳಿಂದಲೂ ಕೂಡ ಮಳೆ ಸರಿಯಾಗಿ ಬರದೆ ದೇಶದಲ್ಲಿ ಅಲ್ಲಕಲ್ಲೋಲವಾಗಿದೆ. ಇದರಿಂದ ಎತ್ತುಗಳಿಗೆ ಮೇವಿಲ್ಲ, ಮನುಷ್ಯರಿಗೆ ಅನ್ನವಿಲ್ಲ. ಹೀಗಾಗಿ ಸಾಯುವ ಪರಿಸ್ಥಿತಿ ಬಂದಿದೆ. ಮಾನ್ಯ ಮಂತ್ರಿಗಳು ಕೇಂದ್ರ ಸರಕಾರದಿಂದ 8 ಕೋಟಿ ರೂಪಾಯಿಗಳನ್ನು ತರಿಸಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಈಗಾಗಲೆ ಎರಡೂವರೆ ಕೋಟಿ ರೂಪಾಯಿ ಕೊಡವುದಾಗಿ ಹೇಳಿದ್ದಾರೆ. ಮತ್ತು ಬೇಕಾದಷ್ಟು ಖರ್ಚುಮಾಡುವುದಾಗಿಯೂ ತಿಳಿಸಿದ್ದಾರೆ. ಆದರೆ ಬೇಕಾದ ಹಣ ಯಾವಾಗಲೋ ಬರುತ್ತದೆ ಎಂದರೆ ಆಗುವುದಿಲ್ಲ, ತಕ್ಷಣ ಮುಂಜೂರಾಗಿರುವ ಹಣ ತೆಗೆದು ಕೊಂಡು ಬೇಗ ರಸ್ತೆ,, ಬಾವಿ ಮುಂತಾದುವುಗಳ ಕೆಲಸ ಕೈಗೊಂಡರೆ ಅನುಕೂಲವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.. ನಮ್ಮ ರೈತರು ಬೇಕಾದಷ್ಟು ಬೆಳೆ ಇಟ್ಟರೂ ಕೂಡ ಅದು ಒಣಗಿಹೋಗಿದೆ, ದನಗಳಿಗೆ ಮೇವಿಲ್ಲ, ಕುಡಿಯಲು ನೀರಿಲ್ಲ, ಹೀಗೆ ಅನೇಕ ಕೊರತೆ ಇದೆ. ನಮ್ಮ ಊರಿನಲ್ಲಿ ಮಾತ್ರವಲ್ಲದೆ 19 ಜಿಲ್ಲೆಗಳಲ್ಲಿ 3 ಜಿಲ್ಲೆಗಳನ್ನು ಬಿಟ್ಟರೆ ಉಳಿದ ಕಡೆಗಳಲ್ಲೆಲ್ಲಾ ಒಂದೇ ರೀತಿ ಕಷ್ಟ ಪರಿಸ್ಥಿತಿ ಇದೆ, 3 ಜಿಲ್ಲೆಗಳಲ್ಲ ಅನುಕೂಲವಿರಬಹುದು. ಇದಕ್ಕಾಗಿ ಬೇಕಾದಷ್ಟು ಹಣ ಕೊಟ್ಟು ರಸ್ತೆ, ಕೆರೆ, ಬಾವಿ ಮಾಡಿಸಬೇಕು ಎಂದು ಒತ್ತಾಯಮಾಡಿ ಹೇಳುತ್ತೇನೆ. ತಕ್ಷಣ ಈ ಕೆಲಸ ಮಾಡಿದರೆ ಸಹಾಯವಾಗುತ್ತದೆ, ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಎರಡು ತಿಂಗಳಾದಮೇಲೆ ಮಾಡುವುದಾದರೆ ಸಾರ್ಥಕವಾಗುವುದಿಲ್ಲ. ಇದರ ನಲುವಾಗಿ ಸರಕಾರದವರು ಬೇಗನೆ ಜಿಲ್ಲಾಧಿಕಾರಿಗಳು, ಪಬ್ಲಿಕ್‌ವರ್ಕ್ಸ್ ಇರಾಖೆಯವರು, ತಾಲ್ಲೂಕು ಬೋರ್ಡಿನವರು ಮುಂತಾದವರಿಗೆ ಕೆಲಸಗಳನ್ನು ವಹಿಸಿ ಲಗೂನೆ ಮಾಡಿಸಬೇಕು. ತಾಲ್ಲೂಕು ಬೋರ್ಡು ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಮಾನ್ಯ ಸದಸ್ಯರು ಕೆಲವರು ಹೇಳುತ್ತಿದ್ದಾರೆ. ಆದರೆ ಅದು ಎಷ್ಟೋ ಕೆಲಸಮಾಡಿದೆ, ರಾಯಚೂರು ಜಿಲ್ಲೆಯಲ್ಲ ಸಿಂಧನೂರು ತಾಲ್ಲೂಕು ಮುಂತಾದ ಕಡೆಗಳಲ್ಲ ಬೇಕಾದಷ್ಟು ಕೆಲಸಮಾಡಿದೆ. ಅದಕ್ಕೆ ಹಣ ಸಾಲದು ಸರಕಾರ ಸಾಕಷ್ಟು ಕೊಟ್ಟಿಲ್ಲ, ಸರಕಾರ ಕೊಡಬೇಕು ಎಂದು ಮನವಿಮಾಡುತ್ತೇನೆ. ಹಣ ಸಾಕಾದಷ್ಟು ಕೊಟ್ಟರೆ ಬೇಕ್ಕಾದಷ್ಟು ಕೆಲಸವಾಗುತ್ತದೆ. ಈಗ ಕೆಲಸ ಪ್ರಾರಂಭವಾಗಿದೆ, ಅಧಿಕಾರಿಗಳೂ ಒಳ್ಳೆಯವರು ಬಂದಿದ್ದಾರೆ, ಆದುದರಿಂದ ಚೆನ್ನಾಗಿ ಆಗುತ್ತದೆ. ವಿರೋಧ ಪಕ್ಷದವರು ತಾಲ್ಲೂಕ ಬೋರ್ಡು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಹೇಳಬಹುದು. ಆದರೆ ಅದು ಸರಿಯಲ್ಲ, ಬೇಕಾದಷ್ಟು ಕೆಲಸಮಾಡಿದೆ. ಈಗಾಗಲೆ ಬಾವಿ, ಕಟ್ಟಡ ಮುಂತಾದುವನ್ನು ಬೇಕಾದಷ್ಟು ಕಟ್ಟಿಸಿದ್ದಾರೆ. ಕೆಲಸ ಮಾಡುವವರು ಮುಂದೆ ಬಂದರೆ ಅವರಿಗೆ ಬೇಕಾದಷ್ಟು ಹಣ ಕೊಡಬೇಕು. ನಮ್ಮ ತಾಲ್ಲೂಕು ಬೋರ್ಡಿಗೆ ಒಬ್ಬ ಅಸಿಸ್ಟೆಂಟ್ ಎಂಜಿನಿಯರನ್ನು ಕೊಡಬೇಕು. ಏಕೆಂದರೆ ಎಸ್ಟಿಮೇಟ್ ಮಾಡಲು ಪಿ ಡಬ್ಲ್ಯು ಇರಾಖೆಗೆ ಕಳಿಸಬೇಕಾಗುತ್ತದೆ, ಅವರ ಕೆಲಸವೇ ಜಾಸ್ತಿಯಾಗಿರುವಾಗ ಅವರು ಬೇಗ ಅದನ್ನು ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ತಾಲ್ಲೂಕುಬೋರ್ಡಿನ ಕೆಲಸ ಹಿಂದುಮುಂದಾಗುತ್ತದೆ. ಆದುದರಿಂದ ತಾಲ್ಲೂಕುಬೋರ್ಡಿಗೇ ಒಬ್ಬ ಅಸಿಸ್ಟೆಂಟ್ ಎಂಜಿನಿಯರನ್ನು ಕೊಟ್ಟು ಜಾಗ್ರತೆ ಅಂದಾಜು ಮುಂತಾದ್ದನ್ನು ಮಾಡಲು ಅವಕಾಶಮಾಡಬೇಕು.

ರೈತರ ಎತ್ತುಗಳಿಗೆ ಮೇವಿಲ್ಲ, ಅದನ್ನು ಒದಗಿಸಬೇಕು. ಬೆಳೆ ಒಣಗಿರುವುದರಿಂದ 3 ವರ್ಷಗಳಿಂದ ದನಗಳಿಗೆ ಮೇವಿಲ್ಲ. ಆದುದರಿಂದ ಸರಕಾರ ಮೇವನ್ನು ಎಲ್ಲಿಂದರಾದರೂ ತಂದು ರಾರಿಗಳಲ್ಲಿ ಸಾಗಿಸಿ ಒದಗಿಸಬೇಕು.

ಕೊನೆಯದಾಗಿ ಒಂದು ವಿಷಯವನ್ನು ಹೇಳುತ್ತೇನೆ. ನಮ್ಮ ಚಂದ್ರಬಂಡೆ ಸರ್ಕಲ್ಲಿಗೆ ಒಂದು ಕೆನಾರ್ ಕೊಡಬೇಕು, ನಮ್ಮದು ಬಹಳ ಬಡತನದ ಭಾಗ. ಅದನ್ನು ಕೊಡದಿದ್ದರೆ ಅಲ್ಲ ಜನರೇ ಇರುವುದಿಲ್ಲ, ಆ ಭಾಗ ಆಂಧ್ರಕ್ಕೆ ಸೇರುತ್ತದೆ. ಅಲ್ಲನ ಜನರು ಆಂಧ್ರಕ್ಕೆ ಸೇರಲು ಅವಕಾಶ ಕೊಡದೆ ಆ ಭಾಗಕ್ಕೆ ಒಂದು ಕೆನಾರ್ ಕೊಡಬೇಕು. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

† ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ರಾಜ್ಯದಲ್ಲಿ ಇರುವ ಭೀಕರ ಬರಗಾಲ ಪರಿಸ್ಥಿತಿಯ ಬಗ್ಗೆ ಈಗಾಗಲೆ ಕೈಗೊಂಡಿರುವ ಪರಿಹಾರ ಕಾರ್ಯಗಳನ್ನು ತಿಳಿಸಿ ಮುಂದೆ ಕೈಕೊಳ್ಳಬೇಕಾದ ಕೆಲಸಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಅಭಿಪ್ರಾಯವನ್ನು ನೂಡಿನಬೇಕೆಂದು ಮುಖ್ಯ ಮಂತ್ರಿಗಳು ಕೇಳಿರುವುದು ಸ್ವಾಗತಾರ್ಹವಾಗಿದೆ. ಈ ದೇಶದಲ್ಲಿ ಬರಗಾಲ ಮೇಲಿಂದ ಮೇಲೆ ಬರುವ ಪರಿಸ್ಥಿತಿಯಿದೆ. ಬರಗಾಲ ಬಂದಾಗಲೇನೋ ಸರಕಾರದವರು ತಾತ್ಕಾಲಿಕವಾಗಿ ಕೆಲವು ಕಾರ್ಯಕ್ರಮಗಳನ್ನು ಕೈಕೊಂಡು ಅಲ್ಲಲ್ಲಿ ಜನರಿಗೆ ಅಲ್ಪಸ್ವಲ್ಪ ಸೌಲತ್ತು ಗಳನ್ನು ಕೊಡುತ್ತಿದ್ದಾರೆ. ಶಾಶ್ವತವಾದ ಪರಿಹಾರವೊದಗಿಸಲು ಇದುವರೆಗೆ ಸರಿಯಾದ ಕಾರ್ಯಕ್ರಮ ಕೈಕೊಂಡಿಲ್ಲ. ಮೊಟ್ಟ ಮೊದಲನೆಯದಾಗಿ ಸ್ವಾತಂತ್ರ್ಯ ಬಂದನಂತರ ಮೂರು ಯೋಜನೆಗಳಲ್ಲಿ ಒಕ್ಕಲತನಕ್ಕೆ ಯಾವ ಸ್ಥಾನ ಕೊಡಬೇಕಾಗಿತ್ತೋ ಅದನ್ನು ಕೊಡದೇ ಹೋದ್ದರಿಂದ ಈಗ ಕಷ್ಟವೊದಗಿದೆ. ಒಕ್ಕಲತನಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡದೇ ಚಿಕ್ಕ ಸೀರಾವರಿ ಯೋಜನೆ ಗಳನ್ನು ಕೈಕೊಳ್ಳದೆ ಸರಕಾರದವರು ಅಲಕ್ಷ್ಯ ಮಾಡಿದ್ದರಿಂದ ನಾವು ಈ ದುರವಸ್ಥೆಗೆ ಈಡಾಗ ಬೇಕಾಯಿತು.

5-30 P.M.

ಮೊಟ್ಟಮೊದಲನೆಯದಾಗಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಕ್ಕಲುತನಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು ದೇಶದ ರಕ್ಷಣೆಗಾಗಿ ಖರ್ಚು ಮಾಡುವಷ್ಟೇ ಹಣವನ್ನು ಒಕ್ಕಲು ತನದ ಸಲುವಾಗಿ ಖರ್ಚು ಮಾಡುವುದು ಅವಶ್ಯವಿದೆ. ಈ ಬಗ್ಗೆ ನಾವು ವಿಚಾರ ಮಾಡತಕ್ಕ ಮತ್ತೊಂದು ಮಹತ್ವದ ಕೆಲಸ ಎಂದರೆ ನಮ್ಮಲ್ಲಿರುವ ಜನಬಲವನ್ನು ಉಪಯೋಗ ಮಾಡುವುದು. ನಾವು ಮಾತನಾಡುವಾಗ ಪರದೇಶದಿಂದ ಸಹಾಯ ದೊರೆಯಬೇಕು, ಯಂತ್ರಗಳನ್ನು ತರಬೇಕು, ಬಾವಿಯನ್ನು ಅಗೆಯಲು ಯಂತ್ರಗಳನ್ನು ತರಬೇಕು, ಅದಕ್ಕೆ ಹಣ ಬೇಕು, ಹಣವಿಲ್ಲದೆ ಯೋಜನೆ ಗಳೆಲ್ಲ ವ್ಯರ್ಥವಾಗುತ್ತಿವೆ ಎಂದು ಹೇಳುತ್ತೇವೆ. ನಮ್ಮಲ್ಲರತಕ್ಕ ಜನಬಲವನ್ನು ಸರಿಯಾಗಿ ಉಪಯೋಗ ಮಾಡಬೇಕು. ಇದಕ್ಕೆ ಸರ್ಕಾರದವರು ಮತ್ತು ಜನನಾಯಕರು ಜನತೆಯಲ್ಲಿ ಹೊಸ ವಾತಾವರಣ, ಹೊಸ ವಿಚಾರವನ್ನು, ಕ್ರಾಂತಿಯನ್ನು ತರಬೇಕಾಗಿದೆ. ಪ್ರತಿಯೊಬ್ಬ ಮನುಷ್ಯನೂ ಹಳ್ಳಿಯಲ್ಲರುವ ಜನಬಲ ಸರಿಯಾಗಿ ಉಪಯೋಗ ಆಗುವಂತೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳ ಬೇಕು. ಬಾವಿ ತೆಗೆಯುವುದಕ್ಕೆ ಯಂತ್ರಬೇಕು ಎಂದು ಹೇಳುವುದಕ್ಕೆ ಬದಲಾಗಿ ಸಾವಿರಾರು ಜನ ತರುಣರು ಸರಿಯಾಗಿ ಒಂದು ವಾರ ಕೆಲಸ ಮಾಡಿದರೆ ಆ ಊರಿಗೆ ಬೇಕಾದ ಬಾವಿಯಾಗುತ್ತದೆ, ರಸ್ತೆ ಬೇಕು ಎಂದರೆ ರಸ್ತೆ ಆಗುತ್ತದೆ, ಗ್ರಾಮಾಂತರದಲ್ಲಿ ಪ್ರತಿಯೊಬ್ಬರೂ ಸರಿಯಾಗಿ ಕೆಲಸ ಮಾಡಿದರೆ ಒಂದೇ ವಾರದಲ್ಲಿ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ರಸ್ತೆಯಾಗುತ್ತದೆ. ಅದೇ ರೀತಿ ಒಕ್ಕಲುತನದ ಅಭಿವೃದ್ಧಿ ಸಲುವಾಗಿಯೂ ಮಾಡಬೇಕಾಗಿದೆ. ಸಾಲ ತಂದು ಜನಗಳಿಗೆ ಆಹಾರವನ್ನು ಒದಗಿಸುವ ಕಾರ್ಯಕ್ರಮವನ್ನು ಇಟ್ಟುಕೊಂಡರೆ ಅದರಿಂದ ಯಾವ ಪರಿಹಾರವೂ ಆಗುವುದಿಲ್ಲ. ಶಾಶ್ವತ ಪರಿಹಾರದ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಲು ಒಂದು ಸಮಿತಿಯನ್ನು ನೇಮಿಸಬೇಕು. ಈ ಸಭೆಯ ಸದಸ್ಯರು, ಅಧಿಕಾರಿಗಳು ಇವರನ್ನೊಳಗೊಂಡ ಒಂದು ಕಮಿಟಿ ಯನ್ನು ಮಾಡಿ ಅವರ ಸಲಹೆ ಪ್ರಕಾರ ತೀವ್ರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಡುತ್ತೇನೆ.

ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಕೊಟ್ಟ ಹಣವನ್ನೂ ಅಧಿಕಾರಿಗಳು ಖರ್ಚು ಮಾಡಿಲ್ಲ, ಎಷ್ಟೋ ಸಲ ಅಧಿಕಾರಿಗಳು ಮತ್ತು ದಳ್ಳಾಳಿಗಳ ಕಡೆಯಿಂದ ಹಣದ ದುರುಪಯೋಗವಾಗುವ ಸಂಭವವಿದೆ ಎನ್ನುವ ಮಾತನ್ನೂ ಹೇಳಿದ್ದಾರೆ. ಆ ಬಗ್ಗೆ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಅವರು ಅಂಥ ಅಧಿಕಾರಿಗಳ ಬಗ್ಗೆ ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಮಾತ್ರ ಹೇಳಲಿಲ್ಲ. ಅದನ್ನು ಸಭೆಯ ಮುಂದೆ ತಮ್ಮ ಉತ್ತರದಲ್ಲಿ ತಿಳಿಸಬೇಕು. ನಮಗೆ ಇನ್ನೂ ಒಂದು ಅನುಭವ ಏನು ಬಂದಿದೆ ಎಂದರೆ ಮಂತ್ರಿಗಳು ಭಾಷಣ ಮಾಡುತ್ತಾರೆ ಹೇಳಿದ್ದನ್ನೇ ಹೇಳಿಕೊಂಡು ಹೋಗುತ್ತಾರೆ, ನಾವು ಮಾಡುವ ಕೆಲಸಗಳನ್ನು ನಾವು ಮಾಡುವ ರೀತಿಯಲ್ಲಿಯೇ ಮಾಡಬಹುದು ಎನ್ನುವ ಭಾವನೆ ಬಂದಿದೆ. ನನಗೆ ತಿಳಿದ ಮಟ್ಟಿಗೆ ಸ್ವಾತಂತ್ರ್ಯ ಬಂದ ನಂತರ ದಿವಂಗತ ಜವಹರಲಾಲ್ ನೆಹರೂ ಅವರು ಹೇಳಿದರು, ಎಲ್ಲ ಕಾಳಸಂತೆಕೋರರಿದ್ದಾರೆ ಅವರನ್ನೆಲ್ಲ ಗಲ್ಲಿಗೆ ಏರಿಸಬೇಕು ಎಂದು ಇಷ್ಟೆಲ್ಲ ಹೇಳಿದ್ದರೂ

ಒಬ್ಬರ ಮೇಲೂ ಯಾವುದೇ ರೀ ಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಅದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ತಪ್ಪು ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆ, ಯಾವ ಕ್ರಮ ತೆಗೆದು ಕೊಳ್ಳುತ್ತಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಯುದ್ಧಕಾಲದಲ್ಲ ಯಾವರೀತಿ ತುರ್ತು ಪರಿಸ್ಥಿತಿ ಎಂದು ಹೇಳಿ ಕೆಲಸ ಮಾಡಿದರು ಅದೇ ರೀತಿಯಾಗಿ ಪರಿಹಾರಕಾರ್ಯ ನಡೆಯಬೇಕು. ನಾನು ನಮ್ಮ ಭಾಗದಲ್ಲ ಎರಡು ತಿಂಗಳಿಂದ ಪ್ರವಾಸ ಮಾಡುತ್ತಿದ್ದೇನೆ, ಬರಗಾಲದ ಕಾಮಗಾರಿಗಳು ಯಾವರೀತಿ ನಡೆಯುತ್ತಿವೆ ಎಂದು ನೋಡು ತ್ತಿದ್ದೇನೆ. ತಾಲ್ಲೂಕು ಕಮಿಟಿಯಿಂದ ಅಸಿಸ್ಟೆಂಟ್ ಕಮಿಷನರ್, ಡೆಪ್ಯುಟಿ ಕಮಿಷನರ್‌ಗೆ ಹೋಗಿ, ಎಕ್ಸಿಕ್ಯೂಟಿವ್ ಇಂಜಿನಿಯರಿಂದ ಪ್ಲಾನ್ ಮತ್ತು ಎಸ್ಟಿಮೇಟುಗಳು ಬರಬೇಕು, ಅದೆಲ್ಲ ಬಂದ ಮೇಲೆ ಕೆಲಸಕ್ಕೆ ಆರ್ಡರ್ ಕೊಡಬೇಕು. ಇದರಿಂದ ಎರಡು ಮೂರು ತಿಂಗಳವರೆಗೆ ವಿಳಂಬವಾಗು ತ್ತದೆ. ಅಭಾವ ಇರುವ ನಂದರ್ಭದಲ್ಲಿ ಕೆಲಸಗಳನ್ನು ಮಾಡಿಸುವುದರಲ್ಲಿ ಹೀಗೆ ವಿಳಂಬವಾದರೆ ಜನ ಹೇಗೆ ಬದುಕಬೇಕು ? ಈಗಾಗಲೇ ಅನೇಕ ನದಸ್ಯರು ರೇಟುಗಳ ಬಗ್ಗೆ ಹೇಳಿದ್ದಾರೆ. ಷೆಡ್ಯೂರ್ ರೇಟ್ ಏನಿದೆ ಅದು 10 ವರ್ಷಗಳ ಹಿಂದೆ ರೋಕೋಪಯೋಗಿ ಖಾತೆ ರಿವೈಸ್ ಮಾಡಿದ್ದು ಇದು ವರೆಗೂ ಹಾಗೆಯೇ ಇದೆ. ಅವರು ಗೊತ್ತು ಮಾಡಿರುವ ದರಕ್ಕೆ ಕೆಲಸ ಮಾಡಲು ಜನ ಬರುವುದಿಲ್ಲ. ಕೆಲಸದ ರೀತಿಯೂ ಬಹಳ ವಿಚಿತ್ರವಾಗಿದೆ. ಅನ್ನವಿಲ್ಲದೆ ದಿನೇ ದಿನೇ ಜನ ನಾಯುವ ಸ್ಥಿತಿಯಲ್ಲ ದ್ದಾರೆ. ಅಂಥವರ ನಲುವಾಗಿ, ಪ್ರತಿನಿತ್ಯ ಅನ್ನ ಅಂಥವರಿಗೆ ಸಿಕ್ಕುವ ನಲುವಾಗಿ ಈ ಕೆಲಸಗಳನ್ನು ಮಾಡಬೇಕಾಗಿದೆ. ಅಂಥದ್ದರಲ್ಲ ರೋಕೋಪಯೋಗಿ ಇರಾಖೆಯ ಅಧಿಕಾರಿಗಳು 15 ದಿವಸ ಕೆಲಸ ಮಾಡಿ ಮೆಷರ್‌ಮೆಂಟ್ ತೆಗೆದುಕೊಂಡು, ಮೇಲಿನವರ ಅಪ್ರೂವರ್ ತೆಗೆದುಕೊಂಡು ಆ ಮೇಲೆ ಹಣ ಕೊಡುತ್ತೇವೆ ಎಂದು ಹೇಳುತ್ತಾರೆ. ಪ್ರತಿನಿತ್ಯ ದುಡಿದವನಿಗೆ ಹಣ ಸಿಕ್ಕದೆ ಹೋದರೆ ಅವನು ಬದುಕುವುದು ಕಷ್ಟ. ಅದುದರಿಂದ ಪ್ರತಿನಿತ್ಯ ಬರಗಾಲದಲ್ಲ ಕೆಲಸ ಮಾಡತಕ್ಕ ಕೂಲಿಗಾರರಿಗೆ, ಬಡ ಜನಗಳಿಗೆ ಅದೇ ದಿವಸ ಆಹಾರದ ರೂಪದಲ್ಲ ನಂಬಳ ಸಿಕ್ಕಬೇಕು. ಇಲ್ಲದೆ ಹೋದರೆ ಅವರು ಬದುಕುವುದಕ್ಕೆ ಸಾಧ್ಯವಿಲ್ಲ.

ಕುಡಿಯುವ ನೀರಿನ ಬಗ್ಗೆ ಧಾರವಾಡ ಜಿಲ್ಲೆಯಲ್ಲ ಕೆಲವು ಹಳ್ಳಿಗಳಲ್ಲ ದಾರುಣ ಪರಿಸ್ಥಿತಿ ಇದೆ. ನನ್ನ ತಾಲ್ಲೂಕಿನಲ್ಲ 8–10 ಗ್ರಾಮಗಳಲ್ಲ ನೀರಿನ ತೊಂದರೆ ಬಹಳವಾಗಿದೆ ಅಲ್ಲರುವ ಕೆರೆಗಳಲ್ಲ ನೀರು ಬತ್ತಿ ಹೋಗಿದೆ. ಒಂದು ಗುಂಡಿ ತೆಗೆದರೆ ರಾತ್ರಿ ಯೆಲ್ಲ ಕಾದು ಬೆಳಗಾಗುವವರೆಗೂ ಇದ್ದರೆ ಒಂದು ಕೊಡ ನೀರು ಸಿಕ್ಕುತ್ತದೆ. ಅದನ್ನು ಯಾರಾದರೂ ಬಂದು ತೆಗೆದುಕೊಂಡು ಹೋಗುತ್ತಾರೆ ಎಂದು ಜನ ಗುಡಿನಲು ಹಾಕಕೊಂಡು ಅಲ್ಲಯೇ ಕಾಳಿತಿರುತ್ತಾರೆ. ಅಲ್ಲದೆ ಏದಾರು ಮೈಲಿಯಿಂದ ನೀರು ಬರಬೇಕು. ಅಲ್ಲಗೆ ನೀರು ಒದಗಿಸುವ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಅಧಿಕಾರಿಗಳಿಗೆ ತಿಳಿಸಿದ ಮೇರೆ ಟ್ರಕ್‌ನಲ್ಲ ನೀರನ್ನು ಒಯ್ಯುವ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಅವರಿಗೆ ಎರಡು ತಿಂಗಳಾದರೂ ಇದುವರೆಗೂ ಹಣ ಸಿಕ್ಕಿಲ್ಲ. ಷೆಡ್ಯೂರ್ ರೇಟುಗಳು ಇನ್ನೂ ಬಂದಿಲ್ಲ, ಅದಕ್ಕೆ ಬರೆದಿದ್ದೇವೆ ಎಂದು ಹೇಳುತ್ತಾರೆ. ಕುಡಿಯುವ ನೀರನ್ನು ಒದಗಿಸಿದಂಥ ಟ್ರಕ್ ಮಾಲೀಕರಿಗೆ ಎರಡು ಮೂರು ತಿಂಗಳವರೆಗೆ ಹಣ ಕೊಡದೆ ಇದ್ದರೆ ಯಾರು ಆ ಕೆಲಸಕ್ಕೆ ಮುಂದೆ ಬರುತ್ತಾರೆ. ಈ ರೀತಿಯ ಅವ್ಯವಸ್ಥೆ ಬರಗಾಲ ಪರಿಹಾರ ಕ್ರಮದಲ್ಲ ನಡೆಯುತ್ತಿದೆ. ಇದಕ್ಕೆ ನನ್ನ ಸೂಚನೆ ಏನೆಂದರೆ ತಾಲ್ಲೂಕು ಮಟ್ಟದಲ್ಲ ಪರಿಹಾರ ನಮಿತಿಗಳು ಎಂದು ಏನಿವೆ—ತಾಲ್ಲೂಕು ಬೋರ್ಡೂ ಬೇಡ, ಅಧಿಕಾರಿಗಳೂ ಬೇಡ—ತಾಲ್ಲೂಕು ರಿಲೀಫ್ ಕಮಿಟಿಗಳಿಗೆ ಈ ಅಧಿಕಾರವನ್ನು ಕೊಡಬೇಕು ; ಅವರು ಹೆಚ್ಚು ಹಣ ಖರ್ಚು ಮಾಡಿ ಕೆಲಸಮಾಡುವಂಥ ವ್ಯವಸ್ಥೆ ಆಗಬೇಕು. ಹೀಗೆ ಮಾಡಿದರೆ ತೀವ್ರವಾಗಿ ಕ್ರಮ ಅಮಲನಲ್ಲ ಬರುತ್ತದೆ.

ನಮ್ಮ ಭಾಗದಲ್ಲ ಒಂದು ವಿಚಿತ್ರವಿದೆ. ಅಲ್ಲ ಕೆರೆಗಳಿಲ್ಲ, ರಸ್ತೆ ಕೆಲಸ ಮಾಡುವುದಕ್ಕಾಗು ವುದಿಲ್ಲ. ಜನಗಳಿಗೆ ಕೆಲಸ ಕೊಡುವ ರೀತಿ ಎಂದರೆ ರೈತರು ತಮ್ಮ ಹೊಲಗಳಲ್ಲ ಒಡ್ಡು ಹಾಕ ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಸರ್ಕಾರದವರೂ ಈ ಕೆಲಸವನ್ನು ತೆಗೆದುಕೊಳ್ಳು ತ್ತಿಲ್ಲ. ಸರ್ಕಾರದವರಿಂದ ತೆಗೆದುಕೊಳ್ಳುವುದಕ್ಕಾಗದೆ ಇದ್ದರೆ ದೊಡ್ಡ ದೊಡ್ಡ ರೈತರು ತಮ್ಮ ತಮ್ಮ ಹೊಲಗಳಲ್ಲ ಒಡ್ಡು ಹಾಕುವ ಕೆಲಸವನ್ನು ಬರಗಾಲ ಕಾಮಗಾರಿಯನ್ನಾಗಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು, ಅದಕ್ಕೆ ಸರ್ಕಾರದಿಂದ ಹಣ ಕೊಡುವ ವ್ಯವಸ್ಥೆಯಾಗಬೇಕು. ಆ ಭಾಗದಲ್ಲ ಕೆರೆಗಳಿಲ್ಲದೆ ಬಾವಿ ತೆಗೆಯಲಕ್ಕೆ ಸಾಧ್ಯವಿದೆ. ಕೂಲ ಮಾಡುವ ಜನರು ಕೆಲಸವಿಲ್ಲದೆ ಉಪವಾಸ ನಾಯುವ ಪರಿಸ್ಥಿತಿ ಇರುವುದರಿಂದ ತೀವ್ರ ಒಂದು ವ್ಯವಸ್ಥೆ ಮಾಡಿ ಜಮೀನು ಮಾಲೀಕರು ತಮ್ಮ ತಮ್ಮ ಜಮೀನು ಅಭಿವೃದ್ಧಿಯ ನಲುವಾಗಿ ಮಾಡುವ ಕೆಲಸವನ್ನು ಬರಗಾಲ ಕಾಮಗಾರಿಯಂತೆ ಮಾಡುವ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು.

(ಶ್ರೀ ಎಸ್. ಆರ್. ಬೊಮ್ಮಾಯಿ)

ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಧಾರವಾಡ ಜಿಲ್ಲೆಯಲ್ಲಿ ನುಮಾರು ಒಂದು ಸಾವಿರ ಹಳ್ಳಿಗಳಿಗೆ ಸಂಬಂಧಪಟ್ಟ ಹಾಗೆ ಯೋಜನೆಗಳು ತಯಾರಾಗಿವೆ. ಆದರೆ ಕಾರ್ಯಗತವಾಗದೆ 20 ವರ್ಷಗಳಲ್ಲಿ ಕೇವಲ 10 ಕೆಲಸಗಳಾಗಿರುವಾಗ ಎಲ್ಲ ಬಾವಿಗಳನ್ನೂ ಎಷ್ಟು ಕಾಲದಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಆದ್ದರಿಂದ ತೀವ್ರತರವಾಗಿ ಕುಡಿಯುವ ನೀರನ್ನು ಒದಗಿಸಲು ಸರ್ಕಾರದವರು ಹಣವನ್ನು ಒದಗಿಸಬೇಕು ಮತ್ತು ಆ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈ ಸಮಯದಲ್ಲಿ ಸೂಚನೆ ಕೊಡಬಯಸುತ್ತೇನೆ.

ಅಧ್ಯಕ್ಷರು ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯ ಮಂತ್ರಿಗಳು ದೇಶದಲ್ಲಿರುವ ಅಭಾವ ಪರಿಸ್ಥಿತಿಯ ಬಗ್ಗೆ ಮಾಡಿರುವ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾರೆ :

> "There is no human problem that cannot be sloved by determination and dedicated effort."

ಎರಡನೆಯದಾಗಿ :

> "Government have therefore suggested that relief works of an estimated cost of twice or thrice the total funds available may be authorised for execution so that relief may go to the people promptly from out of the funds available."

ಎಂದು ಹೇಳಿದ್ದಾರೆ. ಈ ಎರಡು ದಿಟ್ಟತನದ ಮಾತನ್ನು ಅವರು ಪ್ರಸ್ತಾಪಿಸಿರುವುದಕ್ಕಾಗಿ ಅವರನ್ನು ಅಭಿನಂದಿಸಿ ನಾಲ್ಕು ಮಾತನ್ನಾಡುವುದಕ್ಕೆ ಅಪೇಕ್ಷೆಪಡುತ್ತೇನೆ.

ಸ್ವಾಮಿ, ಈಗ ಸ್ಕೇರ್ಸಿಟಿ ಬಗ್ಗೆ ಮಾನ್ಯ ಮಿತ್ರರುಗಳೆಲ್ಲರೂ ಪ್ರಸ್ತಾಪ ಮಾಡಿದ್ದಾರೆ. ನಾನು ಇದರ ವಿಷಯವಾಗಿ ಹೆಚ್ಚು ಹೇಳುವುದಕ್ಕೆ ಹೋಗದೇ ಒಂದು ಪ್ರಯಾರಿಟಿ ಬೇಸಿಸ್ ಮೇರೆ ನಾಲ್ಕು ಮಾತುಗಳನ್ನು ಆಡುತ್ತೇನೆ. ಪ್ರಥಮತಃ ಇದರ ಬಗ್ಗೆ ಯಾವ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದರೆ ಆಹಾರಧಾನ್ಯಗಳ ಬೆಲೆಗಳು ದಿನೇ ದಿನೇ ಗಗನಕ್ಕೆ ಏರಿ ಹೋಗುತ್ತಾ ಇರುವುದರಿಂದ ಇದನ್ನು ನರಿಯಾದ ಒಂದು ಹತೋಟಿಯಲ್ಲಿ ಇಡುವಂತೆ ಮಾಡಬೇಕು. ಈಗ ಒಬ್ಬ ಕೂಲಿಗಾರನು 4 ದಿವಸ ದುಡಿದರೂ, ಅದರಿಂದ ಬರುವ ದುಡ್ಡು ಒಂದು ದಿವಸಕ್ಕೂ ಸಾಲದು. 4—6 ವರ್ಷಗಳ ಹಿಂದೆ ಒಬ್ಬ ರೈತನು ಏನು ಒಂದು ಸುಖಜೀವನ ಮಾಡಬಹುದಾಗಿತ್ತೋ ಅಂತಹ ಸುಖಜೀವನವನ್ನು ಈ ಸ್ಕೇರ್ಸಿಟಿಯಿಂದ ಈ ದಿವಸ ಆಹಾರ ಧಾನ್ಯ ವಸ್ತುಗಳ ಬೆಲೆಗಳ ಏರಿಕೆಯಿಂದ ಮಾಡಲಾರದೆ ಬಹಳ ತೊಂದರೆಗೆ ಸಿಕ್ಕಿಕೊಂಡಿದ್ದಾನೆ. ಆದುದರಿಂದ ಸರ್ಕಾರದವರು ಆಹಾರಧಾನ್ಯಗಳು ಬಫರ್‌ಸ್ಟಾಕ್ ಮಾಡಿ ಅಥವಾ ಇನ್ನಾವುದೋ ಒಂದು ಕಾರ್ಯಕ್ರಮವನ್ನು ಹಾಕಿ ಆಹಾರವಸ್ತುಗಳ ಬೆಲೆ ಏರುವಿಕೆಯನ್ನು ತಡೆಗಟ್ಟುವಂತೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

[Mr. CHAIRMAN (DR. R. NAGAN GOUDA) took the Chair]

ಇನ್ನು ಡ್ರಿಂಕಿಂಗ್ ವಾಟರ್ ವರ್ಸ್ ಮತ್ತು ಇರ್ರಿಗೇಷನ್ ವರ್ಸ್ ವಿಷಯವಾಗಿ ಒಂದು ಮಾತನ್ನು ತಿಳಿಸಬಯಸುತ್ತೇನೆ. ಮೈಸೂರು ಸೀಮೆಗೆ 1968ನೇ ಇಸವಿ ಜೂನ್‌ವರೆಗೆ 29,822 ಬಾವಿಗಳಿಗೆ ಸ್ಯಾಂಕ್ಷನ್ ಮಾಡಿರುವ ಪೈಕಿ 5 ಸಾವಿರ ಬಾವಿಗಳು ಆಗಿವೆ. ಅಲ್ಲಿಗೆ 6/1 ಭಾಗವೂ ಕೂಡ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಬಾವಿಗಳಿಗೆ ಸಾಲವನ್ನು ಕೊಡುತ್ತೀರಿ ಅದನ್ನು ಖರ್ಚು ಮಾಡುವಂತೆ ಶೀಘ್ರವಾದ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬಾವಿಗಳನ್ನು ತೋಡಬೇಕಾದರೆ ಸವ್ಯವಸ್ಥಿತವಾದ ಮೆಶಿನ್ ಬೇಕು. ಈ ಮೆಷನ್ ತರಿಸಲು ಪತ್ರದ ಮೂಲಕ ವ್ಯವಹಾರಗಳು ನಡೆಯಬೇಕಾಗಿರುವುದರಿಂದ ಸರ್ಕಾರದವರು ತೀವ್ರವಾದ ಒಂದು ಕಾರ್ಯಕ್ರಮವನ್ನು ಕೈಗೊಂಡು ಬಾವಿ ತೋಡಿಸುವ ಮೆಷನ್ ತರಿಸಿಕೊಡುವ ಒಂದು ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಮೂರನೆಯದಾಗಿ ಸಾಯಿಲ್ ಕನ್‌ಸರ್ವೇಷನ್ ವಿಷಯ. ಇದಕ್ಕೆ ಕೇಂದ್ರ ಸರ್ಕಾರದವರು ವರ್ಷ ಒಂದಕ್ಕೆ 110 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಸುಮಾರು 6.5 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಆದರೆ ಮಳೆ ದೆಸೆಯಿಂದ ಇದನ್ನು ಇತರ ಕಾರಣಗಳಿಂದ ಬೆಳೆ ಬೆಳೆಯುತಕ್ಕಂಥ ಜಮೀನಿನಲ್ಲಿ ಸಾಯಿಲ್ ಎರೋಷನ್ ಆಗುತ್ತದೆ. ಆ ಜಮೀನುಗಳಿಗೆ ಲಕ್ಷಾಂತರ ರೂಪಾಯಿ ಗೊಬ್ಬರ ಹಾಕುತ್ತಾರೆ. ಕಾಂಟೂರು ಬಂಡಿಂಗ್ ಕೆಲಸ ಸಾಕಷ್ಟು ಮಾತಾದೆ ಇರುವುದರಿಂದ ಅವೆಲ್ಲಾ ಕೊಚ್ಚಿಕೊಂಡು ಹೋಗಿ ನಾಲೆಗಳಿಗೆ ಕರೆಗಳಿಗೆ ನಮುದ್ರಕ್ಕೆ ಹೋಗಿ ಸೇರತ್ತದೆ. ಇದರಿಂದ ಜಮೀನಿನಲ್ಲರತಕ್ಕಂಥ ಭೂಸಾರವೆಲ್ಲಾ ಹೋಗುತ್ತಿದೆ. ಆದುದರಿಂದ ಇದಕ್ಕಾಗಿ ಸರ್ಕಾರದವರು ಖರ್ಚು ಮಾಡುವ 6.5 ಕೋಟಿ ರೂಪಾಯಿ ಮತ್ತು ಕೇಂದ್ರ ಸರ್ಕಾರದ ನೆರವು ಇವೆಲ್ಲವನ್ನೂ ಉಪಯೋಗಿಸಿ ಶಾಶ್ವತವಾದ ಒಂದು ಕೆಲಸವನ್ನು ಮಾಡಿ ಬಂದನೀರು ಭೂಮಿಯಲ್ಲೇ ನಿಲ್ಲುವಹಾಗೆ ಮಾಡಿದರೆ ಇದರಿಂದ ರೈತರು ಹೆಚ್ಚಿನ ಆಹಾರೋತ್ಪತ್ತಿಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಮೈನರ್ ಇರಿಗೇಷನ್, ಮೇಜರ್ ಇರಿಗೇಷನ್, ಸಾಯಿಲ್ ಕನ್‌ಸರ್ವೇಷನ್ ಕೆಲಸ ಬಹಳ ಮುಖ್ಯವಾದುದು. ಈ ಕೆಲಸವನ್ನು ತೆಗೆದುಕೊಂಡು ಕಾರ್ಯಗತ ಮಾಡಿದರೆ ಕೂಲಿಗಾರರಿಗೂ ಕೆಲಸ ಸಿಕ್ಕಿದಂತಾಗುತ್ತದೆ. ಮತ್ತು ರೈತರಿಗೂ ನೆರವಾದಂತಾಗುತ್ತದೆ. ಆದ್ದರಿಂದ ತಾತ್ಕಾಲಿಕವಾದ ನೆರವು ಏನು ಕೊಡುತ್ತಾರೋ ಅದರಲ್ಲಿ ಪ್ರಥಮತಃ ಈ ಸಾಯಿಲ್ ಕನ್‌ಸರ್ವೇಷನ್‌ಗೆ ಆದ್ಯತೆ ಕೊಡಬೇಕೆಂದು ಸರ್ಕಾರದವರಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ.

ಇನ್ನು ನಾಲ್ಕನೆಯದಾಗಿ ಮೈನರ್ ಇರಿಗೇಷನ್ ವಿಚಾರವಾಗಿ ಅನೇಕ ಮಿತ್ರರು ಹೇಳಿದ್ದಾರೆ. ಇಲಾಖೆಯಲ್ಲಿ ಎಸ್ಟಿಮೇಟ್ ಆಗಬೇಕು, ಸ್ಯಾಂಕ್ಷನ್ ಆಗಬೇಕು ಎಂದು ಹೆಚ್ಚುಗಳನ್ನು ಡಿಲೇ ಮಾಡುತ್ತಾರೆ ಎನ್ನುವ ವಿಚಾರ ಹೇಳಿದ್ದಾರೆ. ಅದುದರಿಂದ ನಾನು ಹೇಳುವುದು ಇಷ್ಟೆ. ರಿಲೀಫ್ ಕಮಿಟಿಯೊಳಗೆ ತಾಸೀಲ್ದಾರ್, ಅಸಿಸ್ಟೆಂಟ್ ಕಮಿಷನರು, ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು, ವಿಧಾನಸಭಾ ಸದಸ್ಯರು ಎಲ್ಲರೂ ಇದ್ದಾರೆ. ಆ ಕಮಿಟಿಗೆ ಇರತಕ್ಕಂಥ ಅಧಿಕಾರವನ್ನು ಲಿಬರಲೈಸ್ ಮಾಡಿ ಶೀಘ್ರವಾಗಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಬಯಸುತ್ತೇನೆ.

ಇನ್ನೊಂದು ವಿಚಾರ ಏನೆಂದರೆ 9ನೇ ಹೇಜಿನಲ್ಲಿ ತೋರಿಸಿರುವ ಪ್ರಕಾರ ಏನು ಒಂದು ಎಸ್ಟಿಮೇಟ್ ಮಾಡಿದ್ದಾರೋ ಅದರ ಅರ್ಧ ಭಾಗವಾಗಲಿ ½ ಭಾಗವಾಗಲಿ ಕೆಲಸ ಕಾರ್ಯಗಳು ನಡೆದಿಲ್ಲ. ಇದನ್ನು ಪೂರ್ಣವಾಗಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಮೇಜರ್ ಮತ್ತು ಮೈನರ್ ಇರಿಗೇಷನ್ ವರ್ಕ್ಸ್ ವಿಷಯ. ಸರ್ಕಾರದವರು ರೈತರಿಂದ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಪಡೆಯಬೇಕೆಂಬ ಏನು ಒಂದು ಅಂದಾಜನ್ನು ಹಾಕಿಕೊಂಡಿದ್ದಾರೋ ಅದನ್ನು ರೈತರು ಕೊಡುವುದಕ್ಕಾಗುವುದಿಲ್ಲ. ಬೇಕಾದರೆ ಅದನ್ನು ಮೊದಲು ಬ್ಯಾಂಕ್ ಮುಖಾಂತರ ಕೊಡಿಸಿ ಆಮೇರೆ ಕೊಟ್ಟಿರತಕ್ಕ ಮೊಬಲಗನ್ನು ತೆಗೆದುಕೊಳ್ಳಬೇಕು. ಶ್ರೀಮಾನ್ ನಿಜಲಿಂಗಪ್ಪನವರೂ ಕೂಡ ಈ ಒಂದು ಅಶ್ವಾಸನೆಯನ್ನು ಕೊಟ್ಟಿದ್ದರು. ಮೇಜರ್ ಮತ್ತು ಮೈನರ್ ಇರಿಗೇಷನ್ ಕೆಲಸಗಳನ್ನು ಕಾರ್ಯಗತ ಮಾಡಲು ಬ್ಯಾಂಕುಗಳು ಸಹಾಯಮಾಡಬೇಕು, ವ್ಯವಸಾಯ ಉದ್ಯೋಗ ಬಹಳ ಮುಖ್ಯವಾದುದು, ರೈತರು ಕೊಡಬೇಕಾದ ಕಾಂಟ್ರಿಬ್ಯೂಷನ್ ಮೊಬಲಗನ್ನು ಬ್ಯಾಂಕಿನವರಿಂದಲೇ ಕೊಡಿಸಬೇಕು ಎಂದು ಹೇಳಿದರು. ಇದು ಶಾಶ್ವತವಾದ ಒಂದು ಕಾರ್ಯ. ಇದರಿಂದ ರೈತನಿಗೆ ತುಂಬಾ ಪ್ರಯೋಜನವಾಗುತ್ತದೆ. ಇದನ್ನು ಕಾರ್ಯಗತಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನು ನನ್ನ ತಾಲ್ಲೂಕಿನ ಒಂದು ವಿಚಾರ ಹೇಳಬೇಕಾಗಿದೆ. ಚಾಮರಾಜ ಲಿಫ್ಟ್ ಬ್ಯಾಂಕ್ ನಾಲೆಗೆ ಪಿ. ಡಬ್ಲ್ಯೂ. ಡಿ. ಇರಾಖೆಯವರು 11 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅಲ್ಲಿ 48 ಐ. ಪಿ. ಸೆಟ್‌ಗಳು ಮಾತ್ರ ಹಾಕಿದ್ದಾರೆ. ಟೈರ್ ಎಂಡ್‌ನಲ್ಲರತಕ್ಕಂಥ ರೈತರಿಗೆ 4 ಸಾವಿರ ಎಕರೆ ಜಮೀನಿಗೆ ನೀರೇ ಸಾಕಾಗುವುದಿಲ್ಲ. ಇದರಿಂದ ಭತ್ತದ ಬೆಳೆ ಬಹಳ ಕಡಿಮೆಯಾಗಿದೆ. ಈ 11 ಲಕ್ಷ ರೂಪಾಯಿ ಖರ್ಚು ಮಾಡಿದರೂ ಏನೂ ಪ್ರಯೋಜನವಿಲ್ಲ. ರೈತರು ಕಾಂಟ್ರಿಬ್ಯೂಷನ್ ಮೊಬಲಗನ್ನು ಕೊಡಲಕ್ಕೆ ತಯಾರಾಗಿದ್ದಾರೆ. ಅದನ್ನು ಬ್ಯಾಂಕ್ ಮೂಲಕ ಕೊಡಿಸಿ 40 ಲಕ್ಷ ರೂಪಾಯಿ ವೆಚ್ಚದಲ್ಲಿ ಈ ಪ್ರಾಜೆಕ್ಟ್ ಕಾರ್ಯವನ್ನು ಕೈಗೊಂಡು ಪೂರ್ಣಗೊಳ್ಳುವಂತೆ ಮಾಡಿದರೆ ಸರ್ಕಾರಕ್ಕೂ ದುಡ್ಡು ಸಿಕ್ಕಿದ ಹಾಗಾಗುತ್ತದೆ, ಜನಗಳಿಗೂ ಈ ಅಭಾವ ಪರಿಸ್ಥಿತಿಯಲ್ಲಿ ಕೆಲಸವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಆದುದರಿಂದ ಈ ಕಾರ್ಯವನ್ನು ಜರೂರು

(ಶ್ರೀ ಎಂ. ಬಸವರಾಜು)

ಕ್ಕೆಗೊಳ್ಳುವಂತೆ ಏರ್ಪಾಡು ಮಾಡಬೇಕು. ಇನ್ನೊಂದು ಸಂಗತಿ ಏನೆಂದರೆ ಅರಕಲಗೂಡು ತಾಲ್ಲೂಕು ಬೂದನೂರು ಟ್ಯಾಂಕ್‌ನಿಂದ ಎಷ್ಟೋ ನೀರು ಪೋಲಾಗಿ ಹೋಗುತ್ತಿದೆ. ಆ ನೀರು 1 ಸಾವಿರ 2 ಸಾವಿರ ಎಕರೆಯಲ್ಲಿ ಬೆಳೆ ಮಾಡಲು ಸಾಧ್ಯವಾಗುತ್ತದೆ. ಈಗ ಈ ನೀರು ಕಾವೇರಿ ಹೊಳೆಗೆ ಹೋಗುತ್ತದೆ. ಆದುದರಿಂದ ಪೋಲಾಗುವ ನೀರನ್ನು ತಡೆಗಟ್ಟಿ ಆ ಪ್ರದೇಶಕ್ಕೆ ಒಂದು ಫೀಡರ್ ಛಾನಲ್ ಮಾಡಿದರೆ ಕೆ. ಆರ್. ನಗರ ಒಂದರಲ್ಲೇ 1 ಸಾವಿರ ಎಕರೆ ಜಮೀನು ನೀರಾವರಿಯಾಗುತ್ತದೆ, ಜನಗಳಿಗೆ ಕೂಲಿಯೂ ಸಿಕ್ಕುತ್ತದೆ. ಇವೊತ್ತಿನ ದಿವಸ ಇರತಕ್ಕ ಅಭಾವಪರಿಸ್ಥಿತಿಯಲ್ಲಿ ಕೂಲಿಗಾರರಿಗೆ ನೆರವಾಗಿ ಜೀವನಕ್ಕೆ ಹಣ ಕೊಡಲಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಈ ಒಂದು ಸಂದರ್ಭದಲ್ಲಿ ಕೆ. ಆರ್. ನಗರದ ಸ್ಕೇರ್ಸಿಟಿ ಏರಿಯಾಕ್ಕೆ ಪ್ರಥಮ ಆದ್ಯತೆ ಕೊಟ್ಟು ಈ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಆಶೆಮಾಡುತ್ತೇನೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳುವಳಿಕೆ ನೀಡಿ, ಈ ಕೆಲಸವನ್ನು ಪೂರೈಸಬೇಕೆಂದು ನಿವೇದನೆ ಮಾಡಿಕೊಂಡು ಈ ಒಂದೆರಡು ಮಾತುಗಳನ್ನಾಡಲು ಅವಕಾಶಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ನಾರಾಯಣಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದ ವಿಚಾರ ನಡೆಯುತ್ತಾ ಇರುವಾಗ ಕ್ಯಾಬಿನೆಟ್ಟಿನ ಮಂತ್ರಿಗಳು ಯಾರೂ ಇಲ್ಲದಿರುವುದು ಬಹಳ ವ್ಯಸನದ ವಿಚಾರ. ದೇಶದಲ್ಲಿರತಕ್ಕಂತಹ ಅಭಾವ ಪರಿಸ್ಥಿತಿಯನ್ನು ಕುರಿತು ಮಾನ್ಯ ಮುಖ್ಯಮಂತ್ರಿಯವರು ಒಂದು ವಿಷಯವನ್ನು ಮಂಡೆ ಮಾಚದೆ ಹೇಳಿದ್ದಾರೆ. ಕೆಲವು ಕಾಲದಲ್ಲಿ ಹೊಟ್ಟೆಗಿಲ್ಲವೆ ನತ್ತರು, ಎಂದು ಹೇಳದೆ ಪ್ಲೇಗ್ ಬಂದು ನತ್ತರು, ಹಾವು ಕಡಿದು ನತ್ತರು ಎಂದು ಹೇಳುತ್ತಿದ್ದರು. ಆದರೆ ಇವತ್ತು ಆ ಮಟ್ಟಕ್ಕೆ ಹೋಗದೆ, ಸಮಸ್ಯೆ ಇರುವುದನ್ನು ಇದ್ದಹಾಗೆ ಹೇಳಿದ್ದಾರೆ. ನಮ್ಮ ದೇಶದಲ್ಲಿ ಹಿಂದೆ ಇಂಗ್ಲಿಷರ ಆಳ್ವಿಕೆಯ ಕಾಲದಲ್ಲೂ ಕ್ಷಾಮಗಳು ತಲೆದೋರಿ, ಫ್ಯಾಮಿನ್ ಕಮಿಷನ್ ಕೂಡ ಆಗಿದೆ. ಎಲ್ಲಕ್ಕಿಂತಲೂ ಸ್ವಾತಂತ್ರ್ಯ ಬಂದರಾಗಾಯಿತು ಪ್ರತಿ ವರ್ಷವೂ ಎರಡು ಮೂರು ನಲ ಅಭಾವದ ಅನುಭವ ಬಂದಿದೆ. ಆದರೆ ಪ್ರತಿ ನಲದ ಅಧಿವೇಶನದ ಕಾಲಕ್ಕೂ ಕೂಡ ಸದಸ್ಯರು ವಾಸ್ತವಾಂಶವನ್ನು ಇದ್ದಂತೆ ಮನವಿ ಮಾಡಿಕೊಂಡಿದ್ದಾರೆ; ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದಕ್ಕೆ ಪರಿಹಾರ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಒತ್ತಿ ಒತ್ತಿ ಹೇಳಿದ್ದಾರೆ. ಆದರೆ ನಮ್ಮ ಸರ್ಕಾರದವರು ಆ ಕಡೆಗೆ ಮನಸ್ಸು ಕೊಟ್ಟಿದ್ದರೆ ಖಂಡಿತವಾಗಿಯೂ ಇದು ಆಗುತ್ತಾ ಇರಲಿಲ್ಲ. ಏಕೆಂದರೆ 20 ವರ್ಷದಿಂದ ಈ ದೆಸೆಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರೆ, ಇಂಥ ಕಷ್ಟ ಬರುತ್ತಿರಲಿಲ್ಲ. ಪ್ರಕೃತಿಯು ಏಕೋಪಪೂ ಅದರಲ್ಲಿ ಸ್ವಲ್ಪ ಇದೆ. ಮಾನವ ದೃಷ್ಟಿಯಿಂದ ನೋಡುವುದಾದರೆ ಈ ಕಷ್ಟಕ್ಕೆ ಸರ್ಕಾರದವರೇ ಕಾರಣವೆಂದು ಹೇಳಬೇಕಾಗಿದೆ. ಇದನ್ನು ಅವರು ಒಪ್ಪಿಕೊಳ್ಳಲೇಬೇಕಾಗುತ್ತದೆ. ಕಳೆದ ವರ್ಷ ದಕ್ಷಿಣ ವಲಯದ ಅಂವರೆ ಮೈನೂರು, ಮದ್ರಾಸ್ ಮತ್ತು ಆಂಧ್ರದ ಎರ್ನಾ ಮುಖ್ಯ ಮಂತ್ರಿಗಳ ಸಭೆಯು ತಿರುಪತಿಯಲ್ಲಿ ಜರುಗಿದಾಗ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಒಂದು ಶಾಶ್ವತವಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ.

Sri B. B. SAYANAK.—Sir, on a point of order. No Minister is here while the discussion is going on. Only the Deputy Ministers are here.

Sri MANIK RAO PATIL (Deputy Minister for Home).—Don't worry. There are four Deputy Ministers and they are also collectively responsible.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಮಾನ್ಯ ಡೆಪ್ಯೂಟಿ ಮಂತ್ರಿಯವರು 'ಡೋಂಟ್ ವರಿ' ಎಂದು ಹೇಳಿದರು. ನಾವು ಇಲ್ಲಿ ಬಂದಿರುವುದು ನುಮ್ಮನೆ ಕೂತುಕೊಳ್ಳುವುದಕ್ಕೆ ಅಲ್ಲ; ಅಥವಾ ತಮಾಷೆಗೋಸ್ಕರ ಇಲ್ಲಿ ಕೂತಿಲ್ಲ. ಸಭೆಯ ಕಾರ್ಯಕರಾಪಗಳು ಚೆನ್ನಾಗಿ ನಡೆಯಬೇಕೆಂದು. ಈ ಸಭೆಗೆ ಆಡಳಿತ ಪಕ್ಷದ ಮಂತ್ರಿಯವರು ಬಂದು ಇಲ್ಲರಬೇಕು, ಮತ್ತು ಇಲ್ಲ ಏನು ನಡೆಯುತ್ತಿದೆ ಮತ್ತು ಇಲ್ಲ ಏನೇನು ಅಂಶಗಳು ಸಭೆಯು ಮುಂದಿಡಲ್ಪಡುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಯವರು ಈ ವಿಷಯವನ್ನು ಸಭೆಯು ಮುಂದಿಡುವಾಗ ಹೇಳಿದಂತಹ ಅಂಶಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಇವರು ಈ ರೀತಿ 'ಡೋಂಟ್ ವರಿ' ಎಂದು

ಹೇಳುತ್ತಿರಲಿಲ್ಲ. ಅದಕ್ಕೆ ಬದಲಾಗಿ ಇವರು ಅದನ್ನು ತಮಾಷೆಯಾಗಿ ತೆಗೆದುಕೊಂಡಿದ್ದಾರೆಂದು ಕಾಣುತ್ತದೆ. ಇದಕ್ಕೆ ತಾವು ಒಂದು ಆದೇಶ ಕೊಡಬೇಕು ಮತ್ತು ಅವರು ಆ ರೀತಿ ಹೇಳುವುದು ಸರಿಯೇ ಎಂದು ಹೇಳಬೇಕು.

Mr. CHAIRMAN.—It is a very serious subject and I am informed that the Ministers are coming immediately. Now that Mr. Mohamed Ali is here.....

Sri M. S. KRISHNAN.—How can the Deputy Minister make that remark? He should not take it so lightly.

Sri K. H. PATIL.—May I make a request, Sir? When this House is considering this question seriously at least the Revenue Minister, though not the Hon'ble Chief Minister if it is not possible for him, or the Minister for Co-operation or the Minister for Food should be present. They are very necessary here. We are not concerned with other Ministers. The Transport Minister who is present here, at best can provide some buses. His presence will not help us. Therefore, I would like the Chair to give a direction to the Ministers, at least one of these three Ministers should be present. I have seen in the newspapers today the tour programme of the Minister for Co-operation who is going on tour of Dharwar District to have garlands. This shows that they have no interest in this very important matter. I am therefore appealing to the Hon'ble Chair to give a direction to the council of Ministers to be present, as far as possible.

Mr. CHAIRMAN.—I will communicate the opinion of this House to the Chief Minister. I believe, I can assure the Hon'ble Whip of the Opposition Party, that no Deputy Minister wants to take it very lightly, because this is too serious a matter and I will see that these views are communicated to the Chief Minister and that at least the Revenue Minister or the P. W. D. Minister or the Chief Minister himself is present here.

Sri B. L. NARAYANASWAMY.—Sir, I expressed myself in order to seek redress from the Government. But when the concerned Minister is not there, what is it that I get, is a matter for consideration. So Mr. Speaker, I respectfully submit that I may be permitted to continue my speech tomorrow when all the Ministers are present here.

Sri MOHAMED ALI.—May I submit, Sir, that we all work here under joint responsibility. The question of presence of other Ministers is not material. Whatever the member says I am going to take note of.

Mr. CHAIRMAN.—I can suggest to Sri Narayanaswamy, that his speech will be recorded and the concerned Ministers will look into it, and I would like him to continue his speech, so that let there not be any break in his thoughts.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಮಾನ್ಯ ಮಂತ್ರಿಯವರು ನಮಗೆ ಡಾಯಿಂಟ್ ರೆಸ್ಪಾನ್ಸಿಬಲಿಟಿ ಇದೆ, ಯಾರಾದರೂ ಇದ್ದರೆ ಸಾಕು ಎಂದು ಹೇಳಿದರು. ನಾವು ಈ ವಿಚಾರವಲ್ಲಿ ಕಾನೂನು ಪ್ರಕಾರ ಏನು ಇದೆ ಎಂದು ತಿಳಿದುಕೊಂಡಿದ್ದೇವೆ. ಇವತ್ತು ನಮಗೆ ಗೊತ್ತಿರುವ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಹಾಗೆ ಬಹಳ ಮುಖ್ಯವಾದ ವಿಷಯವನ್ನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ದೇಶದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಹೇಳಿರುವ ಹಾಗೆ 100 ತಾಲೂಕುಗಳಲ್ಲಿ ಈ ಸಮಸ್ಯೆ ಉಂಟಾಗಿದೆ. ಇದನ್ನು ಹೇಗೆ ಬಗೆಹರಿಸಬೇಕು, ಪರಿಹಾರ ಹೇಗೆ ಒದಗಿಸಿಕೊಡಬೇಕು ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಅದು ಚರ್ಚೆಯಾಗುವಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲಿದ್ದು ಏನೇನು ವಿಷಯಗಳನ್ನು ಹೇಳುತ್ತಾರೆ, ಎಂಬುದನ್ನು ತಿಳಿಯುವುದು ಮುಖ್ಯ. ನಾಳೆ ರಿಪೋರ್ಟು ಓದಿಕೊಂಡು ಬರಬಹುದು. ಆದರೆ ಇಲ್ಲಿ ಏನು ಹೇಳುತ್ತಾರೆ, ಯಾವ ರೀತಿಯ ಮನೋಭಾವ ಇಲ್ಲಿ ಇರುತ್ತದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವರು ಖುದ್ದಾಗಿ ಹಾಜರಿರುವುದು ಅವಶ್ಯಕ. ಸುಮ್ಮನೆ ಕಾನೂನು ಪ್ರಕಾರ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ, ಯಾರಾದರೂ ಇದ್ದರೆ ಸಾಕು ಎಂದು ಹೇಳಿದರೆ, ಅದು ಸಭೆಯ ಗೌರವಕ್ಕೆ ತಕ್ಕಂತೆ ನಡೆದ ಹಾಗೆ ಆಗಿಲ್ಲ. ಸಂಬಂಧಪಟ್ಟ ಮಂತ್ರಿಯವರು ಯಾರು ಏನು ಹೇಳುತ್ತಾರೆಂಬುದನ್ನು ಮನಸ್ಸಿಟ್ಟು ಕೇಳಬೇಕು. ಅದನ್ನು ದಯವಿಟ್ಟು ಗಮನಿಸಬೇಕು.

Mr. CHAIRMAN.—I agree that it is too serious a matter. I would request the Ministers concerned, especially, the Revenue Minister, Public Works Minister and also the Industries Minister, because we will have to find out some way to help the poor people in all respects. The work has to be taken up now. The member may continue his speech now.

Sri M. S. KRISHNAN.—We thank very much for the sentiments expressed by you, in this behalf.

Sri B. L. NARAYANASWAMY.—Then Sir, I do obey the Chair.

6·00 P.M.

ಹಿಂದೆ ಕಂದಾಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಚಯ್ಯನವರು 100 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದರು ಅದರ ರೂಪರೇಷೆಗಳು ಏನಾದುವೋ ಆ ವಿಷಯವೆಲ್ಲ ಗೊತ್ತಾಗಲಿಲ್ಲ. ಈಗ 10 ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಕಳುಹಿಸಿದ್ದೇವೆಂದು ಮುಖ್ಯ ಮಂತ್ರಿಗಳು ಪ್ರಸ್ತಾಪಮಾಡಿದ್ದಾರೆ. ಆ 10 ಕೋಟಿ ರೂಪಾಯಿಗಳ ಯೋಜನೆಯನ್ನ ನುಮಾರು ಎಂಟೂವರೆ ಕೋಟಿಗೆ ಇಳಿಸಿ ಇದರಲ್ಲಿ ಅರ್ಧ ಕೊಡುತ್ತಾರೆಯೋ ಏನೋ ಎಂಬ ಅರೆ ಮನಸ್ಸಿನ ಮನೋವ್ಯತ್ತಿ ಇವರಿಗೆ ಬಂದಿದೆಯೆಂದು ನನಗೆ ಅರ್ಥವಾಗುತ್ತಿದೆ. ಇದು ಸರಿಯೇ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆಮಾಡಬೇಕಾಗಿದೆ. ಕಳೆದ ಅಧಿವೇಶನದಲ್ಲಿ ತಕ್ಷಣ ಒಂದು ಸಮಿತಿಯನ್ನು ರಚಿಸಿ, ಇರತಕ್ಕ ವಿದ್ಯಮಾನಗಳನ್ನು ಜಾಗ್ರತೆಯಾಗಿ ಪರಿಶೀಲಿಸಿ ಈಗಿನ ಕಷ್ಟಗಳನ್ನು ಪರಿಹಾರಮಾಡಲಾಗುವುದು ಎಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ದೇಶದಲ್ಲಿ ಕ್ಷಾಮ ಅಥವಾ ಅಭಾವ ಪರಿಸ್ಥಿತಿ ಬರುತ್ತದೆಂದರೆ, ಮೊಟ್ಟಮೊದಲನೆಯದಾಗಿ ಗಂಜಿ ಕೇಂದ್ರಗಳನ್ನು ಜಾಗ್ರತೆಯಾಗಿ ತೆರೆದರೆ ಇದು ಒಂದು ರೀತಿ ಶಮನಕ್ಕೆ ಬರುತ್ತದೆಂದು ಹೇಳುವುದು ಏನಿದೆ ಇದು ಹಿಂದೆ ಇಂಗ್ಲೀಷರ ಕಾಲದ ಪದ್ಧತಿಯಾಗಿತ್ತು. ಸರ್ಕಾರದವರು ಕಳೆದ 20 ವರ್ಷಗಳಿಂದ ಏನು ಮಾಡಿದರು? ಇದೇನು ಒಂದು ವರ್ಷದಲ್ಲಿ ಕೆಲಸ ಮಾಡಿ ಪೂರೈಸುವುದು ಅಲ್ಲ. ಎರಡು ವರ್ಷಗಳಲ್ಲಿ ಆಗುವುದೂ ಅಲ್ಲ. 10 ವರ್ಷಗಳ ಕೆಳಗೆ ಒಂದು ದೀರ್ಘ ಯೋಜನೆ ಈ ವಿಚಾರದಲ್ಲಿ ಹಾಕಿದರು. ಅದರಂತೆ ಮುಂದುವರಿದಿದ್ದರೆ ಇಂತಹ ಪರಿಸ್ಥಿತಿಗೆ ನಾವು ಬರುತ್ತಿರಲಿಲ್ಲ. ಈಗಲೂ ಶಾಶ್ವತವಾದ ಯೋಜನೆಯೊಂದನ್ನು ಹಾಕಿ, ಅದರಂತೆ ಮುಂದುವರಿದರೆ ನಮ್ಮ ಮಕ್ಕಳ ಹಾಗೂ ನಮ್ಮ ಮೊಮ್ಮಕ್ಕಳ ಕಾಲಕ್ಕೆ ಇಂತಹ ಕ್ಷಾಮದ ಭೀತಿಯೇ ಇಲ್ಲದೆ ಇರುತ್ತದೆ. ನಾವೂ ಆಗ ಆತ್ಮತೃಪ್ತಿಯಿಂದರಾದರೂ ಪ್ರಾಣ ಬಿಡಬಹುದು. ಇಲ್ಲದೇ ಇದ್ದರೆ ಮಂತ್ರಿಗಳು ನಮ್ಮವರು ಎಂಬುದಾಗಿ ಏಕೆ ನಾವು ಸಂತೋಷಪಡಬೇಕು? ಮಾನ್ಯ ಮಂತ್ರಿಗಳು ಈಗ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಬೇಕೆಂದು ಒಂದು ಯೋಚನೆ ಮಾಡಿದ್ದಾರೆ. ಅದನ್ನು ತತ್ಪಃಕ್ಷಣ ಕಾರ್ಯರೂಪಕ್ಕೆ ತರಬೇಕು. ಇಲ್ಲಿರುವ ಕಷ್ಟಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಹಾಗೂ ಇರತಕ್ಕ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಇದು ಅಭಾವ ಪರಿಸ್ಥಿತಿಯಲ್ಲ. ಪರಿಪೂರ್ಣವಾಗಿ ಕ್ಷಾಮ

ವೆಂದು ತಿಳಿಯಬೇಕು. ಏಕೆಂದರೆ ಕುಡಿಯುವುದಕ್ಕೆ ನೀರೇ ಇಲ್ಲ. ಮನುಷ್ಯರಿಗೆ ಸಾಕಷ್ಟು ಆಹಾರ ಇಲ್ಲ. ದನಕರುಗಳಿಗೆ ಸಾಕಷ್ಟು ಮೇವು ಇಲ್ಲ. ಹಳ್ಳಿಗಾಡುಗಳಲ್ಲಿ ಕುರಿ, ಮೇಕೆಗಳು ಮೇಯುವುದಕ್ಕೆ ಏನೂ ಸಿಗುವುದಿಲ್ಲ. ಜನ ವಲಸೆ ಹೋಗುವಾಗ ಎಲ್ಲಿ ಕುರಿ, ಮೇಕೆಗಳು ನತ್ತುಹೋಗುತ್ತವೋ ಎಂದು ಅವನ್ನು ಅರ್ಧ ಬೆಲೆಗೆ ಮಾರಿ ಜೀವನವಂಥ ದಾರುಣ ಪರಿಸ್ಥಿತಿಯನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ.

ಶ್ರೀಮತಿ ಕೆ. ಎನ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಸದಸ್ಯರು ಕ್ಷಾಮ ಪರಿಸ್ಥಿತಿಯನ್ನು ಬಹಳ ವರ್ಷಗಳಿಂದ ನೋಡಿದ್ದಾರೆ. ಆ ಕಾರಣದಿಂದ ಅವರು ಸಲಹೆಗಳನ್ನು ಕೊಟ್ಟ ಪ್ರಕಾರ ಮಾನ್ಯ ಮಂತ್ರಿಗಳು ಆ ಕೆಲಸಗಳನ್ನು ಮಾಡಿದರೆ ತ್ವರಿತವಾಗಿ ಜನಗಳಿಗೆ ಅನುಕೂಲವಾಗುತ್ತದೆ. ಆದರೆ ನಮ್ಮ ಜಿಲ್ಲೆಯಲ್ಲಿಯೂ ಇದು ಮೊದಲನೆಯ ಸಲವಲ್ಲ. ಅನೇಕ ಸಾರಿ ಬಂದಿದೆ.

ಶ್ರೀ ಬಿ. ಎಸ್. ನಾರಾಯಣಸ್ವಾಮಿ.—ಅದಕ್ಕಾಗಿಯೇ ಜನಗಳಿಗೆ ಕಷ್ಟ ಬರುತ್ತಿದೆ. ಈ ಕಷ್ಟವೇನಾದರೂ ಜನಗಳಿಗೆ ಹೆಚ್ಚಿಗೆ ತಟ್ಟಿದರೆ ದೇವರು ಕನಿಕರಪಡುತ್ತಾನೆಂದು ನಾನು ಹೇಳುತ್ತೇನೆ. ಪರಿಸ್ಥಿತಿ ಹೀಗಿರುವಾಗ ಅಭಾವವೆಂದು ಕೇಳದೆ, ಇದನ್ನು ಕ್ಷಾಮ ಪರಿಸ್ಥಿತಿ ಎಂಬುದಾಗಿ ಪರಿಗಣಿಸಬೇಕೆಂಬುದಾಗಿ ನಾನು ಹೇಳುತ್ತೇನೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಫಲಕಾರಿಯಾಗಿವೆ, ಇದರಿಂದೇನೇನು ಆಗುತ್ತಿವೆಯೆಂಬುದು ಸರ್ಕಾರದವರ ಗಮನಕ್ಕೆ ಈಗಾಗಲೇ ಬಂದಿವೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಈ ವಿಚಾರದಲ್ಲಿ ನತ್ಯವಾಗಿ ನಡೆಯುತ್ತಿರತಕ್ಕ ಸರ್ಕಾರಿ ಅಧಿಕಾರಿಗಳಾಗಲೀ, ಖಾನಗಿ ದೊಡ್ಡ ಮನುಷ್ಯರೆಂದೆನಿಕೊಂಡಿರುವವರು ಎಷ್ಟು ಜನರಿದ್ದಾರೆಂದು ನೋಡುವುದಾದರೆ ಕೇವಲ ಸೇಕಡ ಐದರಷ್ಟೂ ಸಹ ಇಲ್ಲ. ಅಷ್ಟು ಈಗ ಮೋಸವಾಗಿದೆ. ಯಾವ ಬಡವ ಪರಿತಪಿಸುತ್ತಿದ್ದಾನೋ ಅಂತಹವನಿಗೆ ನಿಜವಾಗಿ ಪರಿಹಾರ ದೊರಕುತ್ತಾ ಇಲ್ಲ. ಮಧ್ಯೆ ಇರತಕ್ಕ ಸರ್ಕಾರಿ ಸಿಬ್ಬಂದಿವರ್ಗದವರ ವಿಚಾರವೇ ಬೇರೆ. ಈಗ ಸಾರ್ವಜನಿಕರ ಮುಂದೆ ಇರತಕ್ಕ ಪ್ರಶ್ನೆ ಬಡವರಿಗೆ ಇರತಕ್ಕ ಕಷ್ಟವನ್ನು ತಪ್ಪಿಸುವುದು. ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ ಕೂಲ ಎರಡು ರೂಪಾಯಿಗಳನ್ನು ಕೊಟ್ಟರೆ ಅದರಲ್ಲ ಮಧ್ಯವರ್ತಿಗಳು ಅವನಿಗೆ ಒಂದು ರೂಪಾಯಿ ಕೊಟ್ಟು ಮಿಕ್ಕ ಒಂದು ರೂಪಾಯಿಯನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಅಂಥಾ ದ್ದನ್ನು ಯಾವ ರೀತಿ ತಪ್ಪಿಸಬೇಕೆಂಬುದನ್ನು ಸರ್ಕಾರದವರು ಯೋಚನೆಮಾಡಬೇಕು. ಮಿನಿಮಂ ವೇಜಸ್ ಆಕ್ಟ್ 1956ರಲ್ಲಿ ಜಾರಿಯಲ್ಲಿ ಬಂದಿದೆ. 12 ವರ್ಷಗಳಿಂದಲೂ ಧಾರಣೆವಾಸಿಗಳು ಇಷ್ಟು ಜಾಸ್ತಿಯಾಗುತ್ತಿದ್ದರೂ ಅವನಿಗೆ ಸರಿಯಾದ ಕೂಲ ಕೊಡುತ್ತಿಲ್ಲ. ಪಿ.ಡಬ್ಲ್ಯು.ಡಿ. ಇರಾಜಯ ಒಬ್ಬ ಕೂಲಿಗೆ ಏನು ಕೂಲ ದರವನ್ನು ಕೊಡುತ್ತೀರೋ ಅದೇ ದರವನ್ನು ಇತರ ಇರಾಜೆಗಳಲ್ಲ ಕಾಮಗಾರಿ ಕೆಲಸಗಳನ್ನು ಮಾಡತಕ್ಕ ಕೂಲಿಗಳಿಗೂ ಕೊಡಬೇಕು. ಸಾಧ್ಯವಾದರೆ ಇನ್ನೂ ಜಾಸ್ತಿ ಕೊಡಿ. ಏಕೆಂದರೆ ಸರ್ಕಾರದಲ್ಲಿ ಕೊಟ್ಯಾಂತರ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಕಷ್ಟಕಾಲದಲ್ಲಿ ಒಬ್ಬ ಬಡವ ಕೇಳಿದರೆ ಅವನಿಗೆ ಉದಾರವಾಗಿ ಕೂಲ ಕೊಡಿ. ಸರ್ಕಾರದ ವತಿಯಿಂದಾಗತಕ್ಕ ಕೆಲಸಗಳನ್ನು ಸರ್ಕಾರದ ಏಜೆಂಟ್‌ರಿಂದ ಮಾಡಿಸುವುದೇ ಅಥವಾ ಬರೀ ಪೀಸ್ ವರ್ಕ್‌ನಲ್ಲಿ ಮಾಡುವುದೇ ಅದನ್ನು ಕೂಲಂಕಷವಾಗಿ ಯೋಚನೆಮಾಡಿ ಅದಕ್ಕೋಸ್ಕರ ಒಂದು ಸಮಿತಿಯನ್ನು ರಚಿಸಿ. ದಯವಿಟ್ಟು ಬಡವನಿಗೆ ಅವನ ಕಷ್ಟದ ಫಲ ದೊರಕುವ ಹಾಗೆ ಮಾಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ.

ಇನ್ನು ಸಾಯರ್ ಕಸ್ಟರ್‌ವೇಷನ್ ವಿಚಾರದಲ್ಲಿ ಕೋಲಾರ ಜಿಲ್ಲೆ ನತದೃಷ್ಟವಾದುದಾಗಿದೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಇದರ ಬಗ್ಗೆ ಏನೂ ಕೆಲಸವಾಗಿಲ್ಲ. ಆದನ್ನು ಮಾಡಿಸಬೇಕೆಂದು ಕಮಿಷನರನ್ನು ಕೇಳಿದೆ. ಅದಕ್ಕೆ ಅವರು ಹಣವಿಲ್ಲವೆಂದು ಹೇಳಿದ್ದಾರೆ. ಇನ್ನೂ ಕೆಲವು ನೋಟಿಫಿಕೇಷನ್ಸ್ ಜಿಲ್ಲಾಧಿಕಾರಿಗಳಿಂದ ಹೊರಡಬೇಕು ಎಂಬುದಾಗಿಯೂ ಹೇಳಿದ್ದಾರೆ. ಇದರಲ್ಲ ನಾನು ಹೇಳುವುದಿಷ್ಟೆ. ಕಾಮಗಾರಿಗಳನ್ನು ಕೈಗೊಳ್ಳುವಾಗ ಕೂಲಗಳಿಗೆ ಕೆಲಸ ಒದಗಿಸುವ ದೃಷ್ಟಿ ಇಟ್ಟುಕೊಂಡು ಕೆಲಸ ಮಾಡಬೇಕು. ಆ ರೀತಿ ಮಾಡದೆ ಇರುವುದರಿಂದಲೇ ಇವತ್ತು ಕೋಲಾರ ಜಿಲ್ಲೆಯಲ್ಲಿ ಶ್ರೀನಿವಾಸಪುರದಲ್ಲಿ ಸಾಯರ್ ಕನ್‌ಸರ್‌ವೇಷನ್ ಕೆಲಸ ಯಾವುದೂ ಆಗಿಲ್ಲ. ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಅವರು ಇಂತಹ ತುರ್ತು ಕಾರ್ಯಗಳಿಗಾಗಿ ಹಣವನ್ನು ಮಾಸರಾಗಿಡಬೇಕು. 1 ಲಕ್ಷ 33 ಸಾವಿರ 600 ಮಂದಿಯ ಪೈಕಿ 72 ಸಾವಿರದ 325 ಮಂದಿಗೆ ಹಣ ಸಹಾಯ ಕೊಟ್ಟಿದ್ದೇವೆಂದು ಹೇಳುವುದರಿಂದ ಉಳಿದ 61 ಸಾವಿರದ 275 ಮಂದಿಗೆ ಈ ಯೋಜನೆಯಲ್ಲಿ ಸಹಾಯ ಮಾಡಲು ಹಣವನ್ನು ಮಾಸರಾಗಿಡಬೇಕು. ಇದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಬೇಕು.

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಇನ್ನು ಕುಡಿಯುವ ನೀರಿನ ಅಭಾವ ಈಗ ಬಹಳವಾಗಿದೆ. ಕೆಲವು ಬಾವಿಗಳಲ್ಲಿ ಎಷ್ಟು ಆಳ ತೋಡಿದರೂ ನೀರು ಇಲ್ಲ. ನಮ್ಮಲ್ಲಿ ದುಡ್ಡು ಇಲ್ಲ. ಕೋರಾರ ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರ, ಗೋರಿಬಿದನೂರು, ಶಿಡ್ಲಘಟ್ಟ—ಈ ಪ್ರತಿಯೊಂದು ತಾಲ್ಲೂಕಿಗೂ 400 ಬಾವಿಗಳನ್ನು ಮಂಜೂರು ಮಾಡಿ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ಚಿಂತಾಮಣಿಯಲ್ಲಿ 650 ನೀರಾವರಿ ಬಾವಿಗಳಿದ್ದರೂ ಅಷ್ಟು ಬಾವಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಸಂಬಂಧಪಟ್ಟ ಇರಾಖೆಯವರು ಒಂದು ಟಾರ್ಗೆಟ್ಟನ್ನು ಇಟ್ಟುಕೊಂಡು ಕೇವಲ 40 ಬಾವಿಗಳಿಗೆ ಮಾತ್ರ ವಿದ್ಯುಚ್ಛಕ್ತಿ ಕೊಡಲು ನಿಗದಿಮಾಡಿದ್ದಾರೆ. ಉಪಸಚಿವರಾದ ಮಾನ್ಯ ಶ್ರೀ ಪರಮೇಶ್ವರಪನವರು ನಮ್ಮ ತಾಲ್ಲೂಕಿಗೆ ದಯಮಾಡಿಸಿದ್ದರು. ಆಗ ನಮ್ಮ ತಾಲ್ಲೂಕಿಗೆ ಕೇವಲ 40 ಬಾವಿಗಳಿಗೆ ವಿದ್ಯುಚ್ಛಕ್ತಿ, ಕೊಡುತ್ತೇವೆಂದು ನಿಗದಿಮಾಡಿದ್ದಾರೆ. ಪಕ್ಕದ ತಾಲ್ಲೂಕಿನಲ್ಲಿ 650 ಬಾವಿಗಳಿಗೆ ಅಗ್ರಿಕಲ್ಚರಲ್ ಫೈನಾನ್ಸಿಂಗ್ ಕಾರ್ಪೊರೇಷನ್ನಿನವರು ವಿದ್ಯುಚ್ಛಕ್ತಿ, ಸರಬರಾಜಿಗೋಸ್ಕರ ಹಣ ಕೊಡುತ್ತಾರೆ. ಅದೇ ರೀತಿ ನಮಗೂ ಹಣ ಕೊಡಿಸಿ ಎಂಬುದಾಗಿ ಮಾನ್ಯ ಉಪಸಚಿವರನ್ನು ಕೇಳಿದೆವು. ಪಕ್ಕದ ತಾಲ್ಲೂಕು ಎಷ್ಟೋ ವೃದ್ಧಿಯಾಗುತ್ತಿದೆ. ನೀವು ಮಾಡಿದ ಪಾಪ ಏನೆಂಬುದಾಗಿ ಕೇಳಿದರು. ನಮ್ಮಲ್ಲಿ ಕ್ಷಾಮ ಇಲ್ಲವೆಂದು ಹೇಳಿದರೆ ಹೇಗೆ? ಮುಂದೆ ಇದಕ್ಕಿಂತಲೂ ಕ್ರೂರವಾದ ಕ್ಷಾಮ ಬಂದೀತು ಎಂದು ನಾನು ಹೇಳುತ್ತೇನೆ. ಅಂತಹ ಕ್ಷಾಮ ನಮ್ಮ ಶ್ರೀನಿವಾಸಪುರದಲ್ಲಿ ಈಗ ಬಂದಿದೆಯೆಂದು ಹೇಳಬಹುದು. ಇಂಥಾ ಪರಿಸ್ಥಿತಿ ಇದೆ. ಕುಡಿಯುವ ನೀರಿಗೆ ಬಹಳ ಕಷ್ಟವಾಗಿದೆ. ದನಕರುಗಳಿಗೆ ಮೇವು ಇಲ್ಲ. ಇವುಗಳನ್ನು ಸರ್ಕಾರ ಒದಗಿಸಿಲ್ಲ ಸರ್ಕಾರದವರು ಮಾಡಿರತಕ್ಕ ಸಹಕಾರ ಮತ್ತು ಸಹಾಯ ಇಷ್ಟೆ.

ಇನ್ನು ಆಹಾರದ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಆಹಾರ ಧಾನ್ಯವನ್ನು ಒಂದು ಕುಟುಂಬಕ್ಕೆ ಒಂದು ತಿಂಗಳಿಗೆ $1\frac{1}{2}$ ಕೆ.ಜಿ.ಯಂತೆ ಸರಾಸರಿ ಸರ್ಕಾರದವರು ಒದಗಿಸುತ್ತಿದ್ದಾರೆ. ಇದು ತೆನಾಲಿ ರಾಮಕೃಷ್ಣ ಕುದುರೆ ಸಾಕಿದಂತಾಗುತ್ತದೆ. ಇದನ್ನು ಸರ್ಕಾರದವರು ಗಮನಿಸಬೇಕು. ಜನಗಳು ಬಹಳ ಕಷ್ಟದಲ್ಲಿದ್ದಾರೆ. ಇದನ್ನು ಸರ್ಕಾರದವರು ಉದಾಸೀನದಿಂದ ನೋಡಬಾರದು. ಜನಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇಲ್ಲದೆ ಇದ್ದರೆ ಬಹಳ ಕಷ್ಟವಾಗುತ್ತದೆ. ಅಮೇರಿಕಾ ದೇಶದವರು ಭಾರತ ಸರ್ಕಾರಕ್ಕೆ ಕೊಡುಗೆಯಾಗಿ 12 ಪವರ್ ಪುರ್ ಜೆಕ್ಸ್‌ಗಳನ್ನು ಕೊಟ್ಟಿದ್ದಾರೆಂದು ಗೊತ್ತಾಗಿದೆ. ಈ ಜೆಕ್ಸ್‌ಗಳಿಂದ ಒಂದು ದಿವನಕ್ಕೆ ಸಾವಿರಾರು ಆಡಿ ಆಳದ ಬಾವಿಗಳನ್ನು ತೆಗೆಯುವುದಕ್ಕೆ ಸಾಧ್ಯವಿದೆ ಎಂದು ನಾನು ಕೇಳಿದ್ದೇನೆ. ನಮ್ಮ ನೆರೆಪ್ರಾಂತ್ಯದವರಾದ ಆಂಧ್ರ ಪ್ರಾಂತ್ಯದವರು ನಾಲ್ಕು ಜೆಕ್ಸ್‌ಗಳನ್ನು ತಂದು ಬಾವಿಗಳ ಕೆಲಸವನ್ನು ಮಾಡಿಸುತ್ತಿದ್ದಾರೆಂದು ಗೊತ್ತಾಗಿದೆ. ಮೈಸೂರಿನವರೂ ಅವುಗಳನ್ನು ಕೇಳಿದರೆ ಯಾರೂ ಕೊಡುವುದಿಲ್ಲ ಎಂದು ಹೇಳುವುದಿಲ್ಲ. ನಮ್ಮ ಸರ್ಕಾರದವರಿಗೆ ಈ ವಿಷಯ ಗೊತ್ತಿದ್ದರೂ ಇವುಗಳನ್ನು ತರಿಸುವುದಕ್ಕೆ ಕೇಂದ್ರ ಸರ್ಕಾರದವರನ್ನಾಗಲೀ ಅಥವಾ ಬೇರೆ ಪ್ರಾಂತ್ಯದವರನ್ನಾಗಲಿ ಕೇಳುವುದಕ್ಕೆ ಮನಸ್ಸು ಇಲ್ಲದೆ ಇರುವುದರಿಂದ ಅವುಗಳನ್ನು ನಮ್ಮ ರಾಜ್ಯಕ್ಕೆ ತರಿಸುವುದಕ್ಕೆ ಸಾಧ್ಯವಾಗಿಲ್ಲ. ಆದಕಾರಣ ನಮ್ಮ ಸರ್ಕಾರದವರು ಶಕ್ತಿಯುತವಾದ, ಜಾಗ್ರತೆಯಾಗಿ ಬಾವಿಗಳನ್ನು ತೆಗೆಯತಕ್ಕ ಯಂತ್ರಗಳನ್ನು ಆದಷ್ಟು ಜಾಗ್ರತೆ ತರಿಸಿ ಬಾವಿಗಳನ್ನು ತೋಡಿಸಿಕೊಡಬೇಕು. ಈಗ ಬಂದಿರತಕ್ಕ ಕ್ಷಾಮವನ್ನು ಹೋಗರಾಡಿಸುವುದಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಹೇಳಬೇಕಾದ ವಿಷಯ ಬಹಳ ಇದೆ. ಆದರೆ ಈಗಾಗಲೇ ಬೇಗ ಮುಗಿಸಬೇಕೆಂದು ಅಧ್ಯಕ್ಷರು ಸೂಚನೆಯನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಜನಗಳಿಗೆ ಕೂಲಿಸಿಕ್ಕುವ ಹಾಗೆ ಮಾಡಲು ಕಾಮಗಾರಿ ಕೆಲಸಗಳನ್ನು ಕೈಗೊಳ್ಳಬೇಕು. ಈಗ ಜನಗಳಿಗೆ ಇರುವ ಕಷ್ಟವನ್ನು ಹೋಗರಾಡಿಸುವುದಕ್ಕೆ ತಾತ್ಕಾಲಿಕವಾಗಿ ಹೆಚ್ಚು ಹೆಚ್ಚು ನೆರವನ್ನು ಜನತೆಗೆ ಸರ್ಕಾರ ನೀಡಬೇಕು. ಸರ್ಕಾರ ಕೊಡತಕ್ಕ ಪ್ರತಿಯೊಂದು ಕಾಸೂ ಬಡವರಿಗೆ ಸಿಕ್ಕುವಂತಾಗಬೇಕು. ಇದರಲ್ಲಿ ಮಧ್ಯವರ್ತಿ ದಳ್ಳಾಳಿಗಳ ಕೈವಾಡ ಇದೆ. ರಾಜಕೀಯ ಇದೆ. ಆದಷ್ಟೂ ಬಡಜನಗಳಿಗೆ ಕಷ್ಟವನ್ನು ಎದುರಿಸಲು ಸರ್ಕಾರದವರು ಸಹಾಯ ಮಾಡಬೇಕು ಎಂದು ಸರ್ಕಾರದವರನ್ನು ಪ್ರಾರ್ಥಿಸಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸತ್ಯಗೌಡ ಸಾತಗೌಡ ಪಾಟೀಲ್ (ಹುಕ್ಕೇರಿ).—ಮಾನ್ಯ ಸಭಾಪತಿಗಳೇ, ರಾಜ್ಯದ ಎಲ್ಲಾ ಪ್ರದೇಶಗಳಲ್ಲಿಯೂ ಗುಂಚಾಗಿರತಕ್ಕ ಅಭಾವ ಪರಿಸ್ಥಿತಿಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಹಾಗೂ ಕೈಗೊಳ್ಳಬೇಕಾದ ಪರಿಹಾರ ಕ್ರಮಗಳ ಬಗ್ಗೆ ಪರ್ಯಾಲೋಚನ

ಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತಾ, ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ನಮ್ಮ ದೇಶದಲ್ಲಿ 2-3 ಜಿಲ್ಲೆಗಳನ್ನು ಬಿಟ್ಟರೆ ಉಳಿದ ಅನೇಕ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆ. ಬೆಳಗಾಂ ಜಿಲ್ಲೆಯ ಜನರ ಪರಿಸ್ಥಿತಿಯನ್ನು ಹೇಳದೇಕಾಗಿದ್ದರೆ ಕೆಲವು ಕಡೆ ಈಗ್ಗೆ 8 ದಿವಸಗಳ ಹಿಂದೆ ಬೆಳೆ ಸಾಧಾರಣವಾಗಿತ್ತು, ಈಗ ಮಳೆ ಇಲ್ಲದೇ ಇರುವುದರಿಂದ ಬೆಳೆ ಒಣಗಿ ಹೋಗಿ ಇಡೀ ಬೆಳಗಾವ್ ಜಿಲ್ಲೆಯಲ್ಲ ಕ್ಷಾಮ ಬಂದಿದೆ. ಅಭಾವ ಪರಿಸ್ಥಿತಿ ಉಂಟಾಗಿದೆ. ಬೆಳಗಾಂ ಜಿಲ್ಲೆಯ ಪೂರ್ವ ಭಾಗದಲ್ಲ ಮಳೆ ಆಗದೆ ಬತ್ತನೆ ಕೂಡ ಆಗಿಲ್ಲ. ಯಾವ ಭಾಗದಲ್ಲ ಬತ್ತನೆಯಾಗಿತ್ತು, ಆ ಭಾಗದಲ್ಲ ಇದುವರೆಗೂ ಸ್ವಲ್ಪ ಬೆಳೆ ಬಂದಿತ್ತು. ಈಗ ಮಳೆ ಬಾರದೆ ಇರುವುದರಿಂದ ಬೆಳೆಗಳೆಲ್ಲಾ ಒಣಗಿ ಹೋಗಿವೆ. ಬತ್ತಿಹೋಗಿವೆ. ಬೆಳಗಾವ್ ಜಿಲ್ಲೆಯಲ್ಲ ಹೊಳೆಗಳಿಗೆ ಬಂದಾರ ಕಟ್ಟಲಿಕ್ಕೆ ಅನುಕೂಲ ಪರಿಸ್ಥಿತಿ ಇದೆ. ಈ ಜಿಲ್ಲೆಯಲ್ಲ ನೂರಾರು ಹೊಳೆಗಳಿವೆ. ಈ ಹೊಳೆಗಳಿಗೆ ಬಂದಾರ ಹಾಕಿ ಲಿಫ್ಟ್ ಇರಿಗೇಷನ್ ಮಾಡಿದರೆ ತಾತ್ಕಾಲಿಕವಾದ ನೀರಾವರಿ ಯೋಜನೆ ಆಗಬಹುದು. ಮತ್ತೆ ಕೆಲವು ಕಡೆ ಕೆರೆ ಕಟ್ಟೆಗಳನ್ನು ಕಟ್ಟುವ ಏರ್ಪಾಡು ಮಾಡಿದರೆ ಅದೂ ಸಹ ಉಪಯೋಗವಾಗಬಹುದು. ಆದರೆ ಅಕ್ಟಿಜಿಷನ್ ಪ್ರಕರಣಗಳ ಸಲುವಾಗಿ ಅವು ಹಾಗೆಯೇ ಉಳಿದಿವೆ. ಲ್ಯಾಂಡ್ ಅಕ್ಟಿಜಿಷನ್ ಮಾಡುವುದಕ್ಕೆ ಪಬ್ಲಿಕ್ ವರ್ಕ್ಸ್ ಇರಾಖೆಯವರು ಸ್ಪೆಷರ್ ಆಫೀಸರನ್ನು ನೇಮಿಸಬೇಕು ಬಂದಾರ ಕಟ್ಟುವುದಕ್ಕೆ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಪ್ರತಿಯೊಂದು ಹಳ್ಳಿಗೂ ಎರೆಕ್ಟ್ರಿಕ್‌ಲೈನ್ ಹಾಕಿ ವಿದ್ಯುಚ್ಛಕ್ತಿಯನ್ನು ಕೊಡಬೇಕು. ಎಲ್ಲೆಲ್ಲ ನೀರನ್ನು ಎತ್ತಿ ವ್ಯವಸಾಯಮಾಡುವುದಕ್ಕೆ ಅನುಕೂಲ ಇದೆಯೋ ಅಂಥಾ ಕಡೆಗಳಿಗೆಲ್ಲಾ ಪಂಪುಸೆಟ್ಟುಗಳನ್ನು ಒದಗಿಸಿಕೊಟ್ಟು ನೀರಾವರಿ ಸೌಲಭ್ಯವನ್ನು ರೈತರಿಗೆ ಒದಗಿಸಿಕೊಡಬೇಕು. ಕಮ್ಯುನಿಟಿ ಬಾವಿಗಳನ್ನು ತೋಡಿಸುವುದಕ್ಕೆ ಸರ್ಕಾರದವರು ಕೈಗೊಂಡ ಯೋಜನೆ ಹಾಗೆಯೇ ಉಳಿದಿದೆ. ಈಗ ಯಾರಾದರೂ ಖಾಸಗೀ ಜನರ ಜಮೀನಿನಲ್ಲಿ ಕಮ್ಯುನಿಟಿ ಬಾವಿಗಳನ್ನು ತೋಡಿಸಿದರೆ ಅವರು ಬೇರೆಯವರ ಜಮೀನಿಗೆ ನೀರು ಕೊಡುವುದಕ್ಕೆ ಒಪ್ಪುವುದಿಲ್ಲ. ಆದ್ದರಿಂದ ಗೋಮಾಳಗಳಲ್ಲಿ ಕಮ್ಯುನಿಟಿ ಬಾವಿಗಳನ್ನು ತೋಡಿಸಿ ನುತ್ತಮುತ್ತಲಿನ ರೈತರಿಗೆ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಈಗ ಅನೇಕ ಕೆರೆಗಳಲ್ಲಿ ಹೂಳು ತುಂಬಿಹೋಗಿ ನೀರು ಸಾಕಷ್ಟು ನಿಲ್ಲುವುದಿಲ್ಲ ಅಂಥಾ ಕೆರೆಗಳ ಹೂಳನ್ನು (ಸಿಲ್ಟನ್ನು) ತೆಗೆದು ರಿಪೇರಿ ಮಾಡಬೇಕು. ಆ ಕೆಲಸಗಳನ್ನು ಮಾಡಿಸುವುದರಿಂದ ಬರಗಾಲ ಕಾಮಗಾರಿಗಳನ್ನು ಮಾಡಿಸಿದಂತಾಗುತ್ತದೆ ಆದ್ದರಿಂದ ಜನಗಳಿಗೆ ಕೆಲಸಕೊಟ್ಟಂತಾಗುತ್ತದೆ.

ಇನ್ನು ನಮ್ಮ ಸರ್ಕಾರದವರು ಈಗಾಗಲೇ ಸಾಕಷ್ಟು ಆಹಾರ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಾರೆ. 5 ವರ್ಷದ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ಉಚಿತ ಆಹಾರವನ್ನು ಒದಗಿಸುವ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಇದು ಬರೀ ಹಳೆಯ ಮೈಸೂರು ಮತ್ತು ಕೆಲವು ಪ್ರದೇಶಲ್ಲಿ ಮಾತ್ರ ಇದೆ. ಇದನ್ನು ಬೇರೆ ಜಿಲ್ಲೆಗಳಿಗೂ ಕೂಡ ವಿಸ್ತರಿಸಬೇಕು. ಎಲ್ಲೆಲ್ಲ ಅಭಾವ ಪರಿಸ್ಥಿತಿ ಇದೆಯೋ ಅಂಥಾ ಕಡೆಗೆ ಪ್ರತಿಯೊಂದು ಜಿಲ್ಲೆಗೂ ಆಹಾರವನ್ನು ಒದಗಿಸುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು.

ಇನ್ನು ಕೊನೆಯದಾಗಿ ಒಂದು ಸೂಚನೆ ಇದೆ. ಅಮೇರಿಕಾ ದೇಶದಲ್ಲ ಕೃತಕ ಮಳೆಯನ್ನು ಸುರಿಸತಕ್ಕಂಥ ಕೆಲವು ಕಂಪೆನಿಗಳು ಇವೆಯೆಂದು ನಾನು ಕೇಳಿದ್ದೇನೆ. ನಮ್ಮ ಸರ್ಕಾರದವರು ಕೇಂದ್ರದವತಿಯಿಂದ, ತಜ್ಞರ ನೆರವನ್ನು ಪಡೆದು, ಅಮೇರಿಕಾದೇಶದ ಆ ಕಂಪೆನಿಗಳವರ ಸಹಾಯವನ್ನು ಪಡೆದು ಕೃತಕಮಳೆಯನ್ನು ಸುರಿಸುವುದಕ್ಕೆ ನಮ್ಮ ಸರ್ಕಾರದವರು ಪ್ರಯತ್ನ ಮಾಡಬೇಕು. ನಾಲ್ಕೈದು ವರ್ಷಗಳ ಹಿಂದೆ ಮುಂಬೈ ಮತ್ತು ಪೂನಾ ಮಧ್ಯದಲ್ಲಿರತಕ್ಕ ಬೆರ್ಜ್ ಖರಿಯಾದಲ್ಲ ಮುಡಿಸಿಕೆರೆಯಲ್ಲ ನೀರು ಹೋದಾಗ ಮುಂಬೈ ರಾಜ್ಯದವರು ಅಮೇರಿಕಾದವರ ನೆರವನ್ನು ಪಡೆದು ಅಲ್ಲ ಆರ್ಟಿಫಿಷಿಯಲ್ ರೈನ್ ಫಾರ್ ಮಾಡಿದ್ದಾರೆ. ಅಂಥಾ ಒಂದು ಪ್ರಯತ್ನವನ್ನು ಸರ್ಕಾರದವರು ಮಾಡಬೇಕು.

ರಾಜ್ಯದಲ್ಲ ತುರ್ತುಪರಿಸ್ಥಿತಿಯೆಂದು ಸಾರಬೇಕು. ಎಮರ್ಜೆನ್ಸಿ ಎಂದು ಹೇಳಿ ಎಲ್ಲಾ ಕೆಲಸಗಳನ್ನೂ ಬದಿಗಿಟ್ಟು ಎಲ್ಲಾ ತಾಲ್ಲೂಕು ಬೋರ್ಡುಗಳಿಗೂ ಬರಗಾಲದ ಕೆಲಸಗಳನ್ನು ಕೈಗೊಳ್ಳಬೇಕು ಎಂದು ಆರ್ಡರ್ ಕೊಡಬೇಕು. ಅದೇ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲಿಯೂ ಡೆಪ್ಯುಟಿಕಮೀಷನರ ರ್ಯಾಂಕಿನ ಸ್ಪೆಷರ್ ಆಫೀಸರನ್ನು ಈ ಅಭಾವ ಪರಿಸ್ಥಿತಿಯ ಕೆಲಸವನ್ನು ಮಾಡುವುದಕ್ಕೆ ನೇಮಕ ಮಾಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri N. B. SIRDESAI (Khanapur).—Mr. Speaker, Sir, I rise to offer certain remarks on the Motion moved by the hon. Chief Minister regarding scarcity conditions prevailing in the State. Due to failure of rains in many parts of the State, they are subjected to severe scarcity. It is shocking and painful to know from the statement of the Chief Minister that over 100 out of 174 talukas are experiencing scarcity conditions. It is mentioned in the statement that a Central Study Team visited this State and during that time a comprehensive programme for scarcity relief works was formulated costing to the tune of Rs. 8.3 crores and was presented to the Team. But, Sir, I submit here that neither the Central Team nor any Team in the State has properly assessed the situation and the requirement of funds. If the situation and requirement of funds had been properly assessed and then the programme had been formulated, it would have been better and the relief would have gone to those people.

Now Sir, it is again stated that the Central Government have not conceded the demands for funds for the irrigation works and the energising of wells. The Central Government must assist the State Government and it is quite essential to do so. But, I submit, the State Government must find a way out till the Central assistance is made available. This is the most appropriate time to pay much more attention to irrigation facilities being provided if the State wants to combat the scarcity condition. More and more irrigation facilities must be extended so that more food crops could be grown. Sir, I would like to submit here that to extend more irrigation facilities the rules introduced by the Mysore State Electricity Board must be scrapped. Now Rs. 1,000 or 50 per cent of the cost of the work of electrification work is demanded by the M.S.E.B.....

Sri RAMAKRISHNA HEGDE (Minister for Finance).—It is not correct. I have repeatedly made it clear that this scheme has been given up. We have given instructions to the Electricity Board and they have also issued a statement in the press that this scheme has been given up.

Sri N. B. SIRDESAI.—Thank you Sir. Then Sir, in Khanapur taluka there are 265 second class tanks and 6 smaller irrigation projects. Almost 95 per cent of the tanks are dried up due to failure of rains and there is no water in them. Wells are also dried up for want of rain. Deepening of such wells is quite essential in Khanapur taluka but sufficient funds are not provided by the Government. Desilting of these tanks is also quite essential but Government is not making any provision of funds for desilting of these tanks. At least during this scarcity condition Government must make funds available for desilting of tanks. It is stated in the statement that for distress relief works one crore six lakhs rupees has been given to four divisions under scarcity relief. But only Rs. 17,31,000 has been provided to Belgaum and it is a very meagre amount when taken into consideration the vast area and population of Belgaum Division. Since last year in Khanapur, rains have failed but our taluka has not been declared as scarcity area. Government has stated that there is too much delay in the matter of

sanctioning estimates and drawal of funds for disbursal in such areas and so much of the relief work is slowed down. My submission is, that the hon'ble Chief Minister should be bold enough to take severe action against the concerned officers who indulge in red-tapism; otherwise, the schemes will remain on paper and nothing would be brought under execution; that is my humble submission.

Further, it is said that 25 per cent of the irrigation works is to be treated as subsidy and 75 per cent as loan. It will be a heavy burden on the cultivator. I humbly suggest that Government should increase the subsidy amount and decrease the loan amount.

It is said in the statement that the powers of granting remission or suspension of land revenue have been delegated to the Deputy Commissioners, and in 7,000 villages remission of land revenue has been granted. But I would like to submit here that though there is scarcity condition in my taluka and though such remission was warranted because of wild elephants having damaged crops and though the Tahsildar had also recommended for such remission in land revenue and though the previous Revenue Minister had promised to give remission on the floor of this House, till this date no remission is given. So, it looks as though all the schemes and statements and promises remain on paper only. It is very miserable and deplorable.

Then, Sir, there is feasibility of lift irrigation in my taluka but Government has not prepared a plan for lift irrigation for my taluka. Though there are water resources, they are not utilised and the Government is to be blamed for that. Sir, it is most miserable to note that in the maps showing the affected areas presented to the Study Team, Khanapur taluka has not been included in the map. Though 50 per cent of the crop is being damaged by wild elephants and more than 30 per cent of the yield is recovered in the shape of levy by Government from the agriculturists, Government is not treating our taluka as scarcity area and people are subjected to injustice and put to trouble. In spite of my repeated requests, Milo is not supplied to the poor cultivators. They are toiling under the Sun and whatever crop they grow is being taken away in the form of levy. These people do not have even a good loin cloth to wear. This is the miserable condition of the people of my taluka. In spite of this, the Government has filed cases against the agriculturists in Belgaum and Khanapur talukas for not giving levy. I submit, at least in such scarcity affected areas all such cases should be withdrawn and they should be given proper relief. Otherwise people will think that statements and promises are made only on the floor of the House and nothing would be implemented in practice. Even when Government sanctions funds for these affected areas, it is not properly utilised by the officers concerned and so no relief would reach the people in need. So, I submit that the Hon'ble Minister should take severe action against such officers who indulge in red-tapism and neglect their work and they must see that sanctioned schemes are properly implemented. With these words I thank you and conclude.

6-30 P. M.

ಶ್ರೀ ಜೆ. ಆರ್. ಹಾಲಸ್ವಾಮಿ (ಜಗಳೂರು).—ಮಾನ್ಯ ಸಭಾಪತಿಗಳೇ, ಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ಒಂದು ಕ್ಲಿಷ್ಟಕರವಾದ ಘೋರ ಸಮಸ್ಯೆಯನ್ನು ಎದುರಿಸಲು ಸರ್ಕಾರ ಏನೇನು ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಕೈಗೊಂಡಿರುವುದಕ್ಕಾಗಿಯೂ ಮತ್ತು ತಪ್ಪದೆಬಂಧದಲ್ಲಿ ಒಂದು ದೀರ್ಘವಾದ ಹೇಳಿಕೆಯನ್ನೂ ಸಹಾ ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಇಟ್ಟಿರುವುದಕ್ಕಾಗಿಯೂ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಅರ್ಪಿಸಬೇಕಾಗಿದೆ.

ರಾಜ್ಯದಲ್ಲಿ ತ್ವರಿತವಾಗಿ ಅಲ್ಲಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕ ನಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದವರನ್ನು 8 ಕೋಟಿ ರೂಪಾಯಿಗಳನ್ನು ಒದಗಿಸ ಬೇಕೆಂಬುದಾಗಿ ಕೇಳಿದ್ದಾರೆ. ಆದರೆ ಅದು ಸಾಲದು. ಇನ್ನೂ ಹೆಚ್ಚಿಗೆ ಹಣ ಕೇಳಬೇಕಾಗಿತ್ತು, ಹಾಲಿ ಕೇಳಿರತಕ್ಕ ಮೊಬಲಗು ಏತಕ್ಕೂ ಸಾಲದು ಎಂದು ಹೇಳಿದರೆ ಅದೇನೂ ತಪ್ಪಾಗರಾರದು. ಹೀಗೆ ಹಣವನ್ನು ಕೇಳತಕ್ಕ ನಂದರ್ಭದಲ್ಲಿ ನಾವು ಯಾವತ್ತೂ ಸ್ವಲ್ಪ ಜಾಸ್ತಿಯಾಗೇ ಕೇಳಬೇಕು. ನಮಗೆ ನ್ಯಾಯವಾಗಿ 10-12 ಕೋಟಿ ರೂಪಾಯಿಗಳ ಅಗತ್ಯವಿತ್ತು ಎಂದಾಗ ನಾವು 20-25 ಕೋಟಿ ರೂಪಾಯಿಗಳನ್ನು ಕೇಳಿದರೆ ಆಗ ನಮಗೆ 10-12 ಕೋಟಿ ರೂಪಾಯಿಗಳು ಆದರೂ ಸಿಕ್ಕುತ್ತೆ. ಆದ್ದರಿಂದ ನಮ್ಮ ಮುಖ್ಯ ಮಂತ್ರಿಗಳು ಈ ನಂದರ್ಭದಲ್ಲಿ ಈ ಒಂದು ತಪ್ಪನ್ನು ಮಾಡಿದ್ದಾರೆ. ಸಾಮಾನ್ಯವಾಗಿ ನಮ್ಮ ಮನೆಗಳಲ್ಲಿ ಈಗ ಹುಡುಗರು ಅವರಿಗೆ 4 ಆಣೆ ದುಡ್ಡು ಬೇಕಾಗಿದ್ದರೆ ಅವರು ಒಂದು ರೂಪಾಯನ್ನೇ ಕೇಳುತ್ತಾರೆ. ಅದರಂತೆ ನಮ್ಮ ಮುಖ್ಯ ಮಂತ್ರಿ ಗಳೂ ಕೂಡ ಈ ರಾಜಿಕ್ಯನ್ನು ಅನುಸರಿಸಿ 10 ಕೋಟಿ ಬೇಕಾಗಿದ್ದಾಗ ಅವರು 20 ಕೋಟಿಯನ್ನೇ ಕೇಳಬೇಕು. ಅನಂತರ ಈ ವಿಚಾರದಲ್ಲಿ ನಮಗೆ ಇಷ್ಟು ಹಣ ಬೇಕು ಎಂದು ನಾವು ಪತ್ರವ್ಯವ ಹಾರಮಾಡುತ್ತಾ ಕುಳಿತರೆ ಕೆಲಸಗಳಾಗುವುದಿಲ್ಲ, ಹಣವೂ ಬರುವುದಿಲ್ಲ. ಆದುದರಿಂದ ಇಂಥ ಕೆಲಸಗಳನ್ನು ನಮ್ಮ ಮುಖ್ಯ ಮಂತ್ರಿಗಳು ಖುದ್ದಾಗಿ ದಿಹಲಿಗೆ ಹೋಗಿ ಮಾಡಿಕೊಂಡು ಬರಬೇ ಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮಗೆ ಪೊಟ್ಟಮೊದಲನೆಯ ಘೋರ ಸಮಸ್ಯೆ ಎಂದರೆ ಆಹಾರವಿಲ್ಲದೆ ಇರುವುದಲ್ಲ; ಅದ ಕ್ಕಿಂತಲೂ ಮೊದಲು ನಾವು ಎದುರಿಸಬೇಕಾದ್ದು ಕುಡಿಯುವ ನೀರಿನ ಸಮಸ್ಯೆ. ಇದಕ್ಕಾಗಿ ಸರ್ಕಾರ ಒಂದು ದಿಟ್ಟತನದ ಕಾರ್ಯಕ್ರಮ ಕೈಗೊಳ್ಳಬೇಕು. ಅನೇಕ ಹಳ್ಳಿಗಳಲ್ಲಿ ಈಗಾಗಲೇ ಇರತಕ್ಕ ಬಾವಿಗಳು ಬಹಳ ಆಳವಾಗಿರುವುದರಿಂದ ಅವುಗಳನ್ನು ಮತ್ತಷ್ಟು ಜಾಸ್ತಿ ಆಳಮಾಡುವು ದಕ್ಕೆ ಆಗುವುದಿಲ್ಲ. ಅಲ್ಲಿ ಹೊಸದಾಗಿ ಬಾವಿಗಳನ್ನು ತೆಗೆಯಲೇಬೇಕು. ಇಲ್ಲವೇ ಇಂಥ ಕಡೆಗಳ ಲ್ಲೆಲ್ಲಾ ವೆರ್‌ಬೋರಿಂಗ್ ಮಿಷನ್‌ಗಳನ್ನು ಹಾಕಿ ಬಾವಿಗಳನ್ನು ಆಳಪಡಿಸಬೇಕು. ಒಂದು ಅಡಿ ಆಳವನ್ನು ಇಳಿಸುವುದಕ್ಕೆ ಕೈಯಿಂದ ಹಾರೆ ಹಾಕಿ ಆಳಪಡಿಸಲು 4-5 ರೂಪಾಯಿಗಳಾಗಬಹುದು. ಪಿ.ಡಬ್ಲು.ಡಿ. ಯವರನ್ನು ಒಂದು ಎಸ್ಟಿಮೇಟ್ ಮಾಡಿಕೊಡಿ ಎಂದರೆ ಅವರು ಅದು ನಮಗೆ ನಂಬಂಧವಿಲ್ಲ, ನಮ್ಮ ಕೋಡಿನಲ್ಲಿ ಅದಿಲ್ಲ ಎನ್ನುತ್ತಾರೆ. ಇದನ್ನೆಲ್ಲಾ ನೋಡಿದರೆ ನಾವಿನ್ನೂ ಓಬರಾಯನ ಕಾಲದಲ್ಲೇ ಇದ್ದೇವೆಂದು ಹೇಳಬಹುದು. ಸರ್ಕಾರದವರು ಗ್ರಾಮಾಂತರ ಪ್ರದೇಶ ದಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡತಕ್ಕ ಬಗ್ಗೆ ಹೆಚ್ಚಿನ ಅದ್ಯತೆಯನ್ನು ನೀಡಲೇಬೇಕು; ಹಾಗೂ ಈ ಬಗ್ಗೆ ತಕ್ಷಣವೇ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ನಾವೀಗ ಮೂರು ಪಂಚ ವಾರ್ಷಿಕ ಯೋಜನೆಗಳನ್ನು ಮುಗಿಸಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಲಟ್ಟಿದ್ದೇವೆ. ರಾಜ್ಯದಲ್ಲಿರತಕ್ಕ 3-4 ಸಾವಿರ ಗ್ರಾಮಗಳಲ್ಲಿನ್ನೂ ಕುಡಿಯುವ ನೀರಿನ ಬಾವಿಗಳಿಲ್ಲ ಎಂದರೆ ಇದು ಬಹಳ ಶೋಚನೀಯ. ಇದೇ ನಂಬಂಧದಲ್ಲಿ ಗ್ರಾಮಪಂಚಾಯಿತಿಗಳವರು ಸೇಕಡ 10 ರಷ್ಟು ಖರ್ಚನ್ನು ಕಾಂಟ್ರಿಬ್ಯೂಷನ್ ರೂಪದಲ್ಲಿ ಕೊಡಬೇಕೆಂಬ ನಿರ್ಬಂಧವಿದೆ. ಆದರೆ ಅವರಿಗೆ ಅದನ್ನು ಕೊಡತಕ್ಕ ಚೈತನ್ಯವಿಲ್ಲ. ಸರ್ಕಾರದವರು ಈ ಕಾಂಟ್ರಿಬ್ಯೂಷನ್ನು ಪೂರ್ಣವಾಗಿ ವಜಾಮಾಡಿ ಈ ವರ್ಷ ಮುಗಿಯುವುದರೊಳಗಾಗಿ ರಾಜ್ಯದಲ್ಲಿರತಕ್ಕ ಎಲ್ಲಾ ಹಳ್ಳಿಗಳಲ್ಲೂ ಬಾವಿಗಳನ್ನು ತೋಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈ ದಿವಸ ನಮ್ಮ ರಾಜ್ಯದಲ್ಲಿ ಸುಮಾರು 3 ಸಾವಿರ ಗ್ರಾಮಗಳಲ್ಲಿ ಬಾವಿಗಳಿಲ್ಲ. ಸರ್ಕಾರದವರು ಮನಸ್ಸುಮಾಡಿದರೆ ಇದಕ್ಕೆಲ್ಲಾ ಸುಮಾರು 15 ಲಕ್ಷ ಆಗಬಹುದು, ಅಷ್ಟು ಹಣವನ್ನು ಖರ್ಚುಮಾಡಿದರೂ ಚಿಂತೆಯಿಲ್ಲ ಇನ್ನು 2-3 ವರ್ಷಗಳೊಳಗಾಗಿ ಈ ಕಾರ್ಯವನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿವಸ ಬಾವಿಗಳನ್ನು ತೋಡತಕ್ಕ ಆಧುನಿಕ ಯಂತ್ರ ಗಳು ಬೇರೆ ಬಂದಿವೆ ಅದರಿಂದ ಒಂದು ದಿನಕ್ಕೆ ಒಂದು ಬಾವಿಯನ್ನು ತೆಗೆಸಬಹುದು ಎಂದು ಹೇಳು ತ್ತಿದ್ದಾರೆ. ಆದ್ದರಿಂದ ಆ ಪೋಲಪ್ ರಿಗ್ಸ್‌ಗಳನ್ನು ಇಂಪೋರ್ಟ್ ಮಾಡಿಕೊಂಡು ಸರ್ಕಾರದವರು

ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೆರಡು ಟ್ಯೂಬ್ ವೆಲ್‌ಗಳನ್ನು ಮಾಡಿಸಬೇಕೆಂದು ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ. ಅಂತೂ ಒಟ್ಟಿನಲ್ಲಿ ಪರಿಹಾರ ಕಾರ್ಯಗಳನ್ನು ನಡೆಸತಕ್ಕ ಸಂದರ್ಭದಲ್ಲಿ ನೀರಾವರಿ ಬಾವಿಗಳನ್ನು ತೋಡತಕ್ಕ ಕಾರ್ಯಕ್ಕೆ ಅವ್ಯತೆ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಬಾವಿಗಳನ್ನು ತೆಗೆಸತಕ್ಕ ವಿಷಯದಲ್ಲಿ ಮತ್ತೊಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ—ಟ್ಯೂಬ್ ವೆಲ್‌ಗಳನ್ನು ಮಾಡಿಸತಕ್ಕ ಬಗ್ಗೆ ಅರೂವರೆ ಏಳು ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಅಷ್ಟೇ ಅಲ್ಲದೆ ಆ ಬಾವಿಗೆ ಎಲೆಕ್ಟ್ರಿಕ್ ಪಂಪ್‌ಸೆಟ್ಟನ್ನು ಹಾಕಬೇಕಾಗಿದ್ದರೆ ಒಟ್ಟು 6-7 ಸಾವಿರ ಖರ್ಚುಬರುತ್ತೆ. ಇಷ್ಟಕ್ಕೆಲ್ಲಾ ರೈತರಲ್ಲಿ ದುಡ್ಡಿಲ್ಲ. ಕೇಂದ್ರ ಅಭಿವೃದ್ಧಿ ಬ್ಯಾಂಕಿನವರನ್ನು ಸಾಲ ಕೇಳಿದರೆ 4 ಸಾವಿರದ ಮೇರೆ ಕೊಡುವುದಕ್ಕೆ ಅವಕಾಶವಿಲ್ಲ ಎನ್ನುತ್ತಿದ್ದಾರೆ. ಈ ಮೆಷಿನ್‌ಗಳನ್ನು ತರಿಸತಕ್ಕ ಬಗ್ಗೆ 4 ಅಥವಾ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಕೇಳಿದರೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಜಿಯೊರಾಜಿಕರ್ ಇರಾಖಿಯವರು ಕೆಲವು ಕಡೆಗಳಲ್ಲಿ ಡೀಪ್ ಬೋರ್ ವೆಲ್‌ಗಳನ್ನು ಮಾಡಲು ಹೈಪು ಗಳಿಗೆ 4-5 ಸಾವಿರ ರೂಪಾಯಿಗಳು ಬೇಕಾಗುತ್ತದೆ; ಎಂದು ಹೇಳುತ್ತಿದ್ದಾರೆ. ಅದರೆ ಅಷ್ಟು ಹಣವನ್ನು ಸಾಲದ ರೂಪದಲ್ಲಿ ಕೊಡುವುದಕ್ಕೆ ಅವಕಾಶವಿಲ್ಲದಿರುವುದರಿಂದ ಸರ್ಕಾರದವರು ಆ ಕಾನೂನನ್ನು ಸ್ವಲ್ಪ ನಡಿಲಸಿ ರೈತರಿಗೆ ಈ ಬಾವಿಗಳನ್ನು ಮಾಡಿಸತಕ್ಕ ಸಂದರ್ಭದಲ್ಲಿ 4-5 ಸಾವಿರ ರೂಪಾಯಿಗಳನ್ನು ಡೀಪ್‌ವೆಲ್ ಪಂಪು ಕೊಳ್ಳಲು ಸಾಲದರೂಪದಲ್ಲಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಮಾಡಿ ಕೇಳಿಕೊಳ್ಳುತ್ತೇನೆ.

ಇನ್ನು ಕೆರೆಗಳ ವಿಷಯಕ್ಕೆ ಬಂದರೆ —ಬಡ್ಜೆಟ್ ಮಂಜೂರಾತಿಯ ಪರಿಮಿತಿಯೊಳಗಿದ್ದು ಅಂದಾಜುಗಳು ಮಂಜೂರಾಗಿರತಕ್ಕ ಕೆಲಸಗಳನ್ನು ನಡೆಸತಕ್ಕದ್ದು ನಿಜವೇನರಿ. ಅದರೆ ನಮ್ಮ ತಾಲ್ಲೂಕಿನಲ್ಲಿ ಬಡ್ಜೆಟ್ ಮಂಜೂರಾತಿಯಲ್ಲಿ ಸೇರದಿದ್ದ ಕೆಲವು ಕೆರೆಗಳ ಅಂದಾಜು ತಯಾರಾಗಿದ್ದು ಆ ಕಾರ್ಯಗಳನ್ನು ಕೂಡಲೆ ಕ್ಷಾಮಪರಿಹಾರ ಯೋಜನೆಯಲ್ಲಿ ಸೇರಿಸಿಕ್ಕೈಗೊಳ್ಳಬೇಕೆಂದೂ ಅವುಗಳಿಗೆ ಹೇಗಾದರೂ ಮಾಡಿ ಹಣವನ್ನು ಒದಗಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ಇನ್ನು ಜನರಿಗೆ ಕೂಲಿಯನ್ನು ಒದಗಿಸತಕ್ಕ ಮಾರ್ಗದಲ್ಲಿ ರಸ್ತೆ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಈ ರಿಲೀಫ್‌ಕಾಮುಗಾರಿಗಳನ್ನು ನಡೆಸತಕ್ಕ ಸಂದರ್ಭದಲ್ಲಿ ನೆಲ ಒಣಗಿ ಗಡುಸಾಗಿರುವುದರಿಂದ ಅದನ್ನು ಅಗೆಯುವುದಕ್ಕಾಗುವುದಿಲ್ಲ. ಆದ್ದರಿಂದ ಕೆರೆ ಅಂಗಳಗಳಲ್ಲಿ ರಿಲೀಫ್ ಕಾಮುಗಾರಿಯ ತರ್ಪಿನಲ್ಲಿ ಲಫ್ಟ್ ಇರಿಗೇಷನ್ ಬಾವಿಗಳನ್ನು ತೋಡಿಸುವುದಕ್ಕೆ ಬಹಳ ಅವಕಾಶವಿದೆ. ಇಂಥ ಒಂದು ಅವಕಾಶ ನಮ್ಮ ತಾಲ್ಲೂಕಿನಲ್ಲಿದೆ. ಇದಕ್ಕೆ ಸರ್ಕಾರದವರು ಟೆಕ್ನಿಕರ್ ಮಂಜೂರಾತಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ನುಮಾರು 7 ತಾಲ್ಲೂಕುಗಳಲ್ಲಿ ಕೇಂದ್ರ ಸರ್ಕಾರದವರ ನೆರವಿನಲ್ಲಿ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಒಂದು ಯೋಜನೆಯಲ್ಲಿ ನಮ್ಮ ತಾಲ್ಲೂಕ್ ಕೂಡ ಅದರಲ್ಲಿ ಸೇರಿದೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿ ಚಿಕ್ಕಮಲ್ಲನ ಹೊಳೆ ಮತ್ತು ಬಸವನ ಕೋಚೆ ಎಂಬ ಎರಡು ಗ್ರಾಮಗಳಲ್ಲಿ ಈ ಲಫ್ಟ್ ಇರಿಗೇಷನ್ ಬಾವಿಗಳನ್ನು ಮಾಡುವುದಕ್ಕೆ ಒಳ್ಳೆ ಅವಕಾಶವಿದೆ. ಅಲ್ಲಿ ಅವುಗಳನ್ನು ಮಾಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೀಗೆ ಅಭಾವಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರದವರು ಟಾಪ್ ಪ್ರಯಾರಿಟಿಯನ್ನು ಕೊಟ್ಟು ಅಲ್ಲಿ ಕೆಲಸಗಳನ್ನು ತೀವ್ರಗತಿಯಿಂದ ನಡೆಸಬೇಕು, ಮತ್ತು ಆ ಪ್ರದೇಶಗಳನ್ನು ಫ್ಯಾಮಿನ್ ಆಕ್ಟ್ ಪ್ರಕಾರ ಕ್ಷಾಮಪೀಡಿತ ಪ್ರದೇಶಗಳೆಂದು ಕೂಡಲೆ ಸಾರಬೇಕು. ಈ ಕಾರ್ಯಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೂ, ಸಬ್‌ಡಿವಿಜನ್ ಅಧಿಕಾರಿಗಳಿಗೂ ಸರ್ಕಾರ ಕೂಡಲೆ ಆಜ್ಞೆಮಾಡಬೇಕು ಅಭಾವಪೀಡಿತ ಪ್ರದೇಶಗಳಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೆಲಸವನ್ನು ಕೂಡಲೆ ಕೈಕೊಳ್ಳಬೇಕು. ಕ್ಷಾಮಪರಿಸ್ಥಿತಿ ತೀವ್ರವಾಗಿರುವ ಕಡೆಗಳಲ್ಲಿ ಗಂಜೀ ಕೇಂದ್ರಗಳನ್ನು ರೆಡ್‌ಕ್ರಾಸ್ ಯೂನಿಸೆಫ್ ಇತ್ಯಾದಿ ಸಂಸ್ಥೆಗಳಿಂದ ಸಹಾಯ ಪಡೆದು ನಡೆಸಬೇಕು. ಕೂಲಿದರಗಳನ್ನು ಹೆಚ್ಚಿಸಬೇಕು. ಎಲ್ಲೆಲ್ಲಿ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುವುದಿಲ್ಲವೋ ಅಂತಹ ಕಡೆಗಳಲ್ಲಿ ಗ್ರಾಮಪಂಚಾಯ್ತಿಗಳ ಮುಖಾಂತರ ಕಾಳನ್ನು ಹಂಚಬೇಕೆಂದು ಸರ್ಕಾರದವರು ನಿರ್ಧರಿಸಿದ್ದಾರೆ, ಇದು ಒಳ್ಳೆಯದೇ. ಆದರೂ ಕೂಡ ಒಂದು ಪಂಚಾಯ್ತಿಗೆ 4-5 ಹಳ್ಳಿಗಳು ಸೇರಿರುತ್ತವೆ, ಸೊಸೈಟಿಗಳು ಗ್ರೂಪ್ ಪಂಚಾಯ್ತಿ ಹೆಡ್‌ಕ್ವಾರ್ಟರ್‌ನಲ್ಲಿ ಮಾತ್ರ ಇರುತ್ತದೆ, ಅಂತಹ ಸಂದರ್ಭದಲ್ಲಿ ಹೆಡ್‌ಕ್ವಾರ್ಟರ್‌ನಲ್ಲಿರತಕ್ಕ ಹಳ್ಳಿಯವರಿಗೆ ಕಾಳು ಸಿಕ್ಕುತ್ತದೆಯೇ ಹೊರತು ಅಕ್ಕಪಕ್ಕದ ಹಳ್ಳಿಗಳವರಿಗೆ ಸಿಕ್ಕುವುದಿಲ್ಲ. ಆದ್ದರಿಂದ ನೋ ರಾಸ್ ನೋಪ್ರಾಫಿಟ್ ಮೇಲೆ ಮಾರಾಟ ಮಾಡುತ್ತೇವೆ ಅಂತ ಹೇಳಿ ಯಾರಾದರೂ

(ಶ್ರೀ ಜೆ. ಆರ್. ಹಾಲಸ್ವಾಮಿ)

ಮುಂದೆ ಬಂದರೆ ಅಂತಹವರಿಗೆ ಇದನ್ನು ವಹಿಸಿ ಪ್ರತಿಯೊಂದು ಹಳ್ಳಿಗೂ ಕಾಳನ್ನು ಹಂಚುವ ವ್ಯವಸ್ಥೆಯನ್ನು ಮಾಡಬೇಕು, ಇದಕ್ಕೆ ಅದ್ಯ ಗಮನವನ್ನು ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ; ಮತ್ತು ತಾಲ್ಲೂಕು ಬೋರ್ಡುಗಳಿಗೆ ಈ ರಿಲೀಫ್ ವರ್ಕ್‌ನ್ನು ವಹಿಸಿರುವುದನ್ನು ಬಹಳ ಜನರು ವಿರೋಧ ಮಾಡಿದ್ದಾರೆ. ವಿರೋಧ ಪಕ್ಷದವರೂ ಕೂಡ ವಿರೋಧಿಸಿದ್ದಾರೆ. ನಾನು ತಾಲ್ಲೂಕು ಬೋರ್ಡಿನ ಅಧ್ಯಕ್ಷನಾಗಿದ್ದೇನೆ. ಈ ಕೆಲಸಗಳನ್ನು ತೆಗೆದುಕೊಳ್ಳುವಾಗ ರಿಲೀಫ್ ವರ್ಕ್ಸ್ ಕಮಿಟಿಗಳನ್ನು ಮಾಡಿದ್ದಾರೆ, ಅದರಲ್ಲಿ ಒಬ್ಬ ಶಾಸಕರೂ ಕೂಡ ಇರುತ್ತಾರೆ. ಆದ್ದರಿಂದ ಅಂತಹ ತೊಂದರೆಗಳೇನೂ ಆಗುವುದಿಲ್ಲ, ಸರ್ಕಾರದವರು ಮಾಡಿರುವುದು ಸರಿಯಾಗಿದೆ. ಸರ್ಕಾರದವರ ಉದ್ದೇಶ ಇಷ್ಟೆ, ಅಲ್ಲ ಸೂಪರ್‌ವೈಸರಿ ಸ್ಟಾಫ್ ಇರುತ್ತದೆ, ಎಕ್ಸಟನ್‌ಷನ್ ಸ್ಟಾಫ್ ಇರುತ್ತದೆ, ಗ್ರಾಮ ಸೇವಕರು ಇರುತ್ತಾರೆ, ಅವರ ಸಹಾಯದಿಂದ ಇದನ್ನು ಇಂಪ್ಲಿಮೆಂಟ್ ಮಾಡಬಹುದು ಎಂಬ ಒಂದೇ ಒಂದು ಉದ್ದೇಶದಿಂದ ಮಾಡಿದ್ದಾರೆಯೇ ಹೊರತು ಬೇರೆ ಯಾವ ಉದ್ದೇಶದಿಂದ ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಕಂದಾಯ ವಸೂಲು ಮಾಡುತ್ತಾ ಇರುವುದು ಮುಂದುವರಿಸುವುದನ್ನು ನಮ್ಮ ತಾಲ್ಲೂಕಿನಲ್ಲಿ 65 ಹಳ್ಳಿಗಳಲ್ಲಿ ಮಾತ್ರ ಮಾಡಿದ್ದಾರೆ. ಈ ತಾಲ್ಲೂಕಿನ ಪ್ರತಿಯೊಂದು ಹಳ್ಳಿಗೂ ಕೂಡ ಕಂದಾಯ ವಸೂಲು ಮಾಡದಂತೆ ಮುಂದುವರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಸಭಾಪತಿಗಳವರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† Sri D. B. KALMANKAR (Aland).—Mr. Speaker, Sir, the statement made by the Chief Minister no doubt gives so many facts and figures and it also shows how the works are in progress. But I want to say one thing on this occasion that whatever works are stated to be taken up and are in progress, are all in such constituencies from where Congress M. L. As. are elected.

Sri K. PUTTASWAMY.—Mostly in those areas scarcity conditions prevail.

Sri D. B. KALMANKAR.—The Party in power is interested in making capital out of the works so taken up. This attitude of the party in power should be given a go-by. The party in power should be very anxious to ameliorate the conditions of the people irrespective of whether it has got its representatives elected from particular areas or not and irrespective of whether that party is in power in the particular area or not. They must take all the facts into consideration and start works in other areas also where they are not in power. I am saying this because most of the Ministers including the Chief Minister had toured in our part. They had gone to the extent of saying to the people: "Because we are here in power we are able to do these things; your M.L.A. is simply crying, he can simply speak and cannot do anything for you." If this is the attitude of the party in power we have got very strong doubt about these works. For example, in my taluka I have been saying time and again that there are some lift irrigation works which are very useful for improvement of agriculture. I have been saying that the work of the Salegaon tank in my taluka requires to be taken up. It has been sanctioned, but still they are reluctant to take it up because they think that if something is done in this area the credit may go to the local M.L.A. concerned. This is their attitude and that is why we have got misgivings about the *bona fides* of this Government, whether they are going to utilise these works

for their party ends and whether they are going to help only those constituencies where they have got interest. This attitude of the Government is not helpful for the progress of our State and for the amelioration of the condition of the common man.

Sri K. PUTTASWAMY.—I would request the hon. member to give concrete instances, instead of making a general statement. Scarcity is scarcity. Wherever people are in distress, it is our bounden duty to create employment opportunities by taking up such works which would provide labour and rush relief to them.

Sri D. B. KALMANKAR.—It is stated in the statement made by the Chief Minister that "my district of Gulbarga is also one of the districts which is affected by drought conditions." I know that in Aland taluka because there are no works in agricultural lands so many people are coming forward seeking employment. They want grains at cheap rates. They want that some works must be taken up in this area so as to give them employment. I have written to the Government also in this connection. But they say that there is no work in Aland taluka. Of course, some small bunding work is going on, but that is not enough. It is nothing compared to the size of the works taken up in other places.

Mr. CHAIRMAN.—The member may suggest some works.

Sri D. B. KALMANKAR.—I have suggested some lift irrigation works. I have suggested the taking up of the Salegaon tank work, but they are reluctant to take up that work. My submission is that this attitude of the Government must be given up and they must take all members of this House into confidence and they must distribute the amount equally in all the taluks of the State, affected by drought conditions.

Sri K. PUTTASWAMY.—Trust begets trust. You trust us.

Sri D. B. KALMANKAR.—I am saying this so that you may hereafter at least give up this attitude. This attitude is manifested in all the developmental works so far taken up.

Secondly, I oppose these works being taken up by the Taluk Board because in some of the Taluks, the M.L.As. are from the Opposition and the Taluk Board is in the hands of the Congress. Consequently, there is rift in the Taluk Board. There they do not want to co-operate for the best interest of the common man.

Sri K. PUTTASWAMY.—The same thing must apply to Government also.

Sri D. B. KALMANKAR.—In order that the crores of rupees that you spend may reach the common man for whom it is meant. I suggest that you set up Taluk Famine Committees irrespective of party affiliations and take in that Committee—people of integrity and sincerity. Let this Committee carry out this work. With the assistance of the Tahsildar let this Committee carry out all the works. I am not concerned with who is the Taluk Board President, but I am particular that the

(SRI D. B. KALMANKAR)

members of this Committee who should be people of integrity and sincerity. Otherwise there is every possibility that more than 50 per cent of the funds allotted, may be misused. For instance, recently one work was taken up in one village in my taluk. There, a particular contractor who has taken up the work came to me and said: "There you have friends. Please give me a chit saying that this man should not be obstructed in the work or trouble created." I thought that he was interested in the work and I gave him a chit and said, "You can go and approach him and he will help you to get the work". Later on, I came to know from that friend that this man has offered Rs. 200 and told him, "You please take these Rs 200 and keep quiet". As my predecessor said much of the work in Rural Communications is of this type. They go on digging put, mud from the adjoining field and no real work is done. The objective of the works undertaken under the Rural Communication Schemes must be of a durable character. But what happens actually is that they do some work and much of the money that is spent goes into private pockets. That being the condition taking the gravity of the situation into consideration, such works should be entrusted to people who are of known integrity. I do not mind whether he belongs to this party or that party. Let us do some justice to the people who are affected. If care is not taken to see that the works are properly executed, the money that is spent may be misspent and the people may not get the benefit. What most of the officers who are in charge of these works do is that they pay Rs. 1.50 or something like that and they take back a rupee from each labourer. But they make them sign in token of having received the whole amount. Actually, they do not pay whatever has to be paid as per the rules. If such types of loopholes that are there are to be rectified, I urge upon the Government that responsible people must be associated with such works. If complaints are made against the officers, they must be immediately attended to and some exemplary punishment to some officers at least must be given so that the work may improve.

Sri K. PUTTASWAMY.—Is it the view of the hon. Member that the members of the Taluk Boards are not responsible ?

Sri D. B. KALMANKAR.—I am not saying about the members o the Taluk Boards. What I am saying is that even in the case of Taluk Boards there are hundreds of complaints. Reports are called for, but no enquiry is made. A report was made by a B.D.O. but that was not looked into. Fifty per cent of the work is not done and overpayments are made. Regarding Rural Housing Cell, the Engineer has made a report that the money has gone into the hands of the common man. There is no proper identification but the Government is not prepared to go through that report and it is not prepared to take steps.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಐದಾರು ವರ್ಷವಾಗಿದೆ, ಮಂತ್ರಿಯಾಗಿ ಇಲ್ಲಿ ಬಂದು ಕುಳಿತುಕೊಂಡಿದ್ದಾರೆ, ತಾಲ್ಲೂಕು ಬೋರ್ಡು ಏನು ಮಾಡುತ್ತಿದೆ, ಅಲ್ಲೇನು ನಡೆಯುತ್ತಿದೆ ಎಂಬುದು ಇನ್ನೂ ಗೊತ್ತಾಗಿಲ್ಲ.

Sri D. B. KALMANKAR.—If we say something about that, you are prone to say that it is only a partial statement. If you are sincere about that, you must look at the problem cutting across political and other considerations. The number of relief works in progress in Bangalore Division is 1,076; those in progress in Mysore Division is 760; those in Belgaum Division 358 and those in Gulbarga only 140. In view of the scarcity that is prevalent there, I submit that the Gulbarga Division is neglected. The other day I spoke to the Minister of State for Food and told him that we are given only 500 grams of jowar per individual. We received 220 quintals of jowar last month. Before that we did not receive any jowar at all. He said that it was a difficult matter. The Governnent is taking jowar from our part and they say that jowar will be distributed among the vulnerable sections of the society. But actually they are not getting even 500 grams per individual. That is the type of distribution. What about the vulnerable sections of the villages, especially the Harijans and the huge army of unemployed people? They are actually getting no grains at all. Out of Rs. 10 crores of Central Assistance asked for, you have not been able to get more than Rs. 2 crores whereas the magnitude of scarcity in our State is of such dimensions that we require at least 50 to 60 crores of rupees. My submission therefore is that the Government has utterly failed to know the magnitude of the problem. The Government has made a very conservative estimate of the sufferings of the people hit by scarcity in our State, and it has failed to get what is due to our State. Take for example the Andhra Pradesh. I read in today's papers that in Andhra Pradesh they have opened fair price shops in villages. I submit that if the Government want to do justice to the vulnerable sections of the society, they must start such shops in every village in order that foodgrains may reach the man who is in distress. Government must form committees and ask them to give foodgrains to such people. Employment opportunites must also be increased. The people are in such a mood that in case the rains fail there is every possibility that there will be an upheaval in the villages. They may even loot and commit certain offences even against their wishes. I therefore submit that Government should take note of the grave situation and keeping aside political considerations, must see to it that works are executed in real spirit and people who are of known integrity must be put in charge of Taluk Relief Committees that are to be formed and they must be made to do this work.

ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ನೀರಡಿಕೆಯಾದಾಗ ಬಾವಿ ತೆಗೆಸಿ ನೀರನ್ನು ತಂದುಕೊಡುತ್ತೇವೆಂದರೆ ಅದರಿಂದ ತೃಪ್ತಿಯಾಗುವುದಿಲ್ಲ. ಹಾಗೆ ಸಮಿತಿ ಮಾಡಿ ನಿರ್ಣಯಮಾಡಿ ಆರ್ಡರನ್ನು ಕಳಿಸಿ ರೊಕ್ಕ ಕೇಂದ್ರದಿಂದ ತಂದು ಇಲ್ಲಿರುವ ಬರಗಾಲವನ್ನು ಪರಿಹಾರ ಮಾಡುವುದಕ್ಕಾಗುವುದಿಲ್ಲ. ಹೀಗೆ ನವ್ಮಲ್ಲಿ ಈ ಪ್ರಕಾರ ವರ್ಷೇವರ್ಷೇ ಆಗುತ್ತಿದೆ. ಆದುದರಿಂದ 20 ವರ್ಷಗಳಿಂದ ನೋಡಿದಂತೆ ವರ್ಷೇವರ್ಷೇ ಯಾವ ಜಿಲ್ಲೆಯಲ್ಲಿ ಕ್ಷಾಮ ಬರುತ್ತಿದೆ ಅದಕ್ಕೆ ಸಹಾಯಮಾಡಲು ಒಂದು ಖಾಯಮಾದ ಯೋಜನೆ ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ. ಯಾವ ಕೆಲಸ ಯಾವಾಗ ಮಾಡಬೇಕು, ಯಾವ ಪ್ರಕಾರ ಮಾಡಬೇಕು, ಆಹಾರಧಾನ್ಯ ಅಥವಾ ದನಗಳ ಮೇವು ಸಾಕಷ್ಟು ಒದಗಿಸಲು ಏನು ಕ್ರಮ

(ಶ್ರೀ ಎಸ್. ಭೀಮಣ್ಣ)

ಕೈಕೊಳ್ಳಬೇಕು ಎಂದು ಒಂದು ಯೋಜನೆ ತಯಾರು ಮಾಡಿದರೆ ಒಳ್ಳೆಯದು. ಎರಡನೆಯದಾಗಿ ವೈಯಕ್ತಿಕವಾಗಿ ನಾವು ಸಂಕಟಪಡುತ್ತಿರುವಾಗ ಹಳ್ಳಿಗಳಲ್ಲಿ ದನಗಳ ಪರಿಸ್ಥಿತಿ ಕೆಟ್ಟುಹೋಗಿದೆ. ಒಂದು ರೂಪಾಯಿಗೆ ಒಂದು ಕಲೋ ಆಹಾರ ಪದಾರ್ಥ ಸಹ ಸಿಕ್ಕುತ್ತಿಲ್ಲ, ಜನರಿಗೆ ಹೊಟ್ಟೆಗೆ ಅನ್ನ, ಕುಡಿಯಲು ನೀರು ದೊರೆಯುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವು ಮನವಿಮಾಡುವುದಕ್ಕೆ ಮುಂಚೆಯೇ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿರುವುದು ಸಂತೋಷಕರ. ಅವರು ಬೆಂಗಳೂರಿನಲ್ಲಿದ್ದರೂ ಸಹ ಪ್ರತಿಯೊಂದೂ ತಾಲ್ಲೂಕಿನಿಂದಲೂ ಪರಿಸ್ಥಿತಿ ಹೇಗಿದೆ ಎಂಬುದನ್ನು ತಿಳಿದುಕೊಳ್ಳುತ್ತಿದ್ದಾರೆ.

ಸರ್ಕಾರ ಬಹಳ ಜವಾಬ್ದಾರಿಯಿಂದ ಕೆಲಸ ಮಾಡುತ್ತಿರುವುದು ಸಂತೋಷದ ಮಾತು. ಸರ್ಕಾರ ಪ್ರಕಟಣೆ ಮಾಡಿರುವ ಅಭಾವ ಪೀಡಿತ ಪ್ರದೇಶಗಳ ಭೂಪಟವನ್ನು ನೋಡಿದರೆ ಅದರಲ್ಲಿ ಗುಲ್ಬರ್ಗ, ಬಿದರೆ ಭಾಗಗಳನ್ನು ತೋರಿಸಿಲ್ಲ. ಪ್ರಾಯಶಃ ಜೂನ್ ತಿಂಗಳ 19, 20, 21 ರ ಸಮಯದಲ್ಲಿದ್ದಂಥ ಪರಿಸ್ಥಿತಿಯನ್ನು ಮಾತ್ರ ಅದರಲ್ಲಿ ಕೊಟ್ಟಿದ್ದಾರೆಂದು ಕಾಣುತ್ತದೆ. ಜೂನ್ ತಿಂಗಳಿನಲ್ಲಿ ಸಮ್ಮಲ್ಲಿ ಅಲ್ಲಲ್ಲಿ ಸ್ವಲ್ಪ ಮಳೆಯಾಗಿದ್ದು, ಬಿತ್ತನೆಯಾಗಿ ಸಸಿಗಳು ಇದ್ದುದರಿಂದ ಅದನ್ನು ಅಭಾವ ಪೀಡಿತ ಪ್ರದೇಶವೆಂದು ತೋರಿಸಿಲ್ಲವೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಬಿದರೆ, ಗುಲ್ಬರ್ಗದಲ್ಲಿ ಕ್ಷಾಮ ಪರಿಸ್ಥಿತಿ ಇದೆ ಎಂದು ಒಪ್ಪಿಕೊಂಡಿದ್ದಾರೆ. ಜೂನ್ ತಿಂಗಳಿನಲ್ಲಿ ಮಳೆಯಾಗಿದ್ದು ಸಸಿ ಬಹಳ ಚೆನ್ನಾಗಿದ್ದು ಜನ ಸಂತೋಷಪಟ್ಟರು. ಆದರೆ ಜುಲೈ, ಆಗಸ್ಟ್ ತಿಂಗಳಲ್ಲಿ ಅರ್ಧಂಗುಲ, ಒಂದಂಗುಲ ಕೂಡ ಮಳೆಯಾಗದೆ ಬೆಳೆ ಎಲ್ಲ ಸುಟ್ಟು ಹೋಗಿದೆ. ಉದ್ದು, ಹೆಸರು, ಜೋಳ ಯಾವುದೂ ಬಾರದಂಥ ಸಂಕಟ ಪರಿಸ್ಥಿತಿ ಇದೆ.

7-00 P.M.

ದನಗಳಿಗೆ ಕುಡಿಯಲು ನೀರಿಲ್ಲ, ಕಳಕೆ ಕೂಡ ಇಲ್ಲ. ಇದರ ಬಗ್ಗೆಯೂ ಸರ್ಕಾರ ತುರ್ತು ಕ್ರಮ ತೆಗೆದುಕೊಳ್ಳಬೇಕು. ಕ್ಷಾಮ ಪರಿಸ್ಥಿತಿಗೆ ವಾಸ್ತವ ಕಾರಣವೇನೆಂದರೆ ಬರೀ ದೈವಿಕ ಕೋಪ, ಅಥವಾ ಸರ್ಕಾರದವರ ತಪ್ಪು ಎಂದು ಯಾರು ಆಕ್ಷೇಪ ಮಾಡಿದರೂ ತಪ್ಪಾಗುತ್ತದೆ. ಇದರಲ್ಲಿ ಎಲ್ಲರ ಜವಾಬ್ದಾರಿಯೂ ಇದೆ. ಸರ್ಕಾರದವರ ಜವಾಬ್ದಾರಿ ಇದೆ, ಸದಸ್ಯರ ಮತ್ತು, ಜನತೆಯ ಜವಾಬ್ದಾರಿ ಕೂಡ ಇದೆ. ಯಾವುದೇ ಒಂದು ಯೋಜನೆಯನ್ನು ಹಾಕಿಕೊಂಡರೂ, ಯಾವುದೇ ನಿರ್ಣಯವನ್ನು ಪಾಸ್ ಮಾಡಿದರೂ ಸರ್ಕಾರಿ ಅಧಿಕಾರಿಗಳಿಗೆ ಖಾಸಗಿ ಜನರು ಸಹಾಯ ಮಾಡುವುದಿಲ್ಲವೆಂದರೆ ಯಾವ ಕೆಲಸವೂ ಆಗುವುದಿಲ್ಲ. ತಾಲ್ಲೂಕು ಬೋರ್ಡಿನಲ್ಲಿ ಅಧ್ಯಕ್ಷರಾದಿಯಾಗಿ ಎಲ್ಲರೂ ಕೆಲಸ ಮಾಡದೆ ಬರೀ ಅಧಿಕಾರಿಗಳು ಮಾಡಬೇಕು ಎಂದು ಜವಾಬ್ದಾರಿಯನ್ನು ಒಬ್ಬಬ್ಬರ ಮೇಲೆ ಹೊರಿಸಿ ಅವರು ಕೆಲಸ ಮಾಡಲಲ್ಲವೆಂದು ಆಕ್ಷೇಪ ಮಾಡುವುದಾದರೆ ತಪ್ಪಾಗುತ್ತದೆ. ಕ್ಷಾಮ ಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿ, ಆರ್ಥಿಕ ಪರಿಸ್ಥಿತಿ ಯಾವುದೇ ಇರಲಿ ಪಕ್ಷ, ಜಾತಿ, ಈ ಭಾಗ, ಆ ಭಾಗ ಎಂದು ನೋಡದೆ, ಯಾವುದೇ ಕೆಲಸವಾಗಬೇಕಾದಲ್ಲಿ ಇದ್ದರೂ ಅದಕ್ಕೆ ನಾವೆಲ್ಲ ಜವಾಬ್ದಾರರು ಎಂಬುದನ್ನು ತಿಳಿದುಕೊಂಡು ಕೆಲಸ ಮಾಡಿದರೆ ಮಾತ್ರ ಅದು ಸಾಧ್ಯವಾಗುತ್ತದೆ.

ನಮ್ಮ ಜಿಲ್ಲೆಯಲ್ಲಿ ಎರಡು ನದಿಗಳು ಹರಿಯುತ್ತವೆ. ಈ ಎರಡು ನದಿಗಳಿಗೂ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿ ಲಗೂ ಮುಗಿಸಿದರೆ ಅನುಕೂಲವಾಗುತ್ತದೆ. ಆ ಪ್ರಯತ್ನ ಸರ್ಕಾರ ಮಾಡಬೇಕು. 10 ವರ್ಷದಲ್ಲಿ ಆಗಬಹುದಾದ ಕೆಲಸವನ್ನು 4 ವರ್ಷದಲ್ಲಿ ಮಾಡುವ ಹಾಗೆ, ನಾಲ್ಕು ವರ್ಷದಲ್ಲಿ ಆಗುವ ಕೆಲಸವನ್ನು 2 ವರ್ಷದಲ್ಲಿ ಮುಗಿಸುವ ಪ್ರಯತ್ನ ಮಾಡಿದರೆ ನಮಗೆ ಹೆಚ್ಚು ಪ್ರಯೋಜನವಾಗುತ್ತದೆ. ಆಂಧ್ರ ಪ್ರದೇಶದಲ್ಲಿ ನಾಗಾರ್ಜುನ ಸಾಗರ ಕೆಲಸವನ್ನು ಎರಡು, ಎರಡೂವರೆ ವರ್ಷಗಳಲ್ಲಿ ಮುಗಿಸಿದರು. ದೊಡ್ಡ ದೊಡ್ಡ ಪ್ರಾಜೆಕ್ಟ್ ಕೆಲಸಗಳು ಎಷ್ಟು ಲಗುವಾಗಿ ಆಗಬೇಕೋ ಆ ಪ್ರಕಾರ ಆಗುತ್ತಿಲ್ಲ. ಸರ್ಕಾರ ಸರಿಯಾದ ಲಕ್ಷ್ಯ ಕೊಟ್ಟು ಲಗುವಾಗಿ ಮಾಡುವ ಪ್ರಯತ್ನ ಮಾಡಬೇಕು.

ಬಿದರೆ ಜಿಲ್ಲೆಯಲ್ಲಿ ಹರಿಯುವ ಕಾರಂಜ ಮತ್ತು ಮಾಂಜ್ರ ನದಿಗಳಿಗೆ ಅಡ್ಡಲಾಗಿ ದೊಡ್ಡ ಕೆರೆಗಳನ್ನು ಕಟ್ಟುವ ಕೆಲಸವನ್ನು 10 ಕೋಟಿ ರೂಪಾಯಿ ಖರ್ಚಿನಲ್ಲಿ 4ನೇ ಯೋಜನೆಯಲ್ಲಿ ತೆಗೆದುಕೊಳ್ಳುವರೆಂದು ಗೊತ್ತಾಗಿದೆ. ಇಂಥ ಕೆಲಸಗಳನ್ನು ಲಗುವಾಗಿ ಮಾಡಿದರೆ ಹೆಚ್ಚು ಪ್ರದೇಶ ನೀರಾವರಿಯಲ್ಲಿ ಬರುತ್ತದೆ. ನದಿಗಳಲ್ಲಿ ನೀರು ಕಡಮೆ ಬಿದ್ದರೆ ಕೆರೆಕಟ್ಟೆಗಳಲ್ಲಿ ನೀರು ಕಡಮೆ

ಯಾಗುವ ಸಂಭವವಿದೆ. ಅಣೆಕಟ್ಟುಗಳನ್ನು ಕಟ್ಟುವುದರಿಂದ ಇಂಥ ತೊಂದರೆ ದೂರವಾಗುವ ಸಾಧ್ಯತೆ ಇದೆ. ಲಗುವಾಗಿ ಕ್ರಮ ತೆಗೆದುಕೊಂಡು ದೊಡ್ಡ ಪ್ರಾಜೆಕ್ಟ್‌ಗಳ ಕೆಲಸ ಆಗುವುದರಿಂದ ಮುಂದೆ ಕ್ಷಾಮ ಪರಿಸ್ಥಿತಿ ಬರಲಾರದು.

ಎರೆಕ್ಟ್ರಿಕ್ ಪಂಪ್‌ಸೆಟ್ ಕೊಡುವಾಗ ಎಲ್ಲ ನದಿಗಳು ಹರಿಯುತ್ತವೆ, ಎಲ್ಲೆ ನೀರಾವರಿ ಕಾಮಗಾರಿಗಳಾಗಿಲ್ಲ ಅಂಥ ಕಡೆ ಯಾವುದೇ ನಿರ್ಬಂಧವನ್ನು ಹಾಕಲಾರದೆ ಸರ್ಕಾರದ ಖರ್ಚಿನಿಂದಲೇ ನಮಿಯ ಎರಡೂ ದಂಡೆಗಳಲ್ಲಿ ಸಾವಿರಾರು ಪಂಪ್‌ಸೆಟ್‌ಗಳನ್ನು ಕೊಡಬಹುದು. ಇದರಿಂದ ಆ ಭಾಗದ ಜನರ ಸಂಕಟವನ್ನು ಪರಿಹಾರ ಮಾಡಬಹುದು.

ವಿದ್ಯುಚ್ಛಕ್ತಿಯನ್ನು ಪಂಪ್‌ಸೆಟ್‌ಗಳಿಗೆ ಕೊಡುವುದರಲ್ಲಿ ಅರ್ಧ ಭಾಗ ಹಣವನ್ನು ರೈತರು ಕೊಡಬೇಕೆಂಬ ನಿರ್ಬಂಧವಿರುವುದನ್ನು ತೆಗೆದುಹಾಕಿ ಮೂರು ತಿಂಗಳ ಮೇಲಾದರೂ ಮುಖ್ಯ ಮಂತ್ರಿಗಳು ಬಿವರೆಗೆ ಬಂದಾಗ ಆ ವಿಚಾರವನ್ನು ಬಹಿರಂಗವಾಗಿ ಹೇಳಿದ್ದರೂ ಇನ್ನೂವರೆಗೆ ಯಾಪ್ರದೇ ಕೆಲಸವನ್ನೂ ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ನಾವು ಹೋಗಿ ಕೇಳಿದರೆ ನಮಗೆ ಬಿಷ್ಟು ಹಣವನ್ನು ಒದಗಿಸುತ್ತಾರೆ ಆ ಪ್ರಕಾರ ಕಾರ್ಯ ಮಾಡಬೇಕು, ಆದ್ದರಿಂದ ಹೆಚ್ಚು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ.

ನಮ್ಮ ಕಡೆ ವಿದ್ಯುತ್ ಸಂಪರ್ಕ ಆಗಾಗ್ಗೆ ಕಡಿದು ಹೋಗಿ ಲಕ್ಷಾಂತರ ರೂಪಾಯಿ ಹಾನಿಯಾಗಿದೆ. ಒಮ್ಮೊಮ್ಮೆ ನಾಲ್ಕು ನಾಲ್ಕು ದಿನ, ಎರಡೆರಡು ದಿನ ವಿದ್ಯುತ್ ಇಲ್ಲದೆ ಬತ್ತದ ಬೆಳೆ ಎಲ್ಲ ಹಾಳಾಗಿ ಲಕ್ಷಾವಧಿ ರೂಪಾಯಿ ಲುಕ್ಸಾನಾಗಿದೆ. ಸರ್ಕಾರ ಕ್ಷಾಮ ಪರಿಸ್ಥಿತಿಯನ್ನು ದೂರ ಮಾಡುವ ಸಲುವಾಗಿ ಲಗುವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಂಡು ವಿದ್ಯುತ್ ಒದಗಿಸಲು ಎಷ್ಟು ಹಣ ಬೇಕು, ಯಾವ ಪ್ರಕಾರ ಕೆಲಸ ಆಗಬೇಕು ಎಂದು ಮಾಡಿದರೆ ಒಳ್ಳೆಯದಾಗುತ್ತದೆ, ಇಲ್ಲವಾದರೆ ಯಾವುದೇ ಕೆಲಸ ಆಗಲು ಸಾಧ್ಯವಿಲ್ಲ.

ನಾವು ಎಷ್ಟೇ ರೊಕ್ಕ ಕೊಟ್ಟರೂ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಲಲ್ಲ ಎಂದರೆ ತೊಂದರೆಯಾಗುತ್ತದೆ. ಪರಿಹಾರ ಕಾರ್ಯಗಳಿಗೆ ಬೇಕಾದ ಹಣವನ್ನು ಮಂಜೂರು ಮಾಡುವುದರಲ್ಲಿ ನಿಧಾನವಾದರೆ ಬಹಳ ಕಷ್ಟವಾಗುತ್ತದೆ. ಕ್ಷಾಮ ಪರಿಹಾರ ಕಾರ್ಯಗಳಿಗೆ ಮಂಜೂರು ಮಾಡಿದ ಹಣದಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ಖರ್ಚಾಗದೆ ಇರುವುದಕ್ಕೆ ಕಾರಣವೇನು ಎಂದು ಕೇಳಿದರೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಗೊತ್ತು ಮಾಡಿರುವ ದರಗಳು ಕಡಿಮೆ ಇರುವುದರಿಂದ ಜನ ಕೆಲಸ ಮಾಡುವುದಕ್ಕೆ ತಯಾರಿಲ್ಲದ್ದರಿಂದ ಏನು ಕೆಲಸವಾಗಬೇಕೋ ಅದು ಆಗಿಲ್ಲ ಎಂದು ಹೇಳುತ್ತಾರೆ. ಸರ್ಕಾರ ಈ ಬಗ್ಗೆ ವಿಚಾರ ಮಾಡಿ ಇರುವಂಥ ತೊಂದರೆಗಳನ್ನು ದೂರಮಾಡಬೇಕು.

ಬಾವಿಗಳನ್ನು ತೆಗೆಯುವ ಸಲುವಾಗಿ ಮಹಾರಾಷ್ಟ್ರ ಸರ್ಕಾರದವರು ಇರಾಖೆಯಿಂದ ಈ ಕೆಲಸವನ್ನು ಮಾಡಿಸುತ್ತಿದ್ದಾರೆ, ಬೇರೆ ಜನರಿಗೆ ಕೊಡುವುದಿಲ್ಲ. ಇಲಾಖೆ ಬಾವಿಗಾಗಿ ಅರ್ಜಿ ಕೊಟ್ಟರೆ ಅಧಿಕಾರಿಗಳು ಅದಕ್ಕೆ ಬೇಕಾದ ಡ್ರಿಲಿಂಗ್ ಯಂತ್ರಗಳು ಮತ್ತು ಬ್ಲಾಸ್ಟಿಂಗ್ ಯಂತ್ರಗಳನ್ನು ತಂದು ಅಲ್ಪ ಕಾಲದಲ್ಲಿ ನಾಲ್ಕಾರು ಬಾವಿ ಹೊಡೆದು ತುಂಬ ಅನುಕೂಲ ಮಾಡಿಕೊಡುತ್ತಿದ್ದಾರೆ. ಅದೇ ಪ್ರಕಾರ ನಮ್ಮಲ್ಲಿಯೂ ಬ್ಲಾಸ್ಟಿಂಗ್ ಯಂತ್ರಗಳನ್ನು ಖರೀದಿ ಮಾಡಿ ಪ್ರತಿ ಜಿಲ್ಲೆಗೂ ಒಂದೆರಡು ಯಂತ್ರಗಳನ್ನು ಕೊಟ್ಟರೆ ಬಾವಿ ಹೊಡೆಯುವ ಕೆಲಸಕ್ಕೆ ಅನುಕೂಲವಾಗುತ್ತದೆ. ಎಷ್ಟೋ ಕಡೆ ಬಾವಿ ಕೆಲಸ ಅರ್ಧ ಭಾಗ ಕಾಲು ಭಾಗವಾಗಿ ಕೈ ಬಿಟ್ಟಿದ್ದಾರೆ. ಹಣ ಸರಿಯಾಗಿ ಸಿಕ್ಕಲಾರದೆ ಮತ್ತು ಬೇರೆ ಕಾರಣಗಳಿಂದಾಗಿ ಹೀಗಾಗಿದೆ. ಸರ್ಕಾರವೇ ಬಾವಿ ಹೊಡೆದು ಕೊಡುವಂತೆ ವ್ಯವಸ್ಥೆ ಮಾಡಿದರೆ ಈ ರೀತಿ ಆಗಲಾರದು.

ಬೀದರ್ ಜಿಲ್ಲೆಯಲ್ಲಿ ಒಂದು ಡೀಸಲ್ ಮಿಷನ್ ಕೊಟ್ಟಿದ್ದಾರೆ. ಆ ಇಂಜಿನ್‌ಗೆ ಆರು ತಿಂಗಳ ನಿಂದಲೂ ಏನು ಒಂದು ಆಯಿಲ್ ಉಪಯೋಗಿಸಬೇಕೋ ಆ ಆಯಿಲ್ ಸಿಕ್ಕುತ್ತಾ ಇಲ್ಲ. ಅದು ಅಮೇರಿಕಾದಿಂದ ಬರಬೇಕು ಎಂದು ಹೇಳುತ್ತಾರೆ. ಅದು ಇಲ್ಲದೇ ಏನೂ ಕೆಲಸ ಆಗುತ್ತಾ ಇಲ್ಲ. ಇದರ ಬಗ್ಗೆ ರೆಪ್ರೆಸೆಂಟೇಷನ್ ಬೇಕಾದಷ್ಟು ಕೊಟ್ಟಿದ್ದೇವೆ. ಯಾರು ಸರಿಯಾಗಿ ಕೇಳುತ್ತಾ ಇಲ್ಲ. ಅದಕ್ಕೆ ಉಪಯೋಗಿಸುವ ಆಯಿಲ್ ಇಲ್ಲದೇ ಇದ್ದರೆ ತಿಂಗಳಾನುಗಟ್ಟಲೆಯಾದರೂ ಕೆಲಸ ಆಗುವುದಿಲ್ಲ. ಈ ಆಯಿಲ್ ತರಿಸಲು ಏನು ಒಂದು ಕ್ರಮವನ್ನು ಕೈಗೊಳ್ಳಬೇಕು ಅದನ್ನು ಸರ್ಕಾರದವರು ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ.

(ಶ್ರೀ ಎಸ್. ಭೀಮಣ್ಣ)

ಇನ್ನು ಸ್ಕೇರ್ಸಿಟಿ ಏರಿಯಾದಲ್ಲಿ ದನಗಳಿಗೆ ಹುಲ್ಲು ಸಿಕ್ಕುತ್ತಾ ಇಲ್ಲ. ಫಾರೆಸ್ಟ್‌ನಿಂದ ಹುಲ್ಲನ್ನು ತರಿಸಿಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಿಗೂ ಬರೆದಿದ್ದಾರೆ, ಜೆಲಗ್ಯಾಂ ಕೂಡ ಕೊಟ್ಟಿದ್ದಾರೆ. ಮತ್ತು ಆ ಭಾಗದ ಜನತೆ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಇರುವುದರಿಂದ ಸರ್ಕಾರದವರು ಆಹಾರ ಧಾನ್ಯಗಳನ್ನು ತರಿಸಿ ಪ್ರತಿಯೊಂದು ಹಳ್ಳಿಗೂ ಮುಟ್ಟುವಂತೆ ಡೆಪ್ಯೂಟಿ ಕಮೀಷನ್‌ರವರ ಮೂಲಕ ಸರಿಯಾದ ಒಂದು ಹಂಚುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಮೈಸೂರು ದೇಶದಲ್ಲಿ ಎಲ್ಲಾ ಹಳ್ಳಿಗಳಲ್ಲಿಯೂ ಕ್ಷಾಮ ಪರಿಸ್ಥಿತಿ ಇರುವುದರಿಂದ ಮಾನ್ಯ ಧಿಗಂಬರರಾವ್ ಹೇಳಿದ ಹಾಗೆ ಪ್ರತಿಯೊಂದು ತಾಲ್ಲೂಕಿಗೂ ಸರಿಯಾಗಿ ಹಂಚಿದರೆ ಒಳ್ಳೆಯದು, ಎಲ್ಲರಿಗೂ ಕಷ್ಟ ಪರಿಹಾರವಾಗುತ್ತದೆ, ಎಂದು ಹೇಳುತ್ತೇನೆ. ನನಗೆ ಇಷ್ಟು ಮಾತನಾಡಲು ಅಧ್ಯಕ್ಷರು ಟೈಂ ಕೊಟ್ಟಿದ್ದಕ್ಕಾಗಿ ನಾನು ಆಭಾರಿಯಾಗಿದ್ದೇನೆ.

Mr. CHAIRMAN.—The House now stands adjourned to meet tomorrow at 8-30 A.M.

The House adjourned at Fifteen Minutes past Seven of the Clock to meet again at Thirty Minutes past Eight of the Clock on Saturday the 7th Sepetember 1968.

KSA LIBRARY, B'lore
B004855
328.32402 548 LAD,1968
JJ35

WD 11302—GPB—600—30-10-1968